
ಕಸ್ತೂರಿ

ಫೆಬ್ರವರಿ 1988 ರೂ. 3-00




ಹೆಸರು: ಯಶೋದ
ತರಗತಿ: ೩ ನೇ ಬಿ ವಿಭಾಗ
ವಿಷಯ: ಚಿತ್ರಲೇಖನ
ನಮ್ಮ ಮನೆಯ ಹಸು
ಬಹಳ ಒಳ್ಳೆಯ ಹಸು
OK
1
2
3
4
ಇದು ಒ.ಕೆ. ತಿನ್ನುತ್ತದೆ.
ಈ ಹಸು ತುಂಬಾ ಹಾಲನ್ನು ಕೊಡುತ್ತದೆ.
ನಮ್ಮ ಮನೆಯಲ್ಲಿ ನಾವು ಬಹಳ ಹಾಲನ್ನು
ಕುಡಿಯುತ್ತೇವೆ. ನಾವು ನಮ್ಮ ನೆರೆಯವರಿಗೆ ಹಾಲನ್ನು
ಮಾರುತ್ತೇವೆ.. ನಮ್ಮ ಮನೆಯಲ್ಲಿರುವ ಹಸು
ತುಂಬಾ ಒಳ್ಳೆಯದು. ಅದಕ್ಕೆ ನಾವು
ಪ್ರೀತಿಯಿಂದ ಒ.ಕೆ. ತಿನಿಸುತ್ತೇವೆ.
ಇದರಿಂದಾಗಿಯೇ ಅದು ಹೆಚ್ಚು
ಹಾಲನ್ನು ಕೊಡುತ್ತದೆ.
ನಮ್ಮ ಹಸು ಒ.ಕೆ. ಹಸು.
OK
CATTLE FEED
VITAMINISED
MADE BY: TATA OIL MILLS
BOMBAY
45 Kgs. NET WHEN PACKED
ಟಾಟಾರವರ ಒಕೆ
ಒಂದು ಪರಿಪೂರ್ಣ ಪಶು ಆಹಾರ
ಉತ್ಪಾದಕರು:
ಟಾಟಾ ಆಯಿಲ್ ಮಿಲ್ಸ್ ಕಂ. ಲಿ.

ಕಸ್ತೂರಿ

ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ:

ಕೆ. ಶಾಮರಾವ್

ಸಹ ಸಂಪಾದಕ:

ಮಾಧವ ನಾ. ಮಹಿಷಿ

ಕಲೆ:

ಪಿ.ಆರ್. ಪಾಟೀಲ

ಮುಖಪುಟ:

ಭಕ್ತಿಪಥ

ಕಲೆ: ಎಸ್.ಆರ್. ಸ್ವಾಮಿ

ಬೆಳಕಿಂಡಿ

- ಪ್ರತಿಧ್ವನಿಯನ್ನು ಕೇಳಿದಾಗ ಧ್ವನಿಯನ್ನು ಹೊರಡಿಸಿದವರು ತಾವೇ ಎಂದು ತಿಳಿದು ಕೊಳ್ಳುವವರೆ ಹೆಚ್ಚು.

  - ಅರ್ನೆಸ್ಟ್ ಹೆಮಿಂಗ್‌ವೆ

- ಅಪಜಯವೆನ್ನುವುದು ಬರಿ ಅಡ್ಡದಾರಿ ಯಿದ್ದಂತೆ ಎನ್ನುವುದು ಅರಿವಾದಾಗ ನೀವು ಯಶಸ್ಸಿನ ದಾರಿಯಲ್ಲಿದ್ದೀರಿ ಎಂದೇ ಭಾವಿಸಿಕೊಳ್ಳಿ.

  - ವಿಲಿಯಂ ಮಿಲ್ನೆಸ್

- ಅನೇಕರು ತಾವು ಅಕಿಂಚನರೆಂಬ ಭ್ರಮೆ ಯಲ್ಲಿಯೇ ಬದುಕುತ್ತಾರೆ.

  - ಹ್ಯೂಬರ್ಟ್ ರೀಸ್

- ನಮ್ಮೊಡನೆ ಜೀವಿಸಬೇಕಾದವರಿಗೂ ನಮ್ಮೊಡನೆ ಜೀವಿಸಬೇಕಾಗಿದೆಯೆಂಬು ದನ್ನು ನಾವು ಪದೆ ಪದೆ ಮರೆಯುತ್ತೇವೆ.

  - ಜರ್ಮನಿಯ ಕಾಥೊಲಿಕ್ಸರ್ ಡೈಜೆಸ್ಟಿನಿಂದ

- ನಾನು ಮೊದಲು ದೇವರಿಗೂ ನಂತರ ದೇವರಿಗೆ ಹೆದರದವರಿಗೂ ಹೆದರುತ್ತೇನೆ.

  - ಮುಸ್ಲಿ ಉದ್ದೀನ್

- ದುರ್ದೈವವನ್ನು ಸಹಿಸುವ ಶಕ್ತಿಯಿಲ್ಲ ದಿದ್ದುದೆ ನಮ್ಮೆಲ್ಲರ ದುರ್ದೈವ.

  - ಫ್ರೀನ್

- ಅನುಭವ ಇಲ್ಲದವನ ಜ್ಞಾನವೆಂದರೆ, ತುಂಬಿಡಲು ಪಾತ್ರೆ ಇಲ್ಲದವನಿಗೆ ದೊರೆತ ನೀರಿನಂತೆ.

  - ಚೀಣೀ ಗಾದೆ

ಹೊಸ ಚಂದಾ ದರಗಳು:

ಬಿಡಿ ಸಂಚಿಕೆ	...	3=00
1 ವರ್ಷಕ್ಕೆ	ಅಂಚೆಸೇರಿ	34=00
2 ವರ್ಷಕ್ಕೆ	...	65=00
3 ವರ್ಷಕ್ಕೆ	...	100=00

KASTURI, FEBRUARY 1988

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕ ದೊಳಗೆ ತಲುಪದೇ ಹೋದರೆ ಚಂದಾ ದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಅಧ್ಯಯನಪೂರ್ಣ ಲೇಖನ

ಜನವರಿ 88ರ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ಲಿಂಗರಾಜು ಅವರ 'ವಿದ್ಯುತ್ ಮತ್ತು ಅಣುಸ್ಥಾವರಗಳು' ಎಂಬ ಲೇಖನ ಮಾನವ ಸಂತತಿಯ ಅಳಿವು-ಉಳಿವಿನ ಪ್ರಶ್ನೆಯನ್ನು ಮುಂದಿಟ್ಟಿದೆ. ಇದು ಅಣುಸ್ಥಾವರಗಳ ಬಗ್ಗೆ ಅಧ್ಯಯನಪೂರ್ಣ ಲೇಖನವಾಗಿದೆ.

'ಪ್ರಗತಿ' ಎಂಬ ಹೆಸರಿನಲ್ಲಿ, ಆ ಹೆಸರಿನ ರೋಮಾಂಚನದಲ್ಲಿ ನಾವು ಇಂದು ಎಂಥ ದುರಂತಗಳಿಗೆ ಬಲಿಯಾಗುತ್ತಿದ್ದೇವೆಂಬುದಕ್ಕೆ ಈ ಅಣುಸ್ಥಾವರಗಳೇ ಉದಾಹರಣೆಯಾಗಿವೆ. ನಾವಿಂದ ಕೇವಲ 'ವಿದ್ಯುತ್'ಗಾಗಿ ನಮ್ಮನ್ನೇ ಇಡಿಯಾಗಿ ನಾಶ ಮಾಡಿಕೊಳ್ಳುವ ಹಂತಕ್ಕೆ ಬಂದಿದ್ದೇವೆ.

ಸೂರ್ಯ ಶಾಖೋತ್ಪನ್ನ ವಿದ್ಯುದಾಗಾರಗಳಿಂದ ಅಪಾಯವಿಲ್ಲವೆಂದಾದರೆ ಅವುಗಳನ್ನು ಸ್ಥಾಪಿಸಬೇಕು. ನಾಡಿನ ಪ್ರಜ್ಞಾವಂತರು ಅಣುಸ್ಥಾವರಗಳ ಸ್ಥಾಪನೆ ವಿರುದ್ಧ ಹೋರಾಟಕ್ಕೆ ಇಳಿಯಬೇಕಾದ ಸಂದರ್ಭ ಬಂದಿದೆ.

ಹಂಪಸಮುದ್ರ — ಬಿ.ಆರ್. ತುಬಾಕಿ

ಸರ್ವಾಂಗ ಸುಂದರ

ನಿಮ್ಮ ಓದುಗರಿಗೆ ಹೊಸವರ್ಷದ ಬಳುವಳಿಯಾಗಿ 'ಕಸ್ತೂರಿ'ಯನ್ನು ಸರ್ವಾಂಗ ಸುಂದರವಾಗಿ ಹೊರತಂದಿದ್ದೀರಿ. ಸ್ವಲ್ಪ ಕುಬ್ಜವಾಗಿದ್ದ ಪತ್ರಿಕೆಯ ಎತ್ತರವನ್ನು ಜಾಸ್ತಿ ಮಾಡಿ ಸುಂದರವಾದ ಮುಖಪುಟ ಅಷ್ಟೇ ಸುಂದರವಾದ ಹಾಳೆಗಳು ಮತ್ತು ಮುದ್ದಾದ ಮುದ್ರಣದಿಂದ 1988ರಲ್ಲಿ 'ಕಸ್ತೂರಿ' ನವವಧುವಿನಂತೆ ಬರುತ್ತಿದ್ದಾಳೆ. ನಿಮಗೆ ವಂದನೆಗಳು.

ಮೈಸೂರು — ಸಿ.ಆರ್. ರಂಗಸ್ವಾಮಿ

ಕನ್ನಡದಲ್ಲಿ ಅರಬ್ಬಿ

ಡಾ॥ ಪ್ರಕಾಶ ಕೊಣ್ಣೂರ ಅವರು ಕನ್ನಡದಲ್ಲಿರುವ ಅರಬ್ಬಿ ಶಬ್ದಗಳ ಬಗ್ಗೆ (ಕಸ್ತೂರಿ ಡಿಸೆಂಬರ್ 87, ಪುಟ 98-100) ಬರೆದಿದ್ದಾರೆ. ಡಾ॥ ಶಂಕರ ಕೆದಿಲಾಯರು ಲಿಖಿತ ದಾಖಲೆಗಳಲ್ಲಿ ಸಿಗುವ 436 ಅರಬ್ಬಿ ಪದಗಳನ್ನು ಸಂಗ್ರಹಿಸಿ ತಮ್ಮ ಗ್ರಂಥದಲ್ಲಿ (Foreign Loan Words in Karnatic Arabic & Persian) ವರ್ಗೀಕರಣ, ವಿವೇಚನೆ, ಅರ್ಥಾಂತರ, ಪ್ರವೇಶಕಾಲ ನಿರ್ಣಯ ಇತ್ಯಾದಿಗಳೊಡನೆ ಕೊಟ್ಟಿದ್ದಾರೆ. (ಗ್ರಂಥದ ಪ್ರಕಾಶಕರು: ಮದ್ರಾಸ್ ವಿಶ್ವವಿದ್ಯಾಲಯ) ಇವೆಲ್ಲವೂ ಮುಸ್ಲಿಂ ಆಳಿಕೆಯೊಡನೆ ಬಂದವುಗಳಲ್ಲ- ಅರಬ್ಬಿ ವರ್ತಕರ ವ್ಯಾಪಾರ ಸಂಬಂಧದಿಂದ ಬಂದವುಗಳೂ ಸಾಕಷ್ಟಿವೆ.

ಅರಬ್ಬಿಯಲ್ಲಿ ಭಾರತೀಯ ಮೂಲ ಶಬ್ದಗಳು ಇಲ್ಲವೆನ್ನಲಾಗದು. ಅಂಕಗಣಿತಾದಿ ಶಾಸ್ತ್ರಗಳನ್ನು ಅರಬರು ಭಾರತದಿಂದ ಒಯ್ದರು. ಗಣಿತಕ್ಕೆ ಅಲ್ಲಿ 'ಹಿಂದ್‌ಸಾ' ಎಂದೇ ಶಬ್ದವಿದೆ. ಗಣಿತ ಹಾಗೂ ವೈದ್ಯಶಾಸ್ತ್ರಕ್ಕೆ ಸಂಬಂಧಪಟ್ಟ ಶಬ್ದಗಳು ಅಲ್ಲಿ ಇರಲೇಬೇಕು.

ಹುಬ್ಬಳ್ಳಿ — ಪಾ.ವೆಂ.

ಅಚ್ಚಾದ ಹೆಸರು ತಪ್ಪು

ಜನವರಿ 1988ರ ಕಸ್ತೂರಿ ಸಂಚಿಕೆಯಲ್ಲಿ 'ಗುರುತ್ವವೇ ಇಲ್ಲದಿದ್ದಲ್ಲಿ...' ಎಂಬ ನನ್ನ ಲೇಖನ ಪ್ರಕಟವಾಗಿದೆ. ಆ ಲೇಖನದಲ್ಲಿ ನನ್ನ ಹೆಸರು ಎಸ್.ಎನ್. ಲಕ್ಷ್ಮೀಪತಿ ಎಂದು ಇರಬೇಕಾಗಿತ್ತು. ಆದರೆ ಎಚ್.ಎನ್. ಲಕ್ಷ್ಮೀಪತಿ ಎಂದು ಮುದ್ರಿತವಾಗಿದೆ.

ಬೆಂಗಳೂರು — ಎಸ್.ಎನ್. ಲಕ್ಷ್ಮೀಪತಿ

ರಾಮಾನುಜನ್

ನಾನು ಹದಿಮೂರು ವರ್ಷಗಳ ಹಿಂದೆ ಓದಿದ ನೆನಪು. ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಎಚ್. ನರಸಿಂಹಯ್ಯನವರಿದ್ದಾಗ ಪ್ರಚಾರೋಪನ್ಯಾಸ ವಿಭಾಗದಲ್ಲಿ ಪ್ರಕಟನೆಗೊಂಡ 31ನೆಯ ಪುಸ್ತಕ "ಶ್ರೀನಿವಾಸ ರಾಮಾನುಜನ್"ದ ಲೇಖಕ ಹಾಗೂ 'ಕಸ್ತೂರಿ'ಯ ಪುಸ್ತಕ ವಿಭಾಗದ "ರಾಮಾನುಜನ್" ಲೇಖಕ ಜಿ.ಟಿ. ನಾರಾಯಣರಾವ್‌ರವರೆ. ಆ ಪುಸ್ತಕದ ಪ್ರತಿರೂಪ ಇದು.

ಹಾಗೂ 23 ವರ್ಷಗಳ ಹಿಂದೆ (1964) ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ವಿಭಾಗ ಪ್ರಕಟಿಸಿದ "ಲೀಲಾವತಿ ಗಣಿತ ಮತ್ತು ಶ್ರೀ ರಾಮಾನುಜನ್" ಲೇಖಕ ಎ.ಬಿ. ಸೀತಾರಾಮಯ್ಯನವರ ಪ್ರಕಾರ ಹಾರ್ಡಿಯವರು 1936ರಲ್ಲಿ ಹಾರ್ವರ್ಡ್, ಪ್ರಿನ್ಸ್‌ಟನ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯಗಳಲ್ಲಿ ರಾಮಾನುಜನ್ನರ ಜೀವನ ಹಾಗೂ ಕೃತಿಗಳ ಬಗ್ಗೆ 12 ಉಪನ್ಯಾಸ ನೀಡಿದ ಸಂದರ್ಭದಲ್ಲಿ, ರಾಮಾನುಜನ್ನರ ಗಣಿತ ಕಬ್ಬಿಣದ ಕಡಲೆ ಎಂದು ಧಾರಾಳವಾಗಿ ಕರೆಯಬಹುದು. ಅದಕ್ಕೆ ತಕ್ಕ ದಂತ, ಪಚನಶಕ್ತಿ ಇರುವವರು ಮಾತ್ರ ಅದಕ್ಕೆ ಕೈ ಹಾಕಬೇಕು" ಎಂದು ಹೇಳಿದ್ದಾರೆ.

ಚೋರನೂರು ಬಿ.ಎಂ. ಓಮ್‌ನಾಥ್

ಸರಿಯಾದದ್ದು ಹೀಗೆ

ಡಿಸೆಂಬರ್ 87ರ ಕಸ್ತೂರಿಯಲ್ಲಿ ನನ್ನ 'ತೇಲುವ ರೈಲುಗಾಡಿಗಳು' ಎಂಬ ಲೇಖನದ ಕೊನೆಯ ಪ್ಯಾರಾದಲ್ಲಿ (43ನೇ ಪುಟ) ಎಲ್ಲ ಸಂಖ್ಯೆಗಳೂ ತಪ್ಪಾಗಿ ಮುದ್ರಿತವಾಗಿವೆ:

"269 ಸೆಂಟಿಗ್ರೇಡ್" (0° ಸೆಂಟಿಗ್ರೇಡಿಗಿಂತ 269° ಗಳಷ್ಟು ಕಡಿಮೆ) ಎಂದು ಮುದ್ರಿತವಾಗಬೇಕಾದುದು "269 ಸೆಂಟಿಗ್ರೇಡ್" (0° ಸೆಂಟಿಗ್ರೇಡಿಗಿಂತ 269° ಗಳಷ್ಟು ಹೆಚ್ಚು) ಎಂದು ಮುದ್ರಿತವಾಗಿದೆ. ಹಾಗೆಯೇ "–250" ಎಂದಾಗಬೇಕಾದುದು "250" ಎಂದೂ "–238" ಎಂದಾಗಬೇಕಾದುದು "238" ಎಂದೂ "–179" ಎಂದಾಗಬೇಕಾದುದು "179" ಎಂದೂ ಮುದ್ರಿತವಾಗಿವೆ.

ಮದ್ರಾಸ್ ಐ. ಶ್ರೀರಾಮ

ಹೀಗಿರಬೇಕಿತ್ತು

ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ವಂದನಾ ಶಾನಭಾಗ್ ಅವರ "ಟೆಲಿಗ್ರಾಫಿ" ಬಗ್ಗೆ ಲೇಖನ ತುಂಬ ಚೆನ್ನಾಗಿತ್ತು. ಆದರೆ ಪುಟ 22ರಲ್ಲಿ 'ಮೋರ್ಸ್ ಸೌಂಡರಿನಲ್ಲಿ ಎರಡು ಸ್ಥಿರವಾದ ಮೊಳಗಳಿದ್ದು ಒಂದು ಕಬ್ಬಿಣದ ಕಡ್ಡಿಯು ಒಂದು ಮೊಳೆಗೆ ಒರಗುತ್ತದೆ. ತಂತಿಯಲ್ಲಿ ವಿದ್ಯುತ್ತನ್ನು ಹರಿಸಿದಾಗ ಇದು ಇನ್ನೊಂದು ಮೊಳೆಗೆ ತಗುಲಿ "ಟಿಕ್" ಎನ್ನುವ ಶಬ್ದ ಉಂಟಾಗುತ್ತದೆ ಎಂದಿರುವಲ್ಲಿ ಲೇಖಕಿ ಮುಖ್ಯ ವಿಷಯವನ್ನೇ ಸ್ಪಷ್ಟಪಡಿಸಿಲ್ಲ. ಮೋರ್ಸ್ ಕೀಯನ್ನು ಒತ್ತಿದಾಗ ಭೂಮಿ ಮತ್ತು ಕಬ್ಬಿಣದ ಮೊಳೆಗೆ ಸುತ್ತಿದ ತಾಮ್ರದ ತಂತಿಯ ಮೂಲಕ ವಿದ್ಯುನ್ಮಂಡಲ ಪೂರ್ಣವಾಗುತ್ತವೆ. ಆಗ ಈ ಮೊಳೆಯು ವಿದ್ಯುತ್ಕಾಂತವಾಗುತ್ತದೆ. ಇದು ಇನ್ನೊಂದು ಮೊಳೆಯನ್ನು ಆಕರ್ಷಿಸುತ್ತದೆ. ಆಗ ಸೌಂಡರಿನಲ್ಲಿ "ಟಿಕ್" ಎನ್ನುವ ಶಬ್ದ ಉಂಟಾಗುತ್ತದೆ, ಎಂದಿದ್ದರೆ ಚೆನ್ನಾಗಿತ್ತು.

ಯಾದಗಿರಿ ರವಿಕಾಂತ ಕಪಡಿ

ಅಸಂಬದ್ಧ

ಬರೆ ಹೆಣ್ಣುಮಕ್ಕಳಿಬ್ಬರ ಕೊಲೆಗಾಗಿ ಹಿಂದುಸ್ಥಾನದಿಂದ ವಿಷಪೂರಿತ ಹಾವನ್ನು ಇಂಗ್ಲೆಂಡಿಗೆ ತರಿಸಿಕೊಳ್ಳುವುದು, ಗಂಡಾಂತರವನ್ನೆದುರಿಸಿ ಅದನ್ನು ಪಳಗಿಸುವುದು, ಕೋಣೆಯಿಂದ ಕೋಣೆಗೆ ಸಂಪರ್ಕ ಏರ್ಪಡಿಸಿರುವ ಹಗ್ಗದಲ್ಲಿ ಅದನ್ನು ಹರಿಬಿಟ್ಟು ಕಚ್ಚಿಸಿ ಕೊಲೆ ಮಾಡಿಸುವುದು, ಸಿಳ್ಳೆ ಹಾಕಿ ಹಿಂದಕ್ಕೆ ಬರಮಾಡಿಕೊಳ್ಳುವುದು ಮುಂತಾದ ಅಸಹಜ, ಅಸಂಬದ್ಧ ವಿಚಾರಗಳಿಂದ ಕೂಡಿದ ಅನುವಾದಿತ ಕಥೆ "ಹಾವು-ಹಗ್ಗ" ಡಿಸೆಂಬರ್ "ಕಸ್ತೂರಿ"ಯಲ್ಲಿ ಓದಿ ಸಖೇದಾಶ್ಚರ್ಯವಾಯಿತು.

ಶ್ರೀ ಸಂಜೀವ ಪ್ಯಾಟಿಯವರ ಅನುವಾದ ಉತ್ತಮ. ಇವರಿಂದ ಉತ್ತಮ ಇಂಗ್ಲೀಷ್ ಕಥೆಗಳು ಅನುವಾದಿತವಾಗಿ ಕನ್ನಡಿಗರಿಗೆ ಲಭಿಸಲಿ.

ಬೊಳುವಾರು ಪ. ಮಾಧವ ನಾಯಕ್

(ಅವನ ಕುಹಕತನ ಹಾಗೂ ವಿಲಕ್ಷಣ ಹವ್ಯಾಸಗಳೇ ಕಥೆಗೆ ಆಹಾರವಾಗಿವೆಯಲ್ಲವೆ? –ಸಂ)

ಕಸ್ತೂರಿ

ವರ್ಷ: ೩೨ ಫೆಬ್ರವರಿ ೧೯೮೮ ಸಂಚಿಕೆ: ೬

ಅರ್ಪಣೆ

ದಿನ ನಿತ್ಯದ ಪದ್ಧತಿಯಂತೆ ಬುದ್ಧ ಅಂದು ಮುಂಜಾನೆ ಕೂಡ ಸ್ನಾನಕ್ಕೆಂದು ನದಿಯ ಬಳಿಗೆ ಬಂದಾಗ ಯಾರೋ "ಬಾಹ್ಯಾಚರಣೆ ಯಾವಾಗಲೂ ಸಹಜ ಪ್ರವೃತ್ತಿಯನ್ನು ಸೂಚಿಸುವುದಿಲ್ಲ" ಎಂದು ಕೂಗಿ ಹೇಳುತ್ತಿದ್ದುದು ಕಿವಿಗೆ ಬಿತ್ತು. ಆಶ್ಚರ್ಯಚಕಿತನಾದ ಬುದ್ಧ ಧ್ವನಿ ಬಂದ ಕಡೆಗೆ ತಿರುಗಿ ನೋಡಿದ.

ನದಿಯ ನೀರಿನ ಮಧ್ಯದಲ್ಲಿದ್ದ ಬಂಡೆಯೊಂದರ ಮೇಲೆ ಕುಳಿತ ಭಯಂಕರವಾದ ಮೊಸಳೆಯೊಂದು ಕಿಡಿಕಾರುವ ಕಣ್ಣುಗಳಿಂದ ಅವನನ್ನೇ ನಿಟ್ಟಿಸುತ್ತಿತ್ತು.

ಬೌದ್ಧ ಧರ್ಮದ ಅತ್ಯಂತ ಮುಖ್ಯವಾದ ಹಾಗು ಅಷ್ಟೇ ರಹಸ್ಯಗರ್ಭಿತವಾದ ಈ ತತ್ವವನ್ನು ಉಚ್ಚರಿಸುವ ಈ ಮೊಸಳೆಗೆ ಇನ್ನೂ ಅನೇಕ ದೊಡ್ಡ ದೊಡ್ಡ ತತ್ವಗಳು ತಿಳಿದಿರಬೇಕೆಂದು ಭಾವಿಸಿದ ಬುದ್ಧ ಮತ್ತಷ್ಟು ಅಂಥ ಮಾತುಗಳನ್ನು ಹೇಳಬೇಕೆಂದು ಭಿನ್ನವಿಸಿಕೊಂಡ.

"ಎಲ್ಲಾ ಜೀವಿಗಳು ಬುದ್ಧನ ಉಪದೇಶಕ್ಕೆ ವಿರೋಧವಾಗಿವೆ. ಹುಟ್ಟಿದ ಜೀವಿಗಳೆಲ್ಲಾ ಸಾಯಲೇ ಬೇಕು" ಎಂದು ಹೇಳಿದ ಮೊಸಳೆ ಬುದ್ಧನತ್ತ ನಿಟ್ಟಿಸತೊಡಗಿತು. ಆಗ ಅದರ ಭಯಂಕರವಾದ ಮುಖದಲ್ಲಿ ಹಸಿವು ಎದ್ದು ಕಾಣುತ್ತಿತ್ತು.

ಕೊನೆಗೆ ಅದು "ನನಗೆ ಇನ್ನೂ ಒಂದು ತತ್ವವು ತಿಳಿದಿದೆ. ಆದರೆ ಆ ತತ್ವವು ಅತ್ಯಂತ ಅಮೂಲ್ಯವಾಗಿರುವುದರಿಂದ ನನ್ನ ಹಸಿವು ಇಂಗುವವರೆಗೆ ಅದನ್ನು ಹೇಳುವುದಿಲ್ಲ" ಎಂದಿತು.

ಅದನ್ನು ತಿಳಿಯಲು ಕಾತರಗೊಂಡಿದ್ದ ಬುದ್ಧ ಅದಕ್ಕಾಗಿ ತಾನು ಏನು ಬೇಕಾದರೂ ಮಾಡಲು ಸಿದ್ಧವೆಂದು ನುಡಿದಾಗ ಮೊಸಳೆ ತನ್ನ ಹಸಿವು ಇಂಗಿಸಲು ಮನುಷ್ಯ ದೇಹದ ಮಾಂಸವೇ ಬೇಕೆಂದು ಹೇಳಿತು.

ತನ್ನ ಧರ್ಮವು ಬೇರಾವುದೇ ಜೀವಿಗೆ ನೋವುಂಟು ಮಾಡುವುದನ್ನು ನಿಷೇಧಿಸುವುದರಿಂದ ಮಾನವ ಕಲ್ಯಾಣಕ್ಕಾಗಿ ತನ್ನನ್ನೇ ಅರ್ಪಿಸಿಕೊಳ್ಳುವುದಾಗಿ ಬುದ್ಧ ವಚನವನ್ನಿತ್ತ.

"ಆತ್ಮವು ದೇಹವನ್ನು ತೊರೆದಾಗಲೇ ಹೆಚ್ಚಿನ ಆನಂದಾನುಭೂತಿ ಉಂಟಾಗುವುದು" ಎಂದು ನುಡಿದು ಮೊಸಳೆ ದೊಡ್ಡದಾಗಿ ಬಾಯಿ ತೆರೆಯಿತು. ಕೊಟ್ಟ ಮಾತಿಗೆ ಎಂದಿಗೂ ತಪ್ಪದ ಬುದ್ಧ ಅಗಲವಾಗಿ ತೆರೆದ ಮೊಸಳೆಯ ಬಾಯಿಯೊಳಕ್ಕೆ ಹಾರಿದ.

ಆದರೆ ಏನಾಶ್ಚರ್ಯ! ಅಲ್ಲಿ ಮೊಸಳೆಯಾಗಲೀ, ಬಂಡೆಗಲ್ಲಾಗಲೀ ಇರಲೇ ಇಲ್ಲ! ಬದಲಾಗಿ ಆಗ ತಾನೆ ಅರಳಿದ ಕೆಂದಾವರೆಯ ಮೇಲೆ ಬುದ್ಧದೇವ ಶೋಭಿಸುತ್ತಿದ್ದ.●

(ಆಧಾರ)
— ಗೌರಿ ಅಭಿ

ದಾಸರೆಂದರೆ ಪು

– ಪಿ.ಆರ್.ಪಿ.

"ದಾಸರೆಂದರೆ ಪುರಂದರ ದಾಸರಯ್ಯ
ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವ ॥
ಗೀತ ನರ್ತನದಿಂದ ಕೃಷ್ಣನ್ನ ಪೂಜಿಸುವ
ಪೂತಾತ್ಮ ಪುರಂದರ ದಾಸರಿವರೈಯ" ॥

ಕರ್ನಾಟಕ ರಾಜ್ಯ ರಮಾರಮಣ ಶ್ರೀ ಕೃಷ್ಣದೇವರಾಯನ ಸಿಂಹಾಸನವೇರಿ ಕನಕಾಭಿಷೇಕ ಹೊಂದಿದ ಮಹಾನ್ ಯತಿಗಳೂ ಜ್ಞಾನಿಗಳೂ ಆದ ಶ್ರೀ ವ್ಯಾಸರಾಜರು ಪುರಂದರ ದಾಸರ ಬಗೆಗೆ ಹೇಳಿದ ಮಾತುಗಳಿವು. ಹರಿದಾಸರಲ್ಲಿ ಶ್ರೇಷ್ಠರೆಂದು ಗುರುವ್ಯಾಸರಾಜರಿಂದ ಗೌರವಿತರಾದ ಪುರಂದರದಾಸರು, ಕರ್ನಾಟಕವು ಎಂದೆಂದಿಗೂ ಹೆಮ್ಮೆ ಪಡಬೇಕಾದ ಪುತ್ರರಲ್ಲೊಬ್ಬರು. ನವಕೋಟಿ ನಾರಾಯಣನೆಂದು ಖ್ಯಾತರಾದ ಶ್ರೀನಿವಾಸ ನಾಯಕ (ಜನನ ಕ್ರಿ.ಶ. 1484) ಹರಿದಾಸನಾಗಿ ಮೆರೆದುದು, ಅವರ ಜೀವನ ಪರಿವರ್ತನವಾದುದು ಎಲ್ಲ ದೈವೀಲೀಲೆ. ಪುರಂದರಗಡದ ಶೀನಪ್ಪ ನಾಯಕನಲ್ಲಿ ಬ್ರಾಹ್ಮಣ ವೇಷಧಾರಿ ಸಾಲ ಬೇಡಲು ಬಂದು ನಾಯಕರ ಪತ್ನಿ (ಸರಸ್ವತಿ)ಯ ನತ್ತನ್ನೆ ಅಡವಿಟ್ಟುದು ಈ ಲೀಲೆಗೆ ನಾಂದಿ.

"ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ ಬಾಗಿ ನಾಚುತಲಿದ್ದೆ
ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ"

ಎಂದು ತಮ್ಮ ಹೆಂಡತಿಯ ಔದಾರ್ಯ ಉಪಕಾರಗಳನ್ನೇ ಹಾಡುತ್ತ ಶ್ರೀನಿವಾಸ ನಾಯಕ ವಿಜಯನಗರಕ್ಕೆ ಬಂದು ದಾಸಕೂಟ ವ್ಯಾಸಕೂಟಗಳ ಪ್ರವರ್ತಕರೆನಿಸಿದ ವ್ಯಾಸರಾಜರ ಶಿಷ್ಯರಾದರು. ಅಜ್ಞಾನದ ಪರದೆ ಹರಿದ ಮೇಲೆ ತಿಳಿವಿನ ಬೆಳಕು ಜಗಜಗಿಸಿತು. ದಾಸರು ಆಡಿದ ಮಾತುಗಳು ನುಡಿಮುತ್ತುಗಳಾದವು. ಋಷೀಣಾಂ ಪುನರಾದ್ಯಾನಾಂ ವಾಚಮ್ ಅರ್ಥೋನು ಧಾವತಿ ಎಂಬಂತೆ ಎಲ್ಲ ಹರಿಕೀರ್ತನೆಗಳಾದವು. ವಿದ್ವಜ್ಜನ ಸಮೂಹದಲ್ಲಿ ವೇದೇತಿಹಾಸ ಪುರಾಣ ಶಾಸ್ತ್ರಗಳ ಸಾರ ನಿರೂಪಿಸುವ ಪುರಂದರರೋಪನಿಷತ್ತೆಂದು ಮನ್ನಣೆ ಪಡೆದವು. ಪುರಂದರ ವಿಠ್ಠಲನೆಂಬ ಅಂಕಿತವನ್ನು ಗುರುಗಳಿಂದ ಪಡೆದು ನಾಲ್ಕು ಲಕ್ಷ ಎಪ್ಪತ್ತೈದು ಸಾವಿರದಷ್ಟು ಹಾಡು ಕೀರ್ತನೆಗಳು, ಸುಳಾದಿ, ಉಗಾ ಭೋಗಗಳನ್ನು ಅವರು ಬರೆದರು. ಅವುಗಳ ಸಾಹಿತ್ಯಿಕ ಮೌಲ್ಯ, ಸಂಗೀತದ ಮಾಧುರ್ಯ ಸವಿದವನೇ ಬಲ್ಲ. ಆಧ್ಯಾತ್ಮಿಕ ವಿಚಾರಗಳು ಸಾಧನೆಗಳು ಲೌಕಿಕ ಜೀವನದ ರೀತಿ ನೀತಿ, ವ್ಯಂಗ್ಯ ವಿಡಂಬನೆ ಸಮಾಜ ದರ್ಶನ ಮೊದಲಾದವು ಈ ಪದ ಪದ್ಯಗಳಲ್ಲಿ ಚಿತ್ರಿತವಾಗಿವೆ. ಕರ್ನಾಟಕ ಸಂಗೀತದ ಪ್ರವರ್ತಕರಿಗೆಲ್ಲ ಗುರುವೆನಿಸಿದ ಪುರಂದರ ದಾಸರು ಬರೆದ ಕೀರ್ತನ ಹಾಡುಗಳು ಸಂಗೀತ ಗ್ರಂಥಗಳಲ್ಲಿ ಲಕ್ಷ್ಯ ಲಕ್ಷಣ ರೂಪದಲ್ಲಿ ನಿರೂಪಿಸಲ್ಪಟ್ಟಿವೆ. ಪುರಂದರ ದಾಸರ ಅಸಾಧಾರಣ

ರಂದರ ದಾಸರಯ್ಯ

ವ್ಯಕ್ತಿತ್ವವನ್ನು ಗಮನಿಸಿ ಅವರನ್ನು ನಾರದರ ಅವತಾರವೆಂದೇ ಭಾವಿಸಲಾಗಿದೆ. (ನಾಲ್ವರು ಗಂಡು ಮಕ್ಕಳು ಹಾಗು ಒಬ್ಬ ಹೆಣ್ಣು ಮಗಳು ಈ ದಂಪತಿಗಳಿಗೆ) ವೀರ ವೈರಾಗ್ಯ ವೈಷ್ಣವ ದೀಕ್ಷೆಗೆ ಅವರೊಂದು ಆದರ್ಶವಾಗಿ ವಿಜಯ ನಗರವನ್ನೇ ಬೆಳಗಿದರು. "ನಮ್ಮ ಭಾಗ್ಯ ದೊಡ್ಡದೊ ನಿಮ್ಮ ಭಾಗ್ಯ ದೊಡ್ಡದೊ" ಎಂದು ಚಕ್ರವರ್ತಿಗಳಿಗೇ ಸವಾಲೆಸೆದ ಎಂಟೆದೆಯ ಹರಿದಾಸರಿವರು. ಜೀವನದುದ್ದಕ್ಕೂ ಪವಾಡ ಗಳನ್ನು ಮೆರೆದು ತಮ್ಮ ಎಂಭತ್ತನೆಯ ವಯಸ್ಸಿನಲ್ಲಿ ರಕ್ತಾಕ್ಷಿ ಸಂವತ್ಸರದ ಪುಷ್ಯಾಂತ (ಅಮಾವಾಸ್ಯೆ) ಶನಿವಾರ ಪುರಂದರದಾಸರು ಮುಕ್ತಿ ಮೈದಿದರು (ಮಧ್ವಪತಿ). "ಹರಿಯ ನೆನೆಯದಾಗ ನರ ಜನ್ಮವೇಕೆ? ಹರಿಯೇ ಪರದೈವ, ಮಧ್ವರಾಯರ ನೆನೆದು ಶುದ್ಧರಾಗಿರೊ ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂದಿತ್ಯಾದಿ ಪದಗಳಲ್ಲಿ ಹರಿಸರ್ವೋತ್ತಮತ್ವ ತತ್ತ್ವ ನಿರೂಪಿಸುವುದರೊಂದಿಗೆ ಭಕ್ತಿ ಹಾಗು ಗುರುವಿನ ಕೃಪೆ ಅವಶ್ಯವೆಂಬುದನ್ನು ಮುಮುಕ್ಷುಗಳಿಗೆ ತೋರಿಸಿದ್ದಾರವರು.

ಬೂಟಾಟಿಕೆಯನ್ನು ಕರ್ಮ ಜಾಡ್ಯವನ್ನು ಅವರಷ್ಟು ಬಲವಾಗಿ ಟೀಕಿಸಿದವರು ಅನ್ಯರಿಲ್ಲ. ಮಡಿ ನುಡಿಯೆಂದು ಹಾರುವ, ತನುವ ನೀರೊಳಗದ್ದಿ, ಕಂಚುಗಾರನಂತೆ ಮೂರ್ತಿಗಳನ್ನು ಹರವಿಕೊಂಡು ಪೂಜಿಸುವ ಉದರ ವೈರಾಗ್ಯದ ಆಚಾರ(!) ನಿಷ್ಠರನ್ನು ಯಾವ ಟೀಕಾಕಾರನೂ ಅವರಂತೆ ಕಟುವಾಗಿ ಟೀಕಿಸಲಾರನೇನೊ. ಪುರಂದರದಾಸರ ಹಾಡುಗಳಲ್ಲಿ ಆರ್ತಭಾವ, ನಾಮ ಮಹಾತ್ಮೆ, ಕೃಷ್ಣ ಲೀಲೆ ತತ್ತ್ವಗಳ ನಿರೂಪಣೆ ಸ್ತುತಿ ಸ್ತೋತ್ರಗಳೇ ಹೇರಳವಾಗಿವೆ. ಅವರು ಲೋಕಕ್ಕೆ ಅಂದು ಹೇಳಿದ ನೀತಿ ಪಾಠಗಳು ಎಂದೆಂದಿಗೂ ಮಾರ್ಗದರ್ಶಕ. ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ ಎಂದು ಎಚ್ಚರಿಸಿ ಈಸಬೇಕು ಇದ್ದು ಜಯಿಸಬೇಕು ಎಂದು ಹೇಳಿದ್ದಾರೆ. ವ್ಯವಹಾರ ಜ್ಞಾನ, ತತ್ತ್ವ ಜ್ಞಾನ, ಸಂಗೀತ ಹೀಗೆ ತ್ರಿವೇಣಿ ಸಂಗಮವಾಗಿರುವ ಅವರ ಸಾಹಿತ್ಯವು ಕೇವಲ ಆಧ್ಯಾತ್ಮಿಕ ಅಥವಾ ಮತೀಯವಾಗಿ ಉಳಿದಿಲ್ಲ. ಕನ್ನಡ ಸಾಹಿತ್ಯಕ್ಕೆ ಅದೊಂದು ಅಮೂಲ್ಯ ಕೊಡುಗೆ, ಶ್ರೀಮಂತ ಸಾಹಿತ್ಯ. ಜೀವನದುದ್ದಕ್ಕೂ ಹರಿ ಸರ್ವೋತ್ತಮತ್ವ ಹಾಗೂ ಮಧ್ವಮತದ ಪ್ರಸಾರ ಮಾಡಿದ ಪುರಂದರ ದಾಸರು ಮೆರೆದ ಲೀಲೆಗಳು, ಮಾಡಿದ ಪವಾಡಗಳು ಅನೇಕ. ಅವರ ಹಾಡುಗಳು ಹಾಗು ಇನ್ನಿತರರ ಪದ ಪದ್ಯಗಳಲ್ಲಿ ಅವೆಲ್ಲ ರೋಚಕವಾಗಿ ವರ್ಣಿತವಾಗಿವೆ. ●

—: ಪುರಂದರ ಗುರುಂವಂದೇ ದಾಸ ಶ್ರೇಷ್ಠಂ ದಯಾನಿಧಿಂ :—

ಪಶ್ಚಿಮ ಘಟ್ಟಗಳು ಅಂದು-ಇಂದು

— ನಾಗೇಶ್ ಹೆಗಡೆ

ಸಾವಿರಾರು ವರ್ಷಗಳಿಂದ ಮಾನವ ಜೀವಕೋಟಿಗೆ ರಕ್ಷಣೆ ನೀಡುತ್ತಿದ್ದ ಪಶ್ಚಿಮ ಘಟ್ಟಗಳಿಗೆ ಈಗ ಮಾನವನೇ ರಕ್ಷಣೆ ನೀಡಬೇಕಾಗಿ ಬಂದಿದೆ. ಇಡೀ ದಕ್ಷಿಣ ಭಾರತದ ಬೆನ್ನೆಲುಬಾಗಿ, ಜೀವನಾಧಾರವಾಗಿ ನಿಂತಿರುವ ಈ ಘಟ್ಟಗಳ ಸಂಪದ್ಭರಿತ ನಿಸರ್ಗವನ್ನು ಉಳಿಸಿಕೊಳ್ಳಲು ಜನ ಸಂಘಟನೆ ನಡೆಯುತ್ತಿದೆ. ಶಾಂತಿಯುತ ಸಂಗ್ರಾಮ ಪ್ರಾರಂಭವಾಗಿದೆ.

ನಮ್ಮೆಲ್ಲರ ನಾಳಿನ ಭವಿಷ್ಯ ಸುಗುಮವಾಗಲೆಂದು ಬಯಸುವ ಪ್ರತಿಯೊಬ್ಬ ವ್ಯಕ್ತಿಯೂ ಈ ಹೋರಾಟದಲ್ಲಿ ಭಾಗಿಯಾಗಬೇಕು. ಅದಕ್ಕೆ ಮುನ್ನ ಈ ಪಶ್ಚಿಮ ಘಟ್ಟಗಳ ಸ್ವರೂಪವನ್ನು ಅರಿತುಕೊಳ್ಳಬೇಕು. ಈ ಘಟ್ಟಗಳ, ಸಹ್ಯ ಪರ್ವತಮಾಲೆಯ ಮಹತ್ವ ಏನು, ಅಲ್ಲಿನ ಸಂಪತ್ತು ಏನೇನು, ಅವೆಲ್ಲ ಹೇಗೆ ಯಾರಿಂದ ಧ್ವಂಸ ಆಗುತ್ತಿವೆ, ಅದರಿಂದಾಗುವ ಅಪಾಯ ಏನೇನು, ಈ ಘಟ್ಟಗಳ ಸಂಪತ್ತಿನ ರಕ್ಷಣೆಗೆ ಏನೇನು ಕ್ರಮ ಕೈಗೊಳ್ಳಬೇಕು, ಯಾರ ವಿರುದ್ಧ ಸಮರ ಸಾರಬೇಕು- ಇತ್ಯಾದಿ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ನಮಗೆ ಲಭಿಸಬೇಕಿದೆ.

ಪತನಕ್ಕೆ ಮುನ್ನ


ಕನ್ನಡ ನಾಡಿನ ಯಾವ ಮೂಲೆಯಲ್ಲಿದ್ದರೂ ನೀವು ಪಶ್ಚಿಮ ಘಟ್ಟಗಳ ಪ್ರಭಾವದಿಂದ ದೂರ ವಿರಲಾರಿರಿ. ವಿದ್ಯುದ್ದೀಪದ ಬೆಳಕಿನಲ್ಲಿ ನೀವು ಈ ಲೇಖನ ಓದುತ್ತಿದ್ದರೆ ಪಶ್ಚಿಮ ಘಟ್ಟಗಳಿಂದ ಹರಿದು ಬಂದ ನದಿಯೇ ನೀವಿದ್ದಲ್ಲಿ ಬೆಳಕು ಹರಿಸುತ್ತದೆ. ಹೊರಗೆ ಸುರಿಯುವ ಜಡಿಮಳೆ, ತೇವ ತುಂಬಿದ ಗಾಳಿಗೆ ಆ ಘಟ್ಟ ಸಾಲುಗಳೇ ಕಾರಣ. ಇದೀಗ ತಾನೇ ತಂದಿಟ್ಟ ಬಿಸಿ ಕಾಫಿ ಹೀರುತ್ತಿದ್ದೀರೋ, ಪ್ರಾಯಶಃ ಕಾಫಿ ಮಾಡಲು ಪಶ್ಚಿಮ ಘಟ್ಟದ್ದೇ ಕಟ್ಟಿಗೆ ಬಳಸಿರಬಹುದು. ಕಾಫಿಯಂತೂ ಅಲ್ಲಿಯದೇ ಆಯಿತು. ಅದನ್ನು ತುಂಬಿ ತಂದ ಅಲ್ಯುಮಿನಿಯಂ ಲೋಟಕ್ಕೂ ಪಶ್ಚಿಮ ಘಟ್ಟಗಳ ಬಾಕ್ಸಾಯಿಟ್ ಖನಿಜವನ್ನೇ ಉಪಯೋಗಿಸಿರಬಹುದು. ಕಾಫಿ ಕುಡಿದು, ಲವಂಗ-ಏಲಕ್ಕಿ ಮಿಶ್ರಿತ ಸುವಾಸನೆ ಅಡಿಕೆಪುಡಿ ಬಾಯಿಗೆ ಹಾಕಿಕೊಂಡಿರೊ ಮತ್ತೆ ಆ ಘಟ್ಟಗಳದೆ ನೆನಪು.

ಇದೊಂದೂ ಪರಿಕರಗಳಿಲ್ಲದೇ ಖಾಲಿ ಬೆತ್ತದ ಕುರ್ಚಿಯ ಮೇಲೆ ಕೂತು ಈ ಲೇಖನ ಓದಲು ಪ್ರಾರಂಭಿಸಿದಿರೋ, ಕೂತ ಕುರ್ಚಿಯ ಬೆತ್ತವನ್ನೇ ಒಮ್ಮೆ ಸವರಿ ನೋಡಿ, ಸಾಕು. ಅದೂ ಬೇಡವೆಂದರೆ ಬಿದಿರಿನಿಂದ ತಯಾರಿಸಿದ ಈ ಕಾಗದವನ್ನೇ ನೋಡಿ. ಪಶ್ಚಿಮ ಘಟ್ಟಗಳ ಹತ್ತು ಹಲವು ಕತೆ ಇದರಲ್ಲಿ ಹುದುಗಿವೆ.

ಇನ್ನೊಂದು ವಿಧಾನದಲ್ಲೂ ನೀವು ಆಗಾಗ ಈ ಘಟ್ಟಗಳನ್ನು ಸ್ಮರಿಸಿಕೊಳ್ಳಬಹುದು. ಇದ್ದಕ್ಕಿದ್ದಂತೆಯೆ ವಿದ್ಯುತ್ ಕಡಿತವುಂಟಾಗಿ ಓದು ಭಂಗವಾದರೆ ಅದು ಈ ಘಟ್ಟಗಳನ್ನು ಅತಿ

ಯಾಗಿ ದೋಚಿದ್ದುದರ ಪರಿಣಾಮವಿರಬಹುದು. ಹವಾಮಾನದ ಏರುಪೇರು, ಅತಿವೃಷ್ಟಿ, ಭೂಕುಸಿತ, ಪ್ರವಾಹ ಪೀಡೆ, ಕುಡಿಯುವ ನೀರಿನ ಅಭಾವ, ಸಾಂಕ್ರಾಮಿಕ ರೋಗ, ಈ ಎಲ್ಲ ಅಧ್ವಾನಗಳಿಗೂ ನೀವು ಸುತ್ತು ಬಳಸಿಯಾದರೂ ಸಹ್ಯ ಪರ್ವತ ಶ್ರೇಣಿಯ ಸಂಬಂಧವನ್ನು ಕಲ್ಪಿಸಿಕೊಳ್ಳಬಹುದು.

ಕನ್ಯಾಕುಮಾರಿಯಿಂದ ಹಿಡಿದು ಗುಜರಾತದ ಗಡಿಯವರೆಗೂ ಅರಬ್ಬೀ ಸಮುದ್ರದ ದಂಡೆಗುಂಟ ಮೈಚಾಚಿ ನಿಂತಿರುವ ಈ ಗುಡ್ಡದ ಸಾಲು ಬರೀ ಗೋಡೆಯಂತಿಲ್ಲ. ಇಡೀ ದಕ್ಷಿಣ



ಭಾರತದ ಜೀವ ಕೋಟಿಯ ಬೆನ್ನೆಲುಬಾಗಿ, ಅಪರಿಮಿತ ಸಂಪನ್ಮೂಲಗಳ ಭಂಡಾರವಾಗಿ, ಕೋಟಿ ವರ್ಷಗಳಿಂದ ಅಚಲವಾಗಿ ನಿಂತಿದೆ.

ಕೋಟಿ ಎಂದರೆ ಒಂದೆರಡು ಕೋಟಿ ವರ್ಷಗಳಲ್ಲ. ಈ ಪರ್ವತಶ್ರೇಣಿಯಲ್ಲಿ 360 ಕೋಟಿ ವರ್ಷಗಳ ಭೂಚರಿತ್ರೆ ಹೂತು ಕೂತಿದೆ. ಇಂದಿನ ಅಂಟಾರ್ಕ್‌ಟಿಕ್, ಆಫ್ರಿಕ, ಆಸ್ಟ್ರೇಲಿಯ ಖಂಡಗಳ ಜೊತೆ ಒಂದಾನೊಂದು ಕಾಲದಲ್ಲಿ ಬೆಸೆದುಕೊಂಡಿದ್ದ ಕುರುಹುಗಳು ಇಲ್ಲಿ ಸಿಗುತ್ತವೆ. 335 ಕೋಟಿ ವರ್ಷಗಳ ಹಿಂದೆ ತನ್ನ ಮೈಮೇಲೆ ಸಾಗರವನ್ನು ಹರವಿಕೊಂಡದ್ದಿದೆ. ನಂತರ ಕ್ರಮೇಣ ಇತರ ಭೂಖಂಡಗಳಿಂದ ಬೇರೆಯಾಗುತ್ತ ಸಮುದ್ರವನ್ನೂ ಇಬ್ಭಾಗಿಸಿ ಈಚೆ ಸರಿದು ಬಂದದ್ದಿದೆ. 150 ಕೋಟಿ ವರ್ಷಗಳಿಂದೀಚೆಗೆ ತನ್ನ ಮೈಮೇಲೆ ಲಾವಾರಸವನ್ನು ಉಗುಳಿಕೊಂಡು ಹೆಪ್ಪುಗಟ್ಟಿಸಿ ಇನ್ನಷ್ಟು ದಪ್ಪವಾಗಿದ್ದಿದೆ. ನಂತರ ಸೂರ್ಯನ ಶಾಖಕ್ಕೆ ಸಿಡಿದು ಹಿಮಪಾತದಲ್ಲಿ ಹಿಪ್ಪೆಯಾಗಿ, ಮಳೆಗಾಳಿಗೆ ಸಿಕ್ಕು ತೂರೆ ಕಂದರಗಳಾಗಿ ಹಚ್ಚ ಪಸುರಿನ ಹೊದಿಕೆ ಹೊದ್ದು ಉದ್ದಂಡ ಮಲಗಿದ್ದಿದೆ.

ನಿಸರ್ಗ ನಿರ್ಮಿತ ಸಂಗ್ರಹಾಲಯ

ಮೇಲೆ ಆಕಾಶಕ್ಕೆ ಮುಖ ಮಾಡಿ ಬೆಳೆದ ಸದಾ ಹಸಿರಿನ ದಟ್ಟ ಕಾಡು. ಸೂರ್ಯನ ಸೆಕೆ ನೆತ್ತಿ ಸುಕ್ಕಿದರೂ ಕಾಲಡಿಯಲ್ಲಿ ಕತ್ತಲು ಕವಿದಿರುವ ಗೊಂಡಾರಣ್ಯ. ಜೇನು ಜೀರುಂಡೆ, ಕೀಟ ಪತಂಗಗಳಿಂದ ಹಿಡಿದು, ಕಾಡೆಮ್ಮೆ ಮದ್ದಾನೆಗಳವರೆಗೂ ಅಸಂಖ್ಯ ಜೀವಕೋಟಿಗಳ ಆಶ್ರಯತಾಣ, ಧುಮ್ಮಿಕ್ಕುವ ಜಲಪಾತ, ಬಿಸಿ ನೀರಿನ ಬುಗ್ಗೆ, ಹಿಮಶೀತಲ ಸರೋವರ, ಸೂಜಿ ಮೊನೆಯಂಥ ಶಿಖರ, ದುರ್ಗಮ ಪ್ರಪಾತವೇ ಮುಂತಾದ ಉಬ್ಬುತಗ್ಗಿನ ವೈಚಿತ್ರ್ಯಗಳ ಗುಡಾಣ.

ಕೆಳಗೆ, ನೆಲದೊಳಗೆ ಖಜಾನೆ. ತಾಮ್ರ, ನಿಕ್ಕಲ್, ಮ್ಯಾಂಗನೀಸ್, ಕಬ್ಬಿಣ, ಬಾಕ್ಸಾಯಿಟ್, ಯುರೇನಿಯಂ, ಮ್ಯಾಗ್ನೀಸಿಯಂ, ಗ್ರಾಫಾಯಿಟ್, ಕ್ರೋಮಾಯಿಟ್ ಖನಿಜಗಳ ಶೇಖರಣೆ. ನೀರಲ್ಲಿ ತೇಲಬಲ್ಲ ಲಾವಾ ಬಂಡೆಗಳು, ಬಿಲ್ಲಿನಂತೆ ಬಾಗಬಲ್ಲ ಮರಳು ಕಲ್ಲುಗಳು, ವಜ್ರದಂತೆ ಮಿರುಗುವ ಅಮೆಥಿಸ್ಟ್ ಹರಳುಗಳು, ಮೇಣದಂತೆ ಕರಗುವ ರ್‍ಹಿಯೋಲೈಟ್ ಖನಿಜಗಳ ನಿಸರ್ಗ ನಿರ್ಮಿತ ಸಂಗ್ರಹಾಲಯ.

ಈಗ ಒಂದಿಷ್ಟು ಅಂಕಿ ಸಂಖ್ಯೆಗಳನ್ನು ನೋಡೋಣ:

ದಕ್ಷಿಣದ ತಮಿಳುನಾಡಿನಿಂದ ಕೇರಳ, ಕರ್ನಾಟಕ, ಗೋವಾ ಹಾಗೂ ಮಹಾರಾಷ್ಟ್ರದ ತುದಿಯವರೆಗೆ 1,300 ಕಿಲೋಮೀಟರ್ ಉದ್ದಕ್ಕೆ ಪಶ್ಚಿಮ ಘಟ್ಟ ಸಾಲು ಹಬ್ಬಿದೆ. ಒಟ್ಟು 134 ತಾಲ್ಲೂಕುಗಳ 139 ಸಾವಿರ ಚದರ ಕಿಲೋಮೀಟರ್ ಕ್ಷೇತ್ರವನ್ನು ಈ ಪರ್ವತಶ್ರೇಣಿ ಆವರಿಸಿದೆ. ಉತ್ತರದಲ್ಲಿ ಮಹಾರಾಷ್ಟ್ರದ ತಾಪಿ ನದಿಯಿಂದ ಕರ್ನಾಟಕದ ಕಾಳಿ ನದಿಯವರೆಗೆ ಜ್ವಾಲಾಮುಖಿಯ ಲಾವಾಸುರಿತದಿಂದಾದ ಚಪ್ಪಟೆ ಗುಡ್ಡಗಳು, ಚಪಾತಿ ಹೇರಿದಂತೆ ಒಂದರ ಮೇಲೊಂದು ಪದರಗಳು, ಇವಿನ್ನೂ ಎಳೆ ಪರ್ವತಗಳು. ಕೆಳಗೆ ಕರ್ನಾಟಕ, ಕೇರಳಕ್ಕೆ ಬಂದಂತೆ ಹಳೇ ಕಾಲದ ಸ್ಫಟಿಕ ಶಿಲೆಗಳ ಚೂಪು ಗುಡ್ಡಗಳು.

ಸಾಮಾನ್ಯವಾಗಿ 760 ರಿಂದ 1,220 ಮೀಟರ್ ಎತ್ತರವಿರುವ ಈ ಗುಡ್ಡಸಾಲಿನಲ್ಲಿ, ಅಲ್ಲಲ್ಲಿ ಧುತ್ತೆಂದು ಜಿಗಿದು ನಿಂತ ಪರ್ವತಗಳಿವೆ. ಅವೆಲ್ಲಾ ದಕ್ಷಿಣದಲ್ಲೇ ಹೆಚ್ಚು. 1982 ಮೀಟರ್ ಎತ್ತರದ ಕುದುರೆಮುಖ, 1923 ಮೀಟರಿನ ಬಾಬಾಬುಡನ್‌ಗಿರಿ, 1713 ಮೀಟರಿನ ಪುಷ್ಪಗಿರಿ, 2636 ಮೀಟರಿನ (ನೀಲಗಿರಿಯ) ದೊಡ್ಡಬೆಟ್ಟ, 2339 ಮೀಟರಿನ ಒಂಟೆ ಡುಬ್ಬ (Camel's Hump) ಹಾಗೂ 2673 ಮೀಟರೆತ್ತರದ ಅಣ್ಣಾಮಲೈ ಪರ್ವತ.

ಇಡೀ ಪಶ್ಚಿಮ ಘಟ್ಟದ ಗುಡ್ಡದ ಸಾಲು ಮೂರು ಕಡೆ ತುಂಡಾಗಿದೆ. ಮುಂಬೈ ಸಮೀಪ ಥಾಲ್ ಕಣಿವೆ, ಬೆಳಗಾವಿ ಬಳಿಯ ಶೆನ್ ಕೊಟ್ಟಾ ಕಣಿವೆ ಹಾಗೂ ಮಡಿಕೇರಿಯ ಈಚೆ ಪಾಲಘಾಟ್ ಕಣಿವೆ, ಈ ಮೂರು ಕಣಿವೆಗಳನ್ನು ಬಿಟ್ಟರೆ ಉಳಿದ ಯಾವ ಮಾರ್ಗದಲ್ಲಿ ಕರಾವಳಿಯನ್ನು ಸೇರುವುದಾದರೂ ಕಡಿದಾದ ಘಟ್ಟ ಇಳಿಯಲೇಬೇಕು.

ಪಶ್ಚಿಮ ಘಟ್ಟಗಳ ಒಂದು ವೈಶಿಷ್ಟ್ಯವೆಂದರೆ ಪಶ್ಚಿಮದ (ಕರಾವಳಿಯ) ಕಡೆ ಮಾತ್ರ ಇವು

ಕಡಿದಾದ ಘಟ್ಟಗಳು, ಪೂರ್ವದ(ಒಳನಾಡಿನ) ಕಡೆ ಮೆಲ್ಲಗೆ ಇಳಿಜಾರದ ಬಯಲು ಬಯಲು ಗಳು.

ಮೋಡದ ಮುಸುಕಿನಲ್ಲಿ

ಮೇ ತಿಂಗಳ ಪ್ರಾರಂಭದಲ್ಲಿ ನೀವು ಬಸ್ಸಿನಲ್ಲಿ ಆಗುಂಬೆ ಘಟ್ಟವನ್ನೋ ಅಥವಾ ಕುಮಟಾದ ಬಳಿಯ ದೇವಿಮನೆ ಘಟ್ಟವನ್ನೋ ಏರುತ್ತಿದ್ದರೆ ಮಳೆ ಹನಿಗಳೂ ಗರ್ಭಿಣಿ ಮೋಡಗಳೂ ನಿಮ್ಮೊಂದಿಗೆ ಬೆಟ್ಟ ಏರುವುದನ್ನು ಕಾಣ ಬಹುದು. ಕೆಲವೊಮ್ಮೆಯಂತೂ ಅವು ನಿಧಾನ ಸಮೀಪಿಸುತ್ತ ಕೈಗೆಟುಕುವಂತಾಗಿ, ನೋಡ ನೋಡುತ್ತ ಬಸ್ಸಿನ ಕಿಟಕಿಯೊಳಕ್ಕೂ ಹೊಕ್ಕು ಕಚಗುಳಿಯಿಡುತ್ತವೆ. ಕೆಲವೇ ನಿಮಿಷಗಳಲ್ಲಿ ಜರ್ರೆಂದು ಗಿಡಮರ ಒಣನೆಲ ತರಗೆಲೆಯನ್ನೆಲ್ಲ ತೋಯಿಸಿ ಮಳೆಗಾಲವನ್ನು ಘೋಷಿಸಿ ಬಿಡು ತ್ತವೆ.

ಕೇರಳದಿಂದ ಪ್ರಾರಂಭವಾಗುವ ಮಳೆಗಾಲ ಕರ್ನಾಟಕ, ಗೋವಾ, ಮಹಾರಾಷ್ಟ್ರಕ್ಕೂ ಪಸ ರಿಸುತ್ತದೆ. ಕೇರಳ ಭಾಗದಲ್ಲಿ ವರ್ಷಕ್ಕೆ ಆರೆಂಟು ತಿಂಗಳು ಮಳೆ ಸುರಿಸುತ್ತ ಘಟ್ಟ



"ನಿಜವೇನು ವಿಜ್ಞಾನಿಗಳೇ... ಅಣು ವಿದ್ಯುತ್ ಸ್ಥಾವರಗಳಿಂದ ಒಳಿತಿಗಿಂತ ಕೆಡುಕೇ ಹೆಚ್ಚು ಎಂಬುದಕ್ಕೆ ಬೇಕಾದಷ್ಟು ಪುರಾವೆಗಳಿವೆ ಅಂತ ಇವನು ಹೇಳು ತ್ತಿದ್ದಾನಲ್ಲಾ?"


ಶ್ರೇಣಿಯ ಉತ್ತರಕ್ಕೆ ಹೋದಂತೆಲ್ಲ 6-5-4 ತಿಂಗಳು ಧಾರಾಕಾರ ಮಳೆಯಾಗುತ್ತದೆ. ಕಾಡು ಗಳೂ ಕೇರಳ, ಕೊಡಗುಗಳಲ್ಲಿ ಗಗನಚುಂಬಿ ಯಾಗಿದ್ದು, ಬೆಳಗಾವಿ ಕಳೆದು ಮಹಾರಾಷ್ಟ್ರದ ಮಾಂಡವಿ ದಾಟುವವರೆಗೆ ದಟ್ಟತನವನ್ನಷ್ಟೇ ಉಳಿಸಿಕೊಂಡು ಗಿಡ್ಡ ತಳಿಯ ಮರಗಳಿಂದ ತುಂಬಿರುತ್ತವೆ.

ಸಮುದ್ರ ಸಮೀಪವಾಗಿ ಸಂಪದ್ಭರಿತವಾಗಿ ರುವ ಈ ಘಟ್ಟದ ಸಾಲು ಇತಿಹಾಸ ಕಾಲ ದಿಂದಲೂ ವಿದೇಶೀಯರ ಗಮನ ಸೆಳೆದಿತ್ತು. ನಾಲ್ಕು ಸಾವಿರ ವರ್ಷಗಳಿಂದಲೂ ತನ್ನ ಗೊಬ್ಬರದಿಂದಲೇ ತಾನು ಪುಷ್ಟಿಯಾಗುತ್ತ ನಿರಾತಂಕವಾಗಿ ಬೆಳೆಯುತ್ತಿದ್ದ ಈ ಅಡವಿ ಗಳಲ್ಲಿ ಅನೇಕ ಬಗೆಯ ವಿಶಿಷ್ಟ ಮಸಾಲೆ ಪರಿ ಮಳ ಸಸ್ಯಗಳೂ, ಔಷಧೀಯ ಮೂಲಿಕೆಗಳೂ ವಿಕಾಸವಾಗಿದ್ದು, ದೂರದ ಪರ್ಶಿಯದಿಂದ ಹಿಡಿದು ಪೋರ್ಚುಗಲ್‌ವರೆಗಿನ ವ್ಯಾಪಾರಿ ಗಳನ್ನು ಆಕರ್ಷಿಸಿತ್ತು. ನಂತರ ಬ್ರಿಟಿಷರು ಬಂದರು.

ಅವರೆಗೂ ನಾಗರಿಕತೆಯ ಸೋಂಕಿರದ ಈ ಕಾಡುಗಳಲ್ಲಿ ಮನುಷ್ಯನೂ ಅರಣ್ಯದ ಅವಿ ಭಾಜ್ಯ ಅಂಗವಾಗಿಯೇ ಇದ್ದ. ತನಗೆ ಬೇಕಿದ್ದ ಷ್ಟನ್ನೇ ಬಳಸಿಕೊಂಡು ಒಂದು ಕಿತ್ತರೆ ಇನ್ನೊಂದನ್ನು ನೆಡುತ್ತ ತನ್ನಷ್ಟಕ್ಕೆ ತಾನಿರು ತ್ತಿದ್ದ.

ಬ್ರಿಟಿಷರ ಜತೆಗೇ ಕಾನನಕ್ಕೆ ರಸ್ತೆ ಬಂತು, ರಸ್ತೆ ಯಲ್ಲಿ ಲಾರಿ ಬಂತು. ಕೊಡಲಿಯ ಬದಲು ಗರ ಗಸ ಬಂತು. ಪರಶುರಾಮ ಸೃಷ್ಟಿಯೆಂದು ಕರೆಸಿ ಕೊಂಡ ಕೊಂಕಣಪಟ್ಟಿಯ ಹಸಿರು ಬೆಟ್ಟಗಳಿಗೆ ಪ್ರಹಾರ ಪ್ರಾರಂಭವಾಯಿತು. ಅಲ್ಲಿಯ ಕಂದ ಮೂಲಗಳೂ ಬ್ರಿಟಿಷರಿಗೆ ಕಂದಾಯ ಮೂಲ ವಾದವು.

ಆದರೂ ಸುಮಾರು 100 ವರ್ಷಗಳವರೆಗೆ ಪಶ್ಚಿಮ ಘಟ್ಟಗಳು ಜಪ್ಪೆನ್ನಲಿಲ್ಲ. ಇಂಥ ಭಾರೀ ಜಂಗಲ್ ಪಟ್ಟಿಯಲ್ಲಿ ಎಲ್ಲೋ ಅಷ್ಟಷ್ಟು ದಿಮ್ಮಿಗಳು ಉರುಳಿದರೆ ಅರಣ್ಯ ವೇನೂ ನಗ್ನವಾಗುವುದಿಲ್ಲ. ಕಂದಾಯ ವಸೂಲಿಯ ಜತೆಗೇ ಬ್ರಿಟಿಶರು ಅರಣ್ಯ ರಕ್ಷಣೆಯ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿದ್ದೂ ಅರಣ್ಯ ಸಂಪನ್ಮೂಲ


ತುಟಿ ವಡೆಯುವದು, ಕಾಲು ಒಡೆಯುವದು,
ಕಾಲಿಗ ಬಿರುಕು ಬಿಡುವದು,
ಥಂಡಿಯಿಂದ ಮೈ ಒಡೆಯುವದು
ಮೈ ಚರ್ಮ ಒಣಗಿ ತುರಿಕೆ
ಕೈಕಾಲು ಉರಿಯುವದು
ಆಸಿಡ್, ಬಿಸಿನೀರಿನಿಂದ
ಅಥವಾ ಬೆಂಕಿಯಿಂದ ಆದ
ಗಾಯಕ್ಕೆ ಅತ್ಯಂತ ಗುಣಕಾರಿ
AMRUT MALAM
ಅಮೃತ ಮಲಮ್
ದೂರವಾಣಿ : 24323
ಅಮೃತ ಫಾರ್ಮಾಸುಟಿಕಲ್ಸ
ಅಮೃತ ನಗರ ಒಂಡಲಗಾ, ಬೆಳಗಾವಿ - 591 108
M K Publicity

ಗಳನ್ನೇ ಅವಲಂಬಿಸಿದ್ದ ಸ್ಥಳೀಯರಿಗೆ ರಬ್ಬರು, ಗೋಡಂಬಿ, ಕಾಫಿ, ಟೀ, ಮರಗೆಣಸಿನಂಥ ವಿದೇಶೀ ಸಸ್ಯಗಳನ್ನು ತರಿಸಿ ಸಾಗುವಳಿ ಕಲಿಸಿದ್ದೂ ಒಂದು ದೃಷ್ಟಿಯಲ್ಲಿ ಸಮತೋಲನ ಯತ್ನವೂ ಆಗಿತ್ತು.

ಪತನದ ಮೊದಲ ಹಂತ

ಪಶ್ಚಿಮ ಘಟ್ಟಗಳ ನಿಜವಾದ ಪತನ ಪ್ರಾರಂಭವಾದದ್ದು ಸ್ವಾತಂತ್ರ್ಯ ಬಂದ ಮೇಲೇ. ಒಂದು ಕಡೆ, ಏರುತ್ತಿರುವ ಜನಸಂಖ್ಯೆಯಿಂದಾಗಿ ಕೃಷಿ ಭೂಮಿಯ ವಿಸ್ತರಣೆಗೆಂದು ರೈತರು ಅರಣ್ಯ ಕಡಿದು ಅತಿಕ್ರಮ ಸಾಗುವಳಿ ಆರಂಭಿಸಿದ್ದು. ಇನ್ನೊಂದು ಕಡೆ ಅರಣ್ಯ ಹುಟ್ಟುವಳಿಗಳಾದ ಮೆಣಸು, ದಾಲ್ಚಿನ್ನಿ, ಜೇನು, ಭತ್ತ, ಧೂಪ, ದಂತ, ರಾಳ, ಬಗಿನೆ, ಬಿದಿರುಗಳಿಗೆ ಬೇಡಿಕೆ ಹೆಚ್ಚಾಗಿದ್ದರಿಂದ ಹಣದಾಸೆಗೆ ಕಾಡು ದೋಚುವವರ ಸಂಖ್ಯೆ ಹೆಚ್ಚಾದದ್ದು, ಇವೆಲ್ಲಕ್ಕಿಂತ ಹೆಚ್ಚಾಗಿ ದೇಶದ ಅಭಿವೃದ್ಧಿಗೆಂದು ಉದ್ದಿಮೆಗಳನ್ನು ಸ್ಥಾಪಿಸಿ ಖನಿಜ – ವಿದ್ಯುತ್ತಿಗೆಂದು ಸರಕಾರವೇ ಪಶ್ಚಿಮ ಘಟ್ಟಕ್ಕೆ ಲಗ್ಗೆ ಹಾಕಿದ್ದು, ಕಾಪಾಡಬೇಕಿದ್ದ ಮಾಲೀಕನೇ ತನ್ನ ನೂರು ತೋಳುಗಳಿಂದ ಕಾಡಿಗೆ ಕೊಡಲಿ ಬೀಸಿದ್ದು, ತಾನು ದೋಚುವುದಷ್ಟೇ ಅಲ್ಲದೇ, ದೋಚಲು ಸಿದ್ಧರಾದ ಖಾಸಗೀ ಉದ್ದಿಮೆದಾರರನ್ನೆಲ್ಲ ಕರೆಕರೆದು ಕೊಡಲಿ, ಗುದ್ದಲಿ, ಸಿಡಿಮದ್ದು ನೀಡಿದ್ದು. ಈ ಕೊಡಲಿ, ಗುದ್ದಲಿ, ಸಿಡಿಮದ್ದುಗಳಿಂದ ಪಶ್ಚಿಮ ಘಟ್ಟಗಳು ತತ್ತರಿಸುತ್ತಿವೆ. ನೋಡನೋಡುತ್ತ ನಿರ್ನಾಮವಾಗುತ್ತಿವೆ. ಈಗ ನೀವೊಂದು ಕಾಲ್ಪನಿಕ ಗಗನ ನೌಕೆಯನ್ನು ಏರಿ ಇಡೀ ಪಶ್ಚಿಮ ಘಟ್ಟಗಳ ಸಿಂಹಾವಲೋಕನ ಮಾಡಿದರೆಂದರೆ –

ಸಾವಿರ ಬುಲ್ ಡೋಜರ್‌ಗಳು ಅಲ್ಲಲ್ಲಿ ಅರಣ್ಯಗಳ ನೆಲಸಮ ಮಾಡುತ್ತಿರುವ ದೃಶ್ಯ ಕಾಣಬಹುದು. ಕನಿಷ್ಟ ಐದಾರು ಸಾವಿರ ಸರಕಾರೀ ಕೂಲಿಗಳು ಗರಗಸ ಹಿಡಿದು ಹೆಮ್ಮರಗಳನ್ನು ಉರುಳಿಸುತ್ತಿರುವುದನ್ನು ನೋಡಬಹುದು. ಪ್ಲೆಯ್‌ವುಡ್, ರೇಯಾನ್, ಕಾಗದ, ಕಡ್ಡಿಪೆಟ್ಟಿಗೆ ಕಾರ್ಖಾನೆಗಳಿಗಾಗಿ ಇನ್ನೊಂದೈದು ಸಾವಿರ ಕೂಲಿಗಳು ಮರ ಕಡಿಯುವುದನ್ನು ಕಾಣಬಹುದು. ಗಣಿ ಕೆಲಸ, ಅಣೆಕಟ್ಟು, ರಸ್ತೆ ಪುನರ್ವಸತಿ, ವಿದ್ಯುತ್ ತಂತಿ, ಕಟ್ಟಡ ನಿರ್ಮಾಣ ಕಾಮಗಾರಿಗಳು ಕಾರ್ಯನಿರತರಾಗಿರುವುದಂತೂ ಆಯಿತು. ಖಾಸಗೀ ವ್ಯಕ್ತಿಗಳು ನಾಟಾ ಕಳ್ಳ ಸಾಗಾಟಕ್ಕೆಂದೋ, ವನ್ಯಮೃಗಗಳ ಬೇಟೆಗೆಂದೋ, ಇತರ ಅರಣ್ಯ ಹುಟ್ಟುವಳಿಗಳನ್ನು ಹಿರಿಯಲೆಂದೋ, ಉರುವಲ ಕಟ್ಟಿಗೆಗೆಂದೋ ಗೆದ್ದಲುಗಳಂತೆ ಕಾರ್ಯನಿರತರಾಗಿರುವುದನ್ನು ಏಕಕಾಲಕ್ಕೆ ಕಾಣಬಹುದು.

ಕನ್ಯಾಕುಮಾರಿಯಿಂದ ತಾಪಿ ನದಿಯವರೆಗೆ ಈ ಬಗೆಯ ಲಕ್ಷಾಂತರ ಜನರ ನಿರಂತರ 'ಪರಿಶ್ರಮ' ವರ್ಷವಿಡೀ ಸಾಗುವುದನ್ನು ನಾವು ಸ್ಪಷ್ಟವಾಗಿ ಕಲ್ಪಿಸಿಕೊಳ್ಳಬಹುದು. ಎಲ್ಲರಿಗೂ ಬೇಕಾದ ಈ 1,300 ಕಿಲೋಮೀಟರ್ ಉದ್ದದ ಜಂಗಲ್ ಪಟ್ಟಿಯಲ್ಲಿ ಹೊಸದಾಗಿ ಸಸಿ ನೆಡುತ್ತಿರುವ ಒಬ್ಬ ವ್ಯಕ್ತಿಯೂ ಕಾಣಲಿಕ್ಕಿಲ್ಲ.

ಕಳೆದ 25 ವರ್ಷಗಳಲ್ಲಿ ಸರಕಾರದ ಹಸ್ತಕ್ಷೇಪದಿಂದಾಗಿಯೇ ಕರ್ನಾಟಕವೊಂದರಲ್ಲೇ ಸಹ್ಯಾದ್ರಿ ಶ್ರೇಣಿಯಲ್ಲಿ ಎಷ್ಟು ಹೆಕ್ಟೇರು ಅರಣ್ಯ ನಿರ್ನಾಮವಾಗಿದೆಯೆಂಬುದರ ಲೆಕ್ಕ ಹೀಗಿದೆ:

ನೀರಲ್ಲಿ ಮುಳುಗಿಸಿದ್ದು	:	35840
ಗಣಿ ಕೆಲಸದಲ್ಲಿ ನಾಶವಾದದ್ದು	:	42676
ಪುನರ್ವಸತಿಗೆಂದು ನೆಲಸಮ	:	25820
ಕಾಳಿಯೋಜನೆಗೆ ಬಲಿಯಾದದ್ದು	:	12500
ಚಕ್ರಾಯೋಜನೆಗೆ ಬಲಿಯಾದದ್ದು	:	2600
ವಾರಾಹಿಗೆ ಬಲಿಯಾದದು	:	15634
ಗಂಗಾವಳಿಗೆ ಬಲಿಯಾದದು	:	10039
ರಸ್ತೆ, ಪಟ್ಟಣ, ವಿದ್ಯುತ್ ತಂತಿಗೆ	:	10401
ಕೃಷಿಗೆ ಪರಿವರ್ತಿಸಿದ್ದು	:	67217
ಒಟ್ಟು		222727 ಹೆಕ್ಟೇರುಗಳು

ಇದು ಐದು ವರ್ಷಗಳ ಹಿಂದಿನ ಸಂಗತಿ. ಇದರಲ್ಲಿ ಕಟ್ಟಿಗೆಗೆಂದೇ ಅರಣ್ಯ ಇಲಾಖೆಯವರು ಚೊಕ್ಕ ಬೋಳಿಸಿದ (ಕ್ಲಿಯರ್ ಫೆಲ್ಲಿಂಗ್) ಲೆಕ್ಕ ಸೇರಿಲ್ಲ. ನೀಲಗಿರಿ, ಸಾಗವಾನಿ, ರಬ್ಬರುಗಳಿಂದ ಏಕಸಸ್ಯ ಬೆಳೆಸಲೆಂದು ನಿರ್ನಾಮ ಮಾಡಿದ ಕಾಡುಗಳ ಲೆಕ್ಕ ಸೇರಿಲ್ಲ. ಖಾಸಗಿ ಉದ್ದಿಮೆಯವರೂ ಕೃಷಿ ಹಿಡುವಳಿ

ಕವಿ

ಭೂತ ನೆನೆಸುತ್ತ,
ಭವಿತವ್ಯ ಕನಸುತ್ತ
ವರ್ತಮಾನವ ಕವನಿಸುತ
ದಿನ ದೂಡುವವ!

— ಮನಸ್ವಿನಿ

ದಾರರೂ ನೆಲಸಮ ಮಾಡಿದ ಅರಣ್ಯ ಕ್ಷೇತ್ರಗಳ ಲೆಕ್ಕವಿಲ್ಲ.

ಈ ಅರಣ್ಯ ಹುಟ್ಟುವಳಿಗಳನ್ನೇ ಆಧರಿಸಿ ಒಟ್ಟು 5.803 ಉದ್ದಿಮೆಗಳು ಪಶ್ಚಿಮ ಘಟ್ಟಗಳಲ್ಲಿ ಕೆಲಸ ಮಾಡುತ್ತಿವೆ. ಸುಮಾರು ಒಂದು ಕೋಟಿ ಹತ್ತು ಲಕ್ಷ ಜನ ಈ ಘಟ್ಟಗಳಲ್ಲಿ ಕಾರ್ಯನಿರತರಾಗಿದ್ದಾರೆ.

ಅದಕ್ಕೇ ಗೆದ್ದಲುಗಳ ಉಪಮೆ ಕೊಟ್ಟಿದ್ದು.

ಸಹ್ಯಾದ್ರಿ ಸಹನೆ ಕಳೆದುಕೊಳ್ಳುತ್ತಿವೆ. ಸಾವಿರಾರು ವರ್ಷಗಳಿಂದ ವಿವಿಧ ಬಗೆಯ ಜೀವಕೋಟಿಗೆ ಆಶ್ರಯ ನೀಡಿದ್ದ ಈ ಸಹ್ಯ ಪರ್ವತಗಳು ಈಗ ಅಸಹ್ಯ ಪರ್ವತಗಳಾಗುತ್ತಿವೆ.

ಅರಣ್ಯಗಳನ್ನು ಎಡೆಬಿಡದೆ ದೋಚಿದ್ದರಿಂದ ಭೂಮಿಯ ಮೇಲಿನ ಮಣ್ಣಿನ ಕವಚ ಇಳಿಜಾರಿನಲ್ಲಿ ತೊಳೆದು ಸಾಗರವನ್ನೂ ಸೇರುತ್ತದೆ. ಕೆರೆ, ಸರೋವರ, ನದಿ ಒಡ್ಡು, ಅಣೆಕಟ್ಟುಗಳಲ್ಲಿ ಹೂಳು ತುಂಬಿ ನೀರಿನ ನಿಕ್ಷೇಪವೂ ಖಾಲಿಯಾಗುತ್ತಿದೆ.

ಮಳೆಯ ರಭಸವನ್ನು ತಡೆದು ನೀರನ್ನು ನಿಧಾನವಾಗಿ ಭೂಮಿಗೆ ಇಂಗಿಸಬೇಕಿದ್ದ ಹಸಿರು ಗಿಡಮರಗಳು ನಾಶವಾದುದರಿಂದ ಪ್ರವಾಹದ ಭೋರ್ಗರತ ಹೆಚ್ಚುತ್ತಿದೆ. ಭೂಕುಸಿತ ಅತಿಯಾಗುತ್ತಿದೆ. ಅಂತರ್ಜಲ ಕಡಿಮೆಯಾಗಿ ಬೇಸಿಗೆಯಲ್ಲಿ ನದಿಗಳು ಬತ್ತತೊಡಗಿವೆ. ವನ್ಯ ಮೃಗಗಳಿಗೆ ಆಶ್ರಯವೇ ತಪ್ಪಿ ಹೋಗಿದ್ದರಿಂದ ಅವಲ್ಲ ಈಗ ಹೊಲ ಗದ್ದೆಗಳಿಗೆ ದಾಳಿ ಆರಂಭಿಸಿವೆ. ಎಲೆ ಮರೆಯಲ್ಲಿ ಮುದುರಿಕೊಂಡಿದ್ದ ಕ್ಯಾಸನೂರು ರೋಗಾಣುಗಳು ಕಾಡು ಬಿಟ್ಟು ನಾಡಿಗೆ ಹಬ್ಬುತ್ತಿವೆ. ಏಕಜಾತಿ ಸಸ್ಯಗಳಿಂದಾಗಿ ಕೀಟಗಳ ಹಾನಿ, ರೋಗಗಳ ಹಾವಳಿ ಹೆಚ್ಚುತ್ತಿದೆ. ಕೀಟ ನಿಯಂತ್ರಣಕ್ಕೆಂದು ರಾಸಾಯನಿಕ ವಿಷ ಔಷಧಗಳ ಬಳಕೆ ಹೆಚ್ಚುತ್ತಿದೆ. ಹೀಗೆ ವಿಷಾಕ್ತವಾದ ವನಸ್ಪತಿಗಳನ್ನು ಮೇಯ್ದು ಹಸುಗಳ ಗರ್ಭಪಾತ ಹೆಚ್ಚುತ್ತಿದೆ. ಪಶುಗಳು ತಿನ್ನಲಾರದ ಯುಪಟೋರಿಯಂ ಕಳೆ ಹೆಚ್ಚುತ್ತಿದೆ. ಕೀಟನಾಶಕಗಳ ಅತೀವ ಬಳಕೆಯಿಂದಾಗಿ ರೈತರ ಗೆಳೆಯರಾದ ಎರೆಹುಳು, ಪಾತರಗಿತ್ತಿ, ಜೇಡ, ಜೇನ್ನೊಣಗಳೂ ನಾಶವಾಗುತ್ತ ಬಂದು ಇಡೀ ಜೀವಜಾಲದ ಸಮತೋಲನವೇ ಏರುಪೇರಾಗಿದೆ.

ಪೆಟ್ಟು ತಿಂದ ಪ್ರಕೃತಿ ಮೊದ ಮೊದಲು ಎಲ್ಲವನ್ನೂ ಸಹಿಸಿಕೊಂಡಿತು. ಮೆಲ್ಲಗೆ ಪ್ರತಿಭಟಿಸಲು ಪ್ರಾರಂಭಿಸಿತು. ಭೂಕುಸಿತ, ಬತ್ತಿದ ಒರತೆ, ಹೊಸ ಕ್ರಿಮಿ ಕೀಟಗಳ ದಾಳಿ ಇತ್ಯಾದಿ ಪ್ರಕೋಪವನ್ನು ಯಾರೂ ಲಕ್ಷ್ಯಕ್ಕೆ ತಾರದೇ ಅರಣ್ಯಗಳ, ಖನಿಜಗಳ ಸೂರೆಯನ್ನು ಮುಂದುವರಿಸಿದಾಗ ಪ್ರಕೃತಿಯ ಪ್ರಕೋಪ ಹೆಚ್ಚಾಯಿತು. ಘಾಸಿಗೊಂಡ ಪಶ್ಚಿಮ ಘಟ್ಟಗಳ ಕೋಪತಾಪದ ಪ್ರಭಾವ ಕ್ರಮೇಣ ಗುಡ್ಡಗಾಡಿನ ಸೀಮೆ ದಾಟಿ ಬಯಲಿಗೂ ಬಂತು. ಇಡೀ ದಕ್ಷಿಣ ಭಾರತದ ಹವಾಮಾನದ ಏರುಪೇರುಗಳಿಗೆ ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತಗಳಿಗೆಲ್ಲ ಪಶ್ಚಿಮ ಘಟ್ಟಗಳು ಘಾಸಿಗೊಂಡಿರುವುದೇ ಕಾರಣವೆಂದು ಕೆಲವರಾದರೂ ಊಹಿಸುವ ಮಟ್ಟಕ್ಕೆ ಪರಿಸರ ಬಿಗಡಾಯಿಸಲಾರಂಭಿಸಿತು.

ಈ ವಿಷಮ ಪರಿಸ್ಥಿತಿ ಸರ್ಕಾರಕ್ಕೂ ಕ್ರಮೇಣ ಅರಿವಿಗೆ ಬಂತು. 1982ರಲ್ಲಿ ಕೇಂದ್ರ ಯೋಜನಾ ಆಯೋಗದ "ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ" ಪ್ರಾರಂಭವಾಯಿತು. ಕಳೆದ ವರ್ಷ ಸುಮಾರು 25 ಕೋಟಿ ರೂಪಾಯಿಗಳನ್ನು ವಿಶ್ವಬ್ಯಾಂಕ್ ನೆರವಿನಿಂದ ಪಡೆದು ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಹಾಗೂ ತಮಿಳುನಾಡಿನ ಸರ್ಕಾರಗಳಿಗೆ ಪಶ್ಚಿಮ ಘಟ್ಟಗಳ ಅಭಿವೃದ್ಧಿಗೆಂದೇ ನೀಡಲಾಯಿತು.

ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯ ಹಾಗೆ, ಇಷ್ಟು ವಿಶಾಲವಾದ ಕ್ಷೇತ್ರಕ್ಕೆ ಈ ಜುಜುಬಿ ಹಣ, ಏತಕ್ಕೂ ಸಾಲದಾಯಿತು.

ವೆಚ್ಚ ಮಾಡಿದ ಹಣವೂ ಅನೇಕ ಇತರ ಉದ್ದೇಶಗಳಿಗೆಂದು ಸೋರಿಹೋಯಿತು. ಕರ್ನಾಟಕ ಸರ್ಕಾರವೂ ಈ ಕಳೆದ 10 ವರ್ಷ ಗಳಲ್ಲಿ ಹದಿನಾರು ಕೋಟಿ ರೂಪಾಯಿಗಳ ವೆಚ್ಚ ತೋರಿಸಿದೆ. ಆದರ ವೈಖರಿ ಹೇಗಿದೆ ಎಂದರೆ ಪ್ರವಾಸಿಗರನ್ನು ಆಕರ್ಷಿಸಲೆಂದು ಮೂರು ಟೂರಿಸ್ಟ್ ಹೋಟೆಲ್‌ಗಳ ನಿರ್ಮಾಣ ವಾಯಿತು. ಗಾಳಿ ವೇಗ ಅಳೆಯುವ ಮೂರು ವೀಕ್ಷಣಾ ಕೇಂದ್ರಗಳ ಸ್ಥಾಪನೆಯಾಯಿತು. ಜೇನು ಸಾಕಣೆ ತರಬೇತಿಗೆಂದು ಕಟ್ಟಡ ನಿರ್ಮಾಣ ಆಯಿತು. ಕೆಲವು ಕಡೆ ಸೇತುವೆ ಗಳಾದವು.

ಸ್ಥಳೀಯ ಜನರನ್ನು ತೊಡಗಿಸಿಕೊಂಡು ಆ ಮೂಲಕ ಪರಿಸರ ಸಂವರ್ಧನೆ ಹಾಗೂ ಜನ ಕಲ್ಯಾಣ ಸಾಧಿಸುವ ಯಾವ ಕೆಲಸವೂ ಆಗ ಲಿಲ್ಲ. ಈ ಹಣದಲ್ಲಿ ಸರ್ಕಾರದ ವತಿಯಿಂದ 1120 ಕಡೆ ತರಕಾರಿ ಬೆಳೆಯಲಾಗುತ್ತಿದೆ ಎಂದು ವರದಿ ಸಿದ್ಧವಾಯಿತು. ಎಲ್ಲಿವೆ ಈ ತರ ಕಾರಿ ವನಗಳು?

ಪರಿಸರ ಸಂವರ್ಧನೆ ಅಥವಾ ಜೀವಜಾಲ ಅಭಿವೃದ್ಧಿಯ ಬಗ್ಗೆ ಸ್ಪಷ್ಟ ಕಲ್ಪನೆಯೂ ಇಲ್ಲದ, ಪಶ್ಚಿಮ ಘಟ್ಟಗಳ ಮಣ್ಣಿನ ವಾಸನೆ ಯನ್ನೇ ಪಡೆದಿರದ ಅಧಿಕಾರಿಗಳು ತಜ್ಞರ ಸಲಹೆಯನ್ನೂ ಕೇಳದೆ, ಕೇಂದ್ರದಿಂದ ಮಂಜೂರಾದ ಹಣವನ್ನು ಗುತ್ತಿಗೆದಾರರಿಗೆ ರವಾನಿಸಿ, ಸ್ವಹಿತಾಸಕ್ತ ಕೆಲವರ ಯೋಜನೆ ಗಳಿಗೆ ಅಸ್ತು ಹೇಳಿ ಕೈ ತೊಳೆದುಕೊಳ್ಳುವ ಮನೋವೃತ್ತಿ ಬೆಳೆದು ಬಂದಿದೆ. ಒಂದು ಕಡೆ ಪ್ರವಾಸಿಗರಿಗಾಗಿ ಹೋಟೆಲ್ ನಿರ್ಮಿಸುವುದು, ಇನ್ನೊಂದು ಕಡೆ ಸಮೃದ್ಧ ವನ್ಯಧಾಮವನ್ನು ಮುಳುಗಿಸುವಂಥ ಜಲಾಶಯ ನಿರ್ಮಾಣಕ್ಕೆ ತೊಡಗುವುದು. ಒಂದೆಡೆ ಜೇನು ಸಾಕಣೆ ತರ ಬೇತಿಗೆಂದು ಹಾಸ್ಟೆಲ್ ನಿರ್ಮಿಸುವುದು, ಇನ್ನೊಂದೆಡೆ ಐದು ನೂರು ಜೇನುಗೂಡು ಗಳಿಗೆ ಆಶ್ರಯ ನೀಡುತ್ತಿದ್ದ ಹೆಮ್ಮರವನ್ನು ಕಡಿದು ಕಡ್ಡಿ ಪೆಟ್ಟಿಗೆ ಕಾರ್ಖಾನೆಗೆ ರವಾನಿ ಸುವುದು.

ಇವೆಲ್ಲ ಅಧ್ವಾನಗಳ ಬಗ್ಗೆ ಜನಜಾಗೃತಿ ಆಗು ತ್ತಿದ್ದರೂ ಸಂಘಟನೆಯ ಅಭಾವದಿಂದಾಗಿ ಜನಶಕ್ತಿಯ ಒಟ್ಟಾರೆ ಅಭಿಪ್ರಾಯ ನಮ್ಮ ಪ್ರತಿ ನಿಧಿಗಳಿಗೆ ಗೊತ್ತಾಗುತ್ತಿಲ್ಲ. ಜನರ ಆಕ್ರೋ ಶದ ಚುರುಕು ಸರ್ಕಾರಕ್ಕೆ ತಟ್ಟುತ್ತಿಲ್ಲ. ಕೇರಳ ದಲ್ಲಿ ಮೌನ ಕಣಿವೆಯ (ಸೈಲೆಂಟ್ ವ್ಯಾಲಿ) ಯೋಜನೆಯ ವಿರುದ್ಧ ಜನರ ಕೂಗು ದಿಲ್ಲಿಯ ವರೆಗೂ ತುರ್ತಾಗಿ ತಲುಪಿದ ಹಾಗೆ ನಮ್ಮಲ್ಲಿ ಕೊಡಸಳ್ಳಿ ಯೋಜನೆಯ ವಿರುದ್ಧ ಅಥವಾ ಭದ್ರಾ ಮೇಲ್ದಂಡೆ ಯೋಜನೆಯ ವಿರುದ್ಧ ನಡೆ ಸಿದ ಪ್ರತಿಭಟನೆ ಬೆಂಗಳೂರನ್ನೂ ತಲುಪು ತ್ತಿಲ್ಲ.

ಹೀಗಾಗಿ ಭಾರೀ ಯೋಜನೆಗಳು, ನಿಸರ್ಗ ಸಂಪತ್ತನ್ನು ಬರಿದು ಮಾಡುವ ಭಾರೀ ಸಾಧ್ಯತೆ ಗಳನ್ನು ಸ್ಪಷ್ಟವಾಗಿ ಚಿತ್ರಿಸುತ್ತಲಿದ್ದರೂ ಕಾರ್ಯಗತವಾಗಿಯೇ ಬಿಡುತ್ತಿವೆ. ಏಕೆಂದರೆ ಇಂಥ ಯೋಜನೆಗಳಿಂದ ಲಾಭ ಪಡೆಯುವ ಕುಳಗಳು ತುಂಬ ಸಂಘಟಿತವಾಗಿರುತ್ತವೆ. ಹಾನಿ ಅನುಭವಿಸುವ ಜೀವಿಗಳು ಮಾತ್ರ – ಅವು ಸಸ್ಯ - ಪ್ರಾಣಿ - ಪಕ್ಷಿ - ಆದಿವಾಸಿ - ರೈತ ಯಾರೇ ಆಗಿರಲಿ, ಒಂಟಿಯಾಗಿ ಅನುಭವಿಸ ಬೇಕಾಗುತ್ತದೆ. ಕೆಲವು ಉದಾಹರಣೆಗಳನ್ನು ನೋಡಿ:

ಶರಾವತಿ ಯೋಜನೆಯಿಂದ ದೊರೆತ ವಿದ್ಯುತ್ತಿನ ಬಹುಭಾಗವನ್ನು ರಿಯಾಯಿತಿ ದರ ದಲ್ಲಿ ಬೆಳಗಾವಿಯ ಅಲ್ಯೂಮಿನಿಯಂ ಕಾರ್ಖಾನೆಗೆ ನೀಡಲಾಯಿತು. ಆದರೆ ಈ ಯೋಜನೆಯಿಂದ ಮುಳುಗಡೆಯಾಗಿ ಭೂಮಿ ಮನೆ ಕಳೆದುಕೊಂಡ ನಿರಾಶ್ರಿತರನ್ನು ಸ್ಥಳ ವಿದ್ದಲ್ಲಿ ಮನೆ ಕಟ್ಟಿಕೊಳ್ಳಿರೆಂದು ಕಾಡಿಗೆ ಅಟ್ಟ ಲಾಯಿತು.

ಕಾಳಿ ಯೋಜನೆಯಿಂದಾಗಿ ಲಭಿಸಿದ ವಿದ್ಯುತ್ತಿ ನಿಂದ ಬೆಂಗಳೂರಿನ ಅನೇಕಾನೇಕ ಉದ್ದಿಮೆ ಪತಿಗಳು ಉದ್ಧಾರವಾದರು. ಸೂಪಾದಲ್ಲಿ ಮುಳುಗಡೆಗೆ ಸಿಲುಕಿದವರನ್ನು ರಾಮನಗರದ ಅರೆ ಮರುಭೂಮಿಗೆ ಸಾಗಹಾಕಿ, ಜೀವಾಶ್ರಯ ವಿಲ್ಲದೇ ಕುಡಿಯಲು ಸಾಕಷ್ಟು ನೀರಿಲ್ಲದೇ ಅವರೆಲ್ಲ ಪರದಾಡುವಂತಾಯಿತು.

ಉತ್ತರ ಕನ್ನಡದ ಬಿಸಗೋಡು, ದಾಂಡೇಲಿ ಗಳ ಬಳಿ ಮ್ಯಾಂಗನೀಸ್ ಹಾಗೂ ಕಬ್ಬಿಣದ ಅದಿರನ್ನು ಅಗೆದು ಸಾಗಿಸುವ ಕಂಪನಿಗಳು ಕೋಟ್ಯವಧಿ ಹಣ ಗಳಿಸಿದವು. ಅಲ್ಲಿ ಜೀವ ಸವೆದ ಕೂಲಿಗಳು ವಿವಿಧ ವ್ಯಾಧಿಗಳಿಗೆ ಸಿಕ್ಕು, ನರಳುವಂತಾಯಿತು.

ನೂರಮೂವತ್ತು ವರ್ಷಗಳ ಹಿಂದೆ ಬಿದಿರನ್ನು ಅರಣ್ಯದ ಕಳೆ ಎಂದೇ ಕಿತ್ತು ಬಿಸಾಕುತ್ತಿದ್ದ ದಿನಗಳಲ್ಲಿ ಮಲೆನಾಡಿನ ಮೇದಾರರಿಗೆ ಅದನ್ನು ಪ್ರತಿ ಟನ್ನಿಗೆ ಐದು ರೂಪಾಯಿಗಳ ದರದಲ್ಲಿ ಬುಟ್ಟಿ ಹೆಣೆಯಲು ನೀಡಲಾಗುತ್ತಿತ್ತು. ನೂರು ವರ್ಷಗಳ ನಂತರ ಇದೇ ಬಿದಿರನ್ನು ವೆಸ್ಟ್ ಕೋಸ್ಟ್ (ದಾಂಡೇಲಿಯ) ಕಾಗದ ಕಾರ್ಖಾನೆಗೆ ಟನ್ನಿಗೆ ಕೇವಲ ಒಂದು ರೂಪಾಯಿಯಂತೆ ಬಿಸಾಕು ಬೆಲೆಗೆ ನೀಡಲಾಯಿತು.

ಕೈಗಾ ಅಣುಸ್ಥಾವರಕ್ಕೆ, ಕದ್ರಾ ಅಣೆಕಟ್ಟೆಗೆ ಅಥವಾ ಶರಾವತಿ ಟೇಲ್‌ರೇಸ್ ಯೋಜನೆಗೆಂದು ಸದಾ ಹಸಿರಿನ ದಟ್ಟ ಕಾಡುಗಳನ್ನು ಬಲಿ ಹಾಕುವಾಗ ಸರ್ಕಾರ ಯೋಚಿಸುವುದೇ ಇಲ್ಲ.

ಇಂಥ ಕಾರ್ಯಕ್ರಮಗಳಿಂದ ಯಾರ ಅಭಿವೃದ್ಧಿ ಆಗುತ್ತಿದೆ? ಆರು ಪಂಚವಾರ್ಷಿಕ ಯೋಜನೆಗಳು ಮುಗಿದವು. ನಮ್ಮ ದೇಶ ಭಾರೀ ತಾಂತ್ರಿಕ ಪ್ರಗತಿ ಸಾಧಿಸಿದೆಯೆಂದೂ, ಕೃಷಿಯಲ್ಲೂ ನಾವು ಮಹತ್ವದ ಸುಧಾರಣೆ ಸಾಧಿಸಿದ್ದೇವೆಂದೂ ದೇಶ ವಿದೇಶಗಳಲ್ಲಿ ತುತ್ತೂರಿ ಊದಲಾಗುತ್ತಿದೆ. ಟೆಲಿವಿಜನ್ ಕ್ಯಾಮರಾಗಳು ಕಾರ್ಖಾನೆಗಳ ಒಳಹೊಕ್ಕು ಅಲ್ಲಿ ಭರಾಟೆಯಿಂದ ಉತ್ಪಾದನೆಯಾಗುವ ವಸ್ತುಗಳನ್ನೂ ಏರ್ ಕಂಡೀಶನ್ಡ್ ಕಛೇರಿಗಳನ್ನೂ ಚಿತ್ರೀಕರಿಸುತ್ತವೆ. ಈ ಉದ್ದಿಮೆಗಳಿಗಾಗಿ ನಾವು ತೆರುತ್ತಿರುವ ಬೆಲೆ ಏನೆಂಬುದನ್ನು ಮಾತ್ರ ಅವು ತೋರಿಸುವುದೇ ಇಲ್ಲ. ನೈಸರ್ಗಿಕ ಸಂಪನ್ಮೂಲಗಳಿಂದ ಸಸ್ಯ, ಖನಿಜ, ಕೆರೆ, ನದಿಗಳಿಗಾದ ದುರ್ಗತಿಯನ್ನು, ಬಡತನದ ರೇಖೆಯಿಂದ ದಿನವೂ ಕೆಳಕ್ಕೆ ಕುಸಿಯುತ್ತಿರುವ ಕೋಟ್ಯಂತರ ಗ್ರಾಮೀಣ ಜನರ ನೈಜ ಸ್ಥಿತಿಗತಿಗಳನ್ನು ಅವು ತೋರಿಸುವುದಿಲ್ಲ.

ದೇಶದ ಈ ವೈಖರಿಯ 'ಅಭಿವೃದ್ಧಿಗೆಂದು' ಗುಡ್ಡಗಾಡು ಪ್ರದೇಶಗಳು ಭಾರೀ ಪ್ರಮಾಣದಲ್ಲಿ ದಂಡ ತೆತ್ತಿವೆ. ದುರದೃಷ್ಟವಶಾತ್ ಈ ಗುಡ್ಡಗಾಡು ಪ್ರದೇಶದಲ್ಲೇ ಅರಣ್ಯ ಮತ್ತು ಜಲ ಸಂಪನ್ಮೂಲ ಹೆಚ್ಚಾಗಿ ಸಂಚಯಗೊಂಡಿವೆ. ಅವನ್ನೆಲ್ಲ ತ್ಯಾಗ ಮಾಡಿದರೂ ಪ್ರತಿಫಲ ಪಡೆಯುವ ಸ್ಥಿತಿಯಲ್ಲೂ ಅವಿಲ್ಲ. ಉದ್ದಿಮೆಗಳಿಂದಂತೂ ಪ್ರಯೋಜನ ಸಿಗುವುದಿಲ್ಲ. ಟ್ರ್ಯಾಕ್ಟರ್ ಟಿಲ್ಲರ್‌ಗಳಿಂದ ದೊಡ್ಡ ಪ್ರಮಾಣದ ಕೃಷಿ ಕಾರ್ಯವೂ ಸಾಧ್ಯವಿಲ್ಲ. ಸಂಪರ್ಕ ಸಾಧನಗಳನ್ನೂ ಅಭಿವೃದ್ಧಿಪಡಿಸುವಂತಿಲ್ಲ. ಸ್ಥಾಪನೆಯಾದ ಅಷ್ಟಿಷ್ಟು ಉದ್ದಿಮೆಗಳು ಲಾಭದ ಬದಲು ಉಪದ್ರವಗಳ ಸರಮಾಲೆಯನ್ನೇ ಸೃಷ್ಟಿಸಿವೆ.

ಹೀಗಾಗಿ ಗುಡ್ಡಗಾಡು ಪ್ರದೇಶಗಳ ನಾಜೂಕಿನ ಪರಿಸರ ಶೀಘ್ರವಾಗಿ ಭಗ್ನವಾಗುತ್ತಿದೆ. 'ಅಭಿವೃದ್ಧಿ'ಯ ಅರ್ಥವನ್ನೇ ಬದಲಿಸಬೇಕಾಗಿ ಬಂದಿದೆ. ●

(ಜನಜಾಗೃತಿ ಪುಸ್ತಕ ಮಾಲೆಯ 'ಪಶ್ಚಿಮ ಘಟ್ಟಗಳ ಅಳಿವು, ಉಳಿವು' ಪುಸ್ತಿಕೆಯಿಂದ ಸಂಗ್ರಹಿತ)

ರಾಬಿಯಾ ಬಸರಿ ಎಂಬ ಜಿಜ್ಞಾಸುವೊಬ್ಬಳು ಕೆಲವು ಜನ ಸಂತರೊಂದಿಗೆ ಚರ್ಚೆಯಲ್ಲಿ ತೊಡಗಿದ್ದಾಗ ಹಸನ್ ಬಸರಿ ಅಲ್ಲಿಗೆ ಬಂದು, "ರಾಬಿಯಾ, ನಡೆಯಿರಿ ಕೊಳ್ಳದ ನೀರ ಮೇಲೆ ಕುಳಿತು ನಾವಿಬ್ಬರೂ ಆಧ್ಯಾತ್ಮದ ಚಿಂತನೆಯಲ್ಲಿ ತೊಡಗೋಣ" ಎಂದರು.

ಹಸನ್ ನೀರ ಮೇಲೆ ನಡೆಯಬಲ್ಲ ಅದ್ಭುತ ಶಕ್ತಿಯುಳ್ಳವರೆಂಬ ಪ್ರಸಿದ್ಧಿಯಿದ್ದವರು. ಬಹುಶಃ ಹಸನ್ ತಮ್ಮ ಆ ಶಕ್ತಿಯ ಪ್ರದರ್ಶನವನ್ನು ಮಾಡಲಿಚ್ಛಿಸಿದ್ದಾರೇನೋ, ಅದಕ್ಕೆ ಕರೆಯುತ್ತಿರಬಹುದೆಂದುಕೊಂಡಳು ರಾಬಿಯಾ.

"ಅಣ್ಣಾ, ಇಬ್ಬರೂ ಆಕಾಶದಲ್ಲಿ ಹಾರಾಡುತ್ತ ಚರ್ಚೆಯಲ್ಲಿ ತೊಡಗಿದರೆ ಹೇಗೆ?" ಎಂದಾಕೆ ಕೇಳಿದಳು. ರಾಬಿಯಾಳಿಗೆ ಗಾಳಿಯಲ್ಲಿ ತೇಲಬಲ್ಲ ಶಕ್ತಿ ಸಿದ್ಧಿಸಿದೆ ಎಂಬ ಪ್ರತೀತಿ ಇತ್ತು. ಹಸನ್ ಸುಮ್ಮನಿರುವುದನ್ನು ನೋಡಿ, ಆಕೆ ಮತ್ತೆ ಗಂಭೀರಳಾಗಿ ಹೇಳಿದಳು.

"ಅಣ್ಣಾ, ನೀವು ಮಾಡುವುದನ್ನು ಮೀನು ಕೂಡ ಮಾಡಿ ತೋರಿಸುತ್ತದೆ. ಹಾಗೆಯೆ ನಾನು ಮಾಡುವುದನ್ನು ನೊಣ ಕೂಡ ಮಾಡಿ ತೋರಿಸುತ್ತದೆ. ಸತ್ಯವು ಪವಾಡದ ಪ್ರದರ್ಶನಕ್ಕಿಂತಲೂ ಮಿಗಿಲಾಗಿದೆ. ವಿನಮ್ರವಾಗಿ ಅದನ್ನು ಅರಸಬೇಕಾಗುತ್ತದೆ.

— ಆನಂದಕೃಷ್ಣ



ಎಂ.ಜಿ.ಆರ್

● ಉದಯ ಮರಕ್ಕಿಣಿ.

ಮೂರು ದಶಕಗಳ ಕಾಲ ತಮಿಳು ನಾಡನ್ನು ಆವರಿಸಿದ್ದ ಎಂ.ಜಿ.ಆರ್. ಶಕೆ ಅಂತ್ಯಗೊಂಡಿದೆ. ಅಲ್ಲಿನ ರಾಜಕೀಯ ರಂಗವನ್ನು ಪೂರ್ತಿಯಾಗಿ ತನ್ನೊಳಗೇ ಲೀನವಾಗಿರಿಸಿ, ಪ್ರಖರ ನಕ್ಷತ್ರದಂತೆ ಮಿನುಗಿದ ಅಸಾಧಾರಣ ಪುರುಷನ ಬದುಕಿಗೆ ಈಗ ತೆರೆಬಿದ್ದಿದೆ.

ಮುರುದೂರು ಗೋಪಾಲನ್ ರಾಮಚಂದ್ರನ್‌ರ ಜೀವನವೇ ಒಂದು ರೋಚಕ ಕಥೆ. ಅದು ಚಿಂದಿ ಬಟ್ಟೆಯಿಂದ ಶ್ರೀಮಂತಿಕೆಯ ಔನ್ನತ್ಯಕ್ಕೇರಿದ ವ್ಯಕ್ತಿಯೊಬ್ಬನ ಹೋರಾಟದ ಕಥೆ; ಬದುಕಿನ ಅತ್ಯಂತ ಕೆಳಸ್ತರದಿಂದ, ಅಸೀಮ ಛಲ, ಹಾಗೂ ದೃಢ ವಿಶ್ವಾಸದಿಂದ ಮೇಲೇರಿ ನಿಂತ ಹುಟ್ಟು ಹೋರಾಟಗಾರನ ಪವಾಡದ ಕಥೆ.

ಎಂ.ಜಿ.ಆರ್. ತೀವ್ರ ಅನಾರೋಗ್ಯದಿಂದ ವಾಕ್ ಶಕ್ತಿಯನ್ನೇ ಕಳಕೊಂಡಿದ್ದರೂ, ಜನಪ್ರಿಯತೆಯನ್ನು ಕಳಕೊಳ್ಳಲಿಲ್ಲ. ಆತ ದಟ್ಟ ದಾರಿದ್ರ್ಯದಿಂದ, ಊಹೆಗೆ ನಿಲುಕದ ಪ್ರಚಂಡ ಜನಪ್ರಿಯತೆಯನ್ನು ಗಳಿಸಿದ ಬಗೆ ಹಾಗೂ ನ್ಯೂಯಾರ್ಕ್‌ನ ಬ್ರೂಕ್‌ಲೀನ್ ಆಸ್ಪತ್ರೆಯ ಹಾಸಿಗೆಯಿಂದಲೇ ತನ್ನ ಜನರ ನಾಡಿ ಬಡಿತವನ್ನು ಗ್ರಹಿಸಿದ ಆತನ ಅಸಾಧಾರಣ ಶಕ್ತಿ ಈಗ ಇತಿಹಾಸ ಇಂತಹ ನಾಯಕ ನನ್ನು ಚರಿತ್ರೆ ಕಂಡದ್ದು ವಿರಳ.

ಎಂ.ಜಿ.ಆರ್. ಒಬ್ಬ ಸಂತನಾಗಿರಲಿಲ್ಲ. ಆದರೆ ಜನರು ಅವರನ್ನು ಆ ಮಟ್ಟಕ್ಕೆ ಏರಿಸಿದರು. ಅವರು ಜನರ ಕಲ್ಯಾಣಕ್ಕಾಗಿ ನೂತನ ಆರ್ಥಿಕ ನೀತಿಯನ್ನು ರೂಪಿಸಿದ ಮಾರ್ಕ್ಸ್ ಅಥವಾ ಗಾಂಧಿ ಆಗಿರಲಿಲ್ಲ; ಆದರೆ ತಮಿಳರು ಹಾಗೆಂದೇ ನಂಬಿದ್ದರು. ಇದೇ ಆ ಕಪ್ಪು ಕನ್ನಡಕ, ಬಿಳಿಯ ತುಪ್ಪಳ ಟೋಪಿಧಾರಿ ವ್ಯಕ್ತಿತ್ವವನ್ನು ಮೀರಿ ಬೆಳೆದ ವರ್ಚಸ್ಸು ಅವರದ್ದಾಗಿತ್ತು.

ಎಂ.ಜಿ.ಆರ್. ತಂದೆ ಮುರುದೂರು ಗೋಪಾಲ ಮೆನನ್ ವೃತ್ತಿಯಲ್ಲಿ ಶಿಕ್ಷಕ ಹಾಗೂ ಕೇರಳದ ಇರಿಂಜಾಕುಡ ಎಂಬ ಪುಟ್ಟ ಹಳ್ಳಿಯಲ್ಲಿ ಗೌರವಾನ್ವಿತ ನ್ಯಾಯಾಧೀಶರಾಗಿದ್ದರು. ಸತ್ಯಭಾಮ ಅವರನ್ನು ವಿವಾಹವಾದ ಬಳಿಕ ಗೋಪಾಲ ಮೆನನ್ ಶ್ರೀಲಂಕಾಕ್ಕೆ ತೆರಳಿದರು. ಕ್ಯಾಂಡಿಯಲ್ಲಿ ಪ್ರೊಫೆಸರ್ ಆಗಿ ನೇಮಕ ಗೊಂಡರು. ಅವರ ಇಬ್ಬರು ಗಂಡುಮಕ್ಕಳು ಹಾಗೂ ಒಂದು

ಹೆಣ್ಣು ಮಗುವಿನ ಜನನವೂ ಅಲ್ಲೇ ಆಯಿತು. ಹೆಣ್ಣು ಮಗು ಅಕಾಲ ಮರಣಕ್ಕೆ ತುತ್ತಾಯಿತು. 1919 ರಲ್ಲಿ ಮೆನನ್ ಸಾವಿಗೀಡಾದ ಬಳಿಕ ಸತ್ಯಭಾಮಾ ತಮ್ಮ ಇಬ್ಬರು ಗಂಡು ಮಕ್ಕಳಾದ ಎಂ.ಜಿ. ಚಕ್ರಪಾಣಿ ಹಾಗೂ ಎಂ.ಜಿ. ರಾಮ ಚಂದ್ರನ್ ಜೊತೆ ಭಾರತಕ್ಕೆ ಮರಳಿದರು.

ತಾಯಿ ಮತ್ತು ಮಕ್ಕಳು ಕುಂಭಕೋಣಂನಲ್ಲಿ ವಾಸಿಸತೊಡಗಿದರು. ಬಡತನವೇ ಅವರ ಮಿತ್ರ, ಸಂಬಂಧಿಕ ಹಾಗೂ ಸಂಗಾತಿ ಯಾಗಿತ್ತು. ಹುಡುಗರಿಬ್ಬರೂ ಸ್ಥಳೀಯ ಅನಯಾಡಿ ಶಾಲೆಗೆ ಸೇರಿದರೂ ಹೆಚ್ಚು ಕಾಲ ವಿದ್ಯಾಭ್ಯಾಸ ಮುಂದುವರಿಸಲಾಗಲಿಲ್ಲ. ಬಡತನ ಮತ್ತು ಹಸಿವು ಅವರ ವಿದ್ಯಾಭ್ಯಾಸ ವನ್ನು ಮೊಟಕುಗೊಳಿಸಿತು.

ಹೊಟ್ಟೆಪಾಡಿನ ಅನಿವಾರ್ಯತೆ ಹುಡುಗ ರನ್ನು ಬಣ್ಣದ ಬದುಕಿನೆಡೆಗೆ ದೂಡಿತು. ಸಹೋದರರಿಬ್ಬರೂ ಸ್ಥಳೀಯ ನಾಟಕ ತಂಡಗಳಲ್ಲಿ ಸೇರಿಕೊಂಡು ಸಂಪಾದನೆ ಗಿಳಿದರು. ಅಂದಿನ ಕಷ್ಟದ ದಿನಗಳನ್ನು ನೆನಪಿಸಿ ಕೊಳ್ಳುತ್ತಾ ಎಂ.ಜಿ.ಆರ್. ಹೇಳುತ್ತಿದ್ದರು:

"ಶಾಲೆಗೆ ಊಟದ ಡಬ್ಬ ತರುತ್ತ ಮಕ್ಕಳನ್ನು ದಿಟ್ಟಿಸಿ ನೋಡುತ್ತಾ ಸುಮ್ಮನೇ ನಿಲ್ಲುತ್ತಿದ್ದೆ. ಕೆಲವೊಮ್ಮೆ ಹೋಟೆಲ್‌ಗಳ ಮುಂದೆ ನಿಲ್ಲುತ್ತಿದ್ದೆ. ಹೊಟ್ಟೆ ತಂಬಾ ಬರಿ ನೀರು ಕುಡಿದು ಮಲಗಿದ ದಿನಗಳೂ ಇದ್ದವು. ಯಾಕೆಂದರೆ ನೀರಿಗೆ ಹಣ ಕೊಡಬೇಕಾಗಿರ ಲಿಲ್ಲ. ಉಪವಾಸ ಹಾಗೂ ಹಸಿವಿನ ತಾಪ ವೇನೆಂಬುದನ್ನು ತಿಳಿಯದವರು ನನ್ನ 'ಪೌಷ್ಟಿಕ ಆಹಾರ ಯೋಜನೆ' ಯನ್ನು ಟೀಕಿಸುತ್ತಾರೆ. ಆದರೆ ನನಗದು ಚೆನ್ನಾಗಿ ಗೊತ್ತು. ನಾನು ಅದನ್ನು ಅನುಭವಿಸಿದ್ದೇನೆ. ಅಂದಿನ ದಿನಗಳಲ್ಲೂ ಈ ರೀತಿಯ ಯೋಜನೆ ಯೊಂದಿದ್ದಲ್ಲಿ ಎಂ.ಜಿ.ಆರ್. ತನ್ನ ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾಗುತ್ತಿರಲಿಲ್ಲ". (ಬಡ ಶಾಲಾ ಮಕ್ಕಳಿಗಾಗಿ ಎಂ.ಜಿ.ಆರ್. ಅನುಷ್ಠಾನಕ್ಕೆ ತಂದಿದ್ದ 'ಪೌಷ್ಟಿಕ ಆಹಾರ ಯೋಜನೆ' ವಿರೋಧ ಪಕ್ಷದ ಕಟು ಟೀಕೆಗೆ ಗುರಿಯಾಗಿತ್ತು.

ಸತ್ಯಭಾಮಾ ಅವರ ಕುಟುಂಬದ ಮಿತ್ರ ಆರ್. ವೇಲುನಾಯರ್ ಸಹಕಾರದಿಂದ ಎಂ.ಜಿ.ಆರ್. ಸೋದರರು, ಆಗಿನ ಪ್ರಸಿದ್ಧ ನಾಟಕ ತಂಡವಾದ 'ಮಧುರೈ ಒರಿಜನಲ್ ಬಾಯ್ಸ್ ಕಂಪೆನಿ'ಗೆ ಸೇರಿದರು. ಅಂದಿನ ಕಾಲದಲ್ಲಿ ನಾಟಕಗಳಲ್ಲಿ ಸಣ್ಣ-ಪುಟ್ಟ ಪಾತ್ರ ವಹಿಸುವ ಮಕ್ಕಳಿಗೆ, ನಾಟಕ ಕಂಪೆನಿಗಳೇ ಉಚಿತ ಊಟ ಹಾಗೂ ಆಶ್ರಯ ನೀಡುತ್ತಿ ದ್ದವು. ಎಂ.ಜಿ.ಆರ್. ಅವರ ಆಗಿನ ಪಗಾರ ವಾರವೊಂದಕ್ಕೆ ನಾಲ್ಕು ಆಣೆಗಳು. ಸಹೋದರ ರಿಬ್ಬರೂ ತಮ್ಮ ಸಂಪಾದನೆಯನ್ನು ತಾಯಿ ಕೈ ಗೊಪ್ಪಿಸುತ್ತಿದ್ದರು. ಸತ್ಯಭಾಮಾ ಕೂಡಾ ಅವರಿವರ ಮನೆಚಾಕರಿ ಮಾಡಿ ಸಂಸಾರ ನಿಭಾ ಯಿಸುತ್ತಿದ್ದರು.

ಸಣ್ಣ-ಪುಟ್ಟ ಪಾತ್ರಗಳಿಂದ ಕ್ರಮೇಣ ಗಮ ನಾರ್ಹ ಪಾತ್ರಗಳನ್ನು ನಿರ್ವಹಿಸಲಾರಂಭಿಸಿ ದರು. ಎಂ.ಜಿ.ಆರ್.ಗೆ ಕೆಲವೊಮ್ಮೆ ಸ್ತ್ರೀ ಪಾತ್ರಗಳೂ ಇವರಿಗೆ ಲಭ್ಯವಾದವು. ಎಂ.ಜಿ.ಆರ್. ಬದುಕಿನ ಮಹತ್ವದ ಘಟ್ಟ ವೆಂದರೆ 'ಸತಿ ಲೀಲಾವತಿ' ಚಿತ್ರದಲ್ಲಿ ದೊರೆತ ಒಂದು ಅವಕಾಶ. ಈ ಚಿತ್ರ ನಿರ್ಮಿಸಿದ ಜೆಮಿನಿ ಸ್ಟುಡಿಯೋದ ದಿ॥ ಎಸ್.ಎಸ್. ವಾಸನ್, ಎಂ.ಜಿ.ಆರ್. ಅವರ ಚಿತ್ರರಂಗ ಪ್ರವೇಶಕ್ಕೆ ಕಾರಣ ಪುರುಷ. ಆ ಬಳಿಕ ಎಂ.ಜಿ.ಆರ್. 15 ಚಿತ್ರಗಳಲ್ಲಿ ಕಾಣಿಸಿ ಕೊಂಡರು.

1947ರ ವರ್ಷ, ಎಂ.ಜಿ.ಆರ್. ಬದುಕಿಗೆ ಅದ್ಭುತ ತಿರುವು ನೀಡಿತು. ಎಂ.ಜಿ.ಆರ್. ನಾಯಕನಾಗಿ ನಟಿಸಿದ ಹಾಗೂ ಅವರ ಆನಂತರದ ರಾಜಕೀಯ ವಿರೋಧಿ ಎಂ. ಕರುಣಾನಿಧಿ ಚಿತ್ರಕಥೆ ರಚಿಸಿದ- 'ರಾಜಕುಮಾರಿ' ಚಿತ್ರ ತಮಿಳುನಾಡಿನೆಲ್ಲೆಡೆ ಪ್ರಚಂಡ ಯಶಸ್ಸು ಗಳಿಸಿತು. ಎಂ.ಜಿ.ಆರ್. ಹಿಂತಿರುಗಿ ನೋಡಲೇ ಇಲ್ಲ 'ಯಶಸ್ಸು' ಅವರ ಮುಂದೆ ನಸುನಗುತ್ತ ನಿಂತಿತ್ತು.


ಆ ಬಳಿಕ ತೆರೆಕಂಡ ಅವರ 'ಮಂದಿರಿ ಕುಮಾರಿ', 'ಮಧುರೈ ವೀರನ್', 'ಸರ್ವಾಧಿ ಕಾರಿ', 'ಮುರುದನಾಟ್ಟು ಇಳವರಸಿ' ಚಿತ್ರಗಳು ಜಯಭೇರಿ ಬಾರಿಸಿದವು. ಈ ಎಲ್ಲಾ ಚಿತ್ರಗಳಿಗೂ ಕರುಣಾನಿಧಿಯವರದ್ದೇ ಚಿತ್ರಕಥೆ ಇತ್ತು. ಕರುಣಾನಿಧಿ ಜೊತೆಗಿನ ಬಾಂಧವ್ಯ ಹಾಗೂ ನಿಕಟ ಸಂಬಂಧವೇ, ಎಂ.ಜಿ.ಆರ್.ಗೆ

ರಾಜಕೀಯಾಸಕ್ತರಾಗಲು ಪ್ರೇರಣೆ ನೀಡಿತು. ಕರುಣಾನಿಧಿಯವರೇ ಎಂ.ಜಿ.ಆರ್. ಜನಪ್ರಿಯತೆಗೆ ಊರುಗೋಲಾದರೋ ಅಥವಾ ಎಂ.ಜಿ.ಆರ್.ರೇ ಕರುಣಾನಿಧಿ ಜನಪ್ರಿಯರಾಗಲು ಕಾರಣರಾಗಿದ್ದರೋ ಎಂಬುದು ಇನ್ನೂ ಚರ್ಚಾರ್ಹ ವಿಷಯ. ಆದರೆ ಜನಪ್ರಿಯತೆಯ ಶಿಖರವನ್ನೇರಲು ಇಬ್ಬರೂ ಪರಸ್ಪರ ಸಹಾಯಕರಾದರು ಎನ್ನುವುದು ಮಾತ್ರ ನಿಜ.

'ಮಲೈಕಳ್ಳನ್' ಮತ್ತು 'ನಾಡೋಡಿ ಮನ್ನನ್' ಚಿತ್ರಗಳು ಬಿಡುಗಡೆಯಾದ ಮೇಲೆ ಎಂ.ಜಿ.ಆರ್. ತಮಿಳು ಬೆಳ್ಳಿತೆರೆಯ ಅನಭಿಷಕ್ತ ಸಾಮ್ರಾಟರಾದರು. ಅವರ ಪ್ರತಿಯೊಂದು ಚಿತ್ರವೂ ಮಿಲಿಯಗಟ್ಟಲೆ ಜನರನ್ನು ಹುಚ್ಚೆಬ್ಬಿಸುತ್ತಿತ್ತು. ಒಂದು ದಶಕದ ಹಿಂದೆ ಎಂ.ಜಿ.ಆರ್. ಚಿತ್ರರಂಗಕ್ಕೆ ವಿದಾಯ ಹೇಳಿದ್ದರು. ಚಿತ್ರಜಗತ್ತಿನಲ್ಲಿ ಎಂ.ಜಿ.ಆರ್. ಯಶಸ್ಸಿನ ಕಥೆಗೆ ಸರಿಸಮವಾದದ್ದು ಇನ್ನೊಂದಿಲ್ಲ. ಇಂದಿಗೂ ಅವರ ಹಳೆಯ ಚಿತ್ರಗಳು, ಇಂದಿನ ನಾಯಕನಟರಾದ ರಜನೀಕಾಂತ್, ಕಮಲ್‌ಹಾಸನ್ ಅವರ ಚಿತ್ರಗಳಿಗಿಂತ ಹೆಚ್ಚಿನ ಜನ ಸಮೂಹವನ್ನು ಆಕರ್ಷಿಸುತ್ತದೆ.

"ಬೆಳ್ಳಿ ತೆರೆ ಎನ್ನುವುದು ಒಂದು 'ಭೂತ', ಈ ಮಾಧ್ಯಮವನ್ನು ತನ್ನ ಹಿಡಿತದಲ್ಲಿರಿಸಿಕೊಳ್ಳಬಲ್ಲ ವ್ಯಕ್ತಿ ಕೊನೆಗೆ ಜನರನ್ನೇ ಆಳುತ್ತಾನೆ, ಎಚ್ಚರ" ಎಂದು ಬಹಳ ಕಾಲದ ಹಿಂದೆ ಲೆನಿನ್ ಹೇಳಿದ್ದ ಮಾತುಗಳು ಎಂ.ಜಿ.ಆರ್. ವಿಷಯದಲ್ಲಿ ಅಕ್ಷರಶಃ ನಿಜವಾಯಿತು. ಅಣ್ಣಾದೊರೈ ನೇತೃತ್ವದ ಡಿ.ಎಂ.ಕೆ. ಪಕ್ಷ, ಕಾಂಗ್ರೆಸ್ ಪಕ್ಷದ ಕೈಯಿಂದ ಅಧಿಕಾರವನ್ನು ತನ್ನೆಡೆಗೆ ಸೆಳೆದುಕೊಳ್ಳಲು ಸಹಾಯ ಮಾಡಿದ್ದು-ಎಂ.ಜಿ.ಆರ್. ಜನಪ್ರಿಯತೆ. ತಮ್ಮ ಚಿತ್ರರಂಗದ ಸಹೋದ್ಯೋಗಿ ಎಂ.ಆರ್. ರಾಧಾ ಅವರ ಗುಂಡೇಟಿನಿಂದ ಗಾಯಗೊಂಡು ಆಸ್ಪತ್ರೆ ಸೇರಿದ್ದ ಎಂ.ಜಿ.ಆರ್. ಅಲ್ಲಿಂದಲೇ ಸೈಂಟ್ ಥಾಮಸ್ ಮೌಂಟ್ ವಿಧಾನಸಭಾ ಕ್ಷೇತ್ರವನ್ನು ಗೆದ್ದುಕೊಂಡರು (1967).

1969 ರಲ್ಲಿ ರಾಜಕೀಯ ಕ್ಷೇತ್ರದಲ್ಲಿ ಎಂ.ಜಿ.ಆರ್.ಗೆ ಗುರುವಾಗಿದ್ದ ಅಣ್ಣಾದೊರೈ,



"ಜಿ.ಪ. ಅಧ್ಯಕ್ಷರಿಗೆ ಕಾರುಕೊಟ್ಟ ಮೇಲೆ ಮಂ.ಪ. ಅಧ್ಯಕ್ಷರಿಗೆ ಒಂದು ಚಕ್ಕಡಿಯನ್ನಾದರೂ ಕೊಡಬೇಡವೇನ್ರಿ?"

ನಿಧನರಾದರು. ವಿ.ಎನ್. ನೆಡುಂಚೆಳಿಯನ್ ಮುಖ್ಯಮಂತ್ರಿ ಸ್ಥಾನಕ್ಕೆ ಪ್ರಮುಖ ಸ್ಪರ್ಧಿಯಾಗಿದ್ದರು. ಆದರೆ ಪ್ರಪ್ರಥಮ ಬಾರಿಗೆ ತಮ್ಮ ತೀಕ್ಷ್ಣ ಬುದ್ಧಿ ಹಾಗೂ ರಾಜಕೀಯ ಚತುರತೆಯನ್ನು ಪ್ರದರ್ಶಿಸಿದ ಎಂ.ಜಿ.ಆರ್. ಮುಖ್ಯಮಂತ್ರಿ ಪಟ್ಟವನ್ನು ಕರುಣಾನಿಧಿಗೆ ದೊರಕಿಸಿಕೊಡುವಲ್ಲಿ ಯಶಸ್ವಿಯಾದರು. ಆದರೆ ಆ ಬಳಿಕ ನಡೆದ ಹಲವಾರು ಅನಿರೀಕ್ಷಿತ ಘಟನೆಗಳು ತಮಿಳುನಾಡಿನ ರಾಜಕೀಯ ಸ್ವರೂಪವನ್ನೇ ಬದಲಾಯಿಸಿತು.

ಪರಸ್ಪರ ವಿರೋಧಿಗಳಾಗಿದ್ದ ಕರುಣಾನಿಧಿ ಹಾಗೂ ನೆಡುಂಚೆಳಿಯನ್ ಇದ್ದಕ್ಕಿದ್ದಂತೆ ಒಟ್ಟಾಗಿ ಎಂ.ಜಿ.ಆರ್. ಅವರನ್ನು ಪಕ್ಷದಿಂದ ತಾತ್ಕಾಲಿಕವಾಗಿ ವಜಾ ಮಾಡಿದರು. ಇಡೀ ತಮಿಳುನಾಡು ಈ ಘಟನೆಯಿಂದಾಗಿ ಭುಗಿಲೆದ್ದಿತ್ತು. ಎಲ್ಲೆಲ್ಲೂ ಹಿಂಸೆ ತಾಂಡವವಾಡಿತು. ಎಂ.ಜಿ.ಆರ್. ತಮ್ಮದೇ ಆದ 'ಎ.ಡಿ.ಎಂ.ಕೆ' (ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ) ಪಕ್ಷ ಸ್ಥಾಪಿಸಿದರು. 1977 ರಲ್ಲಿ ಈ ಹೊಸ ಪಕ್ಷ ಅಧಿಕಾರಕ್ಕೆ ಬಂದಿತು. ಕಳೆದ ಹತ್ತು ವರ್ಷಗಳ ಅವರ ನಾಯಕತ್ವ, ಹಾಗೂ ಜನಪ್ರಿಯತೆ ಪ್ರಶ್ನಾತೀತ. ಅವರು ಎದುರಿಸಿದ ಮೂರು ಚುನಾವಣೆಗಳಲ್ಲೂ, ತಮಿಳರ ಉಸಿರೇ

ಎಂ.ಜಿ.ಆರ್. ಎಂಬುದನ್ನು ಸ್ಪಷ್ಟಪಡಿಸಿತು. 1984 ರಲ್ಲಿ ಮೆದುಳಿನ ಎಡ ಭಾಗದಲ್ಲಿ ರಕ್ತಸ್ರಾವ, ಮೂತ್ರಪಿಂಡದ ತೊಂದರೆ ಮುಂತಾದವುಗಳಿಂದ ಅವರು ನ್ಯೂಯಾರ್ಕ್ ಆಸ್ಪತ್ರೆಯಲ್ಲಿದ್ದರೂ ಚುನಾವಣೆಯಲ್ಲಿ ಜಯ ಗಳಿಸಿದರು. ಅವರು ವಾಕ್ ಶಕ್ತಿಯನ್ನು ಕಳ ಕೊಂಡಿದ್ದರು. ಎಡ ಭಾಗದ ಅಂಗಾಂಗಗಳು ಕೆಲಸ ಮಾಡುತ್ತಿರಲಿಲ್ಲ. ಆದರೂ ತಮಿಳು ನಾಡಿನ ಯಾವುದೇ ಮುಖ್ಯ ಚಟುವಟಿಕೆಗಳೂ ಅವರ ಅನುಮತಿಯಿಲ್ಲದೇ ನಡೆಯುವಂತಿರ ಲಿಲ್ಲ.

ಎಂ.ಜಿ.ಆರ್. ವಿರೋಧಿಗಳ ಟೀಕೆಯ ಪ್ರಕಾರ, ಎಂ.ಜಿ.ಆರ್. ಜನಪ್ರಿಯರಾಗಿದ್ದ ರಷ್ಟೇ ಹೊರತು ಆಡಳಿತದ ಜ್ಞಾನ ಹೊಂದಿ ದವರಲ್ಲ; ಅವರು ಜನರ ಸಮಸ್ಯೆಗಳಿಗಿಂತ ಹೆಚ್ಚಾಗಿ ಭಾವನೆಗಳಿಗೇ ಸ್ಪಂದಿಸುತ್ತಿದ್ದರು. ಆದರೆ ಇದೇ ಅವರ ವಿವಾದಾತೀತ ಜನಪ್ರಿ ಯತೆ ಹಾಗೂ ಯಶಸ್ಸಿನ ಗುಟ್ಟು. ಅವರ ರಾಜಕೀಯ ನಿರ್ಧಾರಗಳು ಊಹಿಸಲಸಾಧ್ಯ; ಅಧಿಕಾರದ ಪಂದ್ಯಾಟದಲ್ಲಿ ಅವರು ಯಾವತ್ತೂ ಅಜೇಯ. ಎಂ.ಜಿ.ಆರ್. ವಿರೋಧಿಗಳಿಗೇ ಅಲ್ಲ, ಅವರ ಬೆಂಬಲಿಗ ರಿಗೂ ಎಂ.ಜಿ.ಆರ್. ಮುಂದಿನ ನಡೆ ಏನಿರ ಬಹುದೆಂಬುದು ನಿಗೂಢವಾಗಿರುತ್ತಿತ್ತು. ಯಾವುದೇ ನಿರ್ಧಾರ ಕೈಗೊಳ್ಳುವಲ್ಲಿ ಅಥವಾ ಅದನ್ನು ಹಿಂತೆಗೆದುಕೊಳ್ಳುವಲ್ಲಿ ಎಂಜಿಆರ್ ಹಿಂದೆ-ಮುಂದೆ ಯೋಚಿಸುತ್ತಿರಲಿಲ್ಲ. ಅವ ರೊಬ್ಬ ಸಂದರ್ಭ ಸಾಧಕರು ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಅವರ ಸಂದರ್ಭ ಸಾಧಕತನ ಎಂದೂ ಜನರ ಕೋಪಕ್ಕೆ ಗುರಿಯಾಗಲಿಲ್ಲ.

ಸಿದ್ಧಾಂತ ಮತ್ತು ನಿಷ್ಠೆಯಲ್ಲಿನ ವೈರುಧ್ಯಗಳು ಉಳಿದ ರಾಜಕಾರಣಿಗಳ ಜನಪ್ರಿಯತೆಗೆ ತುತ್ತಾಗಬಲ್ಲವು. ಆದರೆ ಎಂ.ಜಿ.ಆರ್. ಮಾತ್ರ ಇದಕ್ಕೆ ಅಪವಾದ. ಶ್ರೀಮತಿ ಇಂದಿರಾ ಗಾಂಧಿ ಪ್ರಧಾನಿಯಾಗಿದ್ದಾಗ ಅವರಿಗೆ ನಿಷ್ಠ ರಾಗಿದ್ದ ಎಂ.ಜಿ.ಆರ್., ಅನಂತರ ಮುರಾರ್ಜಿ ಪ್ರಧಾನಿಯಾದಾಗ ತಮ್ಮ ನಿಷ್ಠೆ ಯನ್ನು ಅವರತ್ತ ವರ್ಗಾಯಿಸಿದರು. ಆದರೂ ಯಾರೊಬ್ಬರೂ ಸೊಲ್ಲೆತ್ತಲಿಲ್ಲ. ತಮ್ಮ ಆರಾಧ್ಯ ದೈವದ ವ್ಯಕ್ತಿತ್ವದ ಕಳೆಗುಂದಿಸಲು ಯಾರಿಂದಲೂ ಸಾಧ್ಯವಿಲ್ಲ ಎನ್ನುವುದು ತಮಿಳರ ಅಚಲ ನಂಬಿಕೆ. ಆದರೂ ಭ್ರಷ್ಟಾಚಾರ, ಅವ್ಯವಹಾರ, ರಾಜ್ಯವನ್ನು ಕೈಗಾರಿಕಾಭಿವೃದ್ಧಿಯತ್ತ ಕೊಂಡೊಯ್ಯುವುದ ರಲ್ಲಿ ವೈಫಲ್ಯ ಇವುಗಳು ಎಂ.ಜಿ.ಆರ್. ಆಡಳಿತದಲ್ಲಿನ ಕಪ್ಪು ಚುಕ್ಕೆಗಳು.

"ನಾನು ಸಾಯುವ ತನಕ ತಮಿಳುನಾಡಿನ ಮುಖ್ಯಮಂತ್ರಿಯಾಗುಳಿಯುತ್ತೇನೆ" ಎಂದು ಎಂ.ಜಿ.ಆರ್. ಘೋಷಿಸಿದರು. ಅವರ ಮಾತುಗಳು ನಿಜವಾದವು ತನ್ನ ಕುರಿತಾದ ಎಲ್ಲಾ ಟೀಕೆಗಳಿಗೆ ಅವರು ಹೇಳುತ್ತಿದ್ದ ಒಂದೇ ಉತ್ತರವೆಂದರೆ "ಜನರು ನನಗೇ ಮತ ನೀಡು ತ್ತಾರೆ. ಜನರ ತೀರ್ಮಾನವೇ ಶ್ರೇಷ್ಠ ಹಾಗೂ ಅಂತಿಮ".

ಜಯಲಲಿತಾ ಜಯರಾಮ್ ಜೊತೆಗೆ ಎಂ.ಜಿ.ಆರ್. ಸಂಬಂಧ ಯಾವ ರೀತಿಯ ದ್ದಾಗಿತ್ತು? ಅವರಿಗೆ ಮತ್ತು ಜಯಲಲಿತಾ ಹೊರತಾಗಿ ಬೇರಾರಿಗೂ ತಿಳಿದಿರಲಿಲ್ಲ. ತನ್ನ ಅನಂತರ ಪಕ್ಷ ಹಾಗೂ ಸರ್ಕಾರದ ಸ್ವರೂಪ ಹೇಗಿರಬೇಕೆಂಬುದರ ಬಗ್ಗೆ ಎಂ.ಜಿ.ಆರ್. ಯೋಚನೆಗಳೇನಿದ್ದವು ಎಂಬುದೂ ಯಾರಿಗೂ ತಿಳಿದಿಲ್ಲ. ಎಂ.ಜಿ.ಆರ್. ಅವರದ್ದು ಅನು ಮಾನ ಪ್ರಕೃತಿ. "ತನ್ನ ನೆರಳನ್ನೂ ಅವರು ನಂಬಲಾರರು" ಎಂದು ಖ್ಯಾತ ಪತ್ರಕರ್ತ ಚೋ ರಾಮಸ್ವಾಮಿ ಹೇಳಿದ್ದಾರೆ. ಶ್ರೀಲಂಕಾದ ತಮಿಳರ ವಿರುದ್ಧ 'ಭಾರತೀಯ ಶಾಂತಿದಳ'ದ ಕಾರ್ಯಾಚರಣೆ ಬಗ್ಗೆ ಅವರು ಸಂತುಷ್ಟರಾಗಿದ್ದರೆ ಅಥವಾ ಅಸಂತುಷ್ಟರಾಗಿದ್ದರೇ ಎಂಬುದೂ ನಿಗೂಢ.

'ಪುರಚ್ಚಿ ತಲೈವರ್" (ಕ್ರಾಂತಿಕಾರಿ ನಾಯಕ) 'ಮಕ್ಕಳ ತಿಲಕಂ' (ಅಭಿಮಾನಿಗಳ ಹಣೆ ತಿಲಕ), 'ಪೊನ್ಮನ ಚೆಮ್ಮಲ್' (ಚಿನ್ನದಂತಾ ಹೃದಯ ವುಳ್ಳವನು), 'ಅಣ್ಣಾವಿನ್ ಇದಯ ಕನಿ', (ಅಣ್ಣಾದೊರೈ ಅವರ ಹೃದಯ), 'ಏಳೈ ಪಂಗಾಳನ್', (ಬಡವರ ಬಂಧು) ಮೊದ ಲಾದ ಬಿರುದುಗಳನ್ನು ಪಡೆದ 'ಯುಗ ಪುರುಷ', ಕಣ್ಮರೆಯಾಗಿದ್ದಾರೆ. ಇವರೊಂದಿಗೆ ತಮಿಳರ ಇತಿಹಾಸದಲ್ಲಿ ಒಂದು ಅಳಿಸ ಲಾಗದ ಶಕೆಯೂ ಮುಕ್ತಾಯಗೊಂಡಿದೆ. ●

ಗಾಂಧೀಜಿ ಮತ್ತು ಹಾಸ್ಯಪ್ರಜ್ಞೆ



ಗಾಂಧೀಜೀಯವರ ಮಹಾನ್ ವ್ಯಕ್ತಿತ್ವದಲ್ಲಿ 'ಪ್ರಸನ್ನತೆ' ಪ್ರಮುಖ ಅಂಶ. ಜೀವನದ ಅನೇಕ ಆಂತರಿಕ ಹಾಗೂ ಬಾಹ್ಯ ಒತ್ತಡ, ಮಹತ್ತರವಾದ ಜವಾಬ್ದಾರಿ ಎಲ್ಲವನ್ನೂ ನಗುವಿನ ಅಲೆಯ ಮೂಲಕ ಇವರು ಸರಳಗೊಳಿಸುತ್ತಿದ್ದರು.

ಜಿ.ಬಿ. ಷಾ ಹೇಳುವಂತೆ, ಇವರೊಬ್ಬ ಪ್ರಸನ್ನ ಭಾವದ ಪ್ರತೀಕ. ಗಾಂಧೀಜಿಯವರ ನಗುವೇ ಒಂದು ಪಾಠ, ಅನುಭವ. ಅಂತರಾಳದಿಂದ ಹೊರಹೊಮ್ಮುವ ಈ ನಗು ಸರಳತೆಯ ಸಹಜತೆಯ ಪ್ರತಿರೂಪ. ಮಾನಸಿಕ, ಐಹಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ಮುಖಗಳ ಸಾಕರ ರೂಪ. ಮಾನವನ ಮೂಲಭೂತ ಅಗತ್ಯಗಳಾದ ಸ್ವಾತಂತ್ರ್ಯ ಸ್ವಚ್ಛಂದತೆಗಳ ಪ್ರತಿಬಿಂಬವಾಗಿರುವ ಈ ನಗು ಒಂದು ಕಾವ್ಯ. ತನ್ನ ಬಿಚ್ಚು ನಗು ಹಾಗೂ ಬುದ್ಧಿವಂತಿಕೆಯಿಂದ ಅದ್ಭುತ ವನ್ನು ಸಾಧಿಸಿದ ಧೀಮಂತ ವ್ಯಕ್ತಿತ್ವ ಇವರದು.

ಗಾಂಧೀಜಿಯವರ ಹಾಸ್ಯಪ್ರಜ್ಞೆಯನ್ನು ಅವರ ಆಂತರಿಕ ಹಾಗೂ ಬಾಹ್ಯ ಜೀವನದಲ್ಲಿ ಕಂಡುಕೊಳ್ಳಬಹುದು. ಅವರ ಆತ್ಮಚರಿತ್ರೆಯ ಕೆಲವು ಹಾಸ್ಯದ ಪುಟಗಳನ್ನು ಗಮನಿಸಿದಾಗ ಇದು ಅರಿವಿಗೆ ಬರದಿರಲಾರದು.

ಬಾಲಕನಾಗಿದ್ದಾಗ ಗಾಂಧೀಜಿಯವರಿಗೆ ಕತ್ತಲು ಕಂಡರೆ ಭಯ. ದುಷ್ಟ ಪ್ರಾಣಿಗಳು ಹಾಗೂ ಭೂತ ಪ್ರೇತಾದಿ ವಿಷಯಗಳ ಬಗ್ಗೆ ಇವರಲ್ಲಿ ಅತೀವ ಭಯಆವರಿಸಿತ್ತು. ಮಾಂಸ ತಿನ್ನುವುದರಿಂದ ಭಯ ಮುಕ್ತವಾಗಬಹುದು ಎಂಬ ನಂಬಿಕೆಯಿಂದ ಮಾಂಸ ತಿನ್ನಲು ಪ್ರಾರಂಭ ಮಾಡಿದರಂತೆ ಅವರದೇ ಮಾತುಗಳ ಪ್ರಕಾರ ಮಾಂಸ ತಿನ್ನುವುದರಿಂದ ತಾನು ಬಲಶಾಲಿಯಾಗಬಹುದು; ಆದ್ದರಿಂದ ದೇಶದ ಸಮಗ್ರ ಜನರು ಮಾಂಸ ತಿಂದಲ್ಲಿ ಬಲಶಾಲಿಗಳಾಗಿ ಬ್ರಿಟಿಷರನ್ನು ಓಡಿಸಬಹುದು ಎಂಬ ಭಾವನೆ ಅವರಲ್ಲಿ ಪ್ರಬಲವಾಯಿತು. ಆ ಬಾಲಿಶ ನಂಬಿಕೆ ಕ್ರಮೇಣ ನಾಶವಾಯಿತು.

ಗಾಂಧೀಜಿಯವರು ಸಸ್ಯಾಹಾರಿ ಸಮಾಜದ ಸದಸ್ಯರಾಗಿದ್ದರು. 1942 ರಲ್ಲಿ, ಸೇವಾ ಗ್ರಾಮ್‌ನಲ್ಲಿ ಗಾಂಧೀಜಿಯವರ ಆತ್ಮಚರಿತ್ರ ಕಾರ ಲೂಯಿ ಫಿಶರ್ ಮತ್ತು ಗಾಂಧಿ ಯವರ ನಡುವೆ ನಡೆದ ಮಾತುಕತೆ ಸ್ವಾರಸ್ಯ ಪೂರ್ಣ. ಗಾಂಧಿಯವರ ಹಾಸ್ಯಪ್ರಜ್ಞೆಯ ಒಂದು ತುಣುಕು ಹೀಗಿದೆ:

ಗಾಂಧೀಜಿ: ತರಕಾರಿಗಳ ಜೊತೆ ಹೆಚ್ಚು ಹೆಚ್ಚು ಉಪ್ಪು ಮತ್ತು ಲಿಂಬೆಹಣ್ಣನ್ನು ಬಳಸು ವುದು ಉತ್ತಮ.

ಲೂಯಿ: ಏನು? ನೀವು ರುಚಿಯನ್ನೇ ಕೊಂದು ಬಿಡುತ್ತೀರೋ ಹೇಗೆ?

ಗಾಂಧೀಜಿ: ಇಲ್ಲ ಇಲ್ಲ, ಅದನ್ನು ಹೆಚ್ಚಿಸುತ್ತಿದ್ದೇನೆ.

ಲೂಯಿ: ನೀವು ಅಹಿಂಸಾವಾದಿಗಳು ತಾನೆ, ರುಚಿಯನ್ನು ಕೊಲ್ಲಲಾರಿರಿ ಬಿಡಿ.

ಗಾಂಧೀಜಿ: ಮನುಷ್ಯ ಅದೊಂದನ್ನು ಮಾತ್ರ ಕೊಂದರೆ ಪರವಾಗಿಲ್ಲ.

ಗಾಂಧೀಜಿಯವರ ಆಶ್ರಮದಲ್ಲಿ ಈ ರೀತಿಯ ಸಂಭಾಷಣೆಗಳು ಬೇಕಾದಷ್ಟು ನಡೆಯು ತ್ತಿದ್ದುವು.

ಗಾಂಧಿಯವರ ಕಾಲಕ್ಕೆ ಈಗಿನಂತೆ ಸೌಂದರ್ಯ ಸಾಧನಗಳಗಲೀ, ಸೌಂದರ್ಯ ವರ್ಧಕಗಳಾಗಲೀ ಇರಲಿಲ್ಲ. ಸಾಬೂನಿ ನಂತಹ ವಸ್ತುಗಳು ಕೇವಲ ಶ್ರೀಮಂತರ ಸೊತ್ತುಗಳಾಗಿದ್ದು ಬಹಳ ವಿರಳವಾಗಿದ್ದುವು. ಬಾಲಕ ಗಾಂಧಿ ಸಾಬೂನನ್ನು ನಾಗರಿಕತೆಯ ಗುರುತಾಗಿ ಕಂಡುಕೊಂಡಿದ್ದರು. ಜಾಕೇಟಿ ನಂತಹ ಉಡುಪುಗಳು ಅನಾಗರಿಕ ಎಂಬ ಭಾವನೆ ಅವರಲ್ಲಿತ್ತು.

ಗಾಂಧಿಯವರ ಸೌಂದರ್ಯ ಪ್ರಜ್ಞೆ ಎಷ್ಟೊಂದು ಜಾಸ್ತಿಯಾಗಿತ್ತೆಂದರೆ ದಿನವೂ ಕಡಿಮೆ ಪಕ್ಷ 10 ನಿಮಿಷವಾದರೂ ಕನ್ನಡಿಯ ಮುಂದಿರುತ್ತಿದ್ದ ರಂತೆ, ಕೂದಲು ತಿದ್ದುವುದು, ಉಡುಪುಗಳನ್ನು ಸರಿಪಡಿಸಿಕೊಳ್ಳುವುದು ಮೊದಲಾದ ವಿಷಯ ಗಳಲ್ಲಿ ವಿಶೇಷ ಆಸಕ್ತಿ ಭಾರತದಲ್ಲಿ, ಆಗಿನ ಕಾಲಕ್ಕೆ ಕನ್ನಡಿಯೆಂದರೆ ಬಹಳ ದುಬಾರಿಯಾಗಿದ್ದರಿಂದ ತನ್ನ ಕ್ಷೌರದ ಸಮಯದಲ್ಲಿ ಮಾತ್ರ ಇದು ಸಾಧ್ಯವಿತ್ತು ಎನ್ನುತ್ತಾರೆ. ಬಹಳ ಒರಟಾಗಿದ್ದ ಅವರ ಕೂದಲನ್ನು ಸರಿಪಡಿಸುವುದು ಬಹಳ ಕಷ್ಟವಾಗಿತ್ತಂತೆ. ತನ್ನಿಂದ ತಾನೇ ನಿಮಿಷಕ್ಕೊಮ್ಮೆ ಕೂದಲ ಮೇಲೆ ಕೈಯಾಡು ತ್ತಿತ್ತು ಎನ್ನುತ್ತಾರೆ ಗಾಂಧಿ.

1887 ರಲ್ಲಿ ಲಂಡನ್ನಿನಲ್ಲಿ ನಡೆದ ಒಂದು ಘಟನೆ. ಗಾಂಧಿಯವರು ಸೊಂಟಕ್ಕೊಂದು ಬಟ್ಟೆ ಹಾಗೂ ತಲೆ, ಹೆಗಲುಗಳಿಗೆ ಉಲ್ಲನ್ ಬಟ್ಟೆಯೊಂದನ್ನು ಹೊದ್ದುಕೊಂಡಿದ್ದರು. ಇಂಗ್ಲಿಷ್ ಹೆಣ್ಣೊಬ್ಬಳು ತಮ್ಮ ಅಂಗಿಯೆಲ್ಲಿ? ಎಂದು ಕೇಳಿದಾಗ ಗಾಂಧಿಯವರಿಗೆ ನಗುವೇ ನಗು. ಇನ್ನೊಬ್ಬಾಕೆ ತನ್ನ ಜತೆ ನೃತ್ಯ ಮಾಡು ವಂತೆ ಕೇಳಿಕೊಂಡಾಗ ಗಾಂಧಿಯವರ ಉತ್ತರ "ಧಾರಾಳ, ಆದರೆ ನನ್ನ ಕೋಲು ಮಾತ್ರ ನನ್ನ ಜತೆಯಲ್ಲಿರಬೇಕು".

ಇದೇ ಉಡುಗೆಯಲ್ಲಿ ರಾಜಾ ಜಾರ್ಜ್‌ರನ್ನು ಭೇಟಿ ಮಾಡಲು ಬಕ್ಕಿಂಗ್ ಹ್ಯಾಮ್ ಅರಮನೆಗೆ ಹೋಗಿದ್ದರು. ಅಲ್ಲಿ ಅವರಿಗೆ ಒಂದು ಚೀಟಿ ಬಂತು. "ಇಂಗ್ಲೆಂಡಿನ ರಾಜ್ಯವನ್ನು ನೋಡಲು ಗಾಂಧಿಯವರು ಸಾಕೆ?" ಗಾಂಧಿಯವರ ಉತ್ತರ-"ನಮ್ಮಿಬ್ಬ ರನ್ನು ನೋಡಲು ಇಂಗ್ಲೆಂಡಿನ ರಾಜ ಸಾಕು".

ಬ್ಯಾರಿಸ್ಟರ್ ಆಗಿ ಗಾಂಧಿಯವರ ಅನುಭವ ಆಸಕ್ತಿಪೂರ್ಣ. ಅವರ ಪ್ರಕಾರ ಬ್ಯಾರಿಸ್ಟರ್ ಉದ್ಯೋಗ ಒಂದು ಕೆಟ್ಟ ಕೆಲಸ. ಅದರಲ್ಲಿ ತೋರಿಕೆಗೆ ಹೆಚ್ಚು ಪ್ರಾಶಸ್ತ್ಯವೇ ಹೊರತು ನಿಜವಾದ ಜ್ಞಾನಕ್ಕಲ್ಲ. ವಕೀಲವೃತ್ತಿಯೆಂದರೆ ಸುಳ್ಳುಗಾರನ ಕೆಲಸ.

ದಕ್ಷಿಣ ಆಫ್ರಿಕದ ಉಚ್ಚ ನ್ಯಾಯಾಲಯದಲ್ಲಿ ಒಂದು ಕೇಸು ನಡೆಯುತ್ತಿರುವಾಗ ಗಾಂಧಿಯವರ ಅನುಮತಿಯಿಲ್ಲದೆ ಅವರ ಕಕ್ಷಿಗಾರನ ಲೆಕ್ಕಪತ್ರದಲ್ಲಿ ಕೆಲವು ಅಸಂಗತ ಬದಲಾವಣೆಗಳನ್ನು ಮಾಡಲಾಯಿತು. ಅವರನ್ನು ಕೇಳದೆ ಈ ರೀತಿ ಮಾಡಿದ್ದು ಗಾಂಧಿಯವರಿಗೆ ಅಚ್ಚರಿ ಹುಟ್ಟಿಸಿತು. ಆಗ ನ್ಯಾಯಾಧೀಶರು, ಇದೇನೂ ನಿಮ್ಮ ಮೇಲಿನ ಹೇರಿಕೆಯಲ್ಲ ಕೇವಲ ಸಲಹೆ ಎಂದರಂತೆ. ಕೇಸನ್ನು ಗೆದ್ದ ಗಾಂಧಿ ಹೀಗೆ ಉತ್ತರಿಸಿದರು. "ನಿಮ್ಮ ಸಲಹೆ ನನಗೆ ಹೇರಿಕೆಯಂತೆ ಕಾಣಿಸುತ್ತದೆ. ಇದನ್ನು ಆಚರಿಸುವಂತಿದ್ದರೆ ನನ್ನ ಮೇಲೆ ಅಪವಾದವನ್ನೂ ಹೊರಿಸಿಬಿಡಿ ಎಂದಾಗ ನ್ಯಾಯಾಧೀ ಶರು ಕ್ಷೇಮ ಬೇಡಬೇಕಾಯಿತು.

ವಕೀಲರಾಗಿ ತನ್ನ ಮೊತ್ತಮೊದಲಿನ ಅನುಭವವನ್ನು ಹೀಗೆ ಬರೆಯುತ್ತಾರೆ.

ಮೊದಲಿಗೆ, ವಾದಕ್ಕಾಗಿ ಎದ್ದುನಿಂತಾಗ ಎದೆ ಕುಗ್ಗಿತು. ತಲೆಸುತ್ತಿದಂತಾಗಿ ಇಡಿಯ ನ್ಯಾಯಾಲಯವೇ ತಿರುಗುವಂತೆ ಭಾಸವಾಯಿತು. ಯಾವ ಪ್ರಶ್ನೆ ಕೇಳಬೇಕೆಂದೇ ತಿಳಿಯಲಿಲ್ಲ, ಎಲ್ಲರೂ ಈ ದೃಶ್ಯದ ಮೋಜು ನೋಡುತ್ತಿದ್ದರು. ಗಾಂಧಿಯವರು ಕುಳಿತುಕೊಂಡು, ತನ್ನಿಂದ ಈ ಕೇಸನ್ನು ವಹಿಸಲು ಸಾಧ್ಯವಿಲ್ಲ ಎಂದು ಬಿಟ್ಟರಂತೆ.

ಮುಂಬೈ ಹೈಕೋರ್ಟಿನಲ್ಲಿದ್ದಾಗ ಕೇಸು ನಿರ್ವಹಿಸಲು ಕಷ್ಟವಾಗುತ್ತಿತ್ತು ಆಗ ತೂಕಡಿಸುತ್ತಿದ್ದೆ; ಇತರರೂ ನನ್ನ ಹಾಗೆ ತೂಕಡಿಸುತ್ತಿದ್ದ ಕಾರಣ ನನಗೆ ಅಷ್ಟೊಂದು ನಾಚಿಕೆಯಾಗುತ್ತಿರಲಿಲ್ಲ. ಕ್ರಮೇಣ ಅದೊಂದು ನಾಚಿಕೆಯ ವಿಷಯವೇ ಅಲ್ಲ; ಹೈಕೋರ್ಟ್ ನಲ್ಲಿ ತೂಕಡಿಸುವುದು ಒಂದು ಫ್ಯಾಶನ್ ಎಂಬುದನ್ನರಿತೆ ಎನ್ನುತ್ತಾರೆ ನಮ ಮಹಾತ್ಮರು.

ಗಾಂಧೀಜಿಯವರಿಗೆ ತನ್ನನ್ನು ಸ್ತ್ರೀ ಎಂದು ಕರೆಯಿಸಿಕೊಳ್ಳುವುದೆಂದರೆ ತುಂಬಾ ಇಷ್ಟ: ಜಿ.ಬಿ. ಷಾ ಒಮ್ಮೆ ಗಾಂಧಿಯವರನ್ನು ಚೇಷ್ಟೆ ಮಾಡುತ್ತಾ ನೀವು ಸ್ತ್ರೀ ಸ್ವಭಾವದವರು. ನೀವು ಶೇಕಡಾ 75 ರಷ್ಟು ಸ್ತ್ರೀ ಎಂದರಂತೆ. ತಕ್ಷಣ ಗಾಂಧಿ ಯವರ ಉತ್ತರ-ಅಲ್ಲಲ್ಲ ಶೇಕಡಾ 100. ಶ್ರೀಮತಿ ಪೊಲಾಕ್ ಹೇಳುವಂತೆ, ಅವರ ಈ ಸ್ವಭಾವದಿಂದಾಗಿ ಹೆಚ್ಚಿನ ಹೆಂಗಸರು ಅವರನ್ನು ಮೆಚ್ಚುತ್ತಿದ್ದರಂತೆ.

ಚರ್ಚಿಲ್ ಒಮ್ಮೆ ಗಾಂಧಿಯವರನ್ನು 'ಬೆತ್ತಲೆ ಫಕೀರ' ಎಂದು ಕರೆದಾಗ ಗಾಂಧಿ ಅವರಿಗೆ ಕೃತಜ್ಞತೆ ಸಲ್ಲಿಸಿ ಫಕೀರನಾಗಲು ಬಹಳ ಹಿಂದಿನಿಂದ ತಾವು ನಡೆಸುತ್ತಿರುವ ಪ್ರಯತ್ನ ಹಾಗೂ ಅದನ್ನು ಸಾಧಿಸುವ ಕಷ್ಟಗಳ ಬಗ್ಗೆ ಚರ್ಚಿಲರಿಗೆ ಬರೆದು ತಿಳಿಸಿದರಂತೆ.

ವಾರಾಣಸಿಯಲ್ಲಿ ದೇವಾಲಯವೊಂದನ್ನು ಸಂದರ್ಶಿಸಿದಾಗ ಆದ ಅನುಭವವನ್ನು ಗಾಂಧಿ ಹೀಗೆ ಹೇಳುತ್ತಾರೆ. "ದೇವರಿಗಾಗಿ ಹುಡುಕಿದೆ ಆದರೆ ವಿಫಲನಾದೆ". ದಕ್ಷಿಣೆ ಕೊಡುವ ಮನಸ್ಸಿಲ್ಲದ ಗಾಂಧಿ ಒಂದು 'ಪೈ' ಯನ್ನು ನೀಡಿದರು. ಕೋಪಗೊಂಡ ಅರ್ಚಕ ಅದನ್ನು ಎಸೆದ ನಿರ್ಲಿಪ್ತ. ಗಾಂಧಿ ಬ್ರಾಹ್ಮಣನಿಗಾದ ನಷ್ಟ ಹಾಗೂ ತನ್ನ ಉಳಿತಾಯದ ಬಗ್ಗೆ ಆಲೋಚಿಸುತ್ತಾ ಮುಂದೆ ಸಾಗಿದರು.

ಇತರರ ಪಾಲಿಗೆ ಗಾಂಧಿಯವರು 'ದೇವತಾ ಪುರುಷ' ರಾದರೂ ಅವರ ತಮಾಷೆಗಳೆಲ್ಲಾ ಲೌಕಿಕ. ಅವರೊಬ್ಬ ಸಾಧಕ, ತತ್ವಜ್ಞಾನಿಯಾದರೂ ವಿನೋದಿ. ಗಾಂಧೀಜಿ ಮಹಾತ್ಮರಿಗಿಂತಲೂ ಹೆಚ್ಚಾಗಿ ಒಬ್ಬ ಪರಿಪೂರ್ಣ ವ್ಯಕ್ತಿ. ಮಾನವನ ದುಃಖ ನಿವಾರಣೆಗಾಗಿ ಶ್ರಮಿಸಿದ ಕರ್ಮಯೋಗಿ. ಅವರ ವಿನೋದ ಪ್ರವೃತ್ತಿ ಕೃತಕವಲ್ಲ, ವ್ಯಕ್ತಿತ್ವದ ಒಂದು ಅಂಶ. ಜೀವನದ ಅನೇಕ ಸಮಸ್ಯೆಗಳನ್ನು ಅವರು ನಗುತ್ತಲೇ ಎದುರಿಸಿದವರು. ●

> ಮನುಷ್ಯ ತಾನು ತೀರಾ ಸಣ್ಣವನೆಂಬ ಸತ್ಯ ಅರಿತಾಗಲೆ ಅವನ ಉತ್ಥಾನ ಆರಂಭ. ಸಮುದ್ರದಿಂದ ಹೊರಬಂದ ಸಣ್ಣ ಹನಿ ತಾನು ಸಮುದ್ರ ಎಂದು ಭಾವಿಸಿ ಕುಳಿತರೆ, ಕುಳಿತಲ್ಲೇ ಇಂಗಿ ಹೋಗುತ್ತದೆ; ಆದರೆ ಅದೇ ಹನಿ ತಾನು ಸಣ್ಣದೆಂದು ಅರಿತು ಸಮುದ್ರದೆಡೆಗೆ ನಡೆದು ಅದರಲ್ಲಿ ಲೀನವಾಗಿ ತಾನು ಸಮುದ್ರವಾಗುವುದೇ ವಿವೇಕ.
>
> — ಮಹಾತ್ಮ ಗಾಂಧೀಜಿ

ಲಕ್ಷ್ಯ

ಟ್ರಿಮ್ಮಿ

ದೂ, ದೂ, ದೂ, ಧೂತ್ ಬಾ–ಬಾ–ಬಾ ಅನ್ನುತ್ತ ಫುಟ್‌ಪಾತ್‌ನಲ್ಲಿ ಕೂತಿದ್ದ ಪಾಂಡುರಂಗ. ಚಿಕ್ಕ ಮಕ್ಕಳನ್ನು ಕಂಡರೆ – ಅವನ ಆಡಿಸುವ ರೀತಿ ಅದು. ತಾಯಿ ತಂದೆ ಬಸ್ಸು ಇಳಿದು ಸಾಮಾನು ಲಗ್ಗೇಜ್ ಹೊತ್ತುಕೊಂಡು ಬರುತ್ತಿದ್ದರೆ – ಓಡಿ ಹೋಗಿ ತನ್ನ ತಲೆಯ ಮೇಲೆ ಆ ಸಾಮಾನು ಹೊತ್ತು ತರುತ್ತಿದ್ದ. ಊಟ ಸೊಗಸಾಗಿ ಮಾಡುತ್ತಿದ್ದ – ನಿದ್ರೆ ಅಷ್ಟಕಷ್ಟೆ.

"ಅಯ್ಯೋ! ಬೇಡ ಕಣೋ ಹೊಡೀ ಬೇಡ" ಅಂತ ಕಿರುಚಿದ ಪಾಂಡುರಂಗ. ಅವನ ಇಬ್ಬರು ತಮ್ಮಂದಿರು – ನರಸಿಂಹ ಮತ್ತು ವಾಸು ಅವನನ್ನು ಹೊಡೆಯುತ್ತಿದ್ದರು. "ಲೇ ಹುಚ್ಚಾ, ಮನೆ ಬಿಟ್ಟು ಹಾಳಾಗಿ ಹೋಗೋ" ಅಂತ. ಪಾಂಡುರಂಗನಿಗೆ ನಲವತ್ತರ ಪ್ರಾಯ. ಕುಳ್ಳಗೆ, ದಪ್ಪಗೆ ಇದ್ದಾನೆ. ಎಸ್ಸೆಲ್ಸಿಗೆ ಬಂದು ಓದಿಗೆ ಕೈಮುಗಿದು, ಅಪ್ಪ ವಿಠೋಬಣ್ಣನ ಕಿರಾಣಿ ಅಂಗಡಿಯಲ್ಲಿ ಕೂತ. ತಂದೆ ಅಂಗಡಿ



ಯಲ್ಲಿದ್ರೆ ಪಾಂಡುರಂಗೆ ಮಾರ್ಕೆಟ್‌ನಿಂಧ ಅಂಗಡಿಗೆ ಬೇಕಾದ ಕಿರಾಣಿ ತಂದು ಹಾಕು ತ್ತಿದ್ದ. ಇಬ್ಬರು ತಮ್ಮಂದಿರು ಓದಿದರು. ನರ ಸಿಂಹ ಡಿಪ್ಲೊಮಾ ಮಾಡಿ ಫ್ಯಾಕ್ಟರಿ ಸೇರಿದ. ವಾಸು ಪಿ.ಯು.ಸಿ. ಮಾಡಿ ಅಂಗಡಿಗೆ ಬಂದ. ಇಪ್ಪತ್ತನಾಲ್ಕನೇ ವರ್ಷಕ್ಕೆ ಮದುವೆ ಯಾಯಿತು. ಮನೆ – ಅಂಗಡಿ ಬಿಟ್ಟರೆ ಅವನಿಗೆ ಬೇರೆ ಜಗತ್ತೇ ಇಲ್ಲ. ಹೆಂಡತಿ ಸೌಭಾಗ್ಯ – ಧನ ಪಿಶಾಚಿ. ಅಲ್ಲಿ ಚೀಟಿ ಕಟ್ಟು, ಬ್ಯಾಂಕಿನಲ್ಲಿ ಪಿಗ್ಮಿ ಕಟ್ಟು, ಎಲ್ಲಾ ತನ್ನ ಹೆಸರಿ ನಲ್ಲೇ. ಗಂಡನ ಸಂಪಾದನೆ ಎಲ್ಲಾ ತನ್ನ ಹೆಸರಿ ನಲ್ಲೇ ಇರಬೇಕು ಎಂದು ಜಗಳವಾಡಿ ಮಾವ ನಿಂದ ಹಣ ತೆಗೆದು ಬೇರೆ ಅಂಗಡಿ ಮಾಡಿ ದಳು. ಮನೆಯೂ ಬೇರೆ ಆಯಿತು. ಪಾಂಡು ರಂಗನ ಊಟ ಮಾತ್ರ ತಾಯಿಯ ಮನೆಯಲ್ಲೇ – ಎರಡು ಗಂಡು ಮಕ್ಕಳಾದವು. ಒಮ್ಮೆ ಮಾರ್ಕೆಟ್‌ನಿಂದ – ಸೈಕಲ್ ಮೇಲೆ ಅಂಗಡಿಗೆ ಬೇಕಾದ ಸಾಮಾನು ಹಾಕಿಕೊಂಡು ಬರುತ್ತಿದ್ದ – ಲಾರಿ ಬಂದು ಸೈಕಲ್‌ನ ಹಿಂಬದಿಗೆ ಡಿಕ್ಕಿ ಹೊಡೆಯಿತು. ಪಾಂಡುರಂಗನ ತಲೆ ಫುಟ್ ಪಾತಿಗೆ ಬಡಿಯಿತು. ಲಾರಿ ಹೋಯಿತು. ಯಾರೋ ಪಾಂಡುರಂಗನನ್ನು ಆಸ್ಪತ್ರೆಗೆ ಸೇರಿ ಸಿದರು. ಅಲ್ಲಿಂದ ಮಾನಸಿಕ ಆಸ್ಪತ್ರೆಗೆ. ತಲೆಗೆ ಷೋಲಿಗೆ ಹಾಕಿದರು. ಅಲ್ಲಿ ಚಿಕಿತ್ಸೆ ಆಯಿತು. ವಾರದ ನಂತರ ಕಣ್ಣು ತೆರೆದ. ಅಪ್ಪ, ಅಮ್ಮ, ಸೌಭಾಗ್ಯ ನಿಂತಿದ್ದರು. ಎಲ್ಲರನ್ನೂ ನೋಡಿದ. ತಲೆ ತಿರುಗಿದಂತಾಗಿ ಕಣ್ಣು ಮುಚ್ಚಿ ಮಲಗಿದ.

"ಯಾಕೋ ಪಾಂಡು ಸುಸ್ತಾ? ಸ್ವಲ್ಪ ಹಾಲು ಕುಡಿ" ಅಂದ್ಲು ತಾಯಿ.

"ಸರಿ ಹೋಯ್ತು ಸುಸ್ತಾಗ್ಲಿಕ್ಕೆ ಏನಾಗಿದೆ ಈಗ? ವಾರದಿಂದ ಮಲಗೇ ಇದ್ದಾರೆ. ಅಂಗಡಿ ವ್ಯಾಪಾರ ಎಲ್ಲ ಆ ವಾಸೂನೇ ನೋಡ್ತಾನೆ – ಚೀಟಿ ಕಟ್ಟಿಲ್ಲ" ಅಂದ್ಲು ಸೌಭಾಗ್ಯ.

ಡಾಕ್ಟರು ಬಂದು ಹೇಳಿದ್ರು, "ನೋಡಿ ಪೇಷಂಟ್‌ಗೆ ಷಾಕ್ ಆಗಿದೆ. ಸುಮ್ನೆ ತೊಂದರೆ ಕೊಡಬೇಡಿ – ಎರಡು ನಿಮಿಷ ನೋಡಿ ಹೋಗ್ಬೇಕು"

"ಡಾಕ್ಟರೇ ಪೇಷಂಟ್‌ನ ಯಾವಾಗ ಮನೆಗೆ ಕಳಿಸ್ತೀರಿ" ಅಂದ್ಲು ಸೌಭಾಗ್ಯ. ಡಾಕ್ಟರು ಮಾತ ನಾಡಲಿಲ್ಲ. ಒಮ್ಮೆ ಸೌಭಾಗ್ಯಳನ್ನು ನೋಡಿ ಹೊರಟು ಹೋದರು.

ತಿಂಗಳ ನಂತರ ಪಾಂಡುರಂಗ ಮನೆಗೆ ಬಂದ. "ಯಾಕೋ ಆಯಾಸ ಆಗ್ತದೆ ಕಣೇ ಸೌಭಾಗ್ಯ – ಸ್ವಲ್ಪ ಹಾಲು ಕೊಡು."

ಸೌಭಾಗ್ಯ –"ಏನು ಗುಡ್ಡ ಕಡೆದಿರಿ ಅಂತ ಆಯಾಸ ಆಗ್ತದೆ. ಅಂಗಡಿ ವ್ಯಾಪಾರ ನೋಡಲು ಹೋಗಿ. ಕಾಸೆಲ್ಲ ವಾಸೂನೇ ಹೊಡೀತಿದ್ದಾನೆ".

"ಏನೇ ಹಣಾನೇ ಮುಖ್ಯಾನಾ, ವಾಸು ನನ್ನ ತಮ್ಮ, ಏನೋ ನಾಲ್ಕು ಕಾಸು ಖರ್ಚು ಮಾಡಿದ್ರೆ ಏನಾಯ್ತು?" ಅಂದ ಪಾಂಡುರಂಗ.

"ರೀ ನಿಮಗೆ ತಲೆ ಕೆಟ್ಟಿದೆ ರೀ. ನಾಲಕ್ಕು ಕಾಸೋ ಎಂಟು ಕಾಸೋ – ಕಾಸು ಕಾಸೇ. ಅಂಗಡಿಗೆ ಹೋಗಿ ದುಡೀರಿ. ದುಡಿದ್ರೆ ದುಡ್ಡು" ಅಂದ್ಲು ಸೌಭಾಗ್ಯ. ಅಂಗಡಿಯಲ್ಲಿ ಕುಳಿತ ಪಾಂಡುರಂಗ. ಊಹುಂ! ಯಾಕೋ ಸುಸ್ತು – ಬಂದು ಮನೆಯಲ್ಲಿ ಮಲಗಿದ. ಪುನಃ ಆಸ್ಪತ್ರೆ. ಡಾಕ್ಟರು ಹೇಳಿದ್ರು "ಕಾಲ ಕ್ರಮೇಣ ಸರಿ ಹೋಗುತ್ತೆ. ಹೆಡ್ ಇಂಜರಿ ಆಗಿತ್ತು ನೋಡಿ – ಸ್ಟ್ರೇನ್ ಆಗದಂತೆ ನೋಡಿ ಕೊಳ್ಳಿ. ಈ ಮಾತ್ರೆ ದಿನಾ ತಿನ್ನಿ. ಒಳ್ಳೆ ಆಹಾರ ಸೇವಿಸಿ–ವಾಕಿಂಗ್ ಮಾಡಿ. ಖುಷಿಯಾಗಿರಿ." ವಾಸು ಬಂದು ಅತ್ತಿಗೆಗೆ ಹೇಳಿದ – ಡಾಕ್ಟ್ರು ಹೇಗೆ ಹೇಳಿದ್ದಾರೆ ಅಂತ. ಸೌಭಾಗ್ಯ "ಡಾಕ್ಟ್ರ ಗಂಟೇನು ಹೋಗ್ತದೆ. ಬೇಕಾದ್ದು ಹೇಳ್ತಾರೆ. ಕಾಸು? ವಾಕಿಂಗ್ ಮಾಡೋದು ಏನಿದ್ರೂ ಮುದುಕರು ಮಾಡ್ಬೇಕು. ರಾತ್ರಿ ನಿದ್ರೆ ಬರೋಲ್ಲ. ಬೆಳಿಗ್ಗೆ ಬೇಗ ಏಳ್ತಾರೆ. ವಾಕಿಂಗು, ಒಳ್ಳೆ ಆಹಾರ, ರೆಸ್ಟು, ಸ್ಟ್ರೇನ್ ಆಗ್ಬಾರ್ದು, ಖುಷಿಯಿಂದಿರಬೇಕು. ಕಾಸಿಲ್ಲದ ಖುಷಿ ಯಾತರ ಖುಷಿ? ಆ ಡಾಕ್ಟ್ರಿಗೆ ಹೋಗಿ ಹೇಳು ವಾಸು. ಈ ಹುಚ್ಚನ್ನ ನಿಮ್ಮನೇಲೋ ಇಲ್ಲ ಆಸ್ಪತ್ರೇಲೋ ಇಟ್ಕೋ ಅಂತ". ಸೌಭಾಗ್ಯ ತವರು ಮನೆಗೆ ಹೋದ್ಲು. ಹೆಂಡತಿ ಹತ್ತಿರ ಇದ್ರೆ ಜೇಬು ತುಂಬಾ ಹಣ ಇದ್ದ ಹಾಗೆ ಅಂತ ಯಾರೋ ಅಂದಿದ್ದಾರೆ. ಪಾಪ ಅವರಿಗೇನು ಗೊತ್ತು – ಹಣ ಇದ್ದರೆ ಮಾತ್ರ ಹೆಂಡತಿ ಹತ್ತಿರ ಬರುತ್ತಾಳೆ ಅಂತ? ವಾಸು, ನರಸಿಂಹ ನಿಗೆ ಅಣ್ಣ ಬೇಡವಾದ. ಹೆತ್ತ ಮಕ್ಕಳು ಹುಚ್ಚ ರಾದರೆ ಎತ್ತದೇ ಬಿಡುವರೇನೋ ತಾಯಿ ತಂದೆ



ಗಳು. ಪಾಂಡುರಂಗನ ಬಗ್ಗೆ ಅವನ ತಾಯಿ – ಸೌಭಾಗ್ಯಳ ತವರು ಮನೆಗೆ ಹೋಗಿ ವಕಾಲತ್ತು ವಹಿಸಿದಳು. "ನೋಡು ಭಾಗ್ಯ, ಪಾಂಡು ಹದಿನಾರನೇ ವಯಸ್ಸಿನಿಂದ ದುಡೀತಿದ್ದಾನೆ. ನಿನ್ನ ಲಗ್ನ ಆದಾಗ ಅವನಿಗೆ ಇಪ್ಪತ್ತನಾಲ್ಕು. ನಿಂಗೂ ಎರಡು ಮುತ್ತಿನಂಥ ಗಂಡು ಮಕ್ಕಳು ಇವೆ. ಈಗ ಅವನಿಗೆ ನಲವತ್ತು – ಮಧ್ಯ ವಯಸ್ಸು– ಇಷ್ಟು ವರ್ಷ ದುಡಿದವನಿಗೆ ಸ್ವಲ್ಪ ವಿರಾಮ ಕೊಡು. ತಾನೇ ಸರಿ ಆಗ್ತಾನೆ. ಡಾಕ್ಟರು ಹೇಳಲಿಲ್ವೆ ಪ್ರೀತಿ ವಿಶ್ವಾಸದಿಂದ ನೋಡ್ಕೋ ಅಂತ. ಅವನು ನಮಗೆ ಭಾರ ಅನ್ನೋ ರೀತಿ ವರ್ತಿಸಬಾರದು. ಹುಟ್ಟುತ್ತಾ ಅಣ್ಣತಮ್ಮಂದಿರು... ಬೆಳೀತಾ ಭಾಗಾದಿಗಳು. ವಾಸು, ನರಸಿಂಹನಿಗೆ ಬುದ್ಧಿ ಇಲ್ಲ. ನೀನು ಅವನ ಹೆಂಡತಿ – ಕೈ ಹಿಡಿದವಳು, ಸಪ್ತ ಪದಿ ತುಳಿದವಳು. ಕಷ್ಟ ಸುಖಕ್ಕೆ ನೀನಲ್ಲದೆ ಬೇರೆ ಯಾರು ಆಗ್ತಾರೆ? ಅವನು ದುಡಿದ ಹಣ ಎಲ್ಲಾ ನಿನ್ನ ಹತ್ತಿರಾನೇ ಇದೆ. ಚೀಟಿ ದುಡ್ಡು, ಪಿಗ್ಮಿ. ಮನೀಗೆ ಬಾ ನಿನ್ನ ಗಂಡನ ಜೊತೆಗೆ ಬಾಳ್ವೆ ಮಾಡು. ಅಂಗಡಿ ವಾಸು ನೋಡ್ತಾನೆ. ತಿಂಗಳಿಗೆ ಇಷ್ಟು ಅಂತ ಕಾಸು ಕೊಡ್ತಾನೆ. ನೀನು ಮಕ್ಕಳು ಇದ್ರೆ ಪಾಂಡು ಸುಖವಾಗಿರ್ತಾನೆ. ನಾನೇನು ಇವತ್ತಿದ್ರೆ ನಾಳೆ ಇಲ್ಲ. ಹಿಂದೆ ಬದುಕಿದಷ್ಟು ದಿನ ಮುಂದೆ ಬದುಕೋದಿಲ್ಲ. ಬಾಮ್ಮಾ, ನಿಮ್ಮ ಮಾವನವರೂ ಹೇಳಿದ್ದಾರೆ. ಬಾ ತಾಯಿ, ನಿಂಗೂ ಹುಡುಗಾಟದ ವಯಸ್ಸು ಮುಗೀತು. ಏನೋ ನೀನು ನಿನ್ನ ಗಂಡ ಮಕ್ಕಳನ್ನು ಸುಧಾರಿಸಿಕೊಂಡು ಬಾಳ್ವೆ

ಮಾಡಿದ್ರೆ ಸಾಕು..."

"ಅಯ್ತಾ ಅತ್ತೆ ನಿಮ್ಮ ಪುರಾಣ? ಹೋಗ್ರಿ ಹೋಗ್ರಿ, ಹುಚ್ಚನ ಜೊತೆ ಬಾಳ್ವೆ ಮಾಡ್ಬೇಕಂತೆ. ರಾತ್ರಿ ಮಲಗಿದಾಗ ಕತ್ತು ಹಿಸ್ಕಿದ್ರೆ – ಏನೋ ನಾಲ್ಕು ಕಾಸಿದೆ. ಆ ಹುಚ್ಚ ಗಂಡನೇ ಬೇಡ. ನಾನೇ ಬಿಸಿನೆಸ್ ಮಾಡ್ತೀನಿ. ಎರಡು ಮಕ್ಕಳ್ನ ಓದಿಸ್ತೀನಿ. ಯಾತರ ಗಂಡನೋ ಏನೋ ಸುಡಗಾಡೋ? ಪೆದ್ದು ಮುಂಡೇದು ನಿಮ್ಮಗ. ಹಣ್ಣು ತೆಗೆದರೆ ಎಷ್ಟು ತೆಗೆದ ಅನ್ನೋದೂ ಗೊತ್ತಾಗ್ತಾ ಇರ್ಲಿಲ್ಲ. ಸುಮ್ನೇ ತಿನ್ನೋದು. ಬಿದ್ದು ಕೊಳ್ಳೋದು?" ಅಂದ್ಲು ಸೌಭಾಗ್ಯ.

"ಲೇ ಭಾಗ್ಯ, ಪಾಂಡು ಹಸುವಿನಂಥವನು ಕಣೇ. ಹಾಲು ನೀರು ಗೊತ್ತಾಗೋಲ್ಲ. ದಯ, ಧರ್ಮ, ದೇವರು, ಪೂಜೆ, ಭಕ್ತಿ ಜಾಸ್ತಿ ಅವನಿಗೆ. ನೀ ಅಂದಂತೆ ಪೆದ್ದ ಅಲ್ಲ ಅವನು. ಬಾಮ್ಮಾ ಬಾ ತಾಯಿ" ಅಂದ್ರು ಪಾಂಡರಂಗನ ತಾಯಿ. Kindness is always mistaken for weakness. ಅಳುತ್ತಾ ಮನೆಗೆ ಬಂದು ವಾಸು, ನರಸಿಂಹನಿಗೆ ಹೇಳಿದ್ರು "ಹೋಗ್ರೋ, ನಿಮ್ಮ ಅತ್ತಿಗೇನ ಕರ್ಕೊಂಡು ಬನ್ನಿ".

"ಅಮ್ಮ, ಅವಳಿಗೇ ಅವನು ಬೇಡವಾದ್ರೆ ನಮಗ್ಯಾಕೆ? ಕಾಸು ಬಾಚಿಕೊಂಡು ಹೋದ್ಳಲ್ಲ, ಹಾಳಾಗಿ ಹೋಗ್ಲಿ" ಅಂದ ವಾಸು.

ಪಾಂಡುರಂಗ ಹೊಸಹಳ್ಳಿಯಿಂದ ಚಾಮರಾಜಪೇಟೆಗೆ ನಡೆಯುತ್ತಾ ಬಂದು ಸೌಭಾಗ್ಯಳ ಮನೆಯ ಬಾಗಿಲು ಬಡಿದ. ಸೌಭಾಗ್ಯ ಬಯ್ದು ಮನೆಯಿಂದ ಆಚೆ ತಳ್ಳಿ ಕಳುಹಿಸಿದಳು. ದಿನಾ ಪಾಂಡುರಂಗ ಚಾಮರಾಜಪೇಟೆಗೆ ಬರುವುದು ಮೂಲೆಯಲ್ಲಿ ನಿಂತು ತನ್ನ ಮಕ್ಕಳು ಶಾಲೆಗೆ ಹೋಗುವುದನ್ನು ನೋಡುವುದು ಮತ್ತೆ ನಡೆಯುತ್ತಾ ಹೊಸಹಳ್ಳಿಗೆ ವಾಪಸ್ ಬರುವುದು.

ಪಾಂಡುರಂಗನ ಅಪ್ಪ ಅಮ್ಮ ಯಾತ್ರೆಗೆ ಹೊರಟರು. ಆಗ ವಾಸು ಪಾಂಡರಂಗನ್ನ ಅನಾಥಾಶ್ರಮಕ್ಕೆ ಸೇರಿಸಿದ. ಆಶ್ರಮದ ಮುಖ್ಯಸ್ಥರಿಗೆ ಹೇಳಿದ.

"ಸರ್, ಇವನಿಗೆ ಯಾರೂ ಗತಿ ಇಲ್ಲ. ಬೇವಾರ್ಸಿ ನನ್ನ ಮಗ, ತಲೆ ಸರಿ ಇಲ್ಲ. ನಮ್ಮನೆ ಹತ್ರಾನೆ ಬಿದ್ದಿರ್ತಾನೆ. ಪಬ್ಲಿಕ್ ನ್ಯೂಸೆನ್ಸ್. ತಾವು ದಯಮಾಡಿ ಇವನನ್ನ ಸೇರಿಸಿಕೊಳ್ಳಿ. ಬೇಕಾದರೆ ತಿಂಗಳಿಗೆ ಐವತ್ತು ರೂಪಾಯಿ ನಾನೇ ಬಂದು ಕೊಟ್ಟು ಹೋಗ್ತೀನಿ."

ಆಶ್ರಮದ ಮ್ಯಾನೇಜರರು ಹೇಳಿದರು "ರೀ



ಏನೂ? ಕಾಯಿಲೆ ಗುಣವಾಗಿಬಿಟ್ಟಿತೇ?
ನಿನ್ನೆ ಮಾತ್ರೆ ನೋಡಿಕೊಂಡು
ಇವತ್ತು ಸರಿಯಾದ ಮಾತ್ರೆ ಕೊಡಬೇಕೂಂತಿದ್ದೆ!

ಹಣ ಮುಖ್ಯ ಅಲ್ಲ. ಇವರಿಗೆ ಯಾರೂ ಗತಿ ಇಲ್ಲ ಅಂತ ಅಂದ್ರಾಯಿತು. ಇಲ್ಲೇ ಇರಲಿ. ನಮ್ಮದು ಸೇವಾ ಸಂಸ್ಥೆ. ಇವರ ಹೆಸರೇನು?"

"ಪಾಂಡು... ಅಂತ ಇರಬೇಕು ಸಾರ್"

"ಈ ಅಪ್ಲಿಕೇಶನ್‌ಗೆ ನಿಮ್ಮ ರುಜು ಹಾಕಿ ವಿಳಾಸ ಕೊಡಿ. ಗಾರ್ಡಿಯನ್ ಅಂತ ಸಹಿ ಮಾಡಿ. ಅಕಸ್ಮಾತ್ ಇವರಿಗೆ ಕಾಯಿಲೆ ಆದ್ರೆ, ತೀರ್ಕೊಂಡ್ರೆ... " ಅಂದ್ರು ಮ್ಯಾನೇಜರರು.

"ಛೇ, ಬೇಡಾ ಸಾರ್, ನನಗೆ ಟ್ರಾನ್ಸ್‌ಫರ್ ಆಗುತ್ತೆ. ನನಗೇನೂ ತಿಳಿಸಬೇಡಿ" ಅಂದು ಅಪ್ಲಿಕೇಶನ್‌ನಲ್ಲಿ ಬೀರಪ್ಪಾ ಅಂತ ಸಹಿ ಮಾಡಿ ಹೊರಟ. ಆಗ ಪಾಂಡುರಂಗ,

"ಲೇ ವಾಸು ನನ್ನ ಬಿಟ್ಟು ಹೋಗ್ತೀಯಾ? — ಯಾಕೋ, ಅಪ್ಪ ಅಮ್ಮ ಬರ್ಲಿ ಹೇಳ್ತೀನಿ" ವಾಸು ದುಡು ದುಡು ತಿರುಗಿನೋಡದೆ ಹೋದ. ಪಾಂಡುರಂಗ ಹೇಳಿದ "ಸಾರ್ ಅವನು ನನ್ನ ತಮ್ಮ. ನನಗೆ ಆಕ್ಸಿಡೆಂಟಾಯಿತು. ಆಮೇಲೆ ಹುಚ್ಚಾಸ್ಪತ್ರೆಯಲ್ಲಿ ಇದ್ದೆ. ತಲೆಗೆ ಪೆಟ್ಟಾಯಿತು. ಹೊಲಿಗೆ ಹಾಕಿದ್ರು, ಸುಸ್ತು. ನನ್ನ ಹೆಂಡ್ತಿ ನನ್ನ ಬಿಟ್ಟು ಬೇರೆ ಹೋದಳು. ಅಪ್ಪ ಅಮ್ಮ ಯಾತ್ರೆಗೆ ಹೋದ್ರು" ಅಂದು ಅಳುತ್ತಾ ಕೂತ. ಆಗ ಅನಾಥಾಶ್ರಮದ ನಾಲ್ಕು ವರ್ಷದ ಮಗು ಬಂತು. "ದೂದೂ ಥೂತ್ ಬಾಬಾ" ಅಂದ ಪಾಂಡುರಂಗ. ಕುರುಡು ಮಗು ಬಂತು. ಎತ್ತಿಕೊಂಡ— ಅತ್ತ, ನಕ್ಕ. ಮಗು ಮೈಮೇಲೆ ಒಂದಾ ಮಾಡಿತು. "ಬಾ ಪಾಪು ಚಡ್ಡೀ ಒಗೆಯೋಣ" ಅಂತ ನಲ್ಲಿ ಬಳಿ ಹೋದ. ಮ್ಯಾನೇಜರ್ ನಕ್ಕು ಸುಮ್ಮನಾದರು.

ಪಾಂಡುರಂಗ ಆಶ್ರಮಕ್ಕೆ ಹೊಂದಿಕೊಂಡ. ತರಕಾರಿ ಹೆಚ್ಚುವುದು, ಕಸ ಗುಡಿಸುವುದು, ಗಿಡಗಳಿಗೆ ನೀರು ಹಾಕುವುದು, ಮಕ್ಕಳಿಗೆ ಸ್ನಾನ ಮಾಡಿಸುವುದು, ಎಂದಾದರೂ ಕಣ್ಣು ತಪ್ಪಿಸಿ ಚಾಮರಾಜಪೇಟೆಗೆ ಹೋಗಿ ಮೂಲೆಯಲ್ಲಿ ನಿಂತು ತನ್ನ ಮಕ್ಕಳನ್ನು ನೋಡಿ ಅಳುತ್ತಾ ಬರುತ್ತಿದ್ದ. ಆಶ್ರಮದ ಮಕ್ಕಳು "ಯಾಕಪ್ಪಾ ಅಳ್ತಿ ಏನಾತು?" ಅಂದ್ರೆ "ನನ್ನ ಮಕ್ಕಳನ್ನು ನೋಡ್ಲಿಕ್ಕೆ ಹೋಗಿದ್ದೆ. ಅವು ನನ್ನ ಮಾತನಾಡಿಸಲೇ ಇಲ್ಲ" ಅನ್ನುತ್ತಿದ್ದ.

ಮುಚ್ಚಪ್ಪ ನಾವೆಲ್ಲಾ ಇದ್ದೀವಲ್ಲಾ ಅನ್ನುತ್ತಿದ್ದವು ಮಕ್ಕಳು.

ಪಾಂಡುರಂಗನ ತಂದೆ ತಾಯಿ ಯಾತ್ರೆ ಮುಗಿಸಿ ಬಂದರು. ಅಷ್ಟರಲ್ಲೇ ವಾಸು-ನರಸಿಂಪ ತಮ್ಮ ಸ್ವಂತ ಮನೆ ಕಟ್ಟುವ ತಯಾರಿ ನಡೆಸಿದ್ದರು. ಅಂಗಡಿ ವ್ಯಾಪಾರ ಜೋರಾಗಿ ನಡೆದಿತ್ತು. "ಪಾಂಡು ಎಲ್ಲೋ?" ಅಂದ ವಿಠೋಬಣ್ಣ ವಾಸುವಿಗೆ.

"ಅಪ್ಪಾ ಅವನು ಚಾಮರಾಜಪೇಟೆಗೆ ಹೋದವ್ನು ತಿರುಗಿ ಬರಲೇ ಇಲ್ಲ. ಅತ್ತಿಗೇನ ಕೇಳಿದ್ರೆ ಗೊತ್ತಿಲ್ಲ ಅಂದ್ರು" ಅಂದ ವಾಸು.

ಅದೇ ಕೊರಗಿನಲ್ಲಿ ಪಾಂಡುರಂಗನ ತಾಯಿ ಸತ್ತಳು. ವಿಠೋಬಣ್ಣ ಮೂಲೆ ಹಿಡಿದ. ವೃದ್ಧಾಪ್ಯ, ಹೆಂಡತಿಯ ಸಾವು, ಪಾಂಡುವಿನ ಯೋಚನೆಯಲ್ಲಿ ಹಣ್ಣಾದ. ದಿನ, ವಾರ ಮರೆತ. ಕೊಟ್ಟಾಗ ತಿಂದು ಮೂಲೆಯಲ್ಲಿ ಸತ್ತು ಬದುಕಿದ. ಪಾಂಡುರಂಗನಿಗೆ ಆಶ್ರಮದವರು ಸ್ವಲ್ಪ ಹಣ ಕೊಡುತ್ತಿದ್ದರು ಖರ್ಚಿಗೆ. ಅದೂ ಯಾವಾಗಲಾದರೊಮ್ಮೆ. ಪಾಂಡುರಂಗ ಹೊಟೇಲಿಗೆ ಹೋಗಿ ತಿಂಡಿ ತಿಂದು ಕಾಫಿ ಕುಡಿದು ಬಿಲ್ ಕೊಟ್ಟ. "ರೀ ಚಿಲ್ಲರೆ ಇಲ್ಲ ಅಂದು ಲಾಟರಿಟಿಕೆಟ್ ಕೊಟ್ರು. ತಂದು ಮ್ಯಾನೇಜರರಿಗೆ ಕೊಟ್ಟ. ಒಂದು ದಿನ ಬೆಳಿಗ್ಗೆ ಮ್ಯಾನೇಜರ್ ಕರೆದು "ರೀ ಪಾಂಡು ನಿಮ್ಮ ಟಿಕೆಟ್ಟಿಗೆ ಲಾಟರಿ ಬಂದಿದೆ — ಒಂದು ಲಕ್ಷ" ಅಂದ್ರು. ಮರುದಿನ ಅವನ ಫೋಟೋ ದಿನ ಪತ್ರಿಕೆಯಲ್ಲಿ ಪ್ರಕಟಿಸಿದರು. ಮಾರನೇ ದಿನ ಸೌಭಾಗ್ಯ ತನ್ನ ಎರಡು ಮಕ್ಕಳ ಸಮೇತ ಆಶ್ರಮಕ್ಕೆ ಬಂದಳು. ವಾಸು-ನರಸಿಂಹ ಓಡೋಡುತ್ತ ಬಂದು ವಿಠೋಬಣ್ಣನಿಗೆ ಹೇಳಿದರು. "ಅಪ್ಪಾ, ಪಾಂಡೂಗೆ ಲಾಟರಿ ಬಂದಿದೆ ಒಂದು ಲಕ್ಷ. ಕರ್ಕೊಂಡು ಬರ್ತೀವಿ".

ವಿಠೋಬಣ್ಣ "ಯಾವ ಪಾಂಡು, ಯಾವ ಲಾಟರಿ? ಏನು ಲಕ್ಷ ಅಂದ್ರೆ...? ಅವನಿದ್ದಾಗ ನೀವು ಅವನನ್ನು ಲಕ್ಷ್ಯ ಮಾಡ್ಲೇ ಇಲ್ಲ. ಈಗ ಯಾವುದು". ಮುದುಕನ ಮಾತು ಕೇಳಿಸಿಕೊಳ್ಳ ಓಡಿ ಬಂದರು ಅನಾಥಾಶ್ರಮಕ್ಕೆ. ವಾಸು "ಪಾಂಡು... ಲೇ ಪಾಂಡಣ್ಣಾ, ನಾನು ಕಣೋ ವಾಸು ನಿನ್ನ ಎಷ್ಟು ಹುಡುಕಿಬಿಟ್ಟೆ! ಸಿಕ್ಕಿದೆ ಕಡೆಗೂ!! ಬಾ ಹೋಗೋಣ. ಅಪ್ಪ ಸುಸ್ತಾಗ್ಯಾನೆ" ಅಂದ.

"ಅಮ್ಮ..." ಅಂದ ಪಾಂಡುರಂಗ.

"ಅಮ್ಮ ಹೋದ್ಲು. ಆಗಲೇ ಆರು ತಿಂಗಳಾಯ್ತು" ಅಂದ ನರಸಿಂಹ. ಪಾಂಡು

"ಅಮ್ಮಾ" ಎಂದು ಅತ್ತ.

ಸೌಭಾಗ್ಯ "ರೀ ನಾನು ನಿಮ್ಮನ್ನ ಹುಡುಕದ ಸ್ಥಳ ಇಲ್ಲ. ಎಷ್ಟು ದೇವರಿಗೆ ಹರಕೆ ಹೊತ್ತೆ. ನಾನೂ ಮಾಡಿದೆ, ಬೇರೆಯವರಿಂದಲೂ ಮಾಡಿಸಿದೆ ಭಜನೆ ನಿಮ್ಮ ಹೆಸರಿನಲ್ಲಿ. ದೇವರು ದೊಡ್ಡವನು. ಅಂತೂ ಸಿಕ್ರಲ್ಲ ಬನ್ನಿ ಮನೆಗೆ ಹೋಗೋಣ. ಬಾರೋ ಪಾಪು, ಪುಟ್ಟೂ ನೋಡ್ರೋ ನಿಮ್ಮಪ್ಪನ್ನ." ಪಾಪು-ಪುಟ್ಟು ದೂರ ಸರಿದರು. "ಅಮ್ಮಾ ಯಾರವನು" ಅಂದ ಪಾಪು. "ನಿಮ್ಮಪ್ಪಾನೋ" ಅಂದಳು ಸೌಭಾಗ್ಯ.

"ಥೂ ಹುಚ್ಚ ಅಂತ ನೀನೆ ಇವನನ್ನ ದಬ್ಬಿ ಕಳಿಸಿದಿ ಅವತ್ತು! ದಾರಿಯಲ್ಲಿ ಕಂಡ್ರೆ ಮಾತಾಡಬ್ಯಾಡ ಅಂತ ನೀನೇ ಹೇಳಿದ್ದಿ" ಅಂದ ಪಾಪು.

ಮ್ಯಾನೇಜರರು ಹೇಳಿದ್ರು "ನೋಡು ಪಾಂಡು, ಈ ಲಾಟರಿ ಹಣ ಒಂದು ಲಕ್ಷ ನಿಂದು. ನಿನ್ನವರು ಅಂತ ಇವರು ಬಂದಿದ್ದಾರೆ. ನೀನು ಯಾರ ಜೊತೆಗಾದರೂ ಹೋಗು. ದೇವರು ನಿನಗೆ ಒಳ್ಳೆಯದು ಮಾಡಲಿ."

ಪಾಂಡುರಂಗನ ಬಳಿ ಕುರುಡ ಮಗು ಪಾಪು ಬಂತು. ಯಾಕೋ ವಾಪಸ್ ಹೊರಟಿತು. ಪಾಂಡುರಂಗ "ಪಾಪೂ" ಅಂದು ಕುರುಡು ಮಗುವನ್ನೆತ್ತಿಕೊಂಡು ವಾಸು, ನರಸಿಂಹ, ಸೌಭಾಗ್ಯರಿಗೆ ಕೈ ಮುಗಿದು ಆಶ್ರಮದ ಒಳಗೆ ಹೊರಟ. ರೇಡಿಯೋ ಹಾಡುತ್ತಿತ್ತು. "ಮಡದಿ ಬಾರಳು, ಮಂಚ ಬಾರದು..." ●

ಒಬ್ಬ ಹೇಗೆ ಸತ್ತ ಎನ್ನುವುದು ಮುಖ್ಯವಲ್ಲ; ಅವನು ಹೇಗೆ ಬಾಳಿದ ಎಂಬುದು ಮುಖ್ಯ.

● ಡಾ|| ಸ್ಯಾಮುಯೆಲ್ ಜಾನ್ಸನ್


ಮಣ್ಣಿನ ಮಗನೊಬ್ಬ ಆಸುನೀಗಿ ಸ್ವರ್ಗದ ದ್ವಾರದಲ್ಲಿ ನಿಂತ. ಅದೇ ವೇಳೆಗೆ ಒಬ್ಬ ಸಿರಿವಂತನೂ ಸತ್ತು ಸ್ವರ್ಗದ ಬಾಗಿಲಲ್ಲಿ ಕಾದಿದ್ದ. ಕೆಲ ಸಮಯದ ನಂತರ ಸ್ವರ್ಗದ ದ್ವಾರಪಾಲಕ ಬಂದು ಬಾಗಿಲು ತೆಗೆದು ಸಿರಿವಂತನನ್ನು ಒಳ ಕರೆದ. ಸಿರಿವಂತ ಹೊಸ್ತಿಲು ದಾಟಿ ಒಳ ಹೋಗುತ್ತಿದ್ದಂತೆಯೇ ಬಾಗಿಲನ್ನು ಮುಚ್ಚಿಬಿಟ್ಟ ದ್ವಾರಪಾಲಕ. ಬಹುಶಃ ಈ ರೈತನನ್ನಾತ ನೋಡಿರಲಿಲ್ಲವೋ ಏನೋ. ಹೊರಗೆ ನಿಂತುಕೊಂಡ ಆ ರೈತನಿಗೆ ಒಳಗೆ ಸಿರಿವಂತನ ಸ್ವಾಗತಕ್ಕಾಗಿ ನುಡಿಸಲಾಗುತ್ತಿದ್ದ ವಾದ್ಯಗಳ ಸದ್ದು ಕೇಳಿಸಿತು.

ಕೆಲ ಸಮಯದ ನಂತರ ಮತ್ತೆ ಬಾಗಿಲು ತೆರೆಯಿತು. "ಬಾ ಒಳಗೆ" ಎಂದು ರೈತನನ್ನು ಕರೆದ ದ್ವಾರಪಾಲಕ. ಒಳಗೆ ಅಡಿ ಇರಿಸುತ್ತ ಆ ರೈತ ತನಗೂ ಅಂಥ ಭವ್ಯಸ್ವಾಗತ ದೊರೆಯುವುದೆಂದು ಯೋಚಿಸಿದ. ಆದರೆ ಆತ ನಡೆಯುತ್ತಲೇ ಹೋದ. ಆತನ ಹೆಜ್ಜೆಗಳ ಸದ್ದೊಂದನ್ನುಳಿದು ಬೇರೇನೂ ಸದ್ದಿರಲಿಲ್ಲ.

"ನನ್ನ ಸ್ವಾಗತಕ್ಕೆ ಸುನಾದವೇಕಿಲ್ಲ? ಇಲ್ಲಿಯೂ ಪೃಥ್ವಿಯಲ್ಲಿರುವಂತೆ ಪಕ್ಷಪಾತವಿದೆಯೇ?" ಎಂದಾತ ದ್ವಾರಪಾಲಕನನ್ನು ಕೇಳಿದ.

"ಹಾಗೇನಿಲ್ಲ. ನೀನು ನಮಗೆ ಉಳಿದವರಷ್ಟೇ ಪ್ರಿಯ ವ್ಯಕ್ತಿ. ಆ ಸಿರಿವಂತ ಪಡುವ ಸುಖೋಪ ಭೋಗಗಳೆಲ್ಲ ನಿನಗಾಗಿಯೂ ಕಾದಿವೆ ಇಲ್ಲಿ. ನೋಡು, ನಿನ್ನಂಥವರು ಇಲ್ಲಿಗೆ ನಿತ್ಯವೂ ಸಾವಿರಾರು ಸಂಖ್ಯೆಯಲ್ಲಿ ಬರುತ್ತಾರೆ. ಆದರೆ ಇಂಥ ಸಿರಿವಂತರು ನಲವತ್ತೈವತ್ತು ವರ್ಷ ಕ್ಕೊಮ್ಮೆ ಮಾತ್ರ ಸ್ವರ್ಗ ಸೇರುತ್ತಾರೆ. ಅಂಥ ಅಪರೂಪದ ಅತಿಥಿಗೆ ಉಚಿತ ಸ್ವಾಗತ ಸಿಕ್ಕ ಬೇಕಲ್ಲವೆ?" ಎಂದು ನಗತೊಡಗಿದ ದ್ವಾರಪಾಲಕ.

"ಹಾಂ, ಹೌದು. ಪೃಥ್ವಿಯಲ್ಲಿ ನನ್ನಂಥವರೇ ಹೆಚ್ಚು..." ಎಂದು ಆತನೊಂದಿಗೆ ಅಡಿಯಿಡ ತೊಡಗಿದ ಆ ರೈತ.



ಕರಿನೆರಳಿನ ಯಾತ್ರೆ

ತಲೆ ತಗ್ಗಿದ
ಗುಂಗುರು ಕೂದಲ
ಕಪ್ಪು ಮೋರೆಯ
ಕನಸುಗಾರಿಗಳ
ಮುಂದಿನ ದಾರಿಗಳು
ಕವಿದ ಕತ್ತಲ ರಾತ್ರಿಗಳು!
ಬೀದಿ, ಬೀದಿಯ ತುಂಬ
ಇದೇ ಕಾಲುಗಳು — ಬೆಳಕೇ
ಕಂಡಿರದ ಕಾಡು ದಾರಿಗಳು.
ಬೀದಿ ಬಲ್ಬುಗಳು ಎಂದೋ
ಕಳೆದ — ಜೋಲು ಬಾವಲಿಗಳು.

ಬರದ ಬವಣೆಯೋ ಈ ಮರದ
ಉಸಿರು — ಬಸಿರು.
ಆಲಿವ್ ಮರದ ಟೊಂಗೆಗಳು
ಮುರಿದಿವೆ — ಓಕ್ ಮರದ
ಕಾಲ ಬುಡದಲ್ಲಿ
ಒತ್ತಿ ಕಣ್ಣುಗಳ
ಬೀಸಿ ತೂಗಲ ಅಡಿಯಲ್ಲಿ.

ಹಸಿರು ಟೀಪ ಹಚ್ಚಿ
ಕೂಗೊಂದೇ ಬನದ ಗಾನ.
ಕಪ್ಪು ನೆರಳುಗಳ ಸರಣಿನಲ್ಲಿ
ಬಿಳಿ ನೆರಳು — ಕೆಂ ನೆರಳಾಗಿ
ಸೇರುವುದೂ ಅದೇ ಮೌನ.
ಆದರೆ ರಾತ್ರಿ ಹಗಲಾದಾಗಲೇ
ಬದುಕು ಬತ್ತಲಾದ ನೋಟ,
ಬಣ್ಣ ಬದಲಾದ ಮಾಟ!

ಬೆನ್ನ ಮೇಲಿನ ಹೊರೆ ತೂಗಾಗಲು
ಹಜೆ [illegible] (?)
ತಲೆ ತಗ್ಗಿಸುವುದೂ [illegible]
ಕತ್ತಿ ಹಿರಿದು ನಿಂತಲ್ಲೇ
ಆಗ ನನ್ನ ಪ್ರಾರ್ಥನೆಗೂ
ಒಳ್ಳೆ ಫಸಲು.

— ವ. ಉಮೇಶ

ಕಾಂತ

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿ ಎನಿಸಿದ ಅರ್ಥವನ್ನು ಮೊದಲು ಆರಿಸಿ ಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ವಿದ್ರಾವಕ
ಅ) ಕರಗಿಸುವ
ಆ) ಕೆಂಬಣ್ಣದ
ಇ) ಬಂಡಾಯಗಾರ
ಈ) ಅಪ್ಪಣೆ ಕೊಡುವ

2. ವಿಪನ್ನ
ಅ) ಜೋಡೆಲೆಯ
ಆ) ಹಾರಾಡುವ
ಇ) ಮೆಚ್ಚಿಕೆಯ
ಈ) ಸಂಕಟಗ್ರಸ್ತ

3. ಹೊಯ್ಮಾಲಿ
ಅ) ಮೆದುಮನಸಿನವಳು
ಆ) ಗಯ್ಯಾಳಿ
ಇ) ಹೊಕ್ಕುಳವರೆಗೆ ಬರುವ ಸರ
ಈ) ವಿಪತ್ತು

4. ಏಕತಾನ
ಅ) ಒಂದೇ ಕಡೆ ಕುಳಿತ
ಆ) ಒಂಟಿತನ
ಇ) ಸತ್ತ ಹನ್ನೊಂದನೆ ದಿನ
ಈ) ಒಂದೇ ಸ್ವರದ

5. ಮೊಳಗು
ಅ) ಮೆಣಸಿನಕಾಯಿ
ಆ) ಚಿಗುರು
ಇ) ಧ್ವನಿ ಮಾಡು
ಈ) ಪ್ರಕಾಶಿಸು

6. ಕ್ರಾಂತಿ
ಅ) ರಭಸದ ಬದಲಾವಣೆ
ಆ) ದಾಟುವಿಕೆ
ಇ) ಒದ್ದೆ
ಈ) ಬಳಲುವಿಕೆ

7. ಅನಲು
ಅ) ಉರಿ
ಆ) ನಾಲಿಗೆಯ ರೋಗ
ಇ) ಅಮಂಗಳ
ಈ) ಝರಿ

8. ಕೊನ್ನಾರ
ಅ) ಬಂಡಿ
ಆ) ಕೊಳ್ಳ
ಇ) ಪಾಪ
ಈ) ಕೆರೆ

9. ಬಗ್ಗಣೆ
ಅ) ಬೆಳಕು
ಆ) ನಮಸ್ಕಾರ
ಇ) ಕೆಸರು
ಈ) ಕೋಗಿಲೆಯ ಕೂಗು

10. ವರ್ಚಸ್ಸು
ಅ) ಕಣ್ಣು
ಆ) ಬೆಳವಣಿಗೆ
ಇ) ಬಿಡುವಿಕೆ
ಈ) ಪ್ರಭಾವ

11. ಗಹ್ವರ
ಅ) ಮುಳುಗುವುದು
ಆ) ಗವಿ
ಇ) ದೊಡ್ಡನಗೆ
ಈ) ಅರ್ಥಹೀನ

12. ಆಸರು
ಅ) ಬಳಲಿಕೆ
ಆ) ಮನೆ
ಇ) ಹೆಂಡ
ಈ) ದೈತ್ಯವರ್ತನೆ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ವಿದ್ರಾವಕ
ಅ) ಕರಗಿಸುವ- ಉದಾ:ಹೃದಯ ವಿದ್ರಾವಕ ಘಟನೆ (ಸಂ.ವಿ+ದ್ರವ –ನೀರು ಮಾಡುವಿಕೆ)

2. ವಿಪನ್ನ
ಈ) ಸಂಕಟಗ್ರಸ್ತ- ಅಪಾಯದಲ್ಲಿ ಸಿಲುಕಿಕೊಂಡ, ಮುಂಗಾಣದಂಥ. ಉದಾ:ವಿಪನ್ನ ಸ್ಥಿತಿ (ಸಂ.ವಿ+ಪದ್=ವಿಪತ್-ಆದುಳ್ಳ)

3. ಹೊಯ್ಕಾಳಿ
ಅ) ಗಯ್ಯಾಳಿ, ಜಗಳಗಂಟಿ, ತರಲೆಗಾರ್ತಿ. ಸಣ್ಣದನ್ನು ದೊಡ್ಡದು ಮಾಡಿ ಬೊಬ್ಬೆ ಎಬ್ಬಿಸುವವಳು. ಉದಾ: ಅವಳ ಹೊಯ್ಕಾಳಿತನದಿಂದ ಎಚ್ಚರವಿರಲಿ (?)

4. ಏಕತಾನ
ಈ) ಒಂದೇ ಸ್ವರದ, ಒಂದೇ ಲಯದ, ಒಂದೇ ರೀತಿಯಲ್ಲಿ ಮುಂದುವರಿದು ಬೇಸರ ಬರಿಸುವ ಉದಾ:ಪಟ್ಟಣ ಬದುಕಿನ ಏಕತಾನತೆ (ಸಂ.ಏಕ =ಒಂದು+ತಾನ=ಸಂಗೀತದ ಸ್ವರ)

5. ಮೊಳಗು
ಇ) ಧ್ವನಿ ಮಾಡು (ವಾದ್ಯ, ಡೋಲು ಇತ್ಯಾದಿಗಳು) ಗಂಭೀರವಾಗಿ ಬಾರಿಸು, ಅಂಥ ಧ್ವನಿ. ಉದಾ:ದುಂದುಭಿ ಮೊಳಗಿತು (ದೇಶ್ಯ)

6. ಕ್ಲಾಂತಿ
ಈ) ಬಳಲುವಿಕೆ, ಶ್ರಮಗೊಳ್ಳುವಿಕೆ, ಬಲಗುಂದುವಿಕೆ. ಉದಾ:ಅಧ್ವ (=ದಾರಿಯ) ಕ್ಲಾಂತಿಯಿಂದ ಬೆಂಡಾಗಿದ್ದಳು. (ಸಂ.)

7. ಅಸಲು
ಅ) ಉರಿ, ಸುಡುವಿಕೆ, ಉರಿದೇಳುವಿಕೆ, ಕನಲಿಕೆ. ಉದಾ:ಅನಲುವ ಕೆಂಡ ಮೆಟ್ಟಿದ(ದೇಶ್ಯ)

8. ಕೊನ್ನಾರ
ಅ) ಕೊಳ್ಳ, ದರಿ, ಗೂಡು, ಮಾಡ. ಉದಾ: ಕೊನ್ನಾರದಲ್ಲಿ ಬಿದ್ದ ಆನೆ(?)

9. ಬಗ್ಗಣೆ
ಈ) ಕೋಗಿಲೆ ಮೊದಲಾದ ಗಾಯಕ ಪಕ್ಷಿಗಳ ಕೂಗು, ಕುಕಿಲು. ಉದಾ:ಕೋಗಿಲೆಯ ಬಗ್ಗಣೆ (ದೇಶ್ಯ-ಬಗ್ಗಿಸು, ಬಗುಳು)

10. ವರ್ಚಸ್ಸು
ಈ) ಪ್ರಭಾವ, ತೇಜಸ್ಸು, ಪ್ರಾಬಲ್ಯ, ಇನ್ನೊಬ್ಬರನ್ನು ಯಾವುದೇ ವಿಧದಿಂದ ತನ್ನಿಚ್ಛೆಗೆ ಬಗ್ಗಿಸುವ ಶಕ್ತಿ. ಉದಾ:ಮಂತ್ರಿಗಳ ವರ್ಚಸ್ಸು ಕುಗ್ಗಿತು (ಸಂ. ವರ್ಚಸ್)

11. ಗಹ್ವರ
ಅ) ಗವಿ, ಗುಹೆ, ತಗ್ಗು, ಹಳ್ಳ, ಆಳವಾದ ಸ್ಥಳ. ಉದಾ:ಗಿರಿ, ಗಹ್ವರಗಳಲ್ಲಿ ತೊಳಲಿದ (ಸಂ)

12. ಆಸರು
ಅ) ಬಳಲಿಕೆ, ಶ್ರಮದಿಂದ ಬೆಂಡಾಗು. ಉದಾ: ಆಸತ್ತು ಬೇಸತ್ತು (ದೇಶ್ಯ).

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8	ಸರಿಯಿದ್ದರೆ	... ಸಾಧಾರಣ
9-10	"	... ಉತ್ತಮ
11-12	"	... ಅತ್ಯುತ್ತಮ



ಸೆಪ್ಟೆಂಬರ್ 1956ರ ಸಂಚಿಕೆಯಲ್ಲಿ ಪ್ರಕಟವಾದ ಲೇಖನ.

ನೆನೆದರೆ ಮೈಗೆ ಮುಳ್ಳು ತರುವಂಥ ಆಕಾಶಬಾಣ ಸಿದ್ಧವಾಗುತ್ತಿದೆ

ಆಧುನಿಕ ಬ್ರಹ್ಮಾಸ್ತ್ರ

ಇನ್ನು ಬಹಳಕಾಲ ಹಿಡಿಯಲಾರದು. ಹತ್ತುವರ್ಷ-ಐದುವರ್ಷ, ಅಥವಾ ಎರಡು ಮೂರೇ ವರ್ಷಗಳಲ್ಲಿ ಇರಬಹುದು- ಭೂಮಿಯ ಮೇಲೆ ಹೊಸ ಪರಿಯ ಘೋರ ಯುದ್ಧ ಪದ್ಧತಿ ಪ್ರಾರಂಭವಾಗಲಿದೆ.

ದೃಶ್ಯ ಇದು: ಕೆಲ ವಿಜ್ಞಾನಿಗಳು ಮತ್ತು ಇಂಜಿನಿಯರರು ತಮ್ಮ ನೆಲಮಾಳಿಗೆಯಲ್ಲಿ ಕುಳಿತು ಸಮಯ ಕಾಯುತ್ತಿದ್ದಾರೆ; ನಿಶ್ಚಿತ ಮಹೂರ್ತದಲ್ಲಿ ಅವರಲ್ಲೊಬ್ಬನು ಎದ್ದು ಬಂದು ಸ್ವಿಚ್ ಒತ್ತುತ್ತಾನೆ; ಆ ಕ್ಷಣ ಹೊರಗೆ ಸಿಡಿಲಿನಂಥ ಸಪ್ಪಳದೊಡನೆ ಉರಿ ನಾಲಿಗೆ ಚಾಚುತ್ತ 135 ಫೂಟು ಎತ್ತರದ ಆಕಾಶಬಾಣವೊಂದು ಊರ್ಧ್ವ ಮುಖವಾಗಿ ಹಾರಿ ಕೆಲ ಕ್ಷಣಗಳಲ್ಲಿ ಆಕಾಶದಲ್ಲಿ ಕಣ್ಮರೆಯಾಗುತ್ತದೆ! ಇಪ್ಪತ್ತು ಮೂವತ್ತು ನಿಮಿಷಗಳಲ್ಲಿ 5,000 ಮೈಲು ದೂರವಿರುವ ನಗರವೊಂದು— ಲಂಡನ್, ನ್ಯೂಯಾರ್ಕ್, ಮಾಸ್ಕೋ, ಪೆಕಿಂಗ್, ಮುಂಬಯಿ ಅಥವಾ ಕಲ್ಕತ್ತಾ ಇರಬಹುದು— ಹೇಳಹೆಸರಿಲ್ಲದಂತೆ ನೆಲಸಮವಾಗಿರುತ್ತದೆ. ಲಕ್ಷಾಂತರ ಜನ ಕ್ಷಣಾರ್ಧದಲ್ಲಿ ಸಾಯುತ್ತಾರೆ.

ದುಃಸ್ವಪ್ನ? ಅಲ್ಲ. ರಶಿಯ ಮತ್ತು ಅಮೆರಿಕಗಳು ಇಂಥ ಒಂದು ಆಯುಧದ ತಯಾರಿಗಾಗಿ ಕೋಟ್ಯಂತರ ಹಣವನ್ನೂ ಸಾವಿರಾರು ವಿಜ್ಞಾನಿಗಳನ್ನೂ ತೊಡಗಿಸಿವೆ. ಅವರು ಯಶಸ್ವಿಗಳಾಗುವುದರಲ್ಲಿ ಸಂಶಯವಿಲ್ಲ. ಯಾರು ಮೊದಲು ಅದನ್ನು ಸಾಧಿಸುವರೋ ಅವರು ಅಂಗೈಯಲ್ಲಿ ಜಗತ್ತಿನ ಭವಿಷ್ಯತ್ತನ್ನು ಹಿಡಿಯುವರು.

ಈ ಆಯುಧವನ್ನು "ಚರಮ ಆಯುಧ" ವೆಂದು ಕರೆಯಲಾಗಿದೆ. ಬ್ರಹ್ಮಾಸ್ತ್ರವೆಂದು ಬೇಕಾದರೆ ಕರೆಯಿರಿ. ಅದು ಒಮ್ಮೆ ಹಾರಿದ ಮೇಲೆ ಅದನ್ನು ತಡೆಯುವ ಶಕ್ತಿ ಪ್ರಪಂಚದಲ್ಲೇ ಇಲ್ಲವೆನ್ನಬಹುದು. ಯಾಕಂದರೆ ಅದರ ವೇಗ ತಾಸಿಗೆ 12 ರಿಂದ 16 ಸಾವಿರ ಮೈಲುಗಳಷ್ಟಿರುವುದು. ರೇಡಾರ್ ಉಪಕರಣಗಳೂ ಅದನ್ನು ತಡೆಯಲಾರವು.

ಇಂಥ 50 ಆಕಾಶಬಾಣಗಳು ಗುರಿ ತಲುಪಿದರೆ ಅಮೆರಿಕದ ಮುಖ್ಯ ನಗರಗಳೆಲ್ಲ ಧ್ವಂಸವಾಗಿ 1 ಕೋಟಿಯಿಂದ 5 ಕೋಟಿ ಜನರಿಗೆ ಸಾವು-ನೋವು ಆಗಬಹುದೆಂದು "ಕೋಲಿಯರ್ಸ್" ಎಂಬ ಅಮೆರಿಕನ್ ಪತ್ರಿಕೆಯಲ್ಲಿ

ಹ್ಯಾನ್ಸನ್ ಬಾಲ್ಡ್‌ವಿನ್ನರೆಂಬ ತಜ್ಞರು ತರ್ಕಿಸಿದ್ದಾರೆ. ಇಂಥ ಯುದ್ಧದಲ್ಲಿ ಅಮೆರಿಕ ಮತ್ತು ಬ್ರಿಟನ್ ಮೊದಲಾದ ಅದರ ಮಿತ್ರರನ್ನು ಹಣಿಯಲು ರಶಿಯಕ್ಕೆ ಹೆಚ್ಚು ಸುಲಭ; ಅಮೆರಿಕಕ್ಕೆ ರಶಿಯವನ್ನು ಹಣಿಯುವುದು ಅಷ್ಟು ಸುಲಭವಲ್ಲ ಎಂದೂ ಅವರ ಮತ.

"ಖಂಡೋತ್ತರ ಆಕಾಶ ಬಾಣ" ಅಥವಾ ಐ.ಸಿ.ಬಿ.ಎಂ. (Inter Continental Ballistic Missile) ಎಂದು ನಾಮಕರಣ ಹೊಂದಿದ ಈ ಭಾವಿ ಬ್ರಹ್ಮಾಸ್ತ್ರವು ಸ್ವತಃ ಸ್ಫೋಟಕವಲ್ಲ. ಅದು ಜಲಜನಕ ಬಾಂಬುಗಳನ್ನು ಚುಂಚುವಿನಲ್ಲಿ ಹೊತ್ತು ಗುರಿಯನ್ನು ಅಪ್ಪಳಿಸುವ ಒಂದು ಆಕಾಶಬಾಣ.

ಎರಡನೇ ಮಹಾಯುದ್ಧ ಕಾಲದಲ್ಲಿ ಜರ್ಮನ್ನರು ಬ್ರಿಟನದ ಮೇಲೆ ಹಾರಿಸಿ ಸಾವಿರಾರು ಸಾವು-ನೋವು ಮತ್ತು ಅಪರಿಮಿತ ಹಾನಿಯನ್ನುಂಟು ಮಾಡಿದ V2 ಆಕಾಶ ಬಾಣದ ಮೊಮ್ಮಗುವಾಗಿದೆ ಅದು.

ಜರ್ಮನಿಯ ಶರಣಾಗತಿಯ ನಂತರ ಅದರ ಆಕಾಶಬಾಣ ಯೋಜನೆಯ ಪ್ರಮುಖರಾಗಿದ್ದ ಹಲವು ವಿಜ್ಞಾನಿಗಳಲ್ಲಿ ಕೆಲವರು ಅಮೆರಿಕಕ್ಕೂ ಕೆಲವರು ರಶಿಯಕ್ಕೂ ಹೋಗಿ ಅಲ್ಲಿನ ಸರಕಾರಗಳಿಂದ ಪ್ರೋತ್ಸಾಹಿಸಲ್ಪಟ್ಟು, ಎಂದಿನಿಂದಲೂ ಯುದ್ಧ ಕೋವಿದರ ಕನಸಾಗಿದ್ದ ಈ ಬ್ರಹ್ಮಾಸ್ತ್ರಗಳನ್ನು ರೂಪಿಸಲು ದುಡಿಯತೊಡಗಿದರು. ಜರ್ಮನ್ ಆಕಾಶಬಾಣ ಯೋಜನೆಯ "ಮೆದುಳು" ಎನಿಸಿದ್ದ ಡಾ|| ವರ್ನರ್ ವನ್ ಬ್ರೌನರು ಅಮೆರಿಕದ ಕಡೆಗೆ ಬಂದರೂ V2 ಕಾರ್ಖಾನೆಗಳು ರಶಿಯನ್ನರ ಕೈಗೆ ಬಿದ್ದವು. ಇದರಿಂದ ಈ ರಂಗದಲ್ಲಿ ರಶಿಯವು ಅಮೆರಿಕಕ್ಕಿಂತ ಸ್ವಲ್ಪ ಮುಂದಾಗಿದೆಯೆಂದು ನಂಬಲಾಗಿದೆ. ಅಮೆರಿಕವು ಇದರಿಂದ ಗಾಬರಿಯಾಗಿ ಇಮ್ಮಡಿ ಹಟದಿಂದ ಐಸಿಬಿಎಂ ಶಕ್ತ್ಯಸ್ತ್ರನಲ್ಲಿ ರಶಿಯವನ್ನು ಹಿಂದೆ ಹಾಕಬೇಕೆಂದು ಹವಣಿಸಿದೆ.

ಅಮೆರಿಕದ ಹತ್ತಿರ ಆಗಲೇ ಹಲ ಬಗೆಯ ಆಕಾಶಬಾಣಗಳು ಇವೆ. ನೈಕ ಅಥವಾ ಟೆರಿಯರ್, ಕಾರ್ಪೊರಲ್, ಸ್ನಾರ್ಕ್, ನವಾಹೊ ಮೊದಲಾದ ಹೆಸರಿನ ಬಾಣಗಳನ್ನು ಉಲ್ಲೇಖಿಸಬಹುದು. ಇವು ಹಲವು ನೂರು ಮೈಲು ದೂರ ಅದ್ಭುತ ವೇಗದಿಂದ ಹಾರಬಲ್ಲವು. ಆದರೆ ಅವು ಎಲ್ಲವೂ ಭೂಮಿಯ ವಾಯು ಮಂಡಲದೊಳಗೇ (50,000 ಫೂಟು ಎತ್ತರದೊಳಗೆ) ಅಡ್ಡಲಾಗಿ ಹಾರುವ ಅಸ್ತ್ರಗಳು. ಅವು ನಿಜವಾಗಿ ವೈಮಾನಿಕನಿಲ್ಲದ ವಿಮಾನಗಳೇ. ಅವನ್ನು ತಡೆಯಬಹುದು.

ರಶಿಯವು ಅದಕ್ಕಿಂತ ಮುಂದೆ ಹೋಗಿದೆ. ಕಳೆದ ವರ್ಷವೇ 800ಕ್ಕಿಂತಲೂ ಹೆಚ್ಚು ಮೈಲು ದೂರ ಹಾರಬಲ್ಲ ದೂರಗಾಮಿ ಅಸ್ತ್ರವೊಂದನ್ನು ರಶಿಯನ್ನರು ಪ್ರಾಯೋಗಿಕವಾಗಿ ಹಾರಿಸಿದರೆಂದು ಖಂಡಿತವಾಗಿ ಗೊತ್ತಾಗಿದೆ. ಈ ವರ್ಷದ ಕೊನೆಯೊಳಗೆ 1,500 ಮೈಲು ದೂರದ ಗುರಿಗಳನ್ನು ತಲುಪಬಲ್ಲ ಅಸ್ತ್ರಗಳನ್ನು ಪ್ರಾಯೋಗಿಕವಾಗಿ ಹಾರಿಸಲಿದ್ದಾರೆಂದು ನಂಬಲಾಗಿದೆ. ರಶಿಯನ್ ನಾಯಕ ನಿಕಿತಾ ಕ್ರುಶೇವರು ಇಂಗ್ಲಂಡಿಗೆ ಬಂದಾಗ ಈ ಊಹೆಯನ್ನು ದೃಢಪಡಿಸಿದರು. ಅಮೆರಿಕವು 1957ರಲ್ಲಿ ಇಂಥ ಅಸ್ತ್ರವೊಂದನ್ನು ಹಾರಿಸುವ ಭಗೀರಥ ಪ್ರಯತ್ನದಲ್ಲಿದೆ. ಇವು ಈ ಲೇಖನ ಪ್ರಾರಂಭದಲ್ಲಿ ಹೇಳಿದ "ಬ್ರಹ್ಮಾಸ್ತ್ರ"ದ ಅಣ್ಣಂದಿರೇ ಸೈ.

5,000 ಮೈಲು ದೂರ, 12-16 ಸಾವಿರ ಮೈಲು ವೇಗದಿಂದ, ಹಾರುವ ಈ ಯಂತ್ರಾಸ್ತ್ರ 100 ರಿಂದ 135 ಫೂಟೆತ್ತರದ ಪೆನ್ಸಿಲಿನ ಆಕಾರದ ಕೊಳವೆಯಾಗಿರಬೇಕಾಗುವುದು. ಅದು ತನ್ನ ಗರ್ಭದೊಳಗೆ ಆಕಾಶಬಾಣದ ಎಂಜಿನ್ನು, ದಾರಿ ಖರ್ಚಿಗೆ ಬೇಕಾದ ಉರುವಲು ದ್ರವ್ಯ ಇವುಗಳನ್ನು ಮಾತ್ರವಲ್ಲದೆ, ವಾಯುಮಂಡಲದಾಚೆ ನಿರ್ವಾತ ಪ್ರದೇಶದಲ್ಲಿಯೂ ಹೋಗಬೇಕಾಗುವುದರಿಂದ ಉರುವಲು ಸುಡಲು ಆಗತ್ಯವಾದ ಪ್ರಾಣವಾಯುವನ್ನೂ ಶತ್ರು ಸ್ಥಾನವನ್ನು ಧ್ವಂಸ ಮಾಡಲು ಬೇಕಾದ ಜಲಜನಕ ಬಾಂಬನ್ನೂ ಒಯ್ಯಬೇಕಾಗುವುದು. ಹೀಗಾಗಿ ಈ ರಕ್ಕಸನ ತೂಕ 100 ಟನ್ನಿಗಿಂತ ಕಡಿಮೆಯಿರಲಾರದು.

ಭೂಮಿಯಿಂದ ಹಾರಿಸಲ್ಪಟ್ಟೊಡನೆ ಅದು ನೆಟ್ಟಗೆ ಮೇಲೆ 600-800 ಮೈಲು ಹಾರುವುದು. ಅನಂತರ ಅದರ ಮೂತಿ ತಾನಾಗಿಯೇ, ಭೂಮಿಯ ಕಡೆ ಬಾಗಿಸಲ್ಪಡುವುದು. ಆ ದಿಶೆಯಲ್ಲಿ ಅದು ತಾಸಿಗೆ 15,000 ಮೈಲು ವೇಗ

ದಿಂದ ತನ್ನ ಗುರಿಯತ್ತ ಸಾಗುವುದು. ಇಷ್ಟು ದೊಡ್ಡ ಬಾಣವನ್ನು 5,000 ಮೈಲು ದೂರ ಒಯ್ಯಬಲ್ಲಂಥ ಇಂಜನ್ನು ಇನ್ನೂ ಹುಟ್ಟಿಲ್ಲ. ಆದರೆ ಈಗಿರುವ ರಾಕೆಟ್ (ಆಕಾಶಬಾಣ) ಇಂಜನ್ನುಗಳಲ್ಲಿ ಹಲವನ್ನು ಅದರೊಳಗಿರಿಸಿ ಅವುಗಳ ಸಾಮೂಹಿಕ ಶಕ್ತಿಯಿಂದ ಬಾಣದ ಅದ್ಭುತ ಪ್ರಯಾಣಕ್ಕೆ ಬೇಕಾದ ಒತ್ತಡವನ್ನು ಕೊಡಬಹುದಾಗಿದೆ. ಬರುವ ವರ್ಷ (1957) ಪ್ರಮುಖ ರಾಷ್ಟ್ರಗಳು ಹಾರಿಸಲಿರುವ "ಕೃತಕ ಚಂದ್ರ"ದ ಯೋಜನೆಯು ಈ ಬ್ರಹ್ಮಾಸ್ತ್ರಕ್ಕೆ ರಂಗ ತಾಲೀಮಿನಂತಿದೆ.

ಐ.ಸಿ.ಬಿ.ಎಂ. ಆಕಾಶಬಾಣವನ್ನು ಹಾರಿಸುವ ವಿಧಾನ ಸಂಕ್ಷಿಪ್ತವಾಗಿ ಹೀಗಿದೆಯೆಂದು ಊಹಿಸಲಾಗಿದೆ: ಅದರಲ್ಲಿ ಮೂರು ವಿಭಾಗಗಳಿದ್ದು ಪ್ರತಿಯೊಂದಕ್ಕೂ ಅದರದೇ ಇಂಜನ್ ಹಾಗು ಉರುವಲು ಪೂರೈಕೆ ಇಡಲಾಗುವುದು.

ಮೊದಲನೇ ನೆಗೆತಕ್ಕೆ ಇಡೀ ಆಕಾಶಬಾಣವು ವಾಯುಮಂಡಲದ ಬಹು ಭಾಗವನ್ನು ದಾಟಿ ಹೋಗುವುದು. ಅಷ್ಟರಲ್ಲಿ ಮೊದಲನೇ ಭಾಗದ ಉರುವಲು ತೀರಿ ಹೋಗುವುದು. ಆಗ ಅದರೊಳಗಿರುವ ಯಾಂತ್ರಿಕ ಸಲಕರಣೆಯು ಬಾಣದ ನಿರುಪಯುಕ್ತವಾದ ಮೊದಲನೇ ಭಾಗವನ್ನು ಕಳಚಿ ಕೆಳಗೆ ಉದುರಿಸಿ ಬಿಡುವುದು. ಅನಂತರ ಎರಡನೇ ಭಾಗವು ಕೆಲಸ ಆರಂಭಿಸಿ ಬಾಣವನ್ನು ಭೂಮಿಯಿಂದ 200-300 ಮೈಲೆತ್ತರದವರೆಗೆ ಮೇಲೆತ್ತುವುದು. ಅಷ್ಟರಲ್ಲಿ ಎರಡನೇ ಭಾಗವೂ ತನ್ನ ಕೆಲಸ ತೀರಿಸಿರುವುದರಿಂದ ಅದೂ ಕೆಳಗುದುರುವುದು! ಆ ಕ್ಷಣದಲ್ಲಿ ಮೂರನೇ ಭಾಗದಲ್ಲಿರುವ ಯಂತ್ರವು ಬಾಣವನ್ನು ಊರ್ಧ್ವ ಮುಖದಿಂದ ಅಡ್ಡಲಾಗಿ ತಿರುಗಿಸಿ ಸೆಕೆಂಡಿಗೆ 30,000 ಫೂಟಿನ ವೇಗದ "ಒದಿಕೆ"ಯನ್ನು ಜಲಜನಕ ಬಾಂಬುಳ್ಳ ಮೂರನೇ ಭಾಗಕ್ಕೆ ಕೊಡುವುದು.

ಆಮೇಲೆ ಬಾಣವು ಮತ್ತಾವ ಯಂತ್ರದ ಸಹಾಯವಿಲ್ಲದೆ ನ್ಯೂಟನ್ನನ ತತ್ವದ ಮೇರೆಗೆ ಯಾವುದೊಂದು ಗ್ರಹದಂತೆ ತನ್ನ ಸ್ವಂತ ವೇಗದಿಂದ ಸಾಗುವುದು. ತಾಸಿಗೆ 12 ರಿಂದ 16 ಸಾವಿರ ಮೈಲು ವೇಗದಲ್ಲಿ ಸಾಗುವ ಈ ಬಾಣವು ತನ್ನ ಅರ್ಧ ದಾರಿಯನ್ನು ಸಾಗುವಷ್ಟರಲ್ಲಿ ಅದು ಭೂಮಿಯಿಂದ 600-800 ಮೈಲು



"ನೀರಿಗೋಸ್ಕರ.... ನಾವಿಲ್ಲೀವರೆಗೂ ಬರೋ ಹಾಗಾಯ್ತಲ್ಲೋ... ಶಿವನೇ..."

ಎತ್ತರವನ್ನು ಮುಟ್ಟಿರುವುದು. ಅನಂತರ ಅದು ಭೂಮಿಯ ಕಡೆಗೆ ಮುಖ ತಿರುಗಿಸಿ ತನ್ನ ಮುಂದಿನ 2,500 ಮೈಲು ಯಾತ್ರೆ ಸಾಗಿಸಿ ಗುರಿಯನ್ನು ಮುಟ್ಟುವುದು.

ಇದು ಮಾತಿನಲ್ಲಿ ಹೇಳಿದಷ್ಟು ವಾಸ್ತವಿಕದಲ್ಲಿ ಸುಲಭವಾಗಿಲ್ಲ. ಪ್ರಚಂಡ ಸಮಸ್ಯೆಗಳನ್ನು ಮೊದಲು ಬಿಡಿಸಬೇಕಾಗುವುದು. ಅತಿ ಕಠಿಣ ಸಮಸ್ಯೆಗಳು ಎರಡು: ಒಂದು, ಉತ್ಕೃಷ್ಟತೆಯದು, ಎರಡು, ಬಾಣವನ್ನು ಗುರಿ ಮುಟ್ಟುವಂತೆ ನಿಯಂತ್ರಿಸುವುದು.

ಉಷ್ಣತೆಯ ಸಮಸ್ಯೆ- ಆಕಾಶಬಾಣವು ಭೂಮಿಯ ವಾಯುಮಂಡಲವನ್ನು ಎರಡು ಸಲ ದಾಟುವಾಗ ಉದ್ಭವಿಸುವುದು- ಒಮ್ಮೆ ಏರುವಾಗ, ಇನ್ನೊಮ್ಮೆ ಇಳಿಯುವಾಗ. ಏರುವಾಗ ಬಾಣವು ಪರಮಾವಧಿ ವೇಗವನ್ನು ಮುಟ್ಟದಿರುವುದರಿಂದ ಅದು ಅಷ್ಟು ದೊಡ್ಡ ಸಮಸ್ಯೆಯಲ್ಲ. ಆದರೆ ಇಳಿಯುವಾಗ ಅದು ತಾಸಿಗೆ 12-16 ಸಾವಿರ ಮೈಲಿನ ಭೀಷಣ ವೇಗದಲ್ಲಿರುವುದರಿಂದ ತನ್ನ ಪ್ರಯಾಣದ ಕೊನೆಗೆ ಭೂಮಿಯ ವಾತಾವರಣದಲ್ಲಿ ಪ್ರವೇಶಿಸಿದೊಡನೆ ಘರ್ಷಣೆಯಿಂದ ಅದು 5,000 ಡಿಗ್ರಿ ಫೆರನ್ಹೈಟ್‌ವರೆಗೂ ಕಾವೇರಬಹುದು. ಆಗ ಇಡೀ ಬಾಣವೇ ಉಲ್ಕೆಗಳಂತೆ ಕರಗಿ

ಸುಟ್ಟು ಹೋಗಬಹುದು. ಇಷ್ಟು ಕಾವನ್ನು ತಡೆದುಕೊಳ್ಳಬಲ್ಲ ಯಾವ ಕವಚವೂ ಈವರೆಗೆ ಸಿದ್ಧವಾಗಿಲ್ಲ. ಆದರೆ ಹಲವು ಉಪಾಯಗಳಿಂದ ಅದನ್ನು ಸಾಧಿಸಬಹುದೆಂದು ವಿಜ್ಞಾನಿಗಳು ನಂಬಿದ್ದಾರೆ.

ಎರಡನೆಯದು ನಿಯಂತ್ರಣದ್ದು. ಬಾಣವು ನಿಶ್ಚಿತ ಗುರಿ ಮುಟ್ಟಬೇಕಾದರೆ ಹೇಗೆ ಸಾಗಬೇಕೆಂಬುದನ್ನು ಮೊದಲೇ ಗಣಿತ ಯಂತ್ರಗಳ ಮೂಲಕ ಗುಣಿಸಿಟ್ಟುಕೊಳ್ಳಬೇಕಾಗುವುದು. 200-300 ಮೈಲಿನವರೆಗೆ ಅದರ ಓಟವು ಇಂಜನ್ನಿನ ಶಕ್ತಿಯಿಂದ ಸಾಗುತ್ತದಾದ್ದರಿಂದ ರೇಡಾರ ಉಪಕರಣಗಳ ಸಹಾಯದಿಂದ ಅದರ ಗತಿಯನ್ನು ಸರಿಯಾದ ಮಾರ್ಗದಲ್ಲಿ ಭೂಮಿಯಿಂದ ನಿಯಮಿಸಲು ಸಾಧ್ಯವಿದೆ. ಆದರೆ ಮುಂದಿನ 4,700 ಮೈಲನ್ನು ಅದು ಸ್ವತಂತ್ರವಾಗಿ ಹಾರುವುದರಿಂದ ಅದರ ಗತಿಯನ್ನು ನಿಯಂತ್ರಿಸುವುದು ಅತ್ಯಂತ ಕಠಿಣವಾದ ಕೆಲಸ. ಬಾಂಬು ಇರುವ ಅದರ ಚುಂಚುವಿನಲ್ಲೇ ವಿಶಿಷ್ಟ ಉಪಕರಣಗಳನ್ನಿಟ್ಟು ಅದು ದಾರಿ ತಪ್ಪಿದಾಗ ತಾನೇ ತಿದ್ದಿಕೊಳ್ಳುವಂತೆ ಮಾಡಲು ಶಕ್ಯವಾದೀತು.

ನಿಯಂತ್ರಣದಲ್ಲಿರುವ ಬೇರೆ ತೊಡಕುಗಳೆಂದರೆ ವಾಯುಮಂಡಲದ ಒತ್ತಡದ ಅನಿಶ್ಚಿತತೆ, ಭೂಮಿಯ ಬೇರೆ ಬೇರೆ ಭಾಗಗಳಲ್ಲಿ ಗುರುತ್ವಾಕರ್ಷಣದ ಪ್ರಮಾಣ ಹೆಚ್ಚು ಕಡಿಮೆಯಾಗಿರುವುದು, ಭೂಭಾಗಗಳ ನಕಾಶಗಳಲ್ಲಿರುವ ತಪ್ಪು ತಡೆಗಳು ಇತ್ಯಾದಿ. ಇವುಗಳಲ್ಲಿ ಪ್ರತಿಯೊಂದೂ ಬಾಣವನ್ನು ಗುರಿ ತಪ್ಪಿಸಲು ಸಮರ್ಥವಾಗಬಲ್ಲದು. ಗುರಿ ಶೇಕಡಾ 1 ರಷ್ಟು ತಪ್ಪಿದರೂ ಗುರಿಯಿಂದ 50 ಮೈಲು ದೂರದಲ್ಲಿ ಬಾಣವು ಬಿದ್ದು ವ್ಯರ್ಥವಾಗುವುದು.

ಆದರೆ ಅನುಭವದಿಂದಲೂ ಕೃತಕ ಚಂದ್ರನಿಂದ ಪಡೆದ ವಿವರಜ್ಞಾನದಿಂದಲೂ ಈ ತೊಡಕುಗಳನ್ನೆಲ್ಲ ಗೆಲ್ಲಬಹುದೆಂಬ ವಿಶ್ವಾಸ ವಿಜ್ಞಾನಿಗಳಿಗಿದೆ. ಅವರಿಗೆ ಇದರಲ್ಲಿ ಯಶ ಸಿಕ್ಕಿದರೆ ಇತಿಹಾಸದ ಗತಿಯೇ ಬದಲಾದೀತು.

ರಶಿಯ, ಅಮೆರಿಕಗಳಲ್ಲಿ ಯಾವುದೊಂದು ಈ ಬ್ರಹ್ಮಾಸ್ತ್ರವನ್ನು ಮೊದಲು ವಶಪಡಿಸಿಕೊಂಡಿತೆನ್ನೋಣ. ಆಗ ಅದರ ಬೆದರಿಕೆ ಹಾಕಿ ಅದು ದುರ್ಬಲ ರಾಷ್ಟ್ರಗಳನ್ನು ತನ್ನ ಕೂಟದಲ್ಲಿ ಎಳೆದು ತರಬಲ್ಲದು. ಒಬ್ಬ ಲೇಖಕನು ಹೇಳಿದಂತೆ ಜಗತ್ತಿನಲ್ಲಿ ದುರ್ಬಲ ರಾಷ್ಟ್ರಗಳು ಗೆದ್ದೆತ್ತಿನ ಬಾಲ ಹಿಡಿಯುವ ಗುಣದವು. ರಶಿಯವು 5,000 ಮೈಲಿನದಲ್ಲ, 1,500 ಮೈಲು ಹಾರುವ ಸ್ವಯಂಚಾಲಿತ ಬ್ರಹ್ಮಾಸ್ತ್ರವನ್ನು ಮೊದಲು ಸಾಧಿಸಿದರೆ ಕೂಡ ಇಡೀ ಯೂರೋಪಿನ ರಾಷ್ಟ್ರಗಳನ್ನು ಹೆದರಿಸಿ ಅಮೆರಿಕದ ಪಕ್ಷದಿಂದ ಅವುಗಳನ್ನು ಹೊರಗೆಳೆಯಬಲ್ಲದು. ಯಾವ ರಾಷ್ಟ್ರವೂ ಸಂಪೂರ್ಣ ಧ್ವಂಸವಾಗಲು ಅಪೇಕ್ಷಿಸುವುದಿಲ್ಲವಷ್ಟೆ? ●

(ಕೋಲಿಯರ್ಸ್ ಮತ್ತು ಲೈಫ್ ಪತ್ರಿಕೆಗಳ ಆಧಾರದಿಂದ)

ದುರದೃಷ್ಟ ಇಲ್ಲದವನನ್ನು ಅದೃಷ್ಟವೇ ಕಾಡುತ್ತದೆ.

● ಜಾರ್ಜ್ ಹರ್ಬರ್ಟ್

ಮೂಢನಂಬಿಕೆ ದುರ್ಬಲ ಮನದವರ ಧರ್ಮ.

● ಎಡ್ಮಂಡ್ ಬರ್ಕ್

ಬಿಡುವಿನ ನಿಮಿಷಗಳ ಬಳಕೆಯಲ್ಲಿ ಎಚ್ಚರವಿದ್ದರೆ ಎಲ್ಲ ಅನುಕೂಲಗಳನ್ನೂ ಹೊಂದಿರುವ ಅನೇಕರಿಗಿಂತಲೂ ನೀವು ಮುಂದುವರಿಯಬಹುದು.

● ಥಾಮಸ್ ಯಂಗ್

ತರಂಗವತಿ

ವಿಕ್ರಮ ಶಕ 900 ರಲ್ಲಿ (ಕ್ರಿ.ಶ.145) ಜೈನಾಚಾರ್ಯ ಪಾದಲಿಪ್ತ ಸೂರಿ ಎಂಬುವರು "ತರಂಗವತಿ" ಎಂಬ ಪ್ರೇಮ ಕಾವ್ಯ ಬರೆದಿದ್ದರು. ಅನೇಕ ವರ್ಷಗಳ ನಂತರ ಇನ್ನೋರ್ವ ಕವಿ ಈ ಕಾವ್ಯವನ್ನು ಸೂತ್ರ ಶೈಲಿಯಲ್ಲಿ ಬರೆದು ಕವಿಪರಂಪರೆಯ ಕಂಠದಲ್ಲಿ ಜೀವಂತವಾಗಿರಿಸಿದರು.

ಭಾರತೀಯ ಸಾಹಿತ್ಯದಲ್ಲಿ ಕಾವ್ಯ ಪರಂಪರೆ ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಇತ್ತು ಎಂಬುದಕ್ಕೆ ಇದೊಂದು ಉದಾಹರಣೆ.

ನಮ್ಮ ದೇಶದ ವಿದ್ವಾಂಸರ ದೃಷ್ಟಿ, ಈ ಪುಸ್ತಕದ ಮೇಲೆ ಬೀಳುವುದಕ್ಕಿಂತ ಎಷ್ಟೋ ಮೊದಲು ಅದು ಜರ್ಮನ್ ಭಾಷೆಯಲ್ಲದೆ ಇತರ ಆರು ಯುರೋಪಿಯನ್ ಭಾಷೆಗಳಲ್ಲೂ ಅನುವಾದಗೊಂಡಿರುವುದು "ತರಂಗವತಿ"ಯ ವೈಶಿಷ್ಟ್ಯ.





ಸಂಗ್ರಹ: ವೈರಸ ಶಿರಾಲಿ



ನಂದನವನದಲ್ಲಿ ಅಪ್ಸರೆಯರು ವಿಹಾರ ಗೈದಂತೆ ರಾಜೋದ್ಯಾನದಲ್ಲಿ ತರಂಗವತಿ ತನ್ನ ಸಖಿಯರೊಡನೆ ವಿಹರಿಸುತ್ತಿದ್ದಳು. ಹೂವಿನಿಂದ ಹೂವಿಗೆ ಹಾರುವ ಭ್ರಮರದಂತೆ ಶರದ್ ಋತುವಿನಲ್ಲಿ ಅರಳಿದ ವಿವಿಧ ಹೂವು ಗಳ ದೃಶ್ಯವನ್ನು ಆಸ್ವಾದಿಸುತ್ತ ತಿರುಗುತ್ತಿರು ವಾಗ ಒಂದು ಸುಂದರವಾದ ಸಪ್ತವರ್ಣದ ವೃಕ್ಷ ಆಕೆಗೆ ಗೋಚರಿಸಿತು. ಈ ವೃಕ್ಷ ಹೂಗಳ ಭಾರದಿಂದ ಓಲಾಡುತ್ತಿತ್ತು. ಕಮಲದ ಕೆರೆ ಯಿಂದ ಮಧುಪಕ್ಷಿಗಳು ತಂಡೋಪತಂಡವಾಗಿ ಬಂದು ಕುಳಿತುಕೊಳ್ಳುವುದನ್ನು ಅವಳು ಗಮ



ನಿಸಿದಳು. ರಾಜೋದ್ಯಾನಕ್ಕೆ ರತ್ನ ಸಮಾನವಿದ್ದ ಸರೋವರವು ಪಕ್ಷಿಗಳ ಕಲರವ ನಿನಾದದಿಂದ ತುಂಬಿ ಹೋಗಿತ್ತು. ಈ ಸರೋವರದ ನೀಲವರ್ಣದ ನೀರ ಹಾಸಿಗೆಯ ಮೇಲೆ ಎಷ್ಟೋ ಚಕ್ರವಾಕ ಪಕ್ಷಿಗಳು ಆನಂದದಿಂದ ವಿಹರಿಸುತ್ತಿದ್ದವು.

ಚಕೋರ ಚಕೋರಿಗಳ ನಡುವಿನ ಪಾರಸ್ಪರಿಕ ಪ್ರೇಮಕ್ರೀಡೆಯನ್ನು ನೋಡುತ್ತಿದ್ದ ತರಂಗವತಿಯ ಮನಸ್ಸಿನಲ್ಲಿ ಒಂದು ಪ್ರಕಾರದ ಅದ್ಭುತವಾದ ವಿಚಾರಗಳು ಉತ್ಪನ್ನವಾಗತೊಡಗಿದವು. ಈಗಿದ್ದ ಸ್ಥಳ ಬದಲಾಗಿ ತಾನು ಬೇರೆ ಇನ್ನಾವುದೋ ಲೋಕದಲ್ಲಿದ್ದೇನೆ ಎಂಬ ಕಲ್ಪನೆ ಅವಳಿಗಾಯಿತು. ತಕ್ಷಣವೇ ಅವಳಿಗೆ ತನ್ನ ಪೂರ್ವಜನ್ಮದ ಸ್ಮರಣೆಯಾಗತೊಡಗಿತು. ಪೂರ್ವಜನ್ಮದ ಸ್ಮರಣೆಯಾಗುತ್ತಿದ್ದಂತೆ ಆಕೆ ಎಚ್ಚರ ತಪ್ಪಿ ಬಿದ್ದಳು. ಅದನ್ನು ನೋಡಿದ ಸಖಿಯರು ಸರೋವರದಿಂದ ನೀರು ತಂದು ತರಂಗವತಿಯ ಕಣ್ಣಿಗೆ ಸಿಂಪಡಿಸಿ ತಮ್ಮಲ್ಲಿದ್ದ ಕೈ ವಸ್ತ್ರದಿಂದ ಗಾಳಿ ಬೀಸುತ್ತ ಆತಂಕ ದೃಷ್ಟಿಯಿಂದ ತರಂಗವತಿಗೆ ಯಾವಾಗ ಎಚ್ಚರ ಬರುವುದೆಂದು ನೋಡತೊಡಗಿದರು. ಆ ಸ್ನೇಹಮಯ ಉಪಚಾರದಿಂದಲೇ ಇರಬೇಕು ಆಕೆ ಕೂಡಲೇ ಎಚ್ಚರವಾದಳು. ಎಚ್ಚರವಾದವಳೇ ಕಣ್ಣಿನಲ್ಲಿ ನೀರು ತುಂಬಿ ಗಳಗಳ ಅಳತೊಡಗಿದಳು.

ಇದನ್ನು ನೋಡಿ ಆಕೆಯ ಅತಿಪ್ರಿಯ ಸಖಿಯಾದ ಸಾರಸಿಕಾ ಸ್ನೇಹಪರ ನುಡಿಗಳಿಂದ "ಸಖಿ, ನಿನಗೆ ಹೀಗೆ ಏಕಾಯಿತು? ಏನೂ ಸಂಕೋಚಪಟ್ಟುಕೊಳ್ಳದೆ ಹೇಳು" ಎಂದಾಗ ಆಕೆಯ ಆತ್ಮೀಯತೆಯಿಂದ ಚೇತನಗೊಂಡ ತರಂಗವತಿ ಈ ಸುದ್ದಿಯನ್ನು ಇತರ ಯಾರಿಗೂ ತಿಳಿಸುವುದಿಲ್ಲವೆಂದು ವಚನ ಪಡೆದು ತನ್ನ ಪೂರ್ವಜನ್ಮದ ಎಲ್ಲ ವೃತ್ತಾಂತವನ್ನು ಸಾರಸಿಕಾಳಿಗೆ ಹೇಳುತ್ತಾಳೆ.

"ಸಖಿ ನಾನು ಪೂರ್ವಜನ್ಮದಲ್ಲಿ ಕೆಂಪು ಮತ್ತು ಹಳದಿ ಬಣ್ಣದ ಪುಕ್ಕಗಳಿರುವ ಚಕೋರಿಯಾಗಿದ್ದೆ. ಚಕೋರ ಚಕೋರಿ ಪಕ್ಷಿಗಳಲ್ಲಿರುವಷ್ಟು ಪ್ರಗಾಢ ಸ್ನೇಹದಿಂದ ಕೂಡಿದ ಸಂಸಾರವನ್ನು ಇತರ ಪಕ್ಷಿ ಅಥವಾ ಪ್ರಾಣಿಗಳಲ್ಲಿ ನೋಡಸಿಗುವುದು ದುರ್ಲಭ. ನನ್ನ ಪತಿ ಚಕೋರ ತನ್ನ ಚಂಚಲ ಸ್ವಭಾವ ಚತುರ ಬುದ್ಧಿ ಹಾಗೂ ದಷ್ಟಪುಷ್ಟವಾಗಿದ್ದ ಸುಂದರ ಶರೀರದಿಂದ ತುಂಬಾ ಪ್ರಖ್ಯಾತನಾಗಿದ್ದ. ಬಹಳ ಕುಶಲನೂ ಆದ ಆತನ ಸ್ವಭಾವ ಅಂತ್ಯ ಸಮಯದವರೆಗೂ ಮಹಾತಪಸ್ವಿಯಂತೆ ಸರಳವಾಗಿತ್ತು. ನಮ್ಮಿಬ್ಬರಿಗೂ ಒಬ್ಬರನ್ನೊಬ್ಬರು ಅಗಲುವುದು ವೇದನಾಮಯವಾಗಿತ್ತು. ಎಲ್ಲಿ ಹೋಗುವುದಿದ್ದರೂ ನಾವು ಜೊತೆಯಾಗಿಯೇ ಹೋಗುತ್ತಿದ್ದೆವು.

ನಾವಿಬ್ಬರೂ ಇತರ ಎಲ್ಲ ಜಲ ಪಕ್ಷಿಗಳಂತೆ ಗಂಗಾನದಿಯ ತಟದಲ್ಲಿ ವಾಸವಾಗಿದ್ದೆವು. ಒಮ್ಮೆ ಸೂರ್ಯ ಕಿರಣಗಳ ಬಾಧೆಯಿಂದ ತ್ರಸ್ತವಾದ ಆನೆ ತನ್ನ ಮೈಮೇಲೆ ನೀರನ್ನು ಹಾಕಿಕೊಳ್ಳಲು ನದಿಗೆ ಬಂದಿಳಿಯಿತು. ನದಿಯ ಮೇಲೆ ಮೋಡವೇ ಇಳಿದಿದೆ ಎಂದು ಭಾಸವಾಗುವ ಹಾಗೆ ತನ್ನ ಸೊಂಡಿಲಿನಿಂದ ನದಿಯ ನೀರನ್ನೆತ್ತಿ ಅದು ತನ್ನ ಮೈಮೇಲೆ ಚೆಲ್ಲಿಕೊಳ್ಳುವಾಗ ದೊಡ್ಡದಾಗಿ ತೆರೆದು ಅದರ ಬಾಯೊಳಗಿಂದ ಹೊರಚಾಚಲ್ಪಟ್ಟ ಉದ್ದವಾದ ನಾಲಗೆಯನ್ನು ನೋಡಿ ಭಯಭೀತೆಯಾದ ನಾನು ನನ್ನ ಪ್ರಿಯತಮನೊಡನೆ ಜೊತೆಜೊತೆಯಾಗಿ ಬಾನಿನಲ್ಲಿ ಹಾರಿದೆ.

ಈ ಕಡೆ ಆನೆ ತನ್ನ ಜಲಕ್ರೀಡೆಯನ್ನು ಮುಗಿಸಿ ನದಿಯಿಂದ ಹೊರಬರುತ್ತಿದ್ದಂತೆ ಮೈಮೇಲೆಲ್ಲ ವನಪುಷ್ಪಗಳನ್ನು ಧರಿಸಿ ಅಲಂಕೃತನಾಗಿ ಬಿಲ್ಲುಬಾಣ ಹಿಡಿದು ಸಾಕ್ಷಾತ್ ಯಮನೇ ಆದ ಒಬ್ಬ ಬೇಡರ ಯುವಕ ಅಲ್ಲಿಗೆ ಬಂದು ಈ ಆನೆಯನ್ನು ನೋಡುತ್ತಿದ್ದಂತೆ ದಡಬಡನೆ ಹತ್ತಿರದಲ್ಲಿದ್ದ ಒಂದು ವೃಕ್ಷವನ್ನು ಹತ್ತುತ್ತಾನೆ. ವೃಕ್ಷದ ಟೊಂಗೆಯ ಮೇಲೆ ಕುಳಿತು ಬಿಲ್ಲಿಗೆ ಬಾಣವನ್ನು ಹೂಡಿ ಆನೆಯನ್ನು ಒಮ್ಮೆ ಗುರಿಯಿಟ್ಟು ನೋಡಿ ಬಾಣವನ್ನು ಬಿಡುತ್ತಾನೆ. ಆದರೆ....

ಬಾಣದ ಗುರಿ ಸ್ವಲ್ಪ ತಪ್ಪಿತ್ತು. ಅದು ಆನೆಗೆ ತಾಗುವ ಬದಲು ನನ್ನ ಪತಿಗೆ ತಾಗಿತು. ಅದರಿಂದ ಅವನ ಒಂದು ರೆಕ್ಕೆ ತುಂಡಾಗಿ ಮೂರ್ಛಿತನಾಗಿ ನೆಲಕ್ಕೆ ಬಿದ್ದು ವಿಲವಿಲ ಒದ್ದಾಡತೊಡಗಿದ. ಈ ದೃಶ್ಯವನ್ನು ನೋಡುತ್ತಿದ್ದಂತೆ ನಾನೂ ಮೂರ್ಛಿತಳಾಗಿ ಬಿದ್ದೆ. ಪ್ರಜ್ಞೆ ಬಂದಾಗ ಬಾಣ ಇನ್ನೂ ಚುಚ್ಚಿಯೇ ಇದ್ದ ರಕ್ತಸಿಕ್ತನಾದ ನನ್ನ ಪ್ರಿಯತಮ ಸ್ವರ್ಗಸ್ಥನಾಗಿದ್ದ.

ನಾನು ಶೋಕದಿಂದ ವಿಲಾಪಿಸುತ್ತಲೇ ಇದ್ದಾಗ ಆ ಬೇಡ ಅಲ್ಲಿಗೆ ಬಂದ. ಆತನಿಗೆ ಆನೆಯ ಬದಲು ನನ್ನ ಸ್ವಾಮಿಗೆ ಬಾಣ ಬಡಿದ ವಿಷಯ ತಿಳಿಯಿತು. ಅದನ್ನು ನೋಡಿ ಆತನಿಗೂ ಅತೀವ ದುಃಖವಾಯಿತು. ಪಶ್ಚಾತ್ತಾಪ ಪಡುತ್ತ ಆತ ಸ್ವಾಮಿಯ ಹತ್ತಿರ ಬರುತ್ತಿದ್ದಂತೆ ಭಯಗೊಂಡ ನಾನು ಆಕಾಶದತ್ತ ಹಾರಿ ನನ್ನ ಸ್ವಾಮಿಯ ಮೃತ ದೇಹವನ್ನು ನೋಡತೊಡಗಿದೆ. ಬೇಡನು ಕಟ್ಟಿಗೆಯನ್ನು ಒಟ್ಟು ಮಾಡಿ ಚಿತೆ ಮಾಡಿದ. ಚಿತೆಯ ಮೇಲೆ ನನ್ನ ಸ್ವಾಮಿಯನ್ನಿಟ್ಟು ಬೆಂಕಿಯಿಟ್ಟ. ಆ ಚಿತಾಗ್ನಿ ನನಗೆ ದಾವಾನಿಲಕ್ಕಿಂತಲೂ ಭಯಂಕರವಾಗಿ ಗೋಚರಿಸಿತು. ದುಃಖ ಮತ್ತು ವಿಯೋಗದಿಂದ ಕೂಡಿದ ನನಗೆ ಜೀವನವೇ ಅಸಹನೀಯವಾಯಿತು. ಪತಿಯ ವಿರಹವನ್ನು ತಾಳಲಾರದೆ ಆ ಚಿತೆಯಲ್ಲಿ ನಾನೂ ಹಾರಿದೆ. ಆದರೆ ಸುಡುವ ಬದಲು ಆ ಅಗ್ನಿ ನನಗೆ ಹಿಮದಂತೆ ತಂಪನ್ನೇ ಕೊಟ್ಟಿತು!! ನಾನು ನನ್ನ ಸ್ವಾಮಿಯ ಹತ್ತಿರವೇ ಇದ್ದೆ. ಹೇ ಪ್ರಿಯಸಖಿ ಸಾರಸಿಕಾ... ನಿನಗೆ ಈಗಲಾದರೂ ಅರ್ಥವಾಯಿತೆ? ನಾನು ನನ್ನ ಹಿಂದಿನ ಜನ್ಮದಲ್ಲಿ ಪತಿಯ ಜೊತೆ ಸಹಗಮನ ಮಾಡಿದ ಮಹಾಸತಿ ಎಂದು".

ತರಂಗವತಿ ಹೇಳಿದ ಆಕೆಯ ಈ ಪೂರ್ವ ಜನ್ಮದ ಕಥೆಯನ್ನು ಕೇಳಿ ಸಾರಸಿಕಾಳ ಕಣ್ಣಲ್ಲೂ ನೀರು ಕಟ್ಟೆಯೊಡೆಯುತ್ತದೆ. ತನ್ನ ಒಡತಿಯ ಪ್ರೇಮಗಾಥೆ ದುಃಖದಲ್ಲಿ ಅಂತ್ಯಗೊಂಡಿದ್ದನ್ನು ಕೇಳಿ ಒಮ್ಮೆ ಶೂನ್ಯವಾದ ಮನಸ್ಸಿನಿಂದ ತಕ್ಷಣ ಜಾಗೃತಳಾಗಿ ದುಃಖದಲ್ಲಿದ್ದ ತನ್ನ ಸಂಗಾತಿಯನ್ನು ಸಾಂತ್ವನಗೊಳಿಸುತ್ತಾಳೆ. "ಪರಮಾತ್ಮ ಖಂಡಿತವಾಗಿಯೂ ನಿನ್ನ ಮೇಲೆ ಕರುಣೆಯನ್ನು ತೋರಿ ನಿನ್ನ ಪ್ರಿಯನೊಡನೆ ಭೇಟಿ ಮಾಡಿಸುತ್ತಾನೆ" ಎಂದು ಹೇಳಿ ತರಂಗವತಿಯ ಮನಕ್ಕೆ ಧೈರ್ಯ ತುಂಬುತ್ತಾಳೆ.

ಮನೆಗೆ ಬಂದ ತರಂಗವತಿ ತನ್ನ ಹಿಂದಿನ ಜನ್ಮದಲ್ಲಿ ಘಟಿಸಿದ ಅನೇಕ ಘಟನಾವಳಿಗಳ ಅದೆಷ್ಟೋ ಚಿತ್ರಗಳನ್ನು ತನ್ನ ಕೈಯಿಂದ ಸ್ಫುಟವಾಗಿ, ಸುಂದರವಾಗಿ ಬಿಡಿಸುತ್ತಾಳೆ. ಈ ಚಿತ್ರಗಳಲ್ಲಿ ಬಾಣತಾಗಿ ಸತ್ತು ಬಿದ್ದಿರುವ ಚಕೋರ ಹಾಗೂ ಪತಿಯ ಜೊತೆ ಸುಡುತ್ತಲಿರುವ ಚಿತೆಯೊಳಗೆ ಹಾರುವ ಚಕೋರಿಯ ಚಿತ್ರವೂ ಇತ್ತು. ಆಕೆ ತನಗನಿಸಿದ ಎಲ್ಲ ಚಿತ್ರಗಳನ್ನು ಬಿಡಿಸಿ ಮುಗಿಸುವಷ್ಟರಲ್ಲಿಯೇ ಕಾರ್ತೀಕ ಪೂರ್ಣಿಮೆ ಬರುತ್ತದೆ.

ತರಂಗವತಿ ವತ್ಸದೇಶದ ಕೌಶಾಂಬಿ ನಗರದ ವಣಿಕ ಶ್ರೇಷ್ಠನಾದ ವೃಷಭಸೇನನ ಒಬ್ಬಳೇ ಮಗಳು. ಅದೂ ಎಂಟು ಗಂಡು ಮಕ್ಕಳು ಹುಟ್ಟಿದ ನಂತರ ಯಮುನಾ ನದಿಗೆ ವಿಧಿವತ್ತಾಗಿ ಪ್ರಾರ್ಥನೆಮಾಡಿ ಬೇಡಿ ಪಡೆದ ಮುದ್ದಿನ ಕುವರಿ. ಅವನ ಪ್ರಾಸಾಧಿಕದ ಮುಖ್ಯ ದ್ವಾರದ ಎದುರೇ ಇರುವ ಸುಂದರ ಪ್ರಾಂಗಣದಲ್ಲಿ ದೇವಸ್ಥಾನವಿತ್ತು. ಕಾರ್ತೀಕ ಪೂರ್ಣಿಮೆಯ ದಿನ ನಗರದ ಎಲ್ಲ ಜನರೂ ಈ ದೇವಸ್ಥಾನಕ್ಕೆ ಭೇಟಿ ನೀಡಿ ಸೇವೆ ನಡೆಸುತ್ತಿದ್ದರು. ಅದೇ ದಿನ ಪ್ರಾಂಗಣದಲ್ಲಿ, ದೇವಸ್ಥಾನದ ತುಸು ದೂರ ತರಂಗವತಿಯು ತಾನು ಚಿತ್ರಿಸಿದ ಚಿತ್ರಗಳನ್ನು ಕಟ್ಟಿಗೆಯ ಪಟ್ಟಿಗಳಿಂದ ರಚಿತವಾದ ಪರದೆಯ ಮೇಲೆ ಅಂಟಿಸಿಟ್ಟು ಪ್ರದರ್ಶನಕ್ಕಿಟ್ಟಳು. ಈ ಚಿತ್ರಗಳನ್ನು ನೋಡುತ್ತಿರುವಾಗ ಜನರ ಮನೋಭಾವದಿಂದ ಮುಖದಲ್ಲಾಗುವ ಬದಲಾವಣೆಗಳನ್ನು ನಿರೀಕ್ಷಿಸಲು ತನ್ನ ಸಖಿ ಸಾರಸಿಕಾಳಿಗೆ ಚಿತ್ರದ ಬಳಿಯಲ್ಲಿಯೇ ಇರಲು ಹೇಳಿದಳು. ಈ ಉಪಾಯದಿಂದ ಅವಳು ಅಜ್ಞಾತನಾಗಿದ್ದ ತನ್ನ ಪತಿಯನ್ನು ಶೋಧಿಸಲು ಹವಣಿಸಿದ್ದಳು. ಆಕೆಯ ಪೂರ್ವ ಜನ್ಮದ ಪ್ರಿಯತಮ ಈ ಜನ್ಮದಲ್ಲೂ ಮನುಷ್ಯ ಜನ್ಮವನ್ನೇ ಧರಿಸಿದ್ದಾನೆ ಹಾಗೂ ಆತನ ಜನ್ಮ ಕೌಶಾಂಬಿ ನಗರದಲ್ಲಿಯೇ ಆಗಿದೆ ಎಂದು ಆಕೆ ದೃಢವಾಗಿ ನಂಬಿದ್ದಳು.

ಹುಣ್ಣಿಮೆಯ ರಾತ್ರಿ ಕಳೆದು ಪ್ರಾತಃಕಾಲವಾಗುತ್ತಿದ್ದಂತೆ ಸಾರಸಿಕಾ ತರಂಗವತಿಯ ಬಳಿಗೆ ಓಡುತ್ತಲೇ ಬರುತ್ತಾಳೆ. ಆಕೆಯ ಹಿಂದಡಗಿ ತನ್ನೆರಡೂ ಕೈಗಳಿಂದ ಆಕೆಯ ಕಣ್ಣುಗಳನ್ನು ಮುಚ್ಚಿ ಕಿವಿಯ ಬಳಿ ಮುಖ ಒಯ್ದು, "ಸಖೀ, ನಿನ್ನ ಸ್ವಾಮಿ ಸಿಕ್ಕಿದ್ದಾರೆ. ಶರದ್ ಋತುವಿನ ಚಂದ್ರನ ಮುಖದಂತೆ ಆತನ ಮುಖ ಪ್ರಕಾಶಮಾನವಾಗಿದೆ. ನಿನ್ನ ಆಶೆ ಇನ್ನು ಕೆಲದಿನಗಳಲ್ಲೇ ಫಲಪ್ರದವಾಗಲಿದೆ. ಇದು ನಮ್ಮ ಭಾಗ್ಯವಲ್ಲವೇ?" ಎಂದು ಪಿಸುಗುಡುತ್ತಾಳೆ.

ಅದನ್ನು ಕೇಳುತ್ತಿದ್ದಂತೆ ತರಂಗವತಿ ಆನಂದ ಸಾಗರದಲ್ಲಿ ಮುಳುಗೇಳುತ್ತಾಳೆ. "ನೀನು ನನ್ನ

ಸ್ವಾಮಿಯನ್ನು ಹೇಗೆ ಶೋಧಿಸಿದೆ? ನನಗೆ ಸವಿಸ್ತಾರವಾಗಿ ಹೇಳು ಸಾರಸಿಕಾ" ಎಂದು ಒಂದೇ ಉಸಿರಿನಲ್ಲಿ ಕೇಳುತ್ತಾಳೆ.

ಆಗ ಸಾರಸಿಕಾ ಹೇಳತೊಡಗುತ್ತಾಳೆ. "ಚಂದ್ರನು ತನ್ನ ಬೆಳದಿಂಗಳನ್ನು ನಗರದ ಮೇಲೆ ಚೆಲ್ಲತೊಡಗಿದಂತೆ ಜನರು ಸಮೂಹ ಸಮೂಹವಾಗಿ ಬಂದು ನೀನು ಬಿಡಿಸಿದ ಚಿತ್ರವನ್ನು ನೋಡತೊಡಗಿದರು. ಆ ಎಲ್ಲ ಜನರ ಕಡೆಗೂ ನಾನು ಧ್ಯಾನಪೂರ್ವಕವಾಗಿ ನೋಡುತ್ತಿದ್ದೆ. ಅಷ್ಟರಲ್ಲೆ ಸಮಾನ ವಯಸ್ಕರಾದ ಕೆಲವು ಯುವಕರ ಗುಂಪೊಂದು ಅಲ್ಲಿಗೆ ಬಂದು ಚಿತ್ರಗಳನ್ನು ನೋಡತೊಡಗಿತು. ಆ ಗುಂಪಿನ ಮಧ್ಯದಲ್ಲಿದ್ದ ಯುವಕ ಹುಣ್ಣಿಮೆಯ ಚಂದ್ರನಿಗಿಂತಲೂ ಹೆಚ್ಚು ಶೋಭಾಯಮಾನವಾಗಿ ಕಾಣುತ್ತಿದ್ದ. ಚಿತ್ರಗಳನ್ನು ನೋಡುತ್ತಿದ್ದಂತೆ ಆತ ಪ್ರಜ್ಞೆ ತಪ್ಪಿಬಿದ್ದ. ಅವನ ಮಿತ್ರರು ಅವನನ್ನೆತ್ತಿಕೊಂಡು ತುಸುದೂರ ಒಯ್ದು ಗಾಳಿಯ ಪೂರೈಕೆಯಾಗುವಂತೆ ಮಾಡಿದರು. ನಾನೂ ಅವರ ಹಿಂದೆಯೇ ಹೋದೆ.

ಪ್ರಜ್ಞೆ ಬರುತ್ತಿದ್ದಂತೆ ಆತ ಏನು ಹೇಳಿದ ಗೊತ್ತೆ: 'ಹೇ ಪ್ರಿಯೆ, ನೀನು ಈಗ ಎಲ್ಲಿರುವೆ? ನಾವು ಗಂಗಾ ನದಿಯ ತಟದಲ್ಲಿ ಚಕೋರ ಚಕೋರಿಯ ರೂಪದಲ್ಲಿ ವಾಸಿಸುತ್ತಿದ್ದಾಗ ನೀನು ನನ್ನ ಸ್ನೇಹದ ನಿಧಿಯಾಗಿದ್ದೆ. ಈಗ ನೀನಿಲ್ಲದೆ ನಾನು ಹುಚ್ಚನಾಗಿದ್ದೇನೆ. ಯಾವಾಗಲೂ ನನ್ನ ಹಿಂದೆಯೇ ಇರುತ್ತಿದ್ದ ನೀನು ಸಾವಿನಲ್ಲಿಯೂ ನನ್ನ ಹಿಂದೆಯೇ ಬಂದೆ! ಮತ್ತು ಈಗ....' ಈ-ರೀತಿ ರೋದಿಸುತ್ತಿರುವಾಗ ಆತನ ಗೆಳೆಯರು 'ನಿನ್ನ ಬುದ್ಧಿ ಹಾಳಾಗಿದೆಯೇನು? ನೀನು ಹೀಗೆ ಹುಚ್ಚನ ಹಾಗೆ ಶೋಕಿಸುತ್ತಿದ್ದೀಯಲ್ಲ' ಎಂದು ಕೇಳಿದರು. ಆಗ ಆತ 'ನನ್ನ ಪ್ರಜ್ಞೆ, ಬುದ್ಧಿ ಎಲ್ಲವೂ ಸರಿಯಾಗಿದೆ ಮಿತ್ರರೆ. ಇಲ್ಲಿ ಚಕೋರ ಚಕೋರಿ ಪಕ್ಷಿಗಳ ಕತೆ ಚಿತ್ರಿಸಲ್ಪಟ್ಟು ಇಡಲಾಗಿದೆ. ಇದೆಲ್ಲವೂ ನನ್ನ ಹಿಂದಿನ ಜನ್ಮದ ಕತೆ' ಎಂದ.

ಗೆಳೆಯರಿಗೆ ಆತನ ಮಾತಿನಲ್ಲಿ ವಿಶ್ವಾಸ ಬರವಿಲ್ಲ. ಅವನು ಪುನಃ ಶೋಕದಲ್ಲಿ ತಲ್ಲೀನನಾಗಿ ದೀನಸ್ವರದಿಂದ ಕೂಗತೊಡಗಿದ. 'ನನ್ನ ಪ್ರಿಯೆ, ನನ್ನ ಕಾರಣವಾಗಿ ಎಲ್ಲೋ ವ್ಯಾಕುಲಳಾಗಿದ್ದಾಳೆ. ಗೆಳೆಯರೆ, ನೀವು ಈ ಚಿತ್ರ ಬಿಡಿಸಿದವರಾರು ಎಂಬುದನ್ನು ನನಗಾಗಿಯಾದರೂ ಪತ್ತೆ ಹಚ್ಚುವಿರಾ? ನನ್ನ ಹಿಂದಿನ ಜನ್ಮದ ಪ್ರಿಯಕರಿಯೇ ಈ ಚಿತ್ರಗಳನ್ನು ಬಿಡಿಸಿರಬೇಕು. ಇಲ್ಲವೇ ಬೇರೆ ಚಿತ್ರಕಾರರಲ್ಲಿ ಹೇಳಿ ಇದನ್ನು ಬರೆಯಿಸಿರಬೇಕು'. ಹೀಗೆಂದು ನಿನ್ನ ಪ್ರಿಯತಮ ತನ್ನ ಮಿತ್ರರಲ್ಲಿ ಅರಿಕೆ ಮಾಡಿಕೊಂಡ" ಎಂದು ಸಾರಸಿಕಾ ವಿವರಿಸಿದಳು.

ಕತೆ ಸಾಗುತ್ತಿದ್ದಂತೆ ಪ್ರಸನ್ನವದನಳಾದ ತರಂಗವತಿ ಕಾತುರಳಾಗಿ "ಮುಂದೇನಾಯಿತು ಗೆಳತಿ? ನನ್ನ ಪ್ರಿಯತಮ ಎಲ್ಲಿದ್ದಾನೆ?" ಎಂದು ಕೇಳುತ್ತಾಳೆ. "ಅವರ ಹತ್ತಿರದಲ್ಲಿಯೇ ನಿಂತಿದ್ದ ನಾನು ನನ್ನ ಕರ್ತವ್ಯದ ನೆನಪಾಗಿ ಚಿತ್ರದ ಹತ್ತಿರ ಬಂದು ನಿಂತೆ. ಆಗ ನನ್ನಲ್ಲಿಗೆ ಒಬ್ಬ ಬಂದು, ಇಡೀ ನಗರವನ್ನೇ ಆಶ್ಚರ್ಯಚಕಿತಗೊಳಿಸಿದ ಈ ಚಿತ್ರಗಳನ್ನು ಬಿಡಿಸಿದ ಚಿತ್ರಕಾರ ಯಾರು? ಎಂದು ಕೇಳಿದ. 'ನಗರಸೇಠನ ಪುತ್ರಿ ತರಂಗವತಿಯೇ ಈ ಚಿತ್ರಗಳನ್ನು ಬಿಡಿಸಿ ಇಲ್ಲಿ ವಿಚಿತ್ರ ಮಾಡಿದ್ದಾಳೆ. ಅಷ್ಟೇ ಅಲ್ಲ, ಈ ಚಿತ್ರಗಳು ಕಾಲ್ಪನಿಕವಾದವುಗಳಲ್ಲ, ಸತ್ಯವಾದವು' ಎಂದು ಹೇಳಿದೆ. ಜೊತೆಗೆ ಆಗಲೇ ನಾನು ಆ ಹುಣ್ಣಿಮೆಯ ಚಂದ್ರನಂತಿದ್ದ ಹುಡುಗನ ಬಗ್ಗೆಯೂ ಕೇಳಿದೆ. ಆತ ತನ್ನ ಗುಂಪನ್ನು ಸೇರಲು ಹಿಂದಿರುಗಿದಾಗ ನಾನು ಕೂಡ ಅಲ್ಲಿ ಮುಂದೆ ನಡೆಯುವ ಸಂಗತಿಗಳನ್ನರಿಯಲು ಅವನ ಹಿಂದೆಯೇ ಹೋದೆ. ಆ ಯುವಕ ನಿನ್ನ ಪ್ರಿಯತಮನಲ್ಲಿಗೆ ಹೋಗಿ, 'ಮಿತ್ರನೇ, ಚಿಂತೆ ಮಾಡಬೇಡ. ನಿನ್ನ ಪ್ರಿಯತಮೆಯ ಪತ್ತೆಯಾಗಿದೆ. ಆಕೆ ವೃಷಭಸೇನ ನಗರಸೇಠನ ಪುತ್ರಿ ತರಂಗವತಿ. ಅವಳ ಆಜ್ಞೆಗನುಸರಿಸಿಯೇ ಇಲ್ಲಿ ಈ ಚಿತ್ರಗಳನ್ನು ಇರಿಸಲಾಗಿದೆ. ಅವಳ ಗೆಳತಿಯ ಮಾತಿನಿಂದ ಈ ಚಿತ್ರಗಳು ನಿನ್ನ ಪೂರ್ವಜನ್ಮದ ನಿಜಕಥೆಯೆಂಬುದು ದೃಢವಾಗಿದೆ' ಎಂದ.

"ತರಂಗವತಿ, ಈ ಮಾತುಗಳನ್ನು ಕೇಳುತ್ತಲೇ ನಿನ್ನ ಪ್ರಿಯತಮನ ಮುಖಾರವಿಂದ ಕಮಲದಂತೆ ಅರಳಿತು. ಅನಂತರ ಅವರೆಲ್ಲರೂ ಆ ಸ್ಥಳದಿಂದ ತಮ್ಮ ಮನೆಗೆ ತೆರಳಿದರು. ಈ ಎಲ್ಲಾ ಮಾತುಗಳ ಸತ್ಯಾಸತ್ಯತೆಯನ್ನರಿಯಲು ನಾನು ಅವರ ಹಿಂದೆಯೇ ನಡೆದೆ".

ಸಾರಸಿಕಾ ಕತೆಯನ್ನು ಮುಂದುವರಿಸುತ್ತ, "ಅವನ ತಂದೆಯ ಹೆಸರು ಧನದೇವ ಸೇಠ ಅಂತ. ಅವನ ಹೆಸರು ಪದ್ಮದೇವನೆಂದು" ಎಂದು ಹೇಳಿ ತರಂಗವತಿಯನ್ನು ಅಲ್ಲಿಯೇ ಬಿಟ್ಟು ಹೊರನಡೆಯುತ್ತಾಳೆ.

ಆದರೆ ಕೆಲವು ಗಂಟೆಗಳ ನಂತರ ಸಾರಸಿಕಾ ಪುನಃ ತರಂಗವತಿಯಲ್ಲಿಗೆ ಬಂದು, "ಧನದೇವ ಸೇಠರು ತನ್ನ ಪುತ್ರನ ವಿವಾಹದ ಪ್ರಸ್ತಾಪವನ್ನು ನಿನ್ನ ತಂದೆಯವರ ಬಳಿ ತೆಗೆದುಕೊಂಡು ಬಂದಿದ್ದರು ಗೆಳತಿ. ಆದರೆ ನಗರಸೇಠರು ಆ ಪ್ರಸ್ತಾಪವನ್ನು ತಿರಸ್ಕರಿಸಿದರು. ಯಾವ ವ್ಯಕ್ತಿ ವ್ಯಾಪಾರದ ಸಲುವಾಗಿ ಪರದೇಶದಲ್ಲಿರುತ್ತಾನೋ, ಮನೆಯಲ್ಲಿರುವುದು ಅಪರೂಪವೊ ಅಂಥವನಿಗೆ ನಾನು ನನ್ನ ಮಗಳನ್ನು ಹೇಗೆ ಕೊಡಲಿ? ಎಂದು ನಿನ್ನ ತಂದೆಯವರು ಪದ್ಮದೇವನ ತಂದೆಯ ಹತ್ತಿರ ಕೇಳಿದರು" ಎಂದು ಇನ್ನೊಂದು ದುಃಖಸ್ಫೋಟವಾಗುವ ಸುದ್ದಿಯನ್ನೇ ತಂದಳು.

ಅದನ್ನು ಕೇಳಿದ ತರಂಗವತಿ ಅಳುತ್ತಳುತ್ತ "ಪಕ್ಷಿ ಜೀವನದಲ್ಲಿ ನಾನು ಅವನೊಟ್ಟಿಗೆ ಮೃತ್ಯುಪಾಶದಲ್ಲಿ ಕೂಡ ಸಮಾವೇಶಗೊಂಡಿದ್ದೆ. ಈಗ ಮಾನವ ಜನ್ಮದಲ್ಲಿ ಅವನಿಲ್ಲದೆ ನಾನು ಹೇಗೆ ಬದುಕಲಿ. ಸಾರಸಿಕಾ, ನೀನು ಅವನಲ್ಲಿಗೆ ಹೋಗು ಮತ್ತು ನಾನು ಬರೆದ ಈ ಪತ್ರವನ್ನು ಅವನಿಗೊಪ್ಪಿಸಿ, 'ಸ್ವಾಮಿಯನ್ನು ಅನುಸರಿಸಲು ಯಾರು ಚಕೋರಿ ಜೀವನವನ್ನು ಅಂತ್ಯಗೊಳಿಸಿಕೊಂಡಿದ್ದಳೋ ಅವಳೇ



ಈಗ ಈ ಜನ್ಮದಲ್ಲಿ ನಗರಸೇಠನ ಪುತ್ರಿಯಾಗಿ ಜನಿಸಿದ್ದಾಳೆ. ನಿಮ್ಮನ್ನು ಶೋಧಿಸಲಿಕ್ಕಾಗಿಯೇ ಚಿತ್ರದ ಪ್ರದರ್ಶನ ಏರ್ಪಡಿಸಲಾಗಿತ್ತು' ಎಂದು ಆತನಲ್ಲಿ ಹೇಳು" ಎಂದು ಬಿಕ್ಕಳಿಕೆಯ ನಡುವೆ ನುಡಿದಳು.

ಸಾರಸಿಕಾ ಹಾಗೆಯೇ ಮಾಡಿದಳು. ಅವನಲ್ಲಿಗೆ ಹೋಗಿ ಹಿಂತಿರುಗಿದ ನಂತರ ತರಂಗವತಿಯಿದ್ದಲ್ಲಿಗೆ ಹೋಗಿ ಆಕೆಯ ಪ್ರಿಯತಮ ನೀಡಿದ ಸಂದೇಶವನ್ನು ತಲುಪಿಸುತ್ತಾಳೆ. ಈ ಪತ್ರದಲ್ಲಿ ಪದ್ಮದೇವನು ತನ್ನ ಹಿಂದಿನ ಜನ್ಮದ ಎಲ್ಲ ಕಥೆಯನ್ನು ಸವಿಸ್ತಾರವಾಗಿ ಬರೆದಿದ್ದನು.

ರಾತ್ರಿಯ ನೀರವತೆಯಲ್ಲಿ ವೇದನೆ ತುಂಬಿ ಸಾರಸಿಕಾಳಿಗೆ ಅನುರೋಧ ತುಂಬಿದ ಸ್ವರದಲ್ಲಿ "ನನ್ನ ಮನಸ್ಸು ಕೇಳುತ್ತಿಲ್ಲ ಸಖಿ. ನೀನು ನನ್ನನ್ನು ಈಗಲೆ ಅವನ ಮನೆಗೆ ಕರೆದುಕೊಂಡು ಹೋಗು. ಹಿಂದಿನ ಜನ್ಮದಲ್ಲಿ ಹೇಗೂ ಆತ ನನ್ನ ಪತಿಯಾಗಿದ್ದುದರಿಂದ ಅಲ್ಲಿ ಹೋಗುವುದರ ತಪ್ಪೇನಿದೆ?" ಎಂದು ತರಂಗವತಿ ಪದ್ಮದೇವನ ಹತ್ತಿರ ಕರೆದುಕೊಂಡು ಹೋಗಲು ಹಠ ಹಿಡಿದಳು.

ಇದು ಕುಲದ ಮರ್ಯಾದೆಯ ಪ್ರಶ್ನೆಯೆಂದು ಸ್ವಲ್ಪ ತಾಳ್ಮೆ ವಹಿಸಿದರೆ ಆಕೆಯ ತಂದೆ ಕ್ರಮೇಣ ಆಕೆಯ ಮಾತಿಗೆ ಒಪ್ಪಿಯೇ ಒಪ್ಪುತ್ತಾರೆಂದು ಅವರನ್ನು ಒಲಿಸಿಕೊಳ್ಳುವ ಪ್ರಯತ್ನದಲ್ಲಿರಬೇಕೆಂದು ಸಾರಸಿಕಾ ತರಂಗವತಿಗೆ ಪರಿಪರಿಯಾಗಿ ಹೇಳಿದರೂ ತರಂಗವತಿ ಕೇಳಲಿಲ್ಲ. ಕೊನೆಗೂ ಪದ್ಮದೇವನ ನಿವಾಸಸ್ಥಾನದ ವರೆಗೂ ಅವಳಿಗೆ ಜೊತೆ ಕೊಡಲು ಸಾರಸಿಕಾ ತಯಾರಾದಳು. ಇಬ್ಬರೂ ಒಟ್ಟಿಗೆ ಮನೆಯ ಹಿಂದಿನ ಬಾಗಿಲಿನಿಂದ ಹೊರಬಿದ್ದು ಪದ್ಮದೇವನ ಮನೆ ತಲುಪಿದರು.

ಅವಳಿಗಾಗಿಯೆ ಹಗಲಿರುಳು ಚಿಂತಿಸುತ್ತಿದ್ದ ಪದ್ಮದೇವ ಅವಳನ್ನು ನೋಡುತ್ತಿದ್ದಂತೆಯೇ ಆಕೆಯನ್ನು ತಕ್ಷಣ ತನ್ನ ಹತ್ತಿರ ಸೆಳೆದುಕೊಂಡು ತನ್ನ ಬಾಹುಗಳಲ್ಲಿ ಬಂಧಿಸಿದ. ತಂದೆಯ ಮನೆಯಿಂದ ಹೊರಬಿದ್ದ ತರಂಗವತಿಗೆ ಹಿಂದಿರುಗಿ ಹೋಗುವ ಪ್ರಶ್ನೆಯೇ ಉದ್ಭವಿಸಲಿಲ್ಲ. ಅದೇ ದಿನ ಇಬ್ಬರೂ ಕೂಡಿ ನಗರ ಬಿಡಲು ನಿಶ್ಚಯಿಸಿದರು. ಸುದೈವದಿಂದ ಯಮುನಾ ನದಿಯ ತಟದಲ್ಲಿ ಅವರಿಗೆ ಒಂದು ದೋಣಿಯೂ ಸಿಕ್ಕಿತು. ಪದ್ಮದೇವನು ತನ್ನ ಕೈಯಲ್ಲಿ ದೋಣಿಯ ದಂಡ ಹಿಡಿದ. ಆಗ ತೆರೆಗಳು ಬಲವಾಗಿದ್ದರಿಂದ ದೋಣಿ ತೀವ್ರವಾಗಿ ಚಲಿಸಿ ನದಿಯ ಇನ್ನೊಂದು ತಟವನ್ನು ಸೇರಿತು.

ಯಮುನೆಯ ಆ ಪವಿತ್ರ ಜಲದ ಸಮೀಪದಲ್ಲಿ ಭಗವಂತನೇ ಸಾಕ್ಷಿಯೆಂದು ಪರಿಗಣಿಸಿ ಅವರಿಬ್ಬರೂ ತಮ್ಮೊಳಗೆ ಗಂಧರ್ವ ವಿವಾಹವಾದರು. ಅಲ್ಲಿಂದ ಮುಂದೆ ಚಲಿಸಿದ ದೋಣಿ ಯಮುನಾ ನದಿಯನ್ನು ಬಿಟ್ಟು ಗಂಗಾನದಿಯನ್ನು ಸೇರಿತು. ಹಿಂದಿನ ಜನ್ಮದಲ್ಲಿನ ಹಾಗೆ ಈ ಜನ್ಮದಲ್ಲೂ ಅವರ ಪ್ರೇಮ ಜೀವನ ಅದೇ ನದಿಯ ತಟದಲ್ಲಿ ಕಳೆಯುವ ಸುದೈವ ಅವರ ಪಾಲಿಗೆ ಒದಗಿ ಬಂದಿತ್ತು.

★ ★ ★

ರಾತ್ರಿ ಕಳೆದು ಸೂರ್ಯೋದಯವಾಗುತ್ತಿತ್ತು. ಪದ್ಮದೇವ ಪೂರ್ವ ದಿಗಂತವನ್ನು ದಿಟ್ಟಿಸುತ್ತ, "ಪ್ರಿಯೆ, ಸೂರ್ಯ ಉದಯಿಸುತ್ತಿದ್ದಾನೆ. ದಕ್ಷಿಣ ದಿಕ್ಕಿನಲ್ಲಿ ಶಂಖಶುಭ್ರ ತಟದಲ್ಲಿ ನಾವು ವಾಸಿಸೋಣ" ಎಂದ.

ಆ ಪ್ರಕಾರ ಅವರು ದೋಣಿಯಲ್ಲಿ ಅಲ್ಲಿಗೆ ಹೋಗಿ ದಡ ಸೇರಿದರು.

ಆದರೆ.....

ಅವರು ಎರಡು ಹೆಜ್ಜೆ ಮುಂದಕ್ಕಿಟ್ಟಿದ್ದರೊ ಇಲ್ಲವೊ, ಹತ್ತಿರದ ದಟ್ಟ ಅರಣ್ಯದಿಂದ ಯಮದೂತರ ಹಾಗೆ ಆರ್ಭಟಿಸುತ್ತ ಕೂಗುತ್ತ, ಕೇಕೆ ಹಾಕುತ್ತ ಬಂದ ಡಕಾಯಿತರ ಗುಂಪು ಇವರ ಮೇಲೆ ಆಕ್ರಮಣ ಎಸಗಿತು. ದಟ್ಟಡವಿಯ ನಡುವೆ ಕಾಣುವ ಬೆಟ್ಟದ ಮೇಲಿರುವ ಸುಂದರವಾದ ಗುಹೆಯಲ್ಲಿ ಆ ಡಕಾಯಿತರ ವಾಸಸ್ಥಾನವಿತ್ತು. ಇವರಿಬ್ಬರನ್ನು ಹೆಡೆಮುರಿಗೆ ಕಟ್ಟಿ ಅವರು ಆ ಗುಹೆಗೆ ಒಯ್ದರು. ಗುಹೆಯ ಒಳಗೆ ಹೋಗುತ್ತಿದ್ದಂತೆ ಅಲ್ಲೊಂದು ದೇವಸ್ಥಾನವಿತ್ತು. ಅದನ್ನು ಕಂಡ ತಕ್ಷಣ ಅದು ಕಾಳಿಯ ದೇವಸ್ಥಾನವೆಂದು ಪದ್ಮದೇವ ಮತ್ತು ತರಂಗವತಿಗೆ ತಿಳಿಯಿತು.

ಆ ಗುಹೆಯಲ್ಲಿ ಸ್ವರ್ಗ ಮತ್ತು ನರಕಗಳೆರಡನ್ನು ನೋಡಬಹುದಾಗಿತ್ತು. ದೇವಲೋಕ ಇಳಿದಿಳಿದ ಇಬ್ಬರು ನಿವಾಸಿಗಳು ಅವರ ಗುಹೆಗೆ ಬಂದಿದ್ದಾರೆಂಬುದನ್ನು ತಿಳಿದು ಗುಹೆ

ಯಲ್ಲಿ ಬಂಧಿಸಲ್ಪಟ್ಟವರೆಲ್ಲ ಇವರನ್ನು ನೋಡಲು ಗುಹೆಯ ಮುಖ್ಯ ಮಾರ್ಗದಲ್ಲಿ ಕಾದು ನಿಂತಿದ್ದರು. ಅಲ್ಲಿ ಬಂಧಿತರಾಗಿದ್ದ ಜನರು ಈ ಸುಂದರ ದಂಪತಿಗಳನ್ನು ನೋಡಿ ಒಳಗೊಳಗೆ ಎದೆಯೊಡೆಯುವಂತೆ ಅತ್ತರು. ಅವರಿಬ್ಬರು ಮಾತ್ರ ಮುಖ ಬಾಗಿಸಿ ಮುಂದಕ್ಕೆ ನಡೆದರು.

ಗುಹೆಯ ಸರದಾರ ಅವರಿಬ್ಬರನ್ನೂ ಭಾವ ರಹಿತ ದೃಷ್ಟಿಯಿಂದೊಮ್ಮೆ ನೋಡಿದ. ಹತ್ತಿರ ಕುಳಿತ ಒಬ್ಬ ಡಕಾಯಿತನ ಕಿವಿಯಲ್ಲಿ "ಶರದೃತುವಿನಲ್ಲಿ ದೇವಿಗೆ ಕೊಡಬೇಕಾದ ಬಲಿಗೆ ಇವರಿಬ್ಬರೂ ಹೇಳಿ ಮಾಡಿಸಿದಂತಿದ್ದಾರೆ. ನವಮಿಯ ರಾತ್ರಿ ಇವರಿಬ್ಬರನ್ನೂ ಬಲಿಗೊಡೋಣ, ಅಲ್ಲಿಯವರೆಗೆ ಇವರು ಓಡಿ ಹೋಗದಂತೆ ರಾತ್ರಿ ತುಂಬಾ ಎಚ್ಚರದಿಂದ ನೋಡು" ಎಂದ. ಸರದಾರನ ಆಜ್ಞೆ ಪಾಲಿಸಲು ಆ ಡಕಾಯಿತ ಅವರಿಬ್ಬರನ್ನೂ ತನ್ನ ಕೋಣೆಗೆ ಕರೆದೊಯ್ದು. ಪದ್ಮದೇವನಿಗೆ ಮಾತ್ರ ಎಲ್ಲಿಗೂ ಯಾವುದೇ ರೀತಿಯಿಂದ ತಪ್ಪಿಸಿಕೊಂಡು ಹೋಗಲಾರದಂತೆ ಸರಿಯಾಗಿ ಕಟ್ಟಿಟ್ಟ. ಅವನ ಪಕ್ಕದಲ್ಲಿಯೇ ತರಂಗವತಿಯನ್ನು ಹಾಗೆಯೇ ಬಿಟ್ಟ.

ಆಗ ತರಂಗವತಿಯು ಅವಸರದಲ್ಲಿಯೇ ಆ ಡಾಕುವಿನ ಕಡೆಗೊಮ್ಮೆ ನೋಡಿ, "ಇವರು ನನ್ನ ಸ್ವಾಮಿ ಕೌಶಾಂಬಿ ನಗರದ ವ್ಯಾಪಾರಸ್ಥರ ಏಕಮಾತ್ರ ಪುತ್ರ. ನಾನು ಅಲ್ಲಿಯ ನಗರಸೇಠರ ಪುತ್ರಿ. ನೀವು ಎಷ್ಟು ಹಣ ಒಡವೆ ಕೇಳುತ್ತೀರೊ ಅಷ್ಟನ್ನು ನಾನು ನಿಮಗೆ ಕೊಡಿಸುತ್ತೇನೆ. ನಾನು ನಿಮಗೆ ಒಂದು ಪತ್ರವನ್ನು ಬರೆದು ಕೊಡುತ್ತೇನೆ. ಅದನ್ನು ನೀವು ನಿಮ್ಮ ಯಾವನೊಬ್ಬ ದೂತನ ಮುಖಾಂತರ ನನ್ನ ತಂದೆಯಲ್ಲಿಗೆ ರವಾನಿಸಿ. ಅಲ್ಲಿ ನೀವು ಬೇಡಿದಷ್ಟು ಹಣ ನಿಮಗೆ ಸಿಕ್ಕನಂತರ ನೀವು ನಮ್ಮನ್ನು ಬಂಧನದಿಂದ ಬಿಟ್ಟುಬಿಡಿ" ಎಂದು ದೈನ್ಯದಿಂದ ಬೇಡಿಕೊಂಡಳು.

ಆದರೆ ಆ ಡಕಾಯಿತ ಇವರ ಮಾತಿಗೆ ಸಮ್ಮತಿಸಲಿಲ್ಲ "ನಿಮ್ಮಿಬ್ಬರನ್ನೂ ದೇವಿಗೆ ಬಲಿಗೊಡುವುದೆಂದು ಸರದಾರರು ನಿಶ್ಚಯಿಸಿದ್ದಾರೆ. ನಿಶ್ಚಯಿಸಿರುವ ದಿನ ಬಲಿಗೊಡಲು ತಪ್ಪಿದರೆ ದೇವಿ ಸಿಟ್ಟಿಗೆದ್ದು ನಮ್ಮೆಲ್ಲರನ್ನೂ ನಾಶ ಮಾಡುತ್ತಾಳೆ. ಆ ದೇವಿಯನ್ನು ನಾವು ಹೇಗೆ ಅಸಂತುಷ್ಟಗೊಳಿಸುವುದು?" ಎಂದು ತರಂಗವತಿಯನ್ನು ಆತ ಕೇಳಿದ.

ಅದನ್ನು ಕೇಳುತ್ತಲೇ ತರಂಗವತಿ ಅಳತೊಡಗಿದಳು. ಇನ್ನೊಂದು ಸ್ಥಳದಲ್ಲಿ ಡಕಾಯಿತರು ಕೂಗುತ್ತಾ ಕುಣಿಯುತ್ತಾ ಆನಂದ ಪಡುತ್ತಿದ್ದರು. ಅಲ್ಲಿ ಖೈದಿಯಾಗಿದ್ದ ಇತರ ಜನರೆಲ್ಲ ತರಂಗವತಿಯ ಬಳಿ ಸೇರಿ "ನೀವು ಎಲ್ಲಿಂದ ಬಂದಿರಿ? ಈ ಡಕಾಯಿತರಿಂದ ಹೇಗೆ ಹಿಡಿಯಲ್ಪಟ್ಟಿರಿ? ಎಂದು ಕೇಳತೊಡಗಿದರು. ತರಂಗವತಿ ತನ್ನೆಲ್ಲ ಕತೆಯನ್ನು ಅವರೆದುರು ವಿವರಿಸಿ ಹೇಳಿದಳು. ಡಕಾಯಿತರಿಂದ ಹಿಡಿಯಲ್ಪಟ್ಟದ್ದು ಹೇಗೆ ಎಂಬುದರ ಜೊತೆ ತನ್ನ ಪೂರ್ವಜನ್ಮದ ಕತೆಯನ್ನೂ ಸಂಪೂರ್ಣವಾಗಿ ವಿವರಿಸಿದಳು. ಇವರನ್ನು ಪಹರೆ ಮಾಡುತ್ತಿದ್ದ ಆ ಡಕಾಯಿತ ಕೂಡ ತರಂಗವತಿ ಹೇಳುತ್ತಿದ್ದ ಈ ಎಲ್ಲ ವೃತ್ತಾಂತವನ್ನೂ ಕೇಳುತ್ತಿದ್ದ. ಅದನ್ನು ಕೇಳುತ್ತಿದ್ದಂತೆ ಆತ ಪದ್ಮದೇವನ ಹತ್ತಿರ ಬಂದು ಆತನ ಬಂಧನವನ್ನು ಬಿಚ್ಚಿ "ಈಗ ನೀವು ಏನೂ ಭಯಪಡಬೇಕಾಗಿಲ್ಲ. ನಾನು ನನ್ನ ಜೀವವನ್ನೇ ಬಲಿಗೊಟ್ಟು ನಿಮ್ಮನ್ನು ರಕ್ಷಿಸುತ್ತೇನೆ" ಎಂದ.

ಆ ದಿನ ಆಕಾಶದಲ್ಲಿ ಚಂದ್ರ ಮೂಡುತ್ತಿದ್ದಂತೆ ಗುಹೆಯಲ್ಲಿ ಡಕಾಯಿತರ ಕೂಗಾಟ ಕಿರುಚಾಟಗಳು ಗಗನಕ್ಕೇರಿದವು. ಆ ಜನರೆಲ್ಲ ಮದ್ಯ ಕುಡಿದು ಸಿಕ್ಕ ಸಿಕ್ಕಂತೆ ಕುಣಿಯುತ್ತಿದ್ದರು. ಅವರು ಹಾಗೆ ಕುಣಿದು ಕುಣಿದು ಆಯಾಸಗೊಂಡು ಈ ಜಗತ್ತಿನ ಪರಿವೆಯೇ ಇಲ್ಲ

ಈ ರಾತ್ರಿಗಳು

ಈ ನನ್ನ ರಾತ್ರಿಗಳು
ಮಿನುಗು ತಾರೆಗಳಿಗೆ ಮೈಚಾಚಿ,
ಚಂದಿರನ ಎದೆಯೊಳಿರಿಸಿ,
ನೂರಾಸೆ ಬರವಸೆಗಳ ಬಸಿರಲಿ
ಹೊತ್ತೂ ಕೊನೆಗೆ
ನೀರಸ ಅರ್ಥಹೀನ ದಿನಗಳ
ಪ್ರಸವಿಸಿ ಮಸಣ ಸೇರುತ್ತವೆ.

— ಮನಸ್ವಿನಿ

ವೆಂಬಂತೆ ಮಲಗಿದ ನಂತರ ರಕ್ಷಿಸುತ್ತೇನೆಂದು ವಚನಕೊಟ್ಟ, ಡಕಾಯಿತ ಪದ್ಮದೇವನಲ್ಲಿಗೆ ಬಂದು ಈಗ ನೀವು ಈ ಜಾಗ ಬಿಟ್ಟು ಹೊರ ನಡೆಯಿರಿ. ನಾನು ನಿಮ್ಮನ್ನು ಇಲ್ಲಿಂದ ದೂರ ಬಿಟ್ಟು ಬರುತ್ತೇನೆ" ಎಂದ.

ಅವರು ಗುಹೆಯಿಂದ ಹೊರಬಿದ್ದು ವನ ಮಾರ್ಗದಿಂದ ಕೆಲದೂರ ಕ್ರಮಿಸಿ ಬೇರೊಂದು ಸ್ಥಳಕ್ಕೆ ಆಗಮಿಸಿದರು. ಆಗ ಆ ಡಕಾಯಿತ ಇವರನ್ನುದ್ದೇಶಿಸಿ, "ಈಗ ನಿಮಗೆ ಹೆದರಿಕೆ ಅನ್ನುವ ಮಾತು ಹೋಯಿತು. ಇಲ್ಲೇ ಹತ್ತಿರ ದಲ್ಲೇ ಒಂದು ಊರಿದೆ. ನೀವು ಆ ಊರು ಸೇರಿ. ಸರದಾರನ ಆಜ್ಞಾಪಾಲಕನಾಗಿ ಗುಹೆ ಯೊಳಗೆ ನಾನು ನಿಮ್ಮನ್ನು ಬಂಧಿಸಿಟ್ಟೆ. ಅದ ಕ್ಕಾಗಿ ನೀವು ನನ್ನನ್ನು ಕ್ಷಮಿಸಬೇಕು" ಎಂದು ದೈನ್ಯತೆಯಿಂದ ಹೇಳುತ್ತ ಕೈ ಮುಗಿದು ನಿಂತ.

ಪದ್ಮದೇವ ಆತನನ್ನು ಎದೆಗಪ್ಪಿಕೊಂಡ. "ನೀವು ಈ ದಿನ ಸಾವಿನ ದವಡೆಯಿಂದ ನಮ್ಮನ್ನು ರಕ್ಷಿಸಿದ್ದೀರಿ. ಆದುದರಿಂದ ನಾನು ನಿಮಗೆ ಅಂತಃಕರಣ ಪೂರ್ವಕವಾಗಿ ಆಭಾರಿ ಯಾಗಿದ್ದೇನೆ. ನೀವೂ ನಮ್ಮ ಜೊತೆಗೆ ಬನ್ನಿರಿ. ಅಂದರೇನೆ ನೀವು ನಮಗೆ ಮಾಡಿದ ಉಪ ಕಾರಕ್ಕೆ ಪ್ರತ್ಯುಪಕಾರ ಮಾಡಿ ಋಣಮುಕ್ತರಾಗ ಬಹುದು" ಎಂದ.

ಪದ್ಮದೇವನ ಈ ಮಾತಿಗೆ ಉತ್ತರಿಸುತ್ತ ಡಕಾ ಯಿತ "ಸಮಯ ಬಂದಾಗ ನೋಡುವಾ; ಈಗ ನೀವು ಆದಷ್ಟು ಬೇಗ ಇಲ್ಲಿಂದ ಹೊರಡಿ" ಎಂದ.

ಬಯಲು ಪ್ರದೇಶವನ್ನು ಬಿಟ್ಟು ತುಂಬಾ ದೂರ ನಡೆದ ನಂತರ ಪದ್ಮದೇವ ಮತ್ತು ತರಂಗವತಿಯರಿಬ್ಬರೂ ಒಂದು ದೊಡ್ಡ ಕೆರೆಯ ಹತ್ತಿರ ಬಂದು ತಲುಪಿದರು. ಆ ಕೆರೆಯ ಮತ್ತೊಂದು ಪಕ್ಕದಲ್ಲಿ ಡಕಾಯಿತ ತೋರಿಸಿದ ಊರು ಕಾಣಿಸುತ್ತಿತ್ತು. ಅವರು ಆ ಊರನ್ನು ಸೇರಿದಾಗ ಪ್ರಾರಂಭದಲ್ಲಿಯೇ ಅವರಿಗೆ ಒಂದು ಮಂದಿರ ಕಾಣಿಸಿತು. ಅವರು ಆ ಮಂದಿರದಲ್ಲಿ ಕುಳಿತು ಸಮಾಧಾನದ ನಿಟ್ಟು ಸಿರನ್ನು ಬಿಡುತ್ತ ವಿಶ್ರಮಿಸಿದರು. ಆಗ ದೂರ ದಿಂದ ಸೈಂಧವದ ಮೇಲೆ ಕುಳಿತು ಒಬ್ಬ ಸುಂದರ ಯುವಕ ಹಿಂದೆ ಮುಂದೆ ಕೆಲವು ಸಿಪಾಯಿಗಳೊಟ್ಟಿಗೆ ಬರುತ್ತಿರುವುದು ಕಾಣಿ ಸಿತು. ಪದ್ಮದೇವನಿಗೆ ಆತ ಕಲ್ಮಾಷಹಸ್ತಿ ಎಂದು ಆತನ ಗುರುತು ಸಿಕ್ಕಿತು. ಆತ ಪದ್ಮ ದೇವನನ್ನು ನೋಡುತ್ತಲೇ ಕುದುರೆಯಿಂದಿಳಿದು ಆತನ ಕಾಲಿಗೆರಗಿ, ಈಗ ನಾನು ನಿಮ್ಮ ಮನೆ ಯಿಂದಲೇ ಬಂದೆ. ನಗರಸೇಠರ ಮನೆಯಲ್ಲಿ ಸಾರಸಿಕಾ ಈ ದಿನ ಬೆಳಿಗ್ಗೆ ನಿಮ್ಮಿಬ್ಬರ ಪೂರ್ವ ಜನ್ಮದ ವೃತ್ತಾಂತವನ್ನು ಹೇಳಿದಳು. ನೀವಿ ಬ್ಬರು ಮನೆಬಿಟ್ಟು ಯಾವ ಉಪಾಯ ಮಾಡಿ ಓಡಿ ಹೋದಿರೆಂಬುದು ತಿಳಿಸಿದಳು. ಇದನು ಕೇಳಿ ನಗರಸೇಠರು ಆಗಿಂದಾಗ ನಿಮ್ಮ ತಂದೆ ಯವರಲ್ಲಿಗೆ ಧಾವಿಸಿ, "ನೀವು ನಿಮ್ಮ ಮಗನ ಪ್ರಸ್ತಾಪವನ್ನು ಎತ್ತಿ ನನ್ನಲ್ಲಿಗೆ ಬಂದಾಗ ನಾನು ನಿಮ್ಮೆದುರಿಗೆ ತುಂಬಾ ಕಠೋರವಾಗಿ ವರ್ತಿ ಸಿದೆ. ನೀವು ನನ್ನನ್ನು ಕ್ಷಮಿಸಬೇಕು. ಅವರಿ ಬ್ಬರನ್ನೂ ಹುಡುಕಿಸಿ ಅವರಿಬ್ಬರಿಗೂ ತಕ್ಷಣ ಮನೆಗೆ ಹಿಂದಿರುಗಬೇಕೆಂದು ತಿಳಿಸಿ" ಎಂದರು. ನಂತರ ನಗರಸೇಠರು ನಿಮ್ಮಿಬ್ಬರ ಪೂರ್ವಜನ್ಮದ ಕಥೆಯನ್ನು ಅವರೆದುರು ಹೇಳಿ ದರು. ನಿಮ್ಮಿಬ್ಬರ ತಾಯಿಗಳು ನೀವಿಲ್ಲದೇ ಹಗಲಿರುಳೂ ರೋದಿಸುತ್ತಿದ್ದಾರೆ. ನಿಮ್ಮನ್ನು ಹುಡುಕಲು ದಿಕ್ಕು ದಿಕ್ಕಿಗೂ ಸಿಪಾಯಿಗಳನ್ನು ಸೇಠರು ರವಾನಿಸಿದ್ದಾರೆ. ಸೇಠರು ಹಾಗೂ ನಗರಸೇಠರು ಬರೆದ ಪತ್ರ ನನ್ನ ಕೈಲಿದೆ. ಇದೋ ಓದಿ ನೋಡಿ" ಎಂದು ಕಲ್ಮಾಷಹಸ್ತಿ ಆ ಪತ್ರಗಳನ್ನು ಪದ್ಮದೇವನಿಗೆ ಕೊಟ್ಟ.

ಪದ್ಮದೇವ ಆ ಪತ್ರಗಳನ್ನು ತೆರೆದು ಓದಿದ. ಆ ಪತ್ರಗಳು ಧನದೇವ ಮತ್ತು ನಗರಸೇಠರು ತಮ್ಮ ಮಕ್ಕಳ ಮೇಲೆ ಮಳೆಗರೆದ ಸ್ನೇಹ ಹಾಗೂ ವಾತ್ಸಲ್ಯಗಳಿಂದ ತುಂಬಿದ್ದವು. ಆದಷ್ಟು ಬೇಗ ಮನೆಗೆ ಹಿಂದಿರುಗಬೇಕೆಂದು ಅವರು ವಾತ್ಸಲ್ಯಮಯ ಮಾತುಗಳಲ್ಲಿ ಆಗ್ರಹ ಪಡಿಸಿದ್ದರು.

ತಮ್ಮ ಜೊತೆಗೆ ಈಗಲೇ ನಡೆಯಬೇಕೆಂಬ ಕಲ್ಮಾಷಹಸಿತಿಯ ಕೋರಿಕೆಗೆ ಒಪ್ಪಿ ಪದ್ಮದೇವ ಮತ್ತು ತರಂಗವತಿಯರಿಬ್ಬರೂ ಅವನ ಜೊತೆ ಗೂಡಿ ನಗರದ ಕಡೆ ಪಯಣಿಸಿದರು. ಅಲ್ಲಿ ಸಕಲ ಗೌರವ ಮತ್ತು ಪ್ರೇಮಾದರಗಳಿಂದ ಕೂಡಿದ ಸ್ವಾಗತವನ್ನು ಇವರಿಗೆ ನೀಡ ಲಾಯಿತು. ನಂತರ ಶುಭ ಮಹೂರ್ತ ನೋಡಿ ವಿಜೃಂಭಣೆಯಿಂದ ಇವರಿಬ್ಬರ ಮದುವೆ

ಯನ್ನು ಮಾಡಲಾಯಿತು. ತರಂಗವತಿ ಮತ್ತು ಪದ್ಮದೇವರು ಅತ್ಯಾನಂದದಿಂದ ಜೀವನ ಕಳೆಯುತೊಡಗಿದರು.

ಒಂದು ದಿನ ಅವರಿಬ್ಬರೂ ವಸಂತಕಾಲದ ಸೊಬಗನ್ನು ಸವಿಯುತ್ತ ವನದಲ್ಲಿ ತಿರುಗಾಡುತ್ತಿರುವಾಗ ಅಶೋಕವೃಕ್ಷದ ಕೆಳಗೆ ಧ್ಯಾನಸ್ತರಾದ ಸಾಧುವೊಬ್ಬರನ್ನು ನೋಡಿ ಅವರ ಬಳಿಗೆ ಬಂದು ತಲೆ ಬಾಗಿದರು. ಧ್ಯಾನಮುಕ್ತರಾದ ನಂತರ ಸಾಧು ತರಂಗವತಿ ಮತ್ತು ಪದ್ಮದೇವರ ವಿನಂತಿಯ ಮೇರೆಗೆ ಮೋಕ್ಷ ಪ್ರಾಪ್ತಿಯಾಗುವ ಬಗೆಯನ್ನು ಕುರಿತು ಧರ್ಮೋಪದೇಶ ನೀಡಿದರು. ಇಬ್ಬರೂ ಕೃತಾರ್ಥರಾದೆವೆಂದು ಅವರಿಗೆ ನಮಸ್ಕರಿಸುತ್ತ "ಮಹಾತ್ಮರೆ ತಾವು ಇಷ್ಟೆಲ್ಲ ಸಿದ್ಧಿಯನ್ನು ಹೇಗೆ ಸಾಧಿಸಿದಿರೆಂದು ದಯಮಾಡಿ ನಮಗೆ ತಿಳಿಸಿ" ಎಂದು ವಿನಂತಿಸಿಕೊಂಡರು. ಕೆಲಕ್ಷಣ ಮೌನರಾದ ಸಾಧುಗಳು ನಂತರ ತಮ್ಮೆಲ್ಲ ಕತೆಯನ್ನು ಅವರಿಗೆ ವಿವರಿಸತೊಡಗಿದರು. "ಭಯಂಕರ ವನ ಪ್ರದೇಶವಾದ ಚಂಪಾನದಿಯ ಕಿನಾರೆಯಲ್ಲಿ ಬೇಟೆಯಿಂದಲೇ ಜೀವಿಸುವ ಜನರಿದ್ದರು. ನಾನು ನನ್ನ ಹಿಂದಿನ ಜನ್ಮದಲ್ಲಿ ಅದೇ ಸ್ಥಳದಲ್ಲಿ ಒಬ್ಬ ಬೇಟೆಗಾರನಾಗಿದ್ದೆ. ಬಾಣ ಬಿಡುವುದರಲ್ಲಿ ಸಿದ್ಧಹಸ್ತನಾಗಿದ್ದ ನಾನು ಒಂದು ದಿನ ಹಸಿದ ಹೊಟ್ಟೆಯಲ್ಲಿ ಗಂಗಾನದಿಯವರೆಗೂ ಬಂದಾಗ ನದಿಯಲ್ಲಿ ಸ್ನಾನ ಮಾಡಿ ಹೊರಬರುತ್ತಿರುವ ಆನೆಯನ್ನು ನೋಡಿದೆ. ಆನೆಯ ಮೇಲೆ ಗುರಿಯಿಟ್ಟು ಬಾಣ ಬಿಟ್ಟೆ. ಆದರೆ ಬಾಣ ಆನೆಗೆ ತಗಲುವ ಬದಲು ಮೇಲೆ ಹಾರುವ ಒಂದು ಚಕೋರ ಪಕ್ಷಿಗೆ ತಗುಲಿತು. ಅದರ ಜೊತೆಗಿದ್ದ ಚಕೋರಿ ಅಳುತ್ತಲೇ ಅತ್ತ ಇತ್ತ ಮೃತ ಪತಿಯ ಶರೀರದ ಸುತ್ತ ಹಾರುತ್ತಿತ್ತು. ನಾನು ಕಟ್ಟಿಗೆಯನ್ನು ಒಟ್ಟುಗೂಡಿಸಿ ಆ ಚಕೋರ ಪಕ್ಷಿಯ ಅಗ್ನಿ ಸಂಸ್ಕಾರ ಮಾಡಿದೆ. ಆಗ ಚಕೋರಿ ಕೂಡ ಆ ಅಗ್ನಿಯಲ್ಲಿ ಬಿದ್ದು ತನ್ನ ಜೀವವನ್ನು ಕಳೆದುಕೊಂಡಿತು.

ಇದನ್ನು ನೋಡಿ ನನಗೆ ತುಂಬಾ ಪರಿತಾಪವಾಯಿತು. ಜೀವನದ ಬಗೆಗೆ ತಿರಸ್ಕಾರವನ್ನು ತಾಳಿದ ನಾನು ಆತ್ಮಘಾತ ಮಾಡಿಕೊಳ್ಳಲು ನಿರ್ಧರಿಸಿ ತಕ್ಷಣ ಆ ಜ್ವಲಿಸುತ್ತಿರುವ ಚಿತೆಯಲ್ಲಿ ಹಾರಿದೆ. ಈ ಪಶ್ಚಾತ್ತಾಪ ಪಟ್ಟ ಪುಣ್ಯದಿಂದಲೇ



"ಈ ವಿಮಾನ ಯಾವ ಸಾಗರದಲ್ಲಿ ಹೋಗಿ ಬೀಳುತ್ತೆ ಅಪ್ಪಾಜಿ!!"

ಇರಬೇಕು, ನರಕದಲ್ಲಿರಬೇಕಾದ ನನ್ನ ಆತ್ಮ ಉತ್ತರದಲ್ಲಿರುವ ವಾರಣಾಸಿ ನಗರದ ಒಬ್ಬ ದೊಡ್ಡ ವ್ಯಾಪಾರಿಯ ಎರಡನೇ ಮಗನಾಗಿ ಜನ್ಮ ತಾಳಿತು. ಆದರೆ ಕಾಲಾಂತರದಲ್ಲಿ ನಾನು ದುರ್ಗುಣಗಳ ಗಣಿಯೇ ಆದೆ. ಕಳ್ಳತನ ಮಾಡಲು ಪ್ರಾರಂಭಿಸಿ ಒಬ್ಬ ಪ್ರಸಿದ್ಧ ದರೋಡೆಕೋರನೂ ಆದೆ. ವಿಂಧ್ಯಾಚಲದ ದಟ್ಟಾರಣ್ಯದಲ್ಲಿರುವ ಸಿಂಹದ ಗುಹೆಯಲ್ಲಿ ವಾಸವಾಗಿದ್ದ ಭಿಲ್ಲಪ್ರಿಯನೆಂಬ ಸರದಾರನ ದಳದಲ್ಲಿ ಸೇರಿಕೊಂಡೆ.

"ಒಂದು ದಿನ ನಮ್ಮ ಗುಂಪು ಯುವ ದಂಪತಿಗಳನ್ನು ಹಿಡಿದು ತಂದಿತು. ಆ ತಿಂಗಳ ನವಮಿಗೆ ದೇವಿಗೆ ಬಲಿಕೊಡಬೇಕಾದ ಅವರಿಬ್ಬರನ್ನು ಜಾಗ್ರತೆಯಿಂದ ನೋಡಿಕೊಳ್ಳುವ ಕೆಲಸ ನನ್ನ ಮೇಲೆ ಬಿತ್ತು. ನನ್ನ ಬಂಧನದಲ್ಲಿದ್ದಾಗ ಆ ಸ್ತ್ರೀ ಅತ್ತು ಅತ್ತು ತನ್ನೆಲ್ಲ ಕತೆಯನ್ನು ಹೇಳಿದಳು. ಆಗ ನನಗೂ ನನ್ನ ಪೂರ್ವ ಜನ್ಮದ ಸ್ಮರಣೆಯಾಯಿತು. ನಾನು ಯಾವ

ಚಕೋರ-ಚಕೋರಿ ಜೋಡಿಯನ್ನು ಪೂರ್ವಾಪರ ವಿಚಾರ ಮಾಡದೆ ಕೊಂದಿದ್ದನೊ ಅವರೇ ಇವರೆಂದು ನನಗೆ ಅರಿವಾಯಿತು. ಆ ದಂಪತಿಗಳನ್ನು ಬಂಧಮುಕ್ತಗೊಳಿಸಿ ಗುಹೆಯಿಂದ ಹೊರತಂದು ಒಂದು ಊರಿನ ಹತ್ತಿರ ಬಿಟ್ಟೆ.

"ನನಗೂ ಸಂಸಾರದಲ್ಲಿ ವಿರಕ್ತಿ ಉಂಟಾಯಿತು. ನಾನು ಸಂನ್ಯಾಸಿಯಾದೆ. ನಡೆಯುತ್ತ ನಡೆಯುತ್ತ ಪೂರ್ವಾತಲ ನಗರ ತಲುಪಿದೆ. ಆ ನಗರದ ಹೊರವಲಯದಲ್ಲಿದ್ದ ಒಂದು ಸುಂದರವಾದ ಉದ್ಯಾನದಲ್ಲಿ ವಟವೃಕ್ಷವೊಂದು ಶೋಭಿತವಾಗಿತ್ತು. ಅಲ್ಲಿ ಗಹನವಾದ ಶಾಂತಿಯಲ್ಲಿ ಮುಳುಗಿ ಶಾಂತ ಧೀರ ಪರಮ ಜಿತೇಂದ್ರಿಯ ಮತ್ತು ಆತ್ಮ ಸಂಯಮಿಯಾದ ಸಾಧುಗಳೊಬ್ಬರು ಕುಳಿತಿರುವುದನ್ನು ನೋಡಿದೆ. ಅವರೇ ನನಗೆ ಧರ್ಮದ ದೀಕ್ಷೆ ಕೊಟ್ಟರು.

ಪದ್ಮದೇವ ಮತ್ತು ತರಂಗವತಿಯರಿಬ್ಬರಿಗೂ ಆ ಮಹಾತ್ಮನಿಂದ ಈ ಕಥೆಯನ್ನು ಕೇಳಿ ತಮ್ಮ ಅನುಭೂತ ದುಃಖಗಳೆಲ್ಲವೂ ನೆನಪಿಗೆ ಬಂದವು. ಒಂದು ಸಮಯದ ಕೊಲೆಗಾರ ಹಾಗೂ ದರೋಡೆಕೋರ, ಹೇಗೆ ವಿಜಯ ಪ್ರಾಪ್ತನಾಗಿದ್ದಾನೆ ಎಂಬುದನ್ನು ತಿಳಿದು ತಮ್ಮ ವಿಲಾಸಮಯ ಜೀವನದಿಂದ ಮುಕ್ತರಾಗಲು ನಿಶ್ಚಯಿಸಿ ಆ ಮಹಾತ್ಮರಿಂದ ದೀಕ್ಷೆ ಪಡೆದರು.

ಈ ಸುದ್ದಿ ನಗರಕ್ಕೆ ಮುಟ್ಟುತ್ತಲೆ ಜನರು ಓಡೋಡಿ ಬಂದರು. ಎಲ್ಲರೂ ಗಗನಕ್ಕೆ ಬಿರುಕು ಬರುವಷ್ಟು ಅತ್ತು ಕೂಗಿ, ಇವರನ್ನು ದೀಕ್ಷೆ ಪಡೆಯದಂತೆ ತಡೆದರು. ತಂದೆ ತಾಯಿಗಳು ಇವರ ಮನವನ್ನು ಒಲಿಸಲು ಭಗೀರಥ ಪ್ರಯತ್ನ ಮಾಡಿದರು. ಆದರೆ ಅವರಿಬ್ಬರೂ ಮೋಹ ಮಾಯೆಗಳಿಂದ ಮುಕ್ತರಾಗಿದ್ದರು. ಇಬ್ಬರೂ ಅದೇ ಕ್ಷಣದಲ್ಲಿ ಸಂನ್ಯಾಸ ಧಾರಣೆ ಮಾಡಿ ನಶ್ವರವಾದ ಸಂಸಾರದ ಮೋಹಪಾಶವನ್ನು ಛಿದ್ರ ಛಿದ್ರಗೊಳಿಸಿದರು. ನಗರದ ಎಲ್ಲರೂ ಸೋತು ಹಿಂದಿರುಗಿದರು. ●

ಹಿಂದೂ ಧರ್ಮ ಪ್ರಚಾರಕರು ಅಮೆರಿಕಾಖಂಡವನ್ನು ಕಂಡುಹಿಡಿದರೆ?

ಇದನ್ನು ನೀವು ನಂಬುವಿರೋ ಇಲ್ಲವೋ! ಕೊಲಂಬಸ್‌ನಿಗಿಂತ ಎರಡು ಸಾವಿರ ವರ್ಷಗಳ ಮೊದಲೇ ಹಿಂದೂ ಧರ್ಮಪ್ರಚಾರಕರು ಮತ್ತು ವ್ಯಾಪಾರಿಗಳು ಅಮೆರಿಕ ಖಂಡವನ್ನು ಕಂಡುಹಿಡಿದಿದ್ದರು ಎಂದು ಅಮೆರಿಕದ ಸುಪ್ರಸಿದ್ಧ ಲೇಖಕ ಐರ್ವಿಂಗ್ ವ್ಯಾಲೇಸ್ ತನ್ನ ಬುಕ್ ಆಫ್ ಲಿಸ್ಟ್ ಪುಸ್ತಕದ ಎರಡನೆ ಭಾಗದಲ್ಲಿ ಹೇಳುತ್ತಾನೆ. ಮಧ್ಯ ಅಮೇರಿಕಾದ ಬುಡಕಟ್ಟು ಜನಾಂಗಗಳಲ್ಲಿ ಪ್ರಚಲಿತವಿರುವ ಐತಿಹ್ಯದ ಪ್ರಕಾರ ಒಬ್ಬ ಹಿಂದುವು ಮಾಯಕಾಜನರೊಂದಿಗೆ ವಾಸಿಸಿ ಅವರ ಕಾನೂನುಗಳನ್ನು ರಚಿಸಿದನು. ಇನ್ನೊಬ್ಬ ಹಿಂದುವು ಬ್ರೆಜಿಲ್‌ನಲ್ಲಿ ನೆಲಸಿ ಜನರನ್ನು ಕೃಷಿಯಲ್ಲಿ ತರಬೇತಿಗೊಳಿಸಿದನು ಮೂರನೆಯವನು ಒಬ್ಬ ಪುರೋಹಿತ: ಅವನು ಮೆಕ್ಸಿಕೋದಲ್ಲಿ ನೆಲೆಸಿದ. ನಾಲ್ಕನೆಯವನು ಮಾಯಾ ಜನರ ಮುಖ್ಯಸ್ಥನಾಗಿ ಆ ಜನಾಂಗದ ಚರಿತ್ರೆಯನ್ನು ಬರೆದ. ಅವರು ಭಾರತದಿಂದ ಈಶಾನ್ಯ ಏಶಿಯಕ್ಕೆ ಪಯಣಿಸಿ ಅಲ್ಲಿಂದ ಮೇಲೆನೇಶಿಯಾ ಮತ್ತು ಪಾಲಿನೇಶಿಯಾ ದ್ವೀಪಗಳಿಗೂ ಅನಂತರ ಶಾಂತಸಾಗರದ ಮೂಲಕ ದಕ್ಷಿಣ ಹಾಗೂ ಮಧ್ಯ ಏಶಿಯಾಕ್ಕೂ ಹೋದರು.

ಚೀನಾದ ದಾಖಲೆಗಳು ಹಾಗೂ ಭೂಪಟಗಳು ದಕ್ಷಿಣ ಅಮೇರಿಕದ ಕೆಲವು ರಾಜ್ಯಗಳನ್ನೂ ಮಧ್ಯ ಅಮೇರಿಕದ ಗ್ವಾಟೇಮಾಲಾವನ್ನು ಕ್ರಿ.ಶ.458 ರಲ್ಲಿ ಹ್ವೂಯಿಸನ್ ಎಂಬ ಚೀನೀ ಸಂನ್ಯಾಸಿಯು ಗೌತಮ ಬುದ್ಧನ ನೆನಪಿಗಾಗಿ ಹೆಸರಿಸಿದನೆಂದು ಹೇಳುತ್ತವೆ. ಚೀನಾದ ಇಬ್ಬರು ಸಮುದ್ರಶಾಸ್ತ್ರಜ್ಞರು ಕ್ರಿ.ಪೂ. 2640 ರಲ್ಲಿಯೇ ಅಮೇರಿಕಕ್ಕೆ ಪಯಣಿಸಿದ್ದರೆಂದು ಹೇಳಲಾಗಿದೆ. ಆದರೂ ಸಾಕ್ಷ್ಯಾಧಾರಗಳು ದೊರೆಯುವುದಿಲ್ಲವಾಗಿ ಇದು ಚರ್ಚಾಸ್ಪದವೆಂದೇ ಹೇಳಬೇಕು. ಬಹುಶಃ ಆದ್ದರಿಂದಲೇ ಇರಬೇಕು ಕೊಲಂಬಸನು ಅಮೇರಿಕವನ್ನು ಕಂಡುಹಿಡಿದನೆಂದು ಗೌರವಿಸಲ್ಪಡುತ್ತಿದ್ದಾನೆ.

-ಪಿ. ಶಾಂತಾರಾಮ ಪ್ರಭು.

ಜೀವನ ದರ್ಶನ — ಕೆ.ಟಿ. ಪಾಂಡುರಂಗಿ

ಭಾಷೆಯಲ್ಲಿ ಸಂಸ್ಕೃತಿಯ ಹೆಜ್ಜೆಗಳು

ಒಂದು ಸಂಸ್ಕೃತಿಯನ್ನು ಗುರುತಿಸಬೇಕಾದರೆ ಆ ಸಂಸ್ಕೃತಿಯಲ್ಲಿ ಬಳಕೆಯಲ್ಲಿದ್ದ ಕೆಲವು ಮೂಲ ಭೂತವಾದ ಸಾಂಸ್ಕೃತಿಕ ಪದಗಳನ್ನು ಆಯ್ದು ಕೊಳ್ಳಬೇಕು. ಆ ಪದಗಳು ಸೂಚಿಸುವ ನಂಬಿಕೆಗಳು, ಜೀವನದ ವಿಧಾನ, ಜೀವನದ ಗುರಿಗಳನ್ನು ವಿಶ್ಲೇಷಿಸಬೇಕು. ಅಂದರೆ ಆ ಸಂಸ್ಕೃತಿಯ ಒಳ ಹೊರ ರೂಪಗಳು ನಮಗೆ ತಿಳಿದು ಬರುವವು. ಒಂದು ಸಂಸ್ಕೃತಿಯನ್ನು ಅಧ್ಯಯನ ಮಾಡುವ ಹಲವು ವಿಧಾನಗಳಲ್ಲಿ ಅದರಲ್ಲಿಯ ಸಾಂಸ್ಕೃತಿಕ ಪದಗಳ ಅಧ್ಯಯನ ಮಾಡುವದು ಒಂದು ಉತ್ತಮವಾದ ವಿಧಾನವು.

ಉದಾಹರಣೆಗೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ, ಆತ್ಮ ಕರ್ಮ ಪುನರ್ಜನ್ಮ ದೈವ ಪುರುಷಾರ್ಥ ಹೀಗೆ ಕೆಲವು ಸಾಂಸ್ಕೃತಿಕ ಪದಗಳು ಬಳಕೆಯಲ್ಲಿವೆ. ಇವು ಭಾರತೀಯರ ಕೆಲವು ಮೂಲಭೂತ ನಂಬಿಕೆಗಳನ್ನು ಸೂಚಿಸುವವು. ಸಾಮಾನ್ಯ ಭಾರತೀಯ ನಾಗರಿಕನು ದೇಹಕ್ಕಿಂತ ಭಿನ್ನವಾದ ಆತ್ಮ ಎಂಬುದು ಇರುವದು ಎಂದು ನಂಬುತ್ತಾನೆ. ತಾನು ಮಾಡಿದ ಕರ್ಮಗಳು ತನ್ನ ಮೇಲೆ ಪರಿಣಾಮ ಮಾಡುವವು ಎಂದು ನಂಬುತ್ತಾನೆ. ಪುನರ್ಜನ್ಮದ ವಿಷಯದಲ್ಲಿ ಭಾರತೀಯನ ನಂಬಿಕೆಯು ಇಂದು ಬಹಳ ಕಡಿಮೆಯಾಗಿದ್ದರೂ ಇನ್ನೂ ಸಂಪೂರ್ಣವಾಗಿ ಅಳಿಸಿ ಹೋಗಿಲ್ಲ. ದೈವದ ವಿಷಯದಲ್ಲಿಯೂ ಹಿಂದಿನ ಕಾಲದಷ್ಟೇ ದೃಢವಾದ ನಂಬಿಕೆಯಿಲ್ಲದಿದ್ದರೂ ಅದು ಸಂಪೂರ್ಣವಾಗಿ ಅಳಿಸಿ ಹೋಗಿಲ್ಲ. ಹೀಗೆ ಭಾರತೀಯ ಸಂಸ್ಕೃತಿಯಲ್ಲಿ ಬಳಕೆಯಲ್ಲಿದ್ದ ಕೆಲವು ಮೂಲಭೂತವಾದ ಸಾಂಸ್ಕೃತಿಕ ಪದಗಳ ಅರ್ಥ ಮಾಡಿಕೊಂಡರೆ ಈ ಸಂಸ್ಕೃತಿಯ ಪರಿಚಯವು ಆಳವಾಗಿ ಆಗುವದು.

ಇಂಥ ಸಾಂಸ್ಕೃತಿಕ ಪದಗಳು ಸೂಚಿಸುವ ನಂಬಿಕೆಗಳು ಕಾಲಕ್ರಮದಲ್ಲಿ ಶಿಥಿಲವಾಗುತ್ತವೆ. ರೂಪಾಂತರವನ್ನು ತಾಳುತ್ತವೆ. ಹೊಸ ನಂಬಿಕೆಗಳೊಡನೆ ಹೊಂದಿಕೊಳ್ಳುತ್ತವೆ ಅಥವಾ ಸ್ಪರ್ಧಿಸುತ್ತವೆ. ಇವು ಆ ಸಂಸ್ಕೃತಿಯ ಬೆಳವಣಿಗೆ ಬದಲಾವಣೆ ಮತ್ತು ಸಂಘರ್ಷಗಳನ್ನೂ ಸೂಚಿಸುತ್ತವೆ. ಆ ಸಂಸ್ಕೃತಿಯ ವೈಚಾರಿಕ ಬೆಳವಣಿಗೆಯನ್ನು ಸೂಚಿಸುತ್ತವೆ. ಕೆಲವು ಸಾಂಸ್ಕೃತಿಕ ಪದಗಳು ಒಂದಕ್ಕಿಂತ ಹೆಚ್ಚು ನಂಬಿಕೆಗಳು ಮತ್ತು ತತ್ವಗಳನ್ನು ಪ್ರತಿನಿಧಿಸುತ್ತಿದ್ದು ಅವುಗಳಲ್ಲಿ ಒಂದೊಂದು ಕಾಲದಲ್ಲಿ ಒಂದೊಂದು ನಂಬಿಕೆ ಅಥವಾ ತತ್ವಕ್ಕೆ ಹೆಚ್ಚು ಮಹತ್ವವಿರುತ್ತದೆ. ಆಯಾ ವ್ಯಕ್ತಿಗಳ ಸ್ವಭಾವ ಜೀವನದ ಗುರಿಗಳಿಗನುಸರಿಸಿ ಇವುಗಳ ಪ್ರಯೋಗ ಪ್ರಯೋಜನಗಳಾಗುತ್ತವೆ.

ಉದಾಹರಣೆಗೆ ಧರ್ಮ ದಾನ ಪರೋಪಕಾರ ಸದಾಚಾರ ಎಂಬ ಪದಗಳನ್ನು ಗಮನಿಸಬಹುದು. ಧರ್ಮ ಅಂದರೆ ಪೂಜೆ ಅನುಷ್ಠಾನ ಎಂಬ ಅರ್ಥವಿದೆ. ಸತ್ಯ, ಅಹಿಂಸೆ, ಪರೋಪಕಾರ ಎಂಬ ಅರ್ಥವಿದೆ. ಕರ್ತವ್ಯ ನಿಷ್ಠೆ ಎಂಬ ಅರ್ಥವಿದೆ. ಇಂದು ಪೂಜೆ ಅನುಷ್ಠಾನಗಳಲ್ಲಿ ನಂಬಿಕೆಯಿಲ್ಲದವರು ಅನೇಕರಿರುವರು. ಇವರು ಸತ್ಯ ಅಹಿಂಸೆ ಪರೋಪಕಾರ ಎಂಬ ಅರ್ಥದಲ್ಲಿ ಧಾರ್ಮಿಕರಾಗಿರುವರು. ದಾನದ ಪ್ರಕಾರಗಳು ಹಳೆಯ ಕಾಲದಲ್ಲಿ ಪುರೋಹಿತರಿಗೆ ದೇವಸ್ಥಾನಗಳಿಗೆ ಕೊಡುವ ಕಾಣಿಕೆಗಳ ರೂಪದಲ್ಲಿ ಇರುತ್ತಿದ್ದವು. ಕೆರೆ ಬಾವಿಗಳನ್ನು ಕಟ್ಟಿಸುವ ರೂಪದಲ್ಲಿ ಇರುತ್ತಿದ್ದವು. ಆದರೆ ಇಂದು ಆಸ್ಪತ್ರೆಗಳನ್ನು ಕಟ್ಟಿಸುವದು, ಅಂಗವಿಲಕರಿಗೆ ಸಹಾಯ ಮಾಡುವದು, ಶಿಷ್ಯ ವೃತ್ತಿಗಳು, ವಿವಿಧ ಉದ್ದೇಶಗಳಿಗಾಗಿ ದತ್ತಿಗಳು ಈ ರೂಪವನ್ನು ತಾಳುತ್ತಿವೆ.

ಹಳೆಯ ಕಾಲದ ಸಾಂಸ್ಕೃತಿಕ ಪದಗಳ ಜೊತೆಗೆ ಹೊಸ ಸಾಂಸ್ಕೃತಿಕ ಪದಗಳೂ ಬಳಕೆಯಲ್ಲಿ ಬರುವವು. ದಲಿತರ ಸೇವೆ, ವಿಚಾರವಾದ, ಪ್ರಜಾಪ್ರಭುತ್ವ, ಕಲ್ಯಾಣ ರಾಜ್ಯ, ಭ್ರಷ್ಟಾಚಾರ, ವ್ಯವಸ್ಥಾವಾದ, ಪಟ್ಟಭದ್ರ ಹಿತಗಳು, ಸಾಮಾಜಿಕ ಪ್ರಜ್ಞೆ ಇತ್ಯಾದಿ ಕೆಲವು ಪದಗಳು ಇಂದಿನ ನಮ್ಮ ಸಂಸ್ಕೃತಿಯ ಮತ್ತು ವಿಚಾರ ಸರಣಿಯ ದಾರಿಯನ್ನು ಸೂಚಿಸುವವು. ಈ ಹೊಸ ಸಾಂಸ್ಕೃತಿಕ ಪದಗಳು ಸೂಚಿಸುವ ನಂಬಿಕೆ ಮತ್ತು ತತ್ವಗಳು ಮತ್ತು ಹಳೆಯ ಸಾಂಸ್ಕೃತಿಕ ಪದಗಳು ಸೂಚಿಸುವ ನಂಬಿಕೆ ಮತು ತತ್ವಗಳಿಗೂ ಕೆಲ ಮಟ್ಟಿನ ಸಂಘರ್ಷ, ಬದಲಾವಣೆ, ಬೆಳವಣಿಗೆಗಳು ಕಂಡು ಬರುವವು. ಹೀಗೆ ಸಂಸ್ಕೃತಿಯ ಬೆಳವಣಿಗೆಯು ಭಾಷೆಯಲ್ಲಿ ತನ್ನ ಹೆಜ್ಜೆಗಳನ್ನು ಮೂಡಿಸುತ್ತ ಹೋಗುವದು.

ನಶಿಸುತ್ತಿರುವ ನಿಕ್ಷೇಪ

ಎಸ್. ಜಗನ್ನಾಥ ಪ್ರಕಾಶ್.

ಚಿನ್ನದ ಉಜ್ವಲ ಹೊಳಪು ಅನಾದಿ ಕಾಲದಿಂದಲೂ ಮಾನವಸಮೂಹವನ್ನು ಆಕರ್ಷಿಸುತ್ತಲೇ ಇದೆ. ಮನುಷ್ಯನನ್ನು ಲೌಕಿಕಕ್ಕೆ ಬಂಧಿಸುವಷ್ಟು ಎಂದು ಚಿನ್ನವನ್ನು ವರ್ಣಿಸಿದ ಭಾರತೀಯರೇ ಚಿನ್ನದ ಮೇಲೆ ಹೆಚ್ಚು ಮೋಹ ಉಳ್ಳವರು ಕೂಡ.

ಬಂಗಾರದಿಂದ ಆಭರಣಗಳನ್ನು ತಯಾರಿಸಿ ಧರಿಸಿರುವುದರಲ್ಲಿ ಭಾರತೀಯರು ಮೊದಲಿನಿಂದಲೂ ಅಗ್ರಗಣ್ಯರು. ಇದು ಹರಪ್ಪಾ ಸಂಸ್ಕೃತಿಯ ಕಾಲದಿಂದಲೂ ರೂಢಿಯಲ್ಲಿದೆ. ಹೆಸರಾಂತ ಚರಿತ್ರಕಾರ ಸರ್ ಜಾನ್ ಮಾಷಲ್‌ರ ಪ್ರಕಾರ ಹರಪ್ಪಾ ಮೊಹಂಜೋದಾರೊ ಕಾಲದಷ್ಟು ಹಿಂದಿ ನಿಂದಲೇ ಕೋಲಾರದ ಗಣಿಗಳಿಂದ ಚಿನ್ನವನ್ನು ತೆಗೆಯಲಾಗುತ್ತಿತ್ತು. 18ನೆಯ ಶತಮಾನದಲ್ಲಿ ಟಿಪ್ಪುಸುಲ್ತಾನನು ಚಿನ್ನ ಅಗೆಸಿದ್ದಕ್ಕೆ ಸಾಕ್ಷ್ಯಗಳಿದ್ದರೂ ವ್ಯವಸ್ಥಿತ ರೀತಿಯಲ್ಲಿ ಬಂಗಾರವನ್ನು ಭೂಮಿಯಿಂದ ಹೊರದೆಗೆಯಲು ಆರಂಭಿಸಿದ್ದು 1880ರ ಸುಮಾರಿಗೆ. ಒಂದು ಶತಮಾನಕ್ಕೂ ಹೆಚ್ಚು ಕಾಲ ಚಿನ್ನ ಒದಗಿಸುತ್ತಿದ್ದ ಕೋಲಾರದ ಗಣಿಗಳ ಆಯುಷ್ಯ ಇನ್ನು ವರ್ಷಗಳು ಮಾತ್ರ.

ನೆಲದೊಳಗಿನಿಂದ ಚಿನ್ನ ಹೊರತೆಗೆಯುವುದ



ಪ್ರದರ್ಶನಕ್ಕಿರುವ ಚಿನ್ನದ ಇಟ್ಟಿಗೆ

ಕೆ.ಜಿ.ಎಫ್: ಕೆಲ ಮಾಹಿತಿ

★ ಅಂದಾಜು ಎರಡು ಲಕ್ಷ ಮಂದಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಉದ್ಯೋಗ ನೀಡಿರುವ ಕೋಲಾರ ಚಿನ್ನದ ಗಣಿಗಳಲ್ಲಿ ಹಿಂದೆ 30 ಸಾವಿರ ಕಾರ್ಮಿಕರಿದ್ದರು. ಈಗವರ ಸಂಖ್ಯೆ 13 ಸಾವಿರ.

★ ವಿಶ್ವದ ಅತ್ಯಂತ ಆಳವಾದ ಕೋಲಾರ ಗಣಿಗಳು 12,000 ಅಡಿಗಳ ಆಳ ಹೊಂದಿದೆ (ಸುಮಾರು 2 ಮೈಲಿ) ಇದರಲ್ಲಿ ಸುಮಾರು 10 ಸಹಸ್ರ ಅಡಿಗಳೊಳಗೂ ಚಿನ್ನದ ಅದಿರು ತೆಗೆಯಲಾಗುತ್ತಿದೆ.

★ ಅಣು ವಿನಾಶ ಕುರಿತ ಪ್ರಯೋಗಾಲಯ ವಿಶ್ವದಲ್ಲೇ ಆಳವಾದ ಕೋಲಾರ ಗಣಿಗಳಲ್ಲಿದ್ದು ಜಗತ್ತಿನ ವಿಜ್ಞಾನಿಗಳ ಗಮನ ಸೆಳೆದಿದೆ.

★ ಹೆಚ್ಚು ಸಂಖ್ಯೆಯಲ್ಲಿ ಆಂಗ್ಲೊ ಇಂಡಿಯನ್ನರು ವಾಸಿಸುವ ಕೆ.ಜಿ.ಎಫ್. ನಲ್ಲಿ ಆಂಗ್ಲೋ ಇಂಡಿಯನ್ ಕಾಲೋನಿ ಕೂಡ ಇದೆ.

★ ಕೆ.ಜಿ.ಎಫ್. ಕರ್ನಾಟಕದಲ್ಲಿದ್ದರೂ ಇಲ್ಲಿಯ ಬಹು ಮಂದಿಯ ಮಾತೃಭಾಷೆ ತಮಿಳು.

ರಲ್ಲಿ ಪ್ರವೀಣರಾದ ಜಾನ್ ಟೇಲರ್ ಕಂಪನಿಯವರು ಕೋಲಾರದಲ್ಲಿ ಬಂಗಾರದ ಅದಿರನ್ನು ಮೇಲೆತ್ತಿದಾಗ ಪ್ರತಿ ಟನ್ ಅದಿರಿನಿಂದ ಸಿಗುತ್ತಿದ್ದ ಶುದ್ಧ ಚಿನ್ನದ ಅಂಶ 37.8 ಗ್ರಾಂ. ಆದರೆ ಈಗ ಅಲ್ಲಿ ದೊರೆಯುತ್ತಿರುವುದು ಟನ್ನಿಗೆ ಐದು ಗ್ರಾಂಗಳಿಗೂ ಕಡಿಮೆ.

ಭಾರತದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದ ಬಿಳಿಯರು ಕೋಲಾರದ ಗಣಿಗಳ ಮೇಲ್ವಿಚಾರಣೆಯನ್ನು ವಹಿಸಿಕೊಂಡು ದಕ್ಷಿಣ ಆಫ್ರಿಕಾದಲ್ಲಿ ಉಪಯೋಗಿಸುತ್ತಿದ್ದ ಆಧುನಿಕ ಯಂತ್ರಗಳನ್ನು ಇಲ್ಲಿಗೂ ರವಾನಿಸಿ ಹೊನ್ನಿನ ಅದಿರನ್ನು ನಿರಂತರವಾಗಿಯೂ, ವೇಗವಾಗಿಯೂ ಹೊರತೆಗೆಯುವುದರಲ್ಲಿ ನಿರತರಾದರು. 1932 ರಲ್ಲಿ ಬಾಲ್‌ಘಾಟ್ ಸಂಸ್ಥೆಯು ನಂದಿದುರ್ಗದೊಂದಿಗೆ ಹಾಗೂ 1953 ರಲ್ಲಿ ಉರಿಗಾಂ ಕಂಪನಿ ಚಾಂಪಿಯನ್ ಕಂಪನಿಯೊಂದಿಗೆ ವಿಲೀನವಾಗಿ ಇಂದು ನಂದಿದುರ್ಗ, ಮೈಸೂರು ಮೈನ್ಸ್ ಹಾಗೂ ಚಾಂಪಿಯನ್ ರಿಫೈನರಿ ಕಂಪನಿಗಳ ಹೆಸರಲ್ಲಿ ಮಾತ್ರ ಕೆಲಸ ಜರುಗುತ್ತಿದೆ.

ಕೋಲಾರ ಚಿನ್ನದ ಗಣಿಗಳ ಅಸುಪಾಸು ಸುಮಾರು ನೂರು ಕಿಲೋಮೀಟರ್‌ಗಳ ವ್ಯಾಪ್ತಿಯಲ್ಲಿ ಚಿನ್ನದ ನಿಕ್ಷೇಪಗಳಿವೆ ಎಂದು ಹೇಳಲಾಗಿದ್ದರೂ ಚಿನ್ನದ ಗಣಿಗಳನ್ನು ಆರಂಭಿಸಿದ್ದು ಏಳು ಚದರ ಕಿಲೋಮೀಟರಿನಷ್ಟು ಪ್ರದೇಶದಲ್ಲಿ ಮಾತ್ರ. ಹಳದಿ ಲೋಹದ ಪದರುಗಳು ಇಲ್ಲಿ ಯಥೇಚ್ಛವಾಗಿ ಕಾಣುತ್ತಿರುವ ಅಂಶವನ್ನು ಮನಗಂಡು ವಿದ್ಯುತ್ತಿನ ಸಹಾಯದಿಂದ ಇದರ ಉತ್ಪಾದನೆಯನ್ನು ವೇಗವಾಗಿ ನಡೆಸುವ ನಿರ್ಧಾರಕ್ಕೆ ಬರಲಾಯಿತು. ಇದರ ಫಲವೇ ಶಿವನ ಸಮುದ್ರ ವಿದ್ಯುತ್‌ಜನಕ ಸ್ಥಾಪನೆ. 1902 ರಲ್ಲಿ ಚಿನ್ನದ ಗಣಿಗೆ ವಿದ್ಯುತ್ ಸರಬರಾಜು ಮಾಡಲು ಆರಂಭಿಸಿದ ಶಿವನ ಸಮುದ್ರ ವಿದ್ಯುದಾಗಾರಕ್ಕೆ ಏಷಿಯದಲ್ಲೇ ಮೊದಲು ಜಲವಿದ್ಯುತ್ ಉತ್ಪಾದಿಸಿತೆಂದು ಹೆಗ್ಗಳಿಕೆ ಇದೆ.

ವಿದ್ಯುತ್ತಿನಿಂದ ಚುರುಕುಗೊಂಡ ಚಿನ್ನದ ಉತ್ಪಾದನೆಗೆ ಸುಮಾರು 30 ಸಾವಿರ ಕಾರ್ಮಿಕರು ಶ್ರಮಿಸಲು ಆರಂಭಿಸಿದರು. ಎಲ್ಲ ಮೇಲ್ವಿಚಾರಣಾ ಹುದ್ದೆಗಳೂ ಬಿಳಿಯರದೇ ಆಗಿದ್ದು ಕಷ್ಟತಮ ಕೆಲಸಗಳೆಲ್ಲ ಭಾರತೀಯರ ಪಾಲಿಗೆ ಬಂದವು.

ಚಿನ್ನದ ಬೆಲೆ ಹಾಗೂ ಮಹತ್ವವನ್ನು ಅರಿತಿದ್ದ ಬ್ರಿಟಿಷರು ತೀವ್ರ ರೀತಿಯಲ್ಲಿ ಗಣಿಕೆಲಸ ನಡೆಸಿ ಇಲ್ಲಿ ಉತ್ಪಾದನೆಯಾದ ಶೇಕಡಾ 80 ಕ್ಕೂ ಹೆಚ್ಚು ಚಿನ್ನವನ್ನು ಇಂಗ್ಲೆಂಡಿಗೆ ರವಾನಿಸಿದರು. ಕಳೆದೊಂದು ಶತಮಾನದ ಅವಧಿಯಲ್ಲಿ ಐದು



ಅದಿರು ತರುತ್ತಿರುವ ಗಣಿ ಕಾರ್ಮಿಕರು

ಕೋಟಿ ಟನ್ನುಗಳಷ್ಟು ಅದಿರನ್ನು ಹೊರತೆಗೆಯಲಾಗಿದ್ದು ಅದರಿಂದ 15.82 ಕೋಟಿ ರೂಪಾಯಿ ಮೌಲ್ಯದ ಚಿನ್ನ ಲಭ್ಯವಾಗಿದೆ.

74 ವರ್ಷಗಳ ಜಾನ್‌ಟೇಲರ್ ಕಂಪನಿಯ ಆಡಳಿತದಲ್ಲಿದ್ದ ಕೋಲಾರ ಚಿನ್ನದ ಗಣಿಗಳು 1956 ರಲ್ಲಿ ಕೇಂದ್ರ ಸರಕಾರದ ವಶಕ್ಕೆ ಬಂದು 1972ರಲ್ಲಿ ಭಾರತ ಗೋಲ್ಡ್ ಮೈನ್ಸ್ ಲಿಮಿಟೆಡ್ ಕಂಪನಿಯಾಗಿ ಮಾರ್ಪಟ್ಟಿತು.

ಒಂದು ಕಾಲಕ್ಕೆ ನಷ್ಟದ ಹೆಸರೇ ಇಲ್ಲದಿದ್ದ ಚಿನ್ನದ ಗಣಿಗಳು ಈಚಿನ ವರ್ಷಗಳಲ್ಲಿ ನಿರಂತರವಾಗಿ ತೀವ್ರತರ ನಷ್ಟವನ್ನು ಅನುಭವಿಸುತ್ತಿವೆ. ಒಂದು ಅಂದಾಜಿನಂತೆ ಕೋಲಾರ ಚಿನ್ನದ ಗಣಿಗಳಲ್ಲಿ ಈಗ ಉಳಿದಿರುವ ನಿಧಿ 20 ಟನ್ ಮಾತ್ರ. ಹೆಚ್ಚು ಆಳಕ್ಕೆ ಹೋದಂತೆ ಚಿನ್ನದ ಅದಿರಿನ ಅಂಶ ಕಡಿಮೆಯಾಗುತ್ತಿದ್ದು ಉತ್ಪಾದನಾ ವೆಚ್ಚ ತೀರ ಹೆಚ್ಚಾಗುತ್ತಿದೆ. ಹೀಗಾಗಿ ಭಾರತ ಗೋಲ್ಡ್ ಮೈನ್ಸ್ ಕಂಪನಿ ಹೆಚ್ಚು ಹೆಚ್ಚು ಚಿನ್ನ ಉತ್ಪಾದಿಸಲು ತೊಡಗಿದರೆ ಸಿಗುವ ಚಿನ್ನ ಕಡಿಮೆ: ಉತ್ಪಾದನೆಯ ವೆಚ್ಚವೂ ಅಧಿಕ. ಹೀಗಾಗಿ ನಷ್ಟದ ಪ್ರಮಾಣವೂ ಇಮ್ಮಡಿಗೊಳ್ಳುವ ಪರಿಸ್ಥಿತಿ ಇದೆ.

1972 ರಿಂದೀಚೆಗೆ ಸುಮಾರು 30 ಕೋಟಿ ನಷ್ಟ ಅನುಭವಿಸಿರುವ ಸಂಸ್ಥೆ 1984 ರೊಂದರಲ್ಲಿ 10 ಕೋಟಿ ರೂಪಾಯಿಗಳ ನಷ್ಟಕ್ಕೆ ಈಡಾಯಿತು. ದಿನದಿನಕ್ಕೆ ನಷ್ಟದ ಹೊರೆ ಅಧಿಕವಾಗುತ್ತ ಸಾಗಿದೆ.

ಭಾರತ: ಚಿನ್ನದ ನಂಟು

★ ಚಿನ್ನದ ಆಭರಣಗಳನ್ನು ಧರಿಸುವುದರಲ್ಲಿ ಹಾಗೂ ತಯಾರಿಸುವುದರಲ್ಲಿ ಭಾರತಕ್ಕೆ ಜಗತ್ತಿನಲ್ಲೇ ಮೊದಲ ಸ್ಥಾನ.

★ ಪ್ರತಿವರ್ಷ ಭಾರತದಲ್ಲಿ ಒಡವೆ ತಯಾರಿಕೆಗೆ ಬಳಕೆಯಾಗುವ ಚಿನ್ನ 65 ಟನ್.

★ 20ಲಕ್ಷ ಚಿನ್ನದ ಕೆಲಸಗಾರರು ಪ್ರತಿ ವರ್ಷ ಸುಮಾರು 300 ಕೋಟಿರೂ. ಆಭರಣಗಳನ್ನು ತಯಾರಿಸುವರು.

★ 1975ಕ್ಕೆ ಮೊದಲು ಪ್ರತಿವರ್ಷ ಅಂದಾಜು 50 ಕೋಟಿ ರೂ. ಚಿನ್ನ ಭಾರತದೊಳಕ್ಕೆ ಅಕ್ರಮವಾಗಿ ರವಾನೆಯಾಗುತ್ತಿತ್ತು.

ಚಿನ್ನ: ಸ್ವಾರಸ್ಯ

+ ಜಗತ್ತಿನಲ್ಲಿ ಅತಿ ಹೆಚ್ಚು ಹೊನ್ನಿನ ನಿಕ್ಷೇಪಗಳಿರುವುದು ದಕ್ಷಿಣ ಆಫ್ರಿಕದಲ್ಲಿನ ಜೋಹನ್ಸ್‌ಬರ್ಗ್‌ನಲ್ಲಿ. ನಂತರದ ಸ್ಥಾನ ರಷ್ಯಾಕ್ಕೆ.

+ ಬಂಗಾರದ ಅತಿ ದೊಡ್ಡ ಮಾರುಕಟ್ಟೆ ಲಂಡನ್. ನಂತರದ್ದು ಜ್ಯೂರಿಚ್.

+ ಪ್ರತಿವರ್ಷ ವಿಶ್ವದಲ್ಲಿ ಬಂಗಾರದ ಉತ್ಪಾದನೆ ಸುಮಾರು ಒಂದು ಸಾವಿರ ಟನ್. ಈವರೆಗೂ ಪ್ರಪಂಚದಲ್ಲಿ ಉತ್ಪಾದನೆಯಾದ ಚಿನ್ನ ಅಂದಾಜು 94,000 ಟನ್‌ಗಳಷ್ಟು.

+ ಮಾದಕ ದ್ರವ್ಯಗಳನ್ನು ಬಿಟ್ಟರೆ ಹೆಚ್ಚು ಕಳ್ಳ ಸಾಗಣೆಯಾಗುತ್ತಿರುವ ವಸ್ತು ಚಿನ್ನ.

+ ಪ್ರಪಂಚದಲ್ಲಿ ಚಿನ್ನದ ಕಳ್ಳ ಸಾಗಣೆಗೆ ಪ್ರಖ್ಯಾತವಾದ ಕೇಂದ್ರ ದುಬೈ.

ಹೆಚ್ಚಿನ ವಿದ್ಯುತ್‌ದರ ಚಿನ್ನಕ್ಕೆ ಸಿಗುವ ಕಡಿಮೆ ಬೆಲೆ ಇವೆರಡು ಅಂಶಗಳು ಚಿನ್ನದ ಗಣಿ ಸಂಸ್ಥೆ ಹೆಚ್ಚಿನ ನಷ್ಟ ಅನುಭವಿಸಲು ಮುಖ್ಯ ಕಾರಣಗಳು. ಕಂಪನಿ ವಿದ್ಯುತ್‌ಗೆ ಅತಿಹೆಚ್ಚಿನ ದರ ತೆರುತ್ತಿದ್ದರೆ ಕೇಂದ್ರ ಸರಕಾರ ಅತಿ ಕಡಿಮೆ ಬೆಲೆ ನೀಡಿ ಕಂಪನಿಯಿಂದ ಚಿನ್ನವನ್ನು ಖರೀದಿಸುತ್ತಿದೆ. ಮುಕ್ತ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಗಗನಕ್ಕೆ ಏರಿದ್ದರೂ ಸರಕಾರ ಅತ್ಯಂತ ಕಡಿಮೆ ದರವನ್ನು ನೀಡುತ್ತಿದೆ. ಇವರ ಜೊತೆಗೆ ನಷ್ಟಕ್ಕೆ ಇನ್ನೊಂದು ಕಾರಣ ಸೋರುವಿಕೆ. ಉತ್ಪಾದನೆಯಾದ ಚಿನ್ನ ವಿವಿಧ ರೀತಿಗಳಿಂದ ಸೋರುತ್ತಿದ್ದು ನಷ್ಟಕ್ಕೆ ಕಾರಣವೆನ್ನಲಾಗುತ್ತಿದೆ.

● ಚಿನ್ನದ ಗಣಿಯೆಂದೇ ಪ್ರಸಿದ್ಧವಾದ ಕೆ.ಜಿ.ಎಫ್. ಗಣಿಗಳಲ್ಲಿ ಶೀಲೈಟ್, ಯುರೇನಿಯಂ ಮುಂತಾದ 25 ಖನಿಜಗಳು ಪತ್ತೆಯಾಗಿವೆ.

● ಜೊತೆಗೆ ಚಿನ್ನ ಗಣಿಗಳಲ್ಲಿ ಸಾಮಾನ್ಯವಾಗಿ ಕಂಡು ಬರದ 15 ಹೊಸ ಖನಿಜಗಳೂ ಇವೆ. ಹೊಸ ಖನಿಜಗಳಿಗೆ "ರಾಧಾಕೃಷ್ಣೇ ಪೈಟ್" ಹಾಗೂ ಕೋಲಾರೈಟ್ ಎಂಬ ಹೆಸರು ಕೊಡಲಾಗಿದೆ.

● ಅಮೂಲ್ಯ ಶೀಲೈಟ್‌ನಿಂದ ಟಂಗ್‌ಸ್ಟನ್ ಉತ್ಪಾದನೆಯೂ ಇಲ್ಲಿ ಆರಂಭವಾಗಿದ್ದು ಭೌತ ಶಾಸ್ತ್ರದ ಅನೇಕ ಪ್ರಯೋಗಗಳಿಗೆ ಗಣಿ ಅವಕಾಶ ಮಾಡಿಕೊಟ್ಟಿದೆ.

ನಂದಿದುರ್ಗ ಮತ್ತು ಚಾಂಪಿಯನ್ ರೀಫ್‌ನರಿ ಗಣಿಗಳು ಮಾತ್ರ ಚಾಲ್ತಿಯಲ್ಲಿದ್ದು ಉಳಿದೆಲ್ಲ ಗಣಿಗಳು ಮುಚ್ಚುವ ಹಂತದಲ್ಲಿವೆ. ಈಗ 13 ಸಾವಿರ ಕಾರ್ಮಿಕರಿಗೆ ಆಶ್ರಯವಿತ್ತಿರುವ ಕೋಲಾರ ಚಿನ್ನದ ಗಣಿಗಳ ಬದುಕು ಹೆಚ್ಚೆಂದರೆ 10-15 ವರ್ಷಗಳು ಮಾತ್ರ.

ಚಿನ್ನದ ಗಣಿಗಳಲ್ಲಿ ಯುರೇನಿಯಂ ಟಂಗ್‌ಸ್ಟನ್ ಮುಂತಾದ ನಿಕ್ಷೇಪಗಳಿವೆ ಎಂಬುದನ್ನು ಪತ್ತೆ ಮಾಡಿದ್ದರೂ ಅವು ಯಾವುವೂ ಸದ್ಯದ ಪರಿಸ್ಥಿತಿಯಲ್ಲಿ ಚಿನ್ನಗಣಿಗಳಿಗೆ ಹೊಸ ಜೀವ ತುಂಬುವ ಸ್ಥಿತಿಯಲ್ಲಿಲ್ಲ. ಈ ಪ್ರದೇಶದಲ್ಲಿ ಹೊಸ ಚಿನ್ನದ ನಿಕ್ಷೇಪಗಳಿಗಾಗಿ ಶೋಧ ನಡೆದಿದ್ದರೂ ಫಲದಾಯಕವಾಗಿಲ್ಲ. ಆಕಸ್ಮಾತ್ತಾಗಿ ನಿಕ್ಷೇಪಗಳು ದೊರಕಿದರೂ ಅದು ಲಾಭ ದಾಯಕ ವ್ಯವಹಾರವಾಗುವುದು ಕಷ್ಟ.

ವೈಭವದ ದಿನಗಳಲ್ಲಿ 'ಚಿಕ್ಕ ಇಂಗ್ಲೆಂಡ್'. ಎಂದು ಹೊಗಳಿಸಿಕೊಂಡ ಕೆ.ಜಿ.ಎಫ್. ಈಗ ತನ್ನೆಲ್ಲ ವೈಯ್ಯಾರವನ್ನು ಸೊಗಸನ್ನು ಕಳೆದುಕೊಂಡು ಬರೀ ಸೈಯೊನೈಡ್ ಗುಡ್ಡಗಳೊಡನೆ ಸೊರಗುತ್ತಿದೆ. ●

ಇದು ಜೀವ ಇದು ಜೀವನ

ಕರ್ನಾಟಕದ ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ ಫೌಂಡ್ರಿ ವಿಭಾಗದಲ್ಲಿ ಹೆಚ್ಚಿನ ತರಬೇತಿ ಪಡೆಯಲು ನಾನು ಮತ್ತು ನನ್ನ ಗೆಳೆಯ ಮಧ್ಯ ಪ್ರದೇಶದ ಭಿಲಾಯ್ ಹತ್ತಿರವಿರುವ ದುರ್ಗ ಎಂಬಲ್ಲಿಗೆ ಹೋಗಿದ್ದೆವು. ದುರ್ಗ ಪಾಲಿಟೆಕ್ನಿಕ್ ಫೌಂಡ್ರಿಯಲ್ಲಿ ಬೀಡುಕಬ್ಬಿಣವನ್ನು ಕರಗಿಸಿ ಸ್ವತಃ ನಾವೇ ತಯಾರು ಮಾಡಿದ ಅಚ್ಚುಗಳಲ್ಲಿ ಹಾಕಲು ಹೇಳಿದ್ದರು. ಹಾಗೆಯೇ ಒಂದು ದಿನ ಪಾಲಿಟೆಕ್ನಿಕ್‌ನ ಲೋಹಶಾಸ್ತ್ರ ಮುಖ್ಯಸ್ಥರು ಅಲ್ಯೂಮಿನಿಯಂ ಲೋಹವನ್ನು ಕರಗಿಸಿ ವಿದೇಶ ಪದಕವೊಂದರ ಅಚ್ಚುಗಳಲ್ಲಿ ಎರಕ ಹೊಯ್ಯುವುದಕ್ಕೆ ಹೇಳಿದ್ದರು. ಇತ್ತ ಕಬ್ಬಿಣವನ್ನು ಕರಗಿಸುತ್ತಿದ್ದಂತೆಯೇ ಇನ್ನೊಂದು ಸಣ್ಣ ಮೂಸೆಯಲ್ಲಿ ಅಲ್ಯೂಮಿನಿಯಂನ್ನು ಕರಗಿಸುತ್ತಿದ್ದೆವು ಆದರೆ ಅಷ್ಟರಲ್ಲೇ ಅದುವರೆಗೂ ಇದ್ದ ಹಿತ್ತಾಳೆಯ ವಿದೇಶ ಪದಕ ನಾಪತ್ತೆಯಾಗಿತ್ತು, ಯಾರನ್ನು ಕೇಳಿದರೂ "ನಾನಲ್ಲ, ನಾನಲ್ಲ" ಎನ್ನುತ್ತಿದ್ದರು. ಈ ಫೌಂಡ್ರಿ ತರಬೇತಿಗಾಗಿ ನಮ್ಮನ್ನೊಳಗೊಂಡು ಎಲ್ಲೆಡೆಯಿಂದ ಒಟ್ಟು ಇಪ್ಪತ್ತು ಜನ ಹೋಗಿದ್ದೆವು. ಈಗ ಯಾರೊಬ್ಬ ಮಾಡಿದ ತಪ್ಪಿಗಾಗಿ ಉಳಿದವರೆಲ್ಲ ಕಳ್ಳರೆನಿಸಿಕೊಳ್ಳಬೇಕಲ್ಲವೆಂದು ನಮಗೆ ದಿಗಿಲಾಯಿತು. ಆದ್ದರಿಂದ ನಾನು ಹಾಗೂ ನನ್ನ ಸ್ನೇಹಿತ ಉಳಿದ ಜನರನ್ನು ಕರೆದು ಹೇಳಿದೆವು. "ನೋಡಿ ಆಕಸ್ಮಾತ್ ಏನೋ ಪ್ರಮಾದ ಆಗಿ ನಿಮ್ಮಲ್ಲಿ ಪದಕ ಉಳಿದು ಕೊಂಡಿದ್ದರೆ ದಯವಿಟ್ಟು ವಾಪಸು ಕೊಟ್ಟುಬಿಡಿ. ಸುಮ್ಮನೆ ಈ ತರಬೇತಿಯಲ್ಲಿ ಭಾಗವಹಿಸಿದ ಎಲ್ಲರ ಮೇಲೆ ಅನುಮಾನ ಬರುವುದಕ್ಕೆ ಅವಕಾಶ ಕೊಡಬೇಡಿ" ಎಂದು. ಆದರೆ ಕದ್ದವನು ಹೇಗೆ ತಾನೆ ಪದಕ ತಿರುಗಿಕೊಟ್ಟಾನು? ಆಗ ನನ್ನ ಜೊತೆಯಲ್ಲಿ ಬಂದಿದ್ದ ಗುಜರಾತ್ ರಾಜ್ಯದವನು ಹೇಳಿದ "ನೀವು ಹೀಗೆ ಮಾಡಿದಲ್ಲಿ ನಾವು ನಿಮ್ಮ ರೂಂ ತಪಾಸಣೆ ಮಾಡುತ್ತೇವೆ" ಎಂದು. ಆದರೂ ಪದಕ ಹೊರಗೆ ಬರಲಿಲ್ಲ. ಸರಿ, ನಮ್ಮ ಬೆಳಗಿನ ತರಬೇತಿ ಮುಗಿಸಿ ನಾವು ಇಳಿದು ಕೊಂಡಿದ್ದ ಹಾಸ್ಟೆಲ್‌ಗೆ ಹೋದೆವು. ರೂಂಗೆ ಹೋಗಿ ಬಟ್ಟೆ ಬದಲಾಯಿಸಿ ಬಚ್ಚಲು ಮನೆಗೆ ತೆರಳಿದ ನನ್ನ ಸ್ನೇಹಿತ ತಕ್ಷಣ ನನ್ನನ್ನು ಕೂಗಿದ. ಏನೆಂದು ಹೋಗಿ ನೋಡಿದರೆ ಬಚ್ಚಲು ಮನೆಯ ಕಿಟಕಿಯಲ್ಲಿ ಆ ವಿದೇಶಿ ಪದಕವಿದೆ! ಸರಿ ಒಬ್ಬರ ಮೇಲೆ ಒಬ್ಬರು ಅನುಮಾನ ಪಟ್ಟು ಜಗಳ ಆರಂಭವಾಯಿತು. ಬಹಳ ಹೊತ್ತಿನ ಮೇಲೆ ಜಗಳ ನಿಂತಾಗ ಧುತ್ತನೆ ಮತ್ತೊಂದು ಸಮಸ್ಯೆ ಎದುರಾಯಿತು. ಕದ್ದ ಪದಕವೇನೊ ದೊರೆಯಿತು. ಆದರೆ ಅದನ್ನು ವಾಪಸು ಮಾಡುವುದು ಹೇಗೆ? ಯಾರೋ ಒಬ್ಬರು ಹೇಳಿದರು: ಹಾಗೆ ಸಿಕ್ಕಿದೆ ಎಂದು ಕೊಟ್ಟಲ್ಲಿ ತರಬೇತಿಗೆ ಬಂದವರು ಕಳ್ಳರು ಎಂಬ ಭಾವನೆ ಬರುವುದರಿಂದ ಸೀದಾ ಹೋಗಿ ಫೌಂಡ್ರಿ ಆವರಣದಲ್ಲಿ ಯಾರಿಗೂ ಗೊತ್ತಾಗದಂತೆ ಎಸೆದು ಬರೋಣ ಎಂದು. ಆದರೆ ಎಸೆಯುತ್ತಿರುವುದನ್ನು ಯಾರಾದರೂ ನೋಡಿ ಎಸೆದವನೇ ಕಳ್ಳ ಎಂದು ಭಾವಿಸಿದರೆ?

ಆಗ ನಮ್ಮ ಜೊತೆಗೆ ಬಂದಿದ್ದ ಆಂಧ್ರ ಪ್ರದೇಶದ ಹಿರಿಯ ಮುಸ್ಲಿಂ ಸಹವರ್ತಿಗಳು "ನಾನೆಲ್ಲ ಸರಿಮಾಡುತ್ತೇನೆ ಅದನ್ನಿಲ್ಲಿ ಕೊಡಿ" ಎಂದು ಪದಕವನ್ನು ತಮ್ಮಲ್ಲಿ ಇಟ್ಟುಕೊಂಡರು. ಮಾರನೇ ದಿನ ಎಲ್ಲರಿಗಿಂತ ಅವರು ಸ್ವಲ್ಪ ಮೊದಲೇ ಪಾಲಿಟೆಕ್ನಿಕ್‌ಗೆ ಹೋದರು. ನಂತರ ಕ್ಲಾಸು ನಡೆಯುತ್ತಿದ್ದ ಹಾಗೆ ಒಬ್ಬರು ಎದ್ದು ನಿಂತು "ಸಾರ್ ನಿನ್ನೆ ಕಳೆದು ಹೋದ ಪದಕ.." ಎಂದು ಹೇಳುವಷ್ಟರಲ್ಲಿ ಲೋಹಶಾಸ್ತ್ರದ ಮುಖ್ಯಸ್ಥರು "ಹೌದು, ನಿನ್ನೆ ಕಳೆದು ಹೋದ ಪದಕ ಸಿಕ್ಕಿತು.

ನಿಮ್ಮ ಮುಸ್ಲಿಂ ಬಂಧುವೊಬ್ಬರು ನಿನ್ನೆ (ಶುಕ್ರವಾರ) ನಮಾಜಿಗೆ ಹೋಗುವಾಗ ಗೊತ್ತಿಲ್ಲದೆಯೇ ಇಟ್ಟುಕೊಂಡು ಹೋಗಿದ್ದರಂತೆ ಅವರೇ ಬೆಳಿಗ್ಗೆ ತಂದುಕೊಟ್ಟಿದ್ದಾರೆ. ನಿನ್ನೆ ಅನಾವಶ್ಯಕವಾಗಿ ನಾವು ನಿಮ್ಮೆಲ್ಲರ ಮೇಲೆ ಅನುಮಾನ ಪಟ್ಟಿದ್ದೆವು. ಕ್ಷಮಿಸಿ" ಎಂದಾಗ ನಮಗೆಲ್ಲಾ ಭಾರಿ ಗಂಡಾಂತರದಿಂದ ಪಾರಾದ ಅನುಭವ ಪದಕ ಕಳೆದು ಹೋದ ಸಂದರ್ಭದಲ್ಲಿ ನಮಾಜಿಗೆ ಹೋಗಿದ್ದ ಆ ಮುಸ್ಲಿಂ ಬಂಧು ನಮ್ಮೆಲ್ಲರ ಮರ್ಯಾದೆ ಕಾಪಾಡಿದ್ದರು.

-ಹರಿಹರಪುರ ಬಾಲಕೃಷ್ಣ.

ನಾವು ಮೈಸೂರಿನಲ್ಲಿದ್ದಾಗ ನಡೆದ ಘಟನೆ ಇದು. ನಮ್ಮ ಎದುರುಮನೆಯಾಕೆ ಮಕ್ಕಳಿಲ್ಲದವರು. ಬಹಳ ಸೂಕ್ಷ್ಮ ಮನಸ್ಸಿನವರು. ಒಂದು ಬೆಳಿಗ್ಗೆ ಹಾರ್ಮೋನಿಯಂ ಧಾರಿಯಾಗಿ ಬಂದ ಭಿಕ್ಷುಕನೊಬ್ಬ ಅವರ ಮನೆಯ ಮುಂದೆ ನಿಂತವನೇ ಎತ್ತರದ ದನಿಯಲ್ಲಿ ಹಾಡತೊಡಗಿದ "ಬಾಲಕರಿ ಲ್ಲದ.... ಬಾಲೀದ್ಯಾತರ ಜನ್ಮ... ಬಾಡೀಗಿ ಎತ್ತು ದುಡಿದಂಗ.. ಬಾಳೆಲೆಯ ಹಾಸ್ಯುಂಡು ಬೀಸಿ ಒಗೆದಂಗ.." ತುಳಸಿ ಪೂಜೆ ಮಾಡುತ್ತಿದ್ದ ಮನೆಯಾಕೆಗೆ ಅದನ್ನು ಕೇಳಿ ದುಃಖ ಉಕ್ಕಿಬಂತು. ನೆಲಕ್ಕೆ ಕುಸಿದು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದರು. ಗ್ರಹಚಾರವಶಾತ್ ಆಕೆಯ ಪತಿ ಮನೆಯಲ್ಲಿದ್ದರು. ಭಿಕ್ಷುಕನ ಹಾಡು. ಪೆಂಡತಿಯ ಅಳು ಅವರಿಗೆ ಕೇಳಿಸಿದವು. ಸರಿ ಅವರು ನರಸಿಂಹಾವತಾರ ತಾಳಿ ಹೊರಗೆ ಬಂದು ಛಟೀರ್, ಛಟೀರ್ ಎಂದು ಭಿಕ್ಷುಕನ ಕೆನ್ನೆಗೆ ಬಾರಿಸಿದರು. ಅದನ್ನು ನೋಡುತ್ತಿದ್ದ ನನಗೆ ಬಹಳ ಗಾಬರಿ ಯಾಯಿತು. ಅಷ್ಟರಲ್ಲಿ ನಮ್ಮ ನೆರೆಮನೆಯಾತ ಓಡಿ ಹೋಗಿ ಭಿಕ್ಷುಕನನ್ನು ಬಿಡಿಸಿ, ಮನೆಯ ಯಜಮಾನನಿಗೆ ಸಮಾಧಾನ ಹೇಳುತ್ತ, "ಅಲ್ಲ ಸ್ವಾಮಿ, ನಿಮಗೆ ಮಕ್ಕಳಿಲ್ಲದಿರೋ ವಿಷಯ ಅವನಿಗೇನು ಗೊತ್ತು? ಅಥವಾ ತಾನು ಹಾಡ್ತಾ ಇರೋ ಹಾಡಿನ ಅರ್ಥವಾದರೂ ಅವನಿಗೆ ತಿಳಿದಿದೆಯೇ. ಹಿಂದೆ ಮುಂದೆ ಯೋಚಿಸದೆ ಹೊಟ್ಟೆಗಿಲ್ಲದೋರ ಮೇಲೆ ಕೈ ಮಾಡಿದಿರಲ್ಲ, ಇದು ನ್ಯಾಯವೇ ಹೇಳಿ?" ಎಂದಾಗ ಮನೆಯಾತ ಮರುಮಾತನಾಡದೆ ಒಳಗೆ ಹೋದರು. ಅದನ್ನು ಕಂಡ ನನಗೆ ತಪ್ಪು ಭಿಕ್ಷುಕನದೂ ಅಲ್ಲ, ಮನೆಯಾತನದೂ ಅಲ್ಲ; ಮನುಷ್ಯ ಪ್ರಯತ್ನಕ್ಕೆ ಮೀರಿದ್ದನ್ನು ಕುರಿತು ಮೂದಲಿಸಿರುವ ಜನಪದ ಸಾಹಿತ್ಯದ್ದು ಎನಿಸಿತು.

-ಕಸ್ತೂರಿ

"ಸ್ವಾಮಿ ಸೀತಮ್ನೋರಿಗೆ ನಮ್ಮ ಹೆಸರಲ್ಲಿ ಕುಂಕುಮಾರ್ಚನೆ ಮಾಡಿ" ದಂಪತಿಗಳು ಅರ್ಚಕರಿಗೆ ವಿನಂತಿಸಿದರು. ಮರುಕ್ಷಣ ಸ್ಫುಟವಾದ ಮಂತ್ರಘೋಷ ಸಾಂಗವಾಗಿ ನಡೆಯಿತು ಪೂಜೆ. ಒಂದಕ್ಷರವೂ ಲೋಪವಿಲ್ಲ. ಪೂಜೆಮುಗಿದಾಕ್ಷಣ ಕುಂಕುಮ ಪ್ರಸಾದ ದಂಪತಿಗಳ ಕೈ ಸೇರಿತು.

"ಸ್ವಾಮಿ ತಮ್ಮ ದಕ್ಷಿಣೆ ಎಷ್ಟು?" ಪತಿಯ ಪ್ರಶ್ನೆ.

"ದಕ್ಷಿಣೆಯೆ?" ಮಂದಸ್ಮಿತ ಅರ್ಚಕರು ಮುಂದುವರಿಸಿದರು. "ಶ್ರೀರಾಮನಿಗೆ ಮೂರು ಪ್ರದಕ್ಷಿಣೆ".

ಈ ಘಟನೆ ನಡೆದದ್ದು ಚಿಕ್ಕಮಗಳೂರಿನ ಸಮೀಪದ ಹಿರೇಮಗಳೂರಿನಲ್ಲಿರುವ ಪವಿತ್ರ ಸ್ಥಳ ಭಾರ್ಗವಪುರಿ ಕಲ್ಯಾಣ ರಾಮನ ದೇಗುಲದಲ್ಲಿ.

ಕಿಲುಬು ಕಾಸಿಗೂ ಹಲ್ಲು ಗಿಂಜುವ ಪೂಜಾರಿಗಳ ನಡುವೆ ಇಂಥ ಅರ್ಚಕರೂ ಅಲ್ಲಲ್ಲಿ ಇದ್ದಾರಲ್ಲವೆ?

-ಅರವಿಂದ ದೀಕ್ಷಿತ.

"ಯಾವ ಟೂಥ್‌ಪೌಡರ್‌ನಲ್ಲಿ ಲವಂಗದೆಣ್ಣೆ ಇಲ್ಲವೋ ನಾನದನ್ನು ಎಂದೂ ಬಳಸಲಾರೆ"



"ಆದ್ದರಿಂದಲೇ ನನ್ನ ಮೆಚ್ಚಿನ ಟೂಥ್‌ಪೌಡರ್ ಪ್ರಾಮಿಸ್. ಲವಂಗದೆಣ್ಣೆಯಿಂದ ಸಮೃದ್ಧ, ಎಲ್ಲೆಲ್ಲಿಯೂ ಸುಪ್ರಸಿದ್ಧ. ಲವಂಗದೆಣ್ಣೆಗೆ ಎರಡು ವಿಶೇಷ ಗುಣಗಳಿವೆ. ಒಂದನೆಯದು, ಇದು ಹಲ್ಲುಗಳನ್ನು ಸಣ್ಣ ಸಣ್ಣ ತೊಂದರೆಗಳಿಂದ ಸದಾ ಸುರಕ್ಷಿತವಾಗಿಡುತ್ತದೆ. ಇವರ ಪ್ರಭಾವ, ಹಲ್ಲುಗಳಿಗೆ ಹಾನಿಯುಂಟು ಮಾಡುವ ಕೀಟಾಣುಗಳನ್ನು ತಡೆಗಟ್ಟುತ್ತದೆ. ಫಲವಾಗಿ, ನಿಮ್ಮ ಹಲ್ಲುಗಳು ಬಹಳ ದೃಢವಾಗಿ ಇರುತ್ತವೆ. ಎರಡನೆಯದು, ನಿಮ್ಮ ಉಸಿರನ್ನು ಉಲ್ಲಾಸಕರವಾಗಿಸುತ್ತದೆ, ದುರ್ಗಂಧರಹಿತವಾಗಿಡುತ್ತದೆ. ಆದುದರಿಂದ ನಿಮ್ಮೊಡನೆ ಸಂಭಾಷಣೆ ಮಾಡುವವರು ತಮ್ಮ ಮುಖವನ್ನು ತಿರುಗಿಸಿಕೊಳ್ಳುವುದಿಲ್ಲ.

ಮತ್ತು ಎಲ್ಲಕ್ಕಿಂತ ದೊಡ್ಡ ಸಂಗತಿಯೆಂದರೆ ಗುಣಮೌಲ್ಯಗಳ ತುಲನೆಯಲ್ಲಿ ಪ್ರಾಮಿಸ್ ಟೂಥ್‌ಪೌಡರ್‌ಗೆ ಸರಿಸಾಟಿಯಿಲ್ಲ. ನಿಮ್ಮ ಹಣಕ್ಕೆ ದೊರೆಯುವ ಮೌಲ್ಯಕ್ಕೆ ಇತಿಮಿತಿಯಿಲ್ಲ. ನನ್ನ ಮಾತು ಕೇಳಿರಿ. ಪ್ರಾಮಿಸ್ ಟೂಥ್‌ಪೌಡರನ್ನೇ ಕೊಳ್ಳಿರಿ. ಇದು ಲವಂಗದೆಣ್ಣೆಯಿಂದ ಸಮೃದ್ಧವಾಗಿದೆ... ಬಲ್ಸಾರಾರವರ ವಿಚಾರಶಕ್ತಿಗೆ ಪ್ರಮಾಣವಾಗಿದೆ".



ಲವಂಗದೆಣ್ಣೆಯ ಅದ್ಭುತ ರಚನೆ

ಪ್ರಾಮಿಸ್
ಟೂಥ್‌ಪೌಡರ್



ಬಲ್ಸಾರಾ
-ಟೂಥ್‌ಪೇಸ್ಟ್ ತಜ್ಞರು

CHAITRA-B BLS 828 KAN

ಭೂಲೋಕದ ಬಹು ಹಳೆಯ ಜೀವಿ

ಜಿರಲೆ



ಕೃಷ್ಣ ಶ್ರೀನಿವಾಸ ಪಂಚಭಾವಿ

ಜೊಂಡಿಗ ಅಥವಾ ಜಿರಳೆಯನ್ನು ನೋಡಿ ಅಸಹ್ಯಪಟ್ಟು ಕೊಳ್ಳದವರನ್ನಾಗಲಿ ಅದು ಇಲ್ಲದೇ ಇರುವ ಮನೆಯನ್ನಾಗಲ್ಲಿ ನೀವೆಂದಾದರೂ ಕಂಡಿದ್ದೀರಾ? ಎಲ್ಲರಿಗೂ ಪರಿಚಿತವಿರುವ, ಸರ್ವಾಂತರ್ಯಾಮಿಯಾದ ಈ ಕೀಟದ ಬಗ್ಗೆ ನಿಮಗೆಷ್ಟು ಗೊತ್ತು?.

35 ಕೋಟಿ ವರ್ಷಗಳಿಂದ ಈ ಪ್ರಪಂಚದ ಆಗುಹೋಗುಗಳನ್ನು ನೋಡುತ್ತ ಬಂದಿರುವ ಜಿರಳೆ ಕೀಟ ಪ್ರಪಂಚದಲ್ಲಿ ಅತ್ಯಂತ ವಿಸ್ಮಯಕಾರೀ ಜೀವಿ. 17 ಕೋಟಿ ವರ್ಷ ಗಳ ಹಿಂದೆ ಡೈನೋಸಾರುಗಳಂಥ ದೈತ್ಯ ಪ್ರಾಣಿಗಳನ್ನು ಈ ಭೂಮಿಯ ಮೇಲೆ ಸ್ವಾಗತಿಸಿ. 10 ಕೋಟಿ ವರ್ಷಗಳ ನಂತರ ಅವುಗಳಿಗೆ ವಿದಾಯವನ್ನೂ ಹೇಳಿದ ಕೀಟ ಇದು. ಭೂಗರ್ಭದಲ್ಲಿ ಕಲ್ಲಿದ್ದಲು ಮತ್ತು ಪೆಟ್ರೋಲಿಯಂಗಳು ರೂಪತಾಳುವ ಕಾಲಕ್ಕಾಗ ಜಿರಲೆ ಸಾಕಷ್ಟು ಬದುಕು ಮಾಡಿತ್ತು. ಪ್ರಪಂಚದ

ಅನೇಕ ಪರ್ವತಾವಳಿಗಳು ಜನ್ಮ ತಳೆದುದನ್ನೂ ಇದು ಕಣ್ಣಾರೆ ಕಂಡಿದೆ. ಇದರ 35 ಕೋಟಿ ವರ್ಷಗಳ ಬದುಕನ್ನು ನಮ್ಮ ಒಂದು ವರ್ಷದ ಪರಿಮಾಣದಲ್ಲಿ ಹೇಳುವುದಾದರೆ ವರ್ಷಾರಂಭಕ್ಕೆ ಭೂಮಿಯ ಮೇಲವತರಿಸಿದ ಜಿರಳೆ ನಮ್ಮನ್ನು ಡಿಸೆಂಬರ್ 30 ಕ್ಕೆ ಈ ಭೂಮಿಯ ಮೇಲೆ ಬರಮಾಡಿ ಕೊಂಡಿತು.

ಯಾವುದೇ ವಿಷಯ ವಾತಾವರಣದಲ್ಲಿಯೂ ಬದುಕಿ ಉಳಿಯುವ ಕಲೆ ಜಿರಲೆಗೆ ಮಾತ್ರ ಸಾಧಿತವಾಗಿದೆ. ಅಂತೆಯೇ ಇದೊಂದು ಜೀವಂತ ಪಳಿಯುಳಿಕೆ ಪ್ರಪಂಚದ ಅತಿ ಶುಷ್ಕ ಮರುಭೂಮಿಯಿಂದ ಓಡಿದು ನಮ್ಮ ಟಿ.ವಿ. ಸೆಟ್ಟುಗಳಲ್ಲಿಯೂ ಕಂಡು ಬರುವ ಇದು ಬಾಹ್ಯಾಕಾಶಕ್ಕೂ ಪ್ರಯಾಣ ಮಾಡಿದೆ. 3500 ಪ್ರಭೇದಗಳುಳ್ಳ ಬ್ಲಾಟ್ಟಿಡೀ ಎಂಬ ಕೀಟ ಕುಟುಂಬಕ್ಕೆ ಸೇರಿದ ಈ ಜೀವಿಯ ಶೇಕಡ ಒಂದರಷ್ಟು ಪ್ರಭೇದಗಳು ಮಾತ್ರ ನಮ್ಮ ವಸತಿಗಳಲ್ಲಿ ಕಂಡು ಬರುತ್ತವೆ. ಉಳಿದವು ನಿಸರ್ಗದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ವಾಸಿಸುತ್ತವೆ.

ಇಷ್ಟೊಂದು ವೈವಿಧ್ಯಮಯ ಬದುಕನ್ನು ಬಾಳಲು ಜಿರಲೆಗೆ ಇರುವ ವಿಶೇಷ ಗುಣಗಳಾದರೂ ಯಾವುವು? ವಿಧ್ಯಮಯ ಆಹಾರ! ಹೂಗಿಡದ ಎಳೆಯ ಮೊಗ್ಗು ಶೂ ಚಪ್ಪಲಿ ಚಿತ್ರಿ ಚಿತ್ರಗಳ ಒಂದೆ ಸವರಿರುವ ಗೋಂದು, ಸೋಪು, ಛತ್ರಿಯ ಬಟ್ಟೆ, ಪುಸ್ತಕ ಗಳು, ಅಮೂಲ್ಯ ಉಣ್ಣೆಯ ಬಟ್ಟೆ, ರೇಷ್ಮೆ ಸೀರೆ ಗಳು, ದಿಂಬಿಗೆ ಅಂಟಿರುವ ಎಣ್ಣೆ ಜಿಡ್ಡು ಕೊನೆಗೆ ಗೋಡೆಗೆ ಹಚ್ಚಿದ ಆಯಿಲ್ ಪೇಂಟನ್ನು ತಿಂದು ಬಿಡುತ್ತದೆ ಈ ಕೀಟ. ಅಷ್ಟೇ ಅಲ್ಲ ಒಂದು ವೇಳೆ ಯಾವ ಆಹಾರವೂ ಸಿಗಲಿಲ್ಲವೆಂದಾದರೆ ತನ್ನ ಬಂಧುಗಳು ಇಟ್ಟ ಮೊಟ್ಟೆಗಳನ್ನು ಕಬಳಿಸಲೂ ಒಂದೆ ಮುಂದೆ ನೋಡುವದಿಲ್ಲ. ಹಾಗೆಯೇ ಆಹಾರವಿಲ್ಲದೆಯೂ ಅನೇಕ ತಿಂಗಳುಗಳವರೆಗೆ ಜೀವಿಸಿರಬಲ್ಲದು. ಎರಡು ತಿಂಗಳು ಕೇವಲ ನೀರು ಕುಡಿದು ಇರಬಲ್ಲ ಶಕ್ತಿಯುಳ್ಳ ಜಿರಳೆ ಐದು ತಿಂಗಳುಗಳವರೆಗೆ ಒಣ ಆಹಾರವನ್ನೇ ಸೇವಿಸಿ ಇರಬಲ್ಲದು.

ಜಿರಳೆ ಪಸರಿಸುವ ದುರ್ನಾತದಿಂದಾಗಿಯೇ ನಾವು ಅದನ್ನು ಕಂಡರೆ ಅಸಹ್ಯಪಟ್ಟು ಕೊಳ್ಳುತ್ತೇವಷ್ಟೆ. ಆದರೆ ಹೀಗೆ ದುರ್ನಾತ ಸ್ರವಿಸುವುದರ ಮೂಲಕವೇ ಅದು ತನ್ನ ಅನೇಕ ಶತ್ರುಗಳನ್ನು ದೂರವಿಡುವುದು. ಇದು ಟೈಫಾಯಿಡ್, ಪೋಲೀಯೋ ಮತ್ತು ಅತಿಸಾರದ ರೋಗಾಣುಗಳನ್ನು ಪಸರಿಸುವುದೆಂಬ ಗುಮಾನಿಯೂ ಇದೆ. ಆದರೆ ತನ್ನ ಮಟ್ಟಿಗೆ ಮಾತ್ರ ನೈರ್ಮಲ್ಯವನ್ನು ಬಯಸುವ ಇದು ಕಾಲು ಮತ್ತು ಮೀಸೆ (ಎಂಟೆನಾ) ಗಳನ್ನು ಗಂಟೆಗಟ್ಟಲೇ ಸ್ವಚ್ಛ ಮಾಡಿ ಕೊಳ್ಳುತ್ತಿರುತ್ತದೆ.

ಅಕ್ಕಿಯ ಕಾಳಿಗಿಂತ ಚಿಕ್ಕ ಗಾತ್ರದಿಂದ ಮೊದಲ್ಗೊಂಡು ಎರಡೂವರೆ ಅಂಗುಲ ಉದ್ದದವರೆಗೂ ಇರುವ ಜಿರಳೆಗಳುಂಟು ಅಲ್ಲದೆ ತುದಿಯಿಂದ ತುದಿಗೆ 7 ಅಂಗುಲದವರೆಗೂ ಪಸರಿಸುವ ರೆಕ್ಕೆಗಳುಳ್ಳ ಜಿರಳೆಗಳೂ ಇವೆ. ಇದರ ಮೈ ಕಂದು ಮತ್ತು ಕಪ್ಪು ಕಂದು ಬಣ್ಣದ್ದು. ಎಲ್ಲ ಪ್ರಭೇದಗಳಿಗೂ ರೆಕ್ಕೆಗಳಿದ್ದರೂ ಅವುಗಳಿಗಿರುವ ಮೂರು ಜೊತೆ ಬಲಿಷ್ಠವಾದ ಕಾಲುಗಳೇ ನಿಜವಾದ ರಕ್ಷಣಾಂಗಗಳು. ಅತಿ ಶೀಘ್ರವಾಗಿ ಎಲ್ಲೆಂದರಲ್ಲಿ ನುಸುಳಲು ಈ ನಿಡಿದಾದ ಕಾಲುಗಳು ಸಹಾಯ ಮಾಡುತ್ತವೆ. ಅವುಗಳಿಗೆ ಇರುವ ಒಂದು ಜೊತೆ ಮೀಸೆ (ಎಂಟೆನಾ) ಗಳು ಸ್ಪರ್ಶೇಂದ್ರಿಯಗಳಂತೆ ಕೆಲಸ ಮಾಡುತ್ತವೆ. ಕತ್ತಲಿನಲ್ಲಿ ಮಾರ್ಗದರ್ಶಿಗಳಾಗಿಯೂ, ಆಹಾರ, ನೀರುಗಳನ್ನು ಮೂಸಿ ಪತ್ತೆ ಹಚ್ಚುವಲ್ಲಿಯೂ ಧ್ವನಿಯ ತರಂಗಗಳನ್ನು ಗ್ರಹಿಸುವಲ್ಲಿಯೂ ಅವು ಸಹಾಯ ಮಾಡುತ್ತವೆ. ನಿಶಾಚರಿಯಾದ ಇದು ತನ್ನ ವೈರಿಗಳಿಂದ ರಕ್ಷಣೆ ಪಡೆಯಲು ಈ ಮೀಸೆಗಳು ಸಹಾಯ ಮಾಡುತ್ತವೆ. ಜಿರಳೆಗೆ ಅತಿ ಮಂದವಾದ ಬೆಳಕನ್ನು ಗ್ರಹಿಸಬಲ್ಲಂತಹ ಒಂದು ಜೊತೆ ಸಂಯುಕ್ತ ಕಣ್ಣುಗಳೂ ಮತ್ತು ಮೂರು ಸಾದಾ ಕಣ್ಣುಗಳೂ ಇವೆ. ಅಂತೆಯೇ ಅಡಿಗೆ ಮನೆ ಅಥವಾ ಬಚ್ಚಲು ಮನೆಯ ದೀಪ ಹಾಕಿದ ತಕ್ಷಣ ಅತಿ ಚಾಲಾಕಿನಿಂದ ಅವುಸ್ಸಂದಿಗೊಂದಿಗಳಲ್ಲಿ ಕ್ಷಣಾರ್ಧದಲ್ಲಿ ಕಣ್ಮರೆಯಾಗಿ ಬಿಡುವದನ್ನು ನೀವು ಗಮನಿಸಿರಬಹುದು. ಸ್ಥಿತಿಸ್ಥಾಪಕತ್ವವುಳ್ಳ ದೇಹ ರಚನೆ ಹೆಚ್ಚು ಒತ್ತಡವನ್ನು ತಡೆದುಕೊಳ್ಳಲು ಅನುವಾಗಿದೆ ಅತ್ಯಂತ ಚಳಿಯಲ್ಲಿಯೂ ಜೊಂಡಿಗ ಬದುಕಿರಬಲ್ಲದು.

ಸಾಧಾರಣವಾಗಿ ಒಂದು ವರ್ಷದವರೆಗೆ ಜೀವಿಸಿರಬಲ್ಲ ಈ ಕೀಟ ಸಾಕಷ್ಟು ಸಂತಾನಾಭಿವೃದ್ಧಿ ಯನ್ನು ಮಾಡಿಕೊಳ್ಳುವುದು. ಪ್ರತಿ ಹೆಣ್ಣು ಕೀಟ 180 ರಿಂದ 200 ವರೆಗೂ ಸಂತಾನೋತ್ಪತ್ತಿ ಯನ್ನು ಮಾಡುವುದು. ಉಳಿದ ಅನೇಕ ಕೀಟಗಳಂತೆ ಪ್ರಾಯಕ್ಕೆ ಬಂದ ಹೆಣ್ಣು ಜಿರಳೆ ಹೆಂಗಸರ ಚಿಕ್ಕ ಪರ್ಸಿನಂತಿರುವ ಚೀಲದಲ್ಲಿ (Ootheca) 12 ರಿಂದ 40 ರವರೆಗೆ ಕ್ರಮಬದ್ಧವಾಗಿ ಮೊಟ್ಟೆಗಳನ್ನು ಜೋಡಿಸಿಟ್ಟು ಈ ಚೀಲವನ್ನು ಸುಲಭವಾಗಿ ಆಹಾರ ದೊರ ಕುವ ತಾಣಗಳ ಹತ್ತಿರ ಗೋಡೆಗೋ ಬಾಗಿಲು ಚೌಕಟ್ಟಿಗೋ ಪೆಟ್ಟಿಗೆ, ಟ್ರಂಕು ಅಥವಾ ಛತ್ರಿಯ ಪದರುಗಳಿಗೋ ಅಂಟಿಸಿ ಬಿಡು ವುದು. ಮೊಟ್ಟೆಗಳ ಈ ಚೀಲಕ್ಕೆ ಅದರ ಪರಿಸರದ ಬಣ್ಣವನ್ನು ಕೆದರಿ ಹಚ್ಚಿ ಅದು ಥಟ್ಟನೇ ಕಾಣವಂತೆ ಮಾಡಲೂ ಜಿರಳೆ ಮರೆಯುವದಿಲ್ಲ.

ಮನುಷ್ಯ ತಡೆದುಕೊಳ್ಳಬಹುದಾದುಕ್ಕಿಂತ 100 ಪಟ್ಟು ವಿಕಿರಣವನ್ನು ಇದು ತಡೆದು ಕೊಳ್ಳಬಲ್ಲದು. ಅಲ್ಲದೇ ಇದು ಅಗಾಧವಾದ ಗುರುತ್ವಾಕರ್ಷಣ ಬಲವನ್ನು ತಡೆದುಕೊಳ್ಳುವ ಶಕ್ತಿಯುಳ್ಳದ್ದು. ಬಾಹ್ಯಾಕಾಶದಲ್ಲಿ ಈ ಕೀಟದ ಪ್ರತಿಕ್ರಿಯೆಯನ್ನು ಅಭ್ಯಸಿಸಲು ಅಮೇರಿಕದ ವಿಜ್ಞಾನಿಗಳು ಇದನ್ನು ಅಲ್ಲಿಗೆ ರವಾನಿಸಿದ್ದಾರೆ.

ಮಾನವನಿಗೆ ಬರುವ ಕ್ಯಾನ್ಸರ್, ಹೃದಯ ರೋಗ ಮತ್ತು ಪೌಷ್ಟಿಕ ಆಹಾರ ತಯಾರಿಕೆಯ ಅನೇಕ ಪ್ರಯೋಗಗಳನ್ನು ಜಿರಳೆಯ ಮೇಲೆ ಪ್ರಪಂಚದಾದ್ಯಂತ ಮಾಡಲಾಗುತ್ತಿದೆ.

ಈ ಕೀಟ ಸಂಖ್ಯೆಯನ್ನು ಹತೋಟಿಯಲ್ಲಿ ಡಲು ವಿಜ್ಞಾನಿಗಳು ಅನೇಕ ಕೀಟನಾಶಕಗಳನ್ನೂ ಬೇರೆ ವಿಧಾನಗಳನ್ನೂ ರೂಪಿಸಿದ್ದರೂ ಹೊಸ ಪರಿಸರಕ್ಕೆ ಕೂಡಲೇ ಹೊಂದಿಕೊಳ್ಳುವ ಇದರ ಸಾಮರ್ಥ್ಯದ ಮುಂದೆ ಅವೆಲ್ಲ ಆವಿಷ್ಕಾರ ಗಳೂ ಕೆಲವೇ ಸಮಯದಲ್ಲಿ ನಿರುಪಯುಕ್ತ ವಾಗಿ ಬಿಡುತ್ತವೆ. ಕೀಟ ನಿಯಂತ್ರಣದ ತೀರ ಹೊಸ ವಿಧಾನಗಳಲ್ಲಿ ಒಂದಾದ ಲೈಂಗಿಕ ಚೋದನೆಯು ಬಹುಶಃ ನಮ್ಮನ್ನು ಈ ಕೀಟ ದಿಂದ ಮುಕ್ತ ಮಾಡಬಲ್ಲದು. ಹೆಣ್ಣು ಜಿರಳೆಯು ಗಂಡು ಜಿರಳೆಯ ಆಕರ್ಷಿ ಸಲು ಒಂದು ತರಹದ ಹಾರ್ಮೋನನ್ನು ಸ್ರವಿಸುತ್ತವೆ. ಈ ಹಾರ್ಮೋನನ್ನು ರಾಸಾಯಿನಿಕವಾಗಿ ಗುರುತಿಸಿ ಪ್ರಯೋಗಾಲಯದಲ್ಲಿ ಕೃತ್ರಿಮವಾಗಿ ಸಂಯೋಜಿಸುವಲ್ಲಿ ವಿಜ್ಞಾನಿಗಳು ಸಫಲರಾಗಿದ್ದಾರೆ. ಸೂಕ್ತವಾದ ಬಲೆಗಳಲ್ಲಿ ಈ ಹಾರ್ಮೋನನ್ನಿಟ್ಟು ಗಂಡುಗಳನ್ನಾಕರ್ಷಿಸಿ ಅವುಗಳ ಸಂತಾನಾಭಿವೃದ್ಧಿಯನ್ನು ಕುಂಠಿತಗೊಳಿಸುವ ತಂತ್ರಗಳನ್ನು ರೂಪಿಸಲಾಗುತ್ತಿದೆ. ಮನೆಯಲ್ಲಿ ಯಾವುದೇ ತರಹದ ಆಹಾರವನ್ನು ತೆರೆದಿಡದೇ ಅತಿ ಹೆಚ್ಚಿನ ಸ್ವಚ್ಛತೆಯನ್ನು ಕಾಪಾಡಿದರೆ ಮಾತ್ರ ಜಿರಳೆಯಿಂದ ನಮಗೆ ಸ್ವಲ್ಪ ಮಟ್ಟಿಗಿನ ಮುಕ್ತಿ ದೊರೆಕು ವುದು. ಪೇಟೆಯಲ್ಲಿ ಲಭ್ಯವಿರುವ ಕೀಟನಾಶದ ಹರಳುಗಳನ್ನು ಉಪಯೋಗಿಸಿಯೂ ಈ ಜಿರಳೆ ಗಳ ಸಂಖ್ಯೆಯನ್ನು ಕಡಿಮೆ ಮಾಡಬಹುದು.

ಕೆಲವು ಕೀಟಗಳು ನಮಗೆ ಹಲವು ಪಾಠ ಗಳನ್ನು ಕಲಿಸಿವೆ. ಯೋಜನಾ ಬದ್ಧವಾದ ಆಹಾರ ಸಂಗ್ರಹವನ್ನು ಇರುವೆಯಿಂದಲೂ, ಸಹಕಾರ, ಕೆಲಸಗಾರಿಕೆ ಹಾಗೂ ಸಣ್ಣ ಉಳಿತಾಯ (ಭಾರತ ಸರಕಾರದ ಸಣ್ಣ ಉಳಿತಾಯ ಖಾತೆಯ ಲಾಂಛನವನ್ನು ಗಮನಿಸಿ) ವನ್ನು ಜೇನ್ನೊಣಗಳಿಂದಲೂ ಮತ್ತು ಸಂಭ್ರಮದಿಂದ ನಿಸರ್ಗದ ಸವಿಯನ್ನು ಸವಿಯುವದನ್ನು ಪಾತರಗಿತ್ತಿ ಗಳಿಂದಲೂ ನಾವು ಕಲಿತ್ತಿದ್ದೇವೆ. ಆದರೆ 35 ಕೋಟಿ ವರ್ಷಗಳಿಂದ ಬದುಕಿ ಬಾಳಿದ ಜಿರಳೆ ನಮಗೆ ಯಾವುದೇ ಪಾಠವನ್ನು ಕಲಿಸಿಲ್ಲ. ●

ಸಜ್ಜನರನ್ನು ಒಂದು ದಾರದಿಂದ ಕಟ್ಟಿಹಾಕಬಹುದು. ಆದರೆ ದುರ್ಜನರನ್ನು ಒಂದು ಹಗ್ಗದಿಂದಲೂ ಕಟ್ಟಲು ಸಾಧ್ಯವಿಲ್ಲ.

● ಅನಾಮಿಕ

ಪ್ರಗತಿಯ ಪಂಚವರ್ಷ ಸಾಧನೆ ತಂದ ಸಂತಸ

ಪ್ರಸ್ತುತ ಸರ್ಕಾರಕ್ಕೆ ಐದು ವರ್ಷ ತುಂಬಿತು. ಕಳೆದ ಐದು ವರ್ಷಗಳಲ್ಲಿ ಕರ್ನಾಟಕ ಸರ್ಕಾರದ ಕ್ರಿಯಾಶೀಲ, ರಚನಾತ್ಮಕ ನೀತಿಯಿಂದ ಜನಸಾಮಾನ್ಯರ ಜೀವನದಲ್ಲಿ ಗಣನೀಯ ಪ್ರಮಾಣದ ಪರಿವರ್ತನೆ. ಅಧಿಕಾರ ವಹಿಸಿಕೊಂಡಂದಿನಿಂದಲೂ ರಾಜ್ಯದಲ್ಲಿ ಸತತವಾಗಿ ಬರ ಪರಿಸ್ಥಿತಿ. ಆದರೂ ಸರ್ಕಾರ ಜನತೆಗೆ ನೀಡಿದ್ದ ಭರವಸೆಗಳಲ್ಲಿ ಬಹುಪಾಲು ಈಡೇರಿವೆ. ಪರಿಣಾಮವಾಗಿ ಕರ್ನಾಟಕ ಎಲ್ಲಾ ವಿಧಗಳಲ್ಲೂ ರಾಷ್ಟ್ರದ ಇತರ ರಾಜ್ಯಗಳಿಗೆ ಮಾದರಿ.

ಕಡು ಬಡವರ ಜೀವನ ಸುಧಾರಣೆಗೆ ನಿರ್ದಿಷ್ಟ ಗುರಿಯ ಹತ್ತಂಟು ಕಾರ್ಯಕ್ರಮ. ಅಸಂಘಟಿತ ಕಾರ್ಮಿಕರ ನೆರವಿಗೆ 'ಆಶಾಕಿರಣ' ರಿಯಾಯಿತಿ ದರದಲ್ಲಿ ಆಹಾರ ಧಾನ್ಯ ಪಡೆಯಲು 'ಹಸಿರು ಕಾರ್ಡು'. ಶಾಲಾ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಅನಾಥ ವಿಧವೆಯರಿಗೆ ಮಾಸಾಶನ, ಕಾರ್ಮಿಕ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯ, ಬಡವರು ಮದುವೆ ಮಾಡಲು ತಾಳಿಭಾಗ್ಯ, ಸ್ವಚ್ಛ ದಕ್ಷ ಆಡಳಿತಕ್ಕಾಗಿ ಲೋಕಾಯುಕ್ತ, ಪರಿಶಿಷ್ಟ ವರ್ಗದ ರೈತರಿಗೆ 'ಗಂಗಾ ಕಲ್ಯಾಣ', ಗ್ರಾಮಾಣ ಸಂಪರ್ಕ ಕಲ್ಪಿಸಲು 'ಹಳ್ಳಿ ಹೆದ್ದಾರಿ ಸೇತುಬಂಧನ' ಬರ ಪರಿಸ್ಥಿತಿಯಲ್ಲಿ ದನಕರುಗಳ ರಕ್ಷಣೆಗೆ ಗೋಶಾಲೆ, ನಿತ್ಯದ ಅಗತ್ಯ ಪೂರೈಕೆಗೆ ಸಾಮಾಜಿಕ ಅರಣ್ಯ, ಹಳ್ಳಿ ಹಳ್ಳಿಗೂ 'ಕುಡಿಯುವ ನೀರು' ಮುಂತಾದ ಕಾರ್ಯಕ್ರಮಗಳ ಅನುಷ್ಠಾನ.

ಈ ವಿವಿಧ ಕಾರ್ಯಕ್ರಮಗಳನ್ವಯ 1986-87ರಲ್ಲಿ ನೆರವು ಪಡೆದವರ ವಿವರ ಇಂತಿವೆ:-

ಯೋಜನೆ	ಫಲಾನುಭವಿಗಳು
ಹಸಿರು ಕಾರ್ಡು	31,13,000
ಕೇಸರಿ ಮತ್ತು ಕಂದು ಬಣ್ಣದ ಕಾರ್ಡ್‌ಗಳು	49,97,000
ಉಚಿತ ಪಠ್ಯ ಪುಸ್ತಕ, ಸಮವಸ್ತ್ರ	70,00,000
ವಿಧವಾ ಮಾಸಾಶನ	3,64,000
ಕಾರ್ಮಿಕ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯ	2,09,000

ರೈತ ಸಮುದಾಯಕ್ಕೆ ನೂರು ಕೋಟಿ ರೂಪಾಯಿಗಳ ಹೆಚ್ಚು ರಿಯಾಯಿತಿ, ಒಣ ಬೇಸಾಯ ಅಭಿವೃದ್ಧಿ, ಕೈಗಾರಿಕೆಗಳ ಬೆಳವಣಿಗೆಗೆ ಹೊಸ ನೀತಿ. ತೀವ್ರ ಗ್ರಾಮೀಣಾಭಿವೃದ್ಧಿಯ ಕಾರ್ಯ ಪ್ರಗತಿಗೆ ಯೋಜನಾ ಆಯೋಗದಿಂದ ಪ್ರಶಂಸೆ.

ಮಹಾತ್ಮ ಗಾಂಧೀಜಿಯ ನಲ್ಮೆಯ ಕನಸಾದ ಪಂಚಾಯಿತಿ ರಾಜ್ಯ ವ್ಯವಸ್ಥೆಯನ್ನು ನಿರೂಪಕ್ಕೆ ತಂದ ಶ್ರೇಯಸ್ಸು. ಹಳ್ಳಿ ಹಳ್ಳಿಗೆ ಅಧಿಕಾರದ ವಿಸ್ತರಣೆ. ಮತದಾನದ ವಯೋಮಿತಿಯಲ್ಲಿ ಇಳಿತ. ಯುವ ಶಕ್ತಿಗೆ ಹೊಸ ಚಾಲನೆ. ಮಹಿಳೆಯರು, ದಲಿತ ವರ್ಗಕ್ಕೆ ವಿಶೇಷ ಪ್ರಾತಿನಿಧ್ಯ. ಪ್ರಗತಿಪರ ಕಾರ್ಯಗಳಲ್ಲಿ ಜನತೆಯ ಸಹಭಾಗಿತ್ವದ ಸುವರ್ಣ ಯುಗ. ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಹೊಸ ಅಧ್ಯಾಯ. ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ರಾಜ್ಯದ ಸಂಪತ್ತಿನ ಸಮಾನ ವಿತರಣೆಗೆ ಸೂಕ್ತ ಅವಕಾಶ.

ಪ್ರಕೃತಿಯ ಪ್ರಕೋಪದ ನಡುವೆಯೂ ಉತ್ತಮ ಜೀವನ
ನಿರ್ಮಾಣಕ್ಕಾಗಿ ನಿಷ್ಠೆಯ ನಿರಂತರ ಪ್ರಯತ್ನ

"ಕರ್ನಾಟಕ ವಾರ್ತೆ"

ಹಿಟ್ಲರನ ಬಲಗೈ ಬಂಟ

ರುಡಾಲ್ಫ್ ಹೆಸ್‌ನ ಕೊನೆ

● ಸಂದೇಶ

ಮೇ 10, 1941 ರಲ್ಲಿ, ಬ್ರಿಟಿಷರಿಗೆ ಬುದ್ಧಿವಾದ ಹೇಳಿ, ಚರ್ಚಿಲ್ಲರನ್ನು ಮಂತ್ರಿ ಪದವಿಯಿಂದ ಓಡಿಸಿ, ಹಿಟ್ಲರನೊಂದಿಗೆ ಸ್ನೇಹವನ್ನು ಬೆಳೆಸುವಂತೆ ಬ್ರಿಟಿಷ್ ಸರಕಾರದ ಮನವೊಲಿಸುವ ಕಾರಣಕ್ಕಾಗಿ ಸ್ಕಾಟ್‌ಲಂಡ್‌ಗೆ ಗುಪ್ತವಾಗಿ ವಿಮಾನದಲ್ಲಿ ಹಾರಿದ ರುಡಾಲ್ಫ್ ಹೆಸ್ ಎಂದೂ ಮ್ಯೂನಿಕ್‌ಗೆ ಹತ್ತಿರವಿರುವ ಪುಲ್ಲಾಂಬಿಗ್‌ನಲ್ಲಿರುವ ತನ್ನ ಮನೆಗೆ ಹಿಂತಿರುಗಲಿಲ್ಲ. ತನಗೆ ತಿಳಿಸದೇ ಈ ಬಲಗೈ ಬಂಟನು ರಾಯಭಾರ ಕೈಗೊಂಡುದುದಕ್ಕಾಗಿ ಉರಿದು ಬಿದ್ದ ಹಿಟ್ಲರ್ ತನ್ನ ಅನುಯಾಯಿಗಳಿಗೆ ಹೆಸ್ಸನನ್ನು ಕಂಡರೆ ಕೊಂದು ಬಿಡಬೇಕೆಂದು ಆಜ್ಞಾಪಿಸಿದ್ದ.

ಹಿಟ್ಲರನ ಪ್ರತಿನಿಧಿ ಹಾಗೂ ಆಪ್ತ ಕಾರ್ಯದರ್ಶಿಯಾಗಿದ್ದು, ರುಡಾಲ್ಫ್ ಹೆಸ್ 1987 ಆಗಸ್ಟ್ 21ರ ರಾತ್ರಿ ಸ್ಪ್ಯಾಂಡಾ ಬರ್ಲಿನ್ ಜೈಲಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಈತನು ಕೊನೆಯ ನಾಝಿ ಕೈದಿ.

ಶಾಂತಿ ಒಪ್ಪಂದಕ್ಕಾಗಿ ಹೋದ ರುಡಾಲ್ಫ್ ಹೆಸ್ಸನ ಮನವಿಯನ್ನು ಬ್ರಿಟಿಷ್ ಸರಕಾರ ಒಪ್ಪಲಿಲ್ಲ. ಬ್ರಿಟಿಷ್ ಸರಕಾರ ಈ ಬಗ್ಗೆ ಅಡಾಲ್ಫ್ ಹಿಟ್ಲರನನ್ನು ವಿಚಾರಿಸಿದಾಗ ಆತ ಹೆಸ್‌ನನ್ನು ತಾನು ಕಳುಹಿಸಲಿಲ್ಲ ಎಂಬುದಾಗಿ ಉತ್ತರ ಕೊಟ್ಟ. ಬ್ರಿಟಿಷ್ ಸರಕಾರ ಹೆಸ್‌ನನ್ನು ಕೈದಿಯನ್ನಾಗಿ ಪರಿಗಣಿಸಿತು. ಆತನು ತಾನು ನಿರ್ದೋಷಿ ಎಂದು ಪ್ರಮಾಣ ಮಾಡಿದರೂ, 1946 ರಲ್ಲಿ ನ್ಯೂರೆಮ್‌ಬರ್ಗಿನಲ್ಲಿ ವಿಚಾರಣೆ ನಡೆಸಿ, ಅವನನ್ನು ಅಪರಾಧಿಯೆಂದು ನಿರ್ಣಯಿಸಿ ಆಜೀವ ಪರ್ಯಂತ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಲಾಯಿತು.

ಹೆಸ್ ಈಜಿಪ್ಟಿನ ಅಲೆಕ್ಸಾಂಡ್ರಿಯಾ ಎಂಬಲ್ಲಿ 1894 ರಲ್ಲಿ ಜನಿಸಿದ. ಆತನ ತಂದೆ ಒಬ್ಬ ವ್ಯಾಪಾರಸ್ಥ. ಮೊದಲನೇ ಮಹಾಯುದ್ಧದಲ್ಲಿ ಆತನ ತಂದೆ ಭಾಗವಹಿಸಿದ್ದ. ಮೊದಲನೇ ಮಹಾಯುದ್ಧ ನಂತರ ಹೆಸ್ ಕ್ರಾಂತಿಕಾರಿ ಗುಂಪಿಗೆ ಸೇರಿದ. 1921 ರಲ್ಲಿ ಹಿಟ್ಲರನ ಹಿಂಬಾಲಕನಾದ. 1925 ರಲ್ಲಿ ಹಿಟ್ಲರನೊಂದಿಗೆ ಲ್ಯಾಂಡ್ಸ್‌ಬರ್ಗ್ ಕೋಟೆಯಲ್ಲಿ ಬಂದಿಯಾಗಿದ್ದ. ಅಲ್ಲಿ ಹಿಟ್ಲರನು 'Mein Kampf' ನ್ನು ರಚಿಸುತ್ತಿದ್ದಾಗ ಹೆಸ್ ಆತನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದ. ನಂತರ 1927ರಲ್ಲಿ ಇಲ್ಸೆ ಎಂಬ ತರುಣಿಯನ್ನು ಹೆಸ್ ಮದುವೆಯಾದ.

ಜರ್ಮನಿಯನ್ನು ತೊರೆದ ಮೇಲೆ, ಇಂಗ್ಲೆಂಡಿನಲ್ಲಿದ್ದ ಹಾಗೂ ನ್ಯೂರೆಮ್‌ಬರ್ಗ್‌ನಲ್ಲಿ ವಿಚಾರಣೆ ನಡೆಯುತ್ತಿದ್ದಾಗಿನ ಕಾಲವನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಹೆಸ್ ಸುಮಾರು 45 ವರ್ಷಗಳಿಗಿಂತಲೂ ಹೆಚ್ಚು ಕಾಲ ಸೆರೆಮನೆಯಲ್ಲಿ ಇದ್ದಂತೆ ಆಯಿತು. ಇತರ ನಾಝಿ ಅಧಿಕಾರಿಗಳಾದ ಡೊಯನಿಟ್ಜ್ ರೆಡಲೆ, ನ್ಯೂರತ್ ಫಿರಾಕ್ ಮತ್ತು ಸ್ಪೀರ್ ಕೂಡಾ ಹೆಸ್‌ನೊಂದಿಗೆ ವಿಚಾರಣೆಗೆ ಗುರಿಯಾಗಿ 20 ವರ್ಷಗಳ ಕಾಲ ಸೆರೆವಾಸಕ್ಕೆ ಒಳಗಾದರು. ಇವರ ಜೊತೆಗಿದ್ದುದರಿಂದ ಹೆಸ್‌ನಿಗೆ ಹೆಚ್ಚಿನ ತೊಂದರೆ ಎನಿಸಲಿಲ್ಲ. ಆದರೆ 1966 ರಲ್ಲಿ ಫಿರಾಕ್ ಮತ್ತು ಆಲ್ಬರ್ಟ್ ಸ್ಪೀರ್ ಬಿಡುಗಡೆಯಾದ ಮೇಲೆ ಹೆಸ್ ಸೆರೆಮನೆಯಲ್ಲಿ ಏಕಾಂಗಿಯಾದ.

ರಶಿಯದ ಹಟಮಾರಿತನದಿಂದ ಉಳಿಸಲಾದ 19ನೇ ಶತಮಾನದ ಭವ್ಯವಾದ ಕಾರಾಗೃಹದಲ್ಲಿ ಹೆಸ್ ಬಂಧಿಯಾಗಿದ್ದ. ಇವನಿಗೋಸ್ಕರವೇ ಜೈಲಿನಲ್ಲಿ ಅನೇಕ ಅಧಿಕಾರಿಗಳು ಹಾಗೂ ರಕ್ಷಕರನ್ನು ಇರಿಸಲಾಗಿತ್ತು. ಸರದಿಯ ಪ್ರಕಾರ ನಾಲ್ಕು ಮಿತ್ರ ರಾಷ್ಟ್ರಗಳು ಈತನ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿದ್ದವು. ಮೊದಲಿನಿಂದಲೂ ತಿಂಗಳಿಗೊಮ್ಮೆ ಮಾತ್ರ ಅವನನ್ನು

ಭೇಟ್ಟಿಯಾಗಲು ಕುಟುಂಬದ ಸದಸ್ಯರಿಗೆ ಅನುಮತಿ ಇತ್ತು.

ಏಕಾಕಿತನದ ಪರಿಣಾಮದಿಂದಾಗಿ ಆತನ ಆರೋಗ್ಯ ಹದಗೆಟ್ಟಿತು. ಆರೋಗ್ಯ ತೀರಾ ಹದಗೆಡುವವರೆಗೂ ಆತನನ್ನು ಹೊರಗೆ ಆಸ್ಪತ್ರೆಗೆ ಸೇರಿಸುವುದನ್ನು ರಶಿಯನ್ನರು ಬಲವಾಗಿ ವಿರೋಧಿಸಿದರು. ಕೊನೆಗೆ ಪರಿಸ್ಥಿತಿ ಕೈಮೀರಬಹುದೆಂಬ ಭಯ ಮೂಡಿದಾಗ ಬರ್ಲಿನ್ನಿನ ಬ್ರಿಟಿಷ್ ಮಿಲಿಟರಿ ಆಸ್ಪತ್ರೆಗೆ ಸೇರಿಸಲಾಯಿತು. ನಂತರ ಆಗಾಗ ಅವನನ್ನು ಚಿಕಿತ್ಸೆಗಾಗಿ ಮಿಲಿಟರಿ ಆಸ್ಪತ್ರೆಗೆ ಕೊಂಡೊಯ್ಯುತ್ತಿದ್ದರು.

ರುಡಾಲ್ಫ್ ಹೆಸ್ ಅಷ್ಟು ರಹಸ್ಯವಾಗಿ ಬ್ರಿಟನ್ನಿಗೆ ಏಕೆ ಹೋದನೆಂಬ ಪ್ರಶ್ನೆಗೆ ಇನ್ನೂ ಸರಿಯಾದ ಉತ್ತರ ಸಿಕ್ಕಿಲ್ಲ. 1939ರ ಆಗಸ್ಟ್‌ನಲ್ಲಿ ಬ್ರಿಟನ್ನಿನೊಂದಿಗೆ ರಹಸ್ಯ ಒಪ್ಪಂದವನ್ನು ಮಾಡಿಕೊಳ್ಳಲು ಹಿಟ್ಲರನ ಪ್ರತಿನಿಧಿಯಾಗಿ ಹೆಸ್ ಹೋಗಿದ್ದನೆಂಬುದು ರಶಿಯನ್ನರ ಅನುಮಾನ. ನಾಜೀವಾದದ ಕೊನೆಯ ನೆನಪಾಗಿ ಉಳಿದಿದ್ದ ಈತನ ಮೇಲೆ ರಶಿಯನ್ನರಿಗೆ ಅದಕ್ಕಾಗಿಯೇ ಅಪಾರ ಕೋಪವಿತ್ತು. ಸಾವು ಆತನನ್ನು ಬರಮಾಡಿಕೊಳ್ಳುವವರೆಗೆ ಆತನ ಮೂಲಕ ಹಿಟ್ಲರನ ಮೇಲೆ ಸೇಡು ತೀರಿಸಿಕೊಳ್ಳುವ ಅವರ ತವಕ ಈಗ ಕೊನೆಗೊಂಡಿದೆ.

ರುಡಾಲ್ಫ್ ಹೆಸ್ಸನ ಮಗ ಬಿಜ್ ಹೆಸ್ ಹ್ಯಾಂಬರ್ಗಿನಲ್ಲಿ ಎಂಜಿನಿಯರಾಗಿದ್ದಾನೆ. ಆಗಸ್ಟ್ 24 ರಂದು ಬೆಳಿಗ್ಗೆ ಜೈಲಿನ ಅಧಿಕಾರಿಗಳು ಹೆಸ್ಸನ ನಿರ್ಜೀವ ದೇಹವನ್ನು ಕಂಡರು. ಹೆಸ್ಸನ ಕುತ್ತಿಗೆಯಲ್ಲಿ ಹಗ್ಗದಿಂದ ಬಿಗಿದ ನೀಲಿ ವರ್ಣದ ಕಲೆ ಇತ್ತು. ಮಗನ ಅಪೇಕ್ಷೆಯ ಮೇರೆಗೆ ಎರಡನೆಯ ಸಲ ಪೋಸ್ಟ್‌ಮಾರ್ಟಂ ಮಾಡಲಾಯಿತು. ಆದರೂ ಎಲ್ಲರೂ ಅವನು ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದೇ ನಂಬಿದ್ದಾರೆ.

ನೂರು ಮಂದಿ ಕಾವಲುಗಾರರಿಂದ ಕಾಯಲ್ಪಡುತ್ತಿದ್ದ ಹೆಸ್ ಹೇಗೆ ಆತ್ಮಹತ್ಯೆ ಮಾಡಿಕೊಂಡ ಎಂಬುದು ಒಗಟಾಗಿದೆ. ರುಡಾಲ್ಫ್ ಹೆಸ್‌ನ ಪಾರ್ಥಿವ ಶರೀರವನ್ನು ಆತನ ಜನ್ಮಸ್ಥಳವಾದ ಜರ್ಮನಿಗೊಯ್ದು ಗುಪ್ತವಾಗಿ ಹೂಳಲಾಗಿದೆ. ●

ರಂಗಮ್ಮಜ್ಜಿ ಮಾಗಡಿಗೆ ಹೋದದ್ದು

●ನಾಗಮಣಿ

ಸುಮಾರು ಅರವತ್ತೈದು ಎಪ್ಪತ್ತು ವರ್ಷಗಳ ಹಿಂದಿನ ಮಾತು. ಇವೆಲ್ಲಾ ನಡೆದಾಗ ನಮ್ಮಮ್ಮನೂ ಹುಟ್ಟಿರಲಿಲ್ಲ. ಆಗ ನಮ್ಮ ಮುತ್ತಾತ ಅಂದರೆ ನಮ್ಮ ತಾಯಿಯ ತಾತ ಒಳ್ಳೆಯ ಸರಕಾರಿ ಹುದ್ದೆಯಲ್ಲಿದ್ದರು. ಅವರಿಗೆ ಇಬ್ಬರು ಹೆಂಡಿರು. ಮೊದಲ ಹೆಂಡತಿಯ ಮಗಳೆ ನಮ್ಮ ತಾಯಿಯ ತಾಯಿ. ಆಗ ನಮ್ಮಜ್ಜಿಯೂ ಹತ್ತು ವರ್ಷದೊಳಗಿನವರಂತೆ.

ದಾವಣಗೆರೆಗೆ ಹೊಸದಾಗಿ ಸರಕಾರಿ ಕೆಲಸದ ಮೇಲೆ ವರ್ಗವಾಗಿ ನಮ್ಮ ಮುತ್ತಾತ ಬಂದಿದ್ದರು. ಮನೆಯಲ್ಲಿ ಊಟ, ತಿಂಡಿ, ಹಾಲು, ಮೊಸರು, ನಗನಾಣ್ಯ ಎಲ್ಲ ಸಮೃದ್ಧವಾಗಿದ್ದರೂ ಆ ಊರಿನಲ್ಲಿ ಅವರಿರುವ ಮನೆಗೆ ನೀರಿನ ಅನಾನುಕೂಲವಿತ್ತು. ಸಾಲದ್ದಕ್ಕೆ ನಮ್ಮ ಮುತ್ತಜ್ಜಿ ತಮ್ಮ ಎರಡನೆಯ ಮಗುವಿನ ತಿಂಗಳ ಬಾಣಂತಿ. ಮೊದಲನೆಯ ಮಗ ರಾಮಣ್ಣನಿಗೆ ಆಗ ಆರು ವರ್ಷ. ಬಾಣಂತನ ಸಕ್ರಮವಾಗಿ ನಡೆಯಲಿ ಎಂದು ಮುತ್ತಜ್ಜಿ ತನ್ನ ಚಿಕ್ಕಮ್ಮ ವೆಂಕಮ್ಮನನ್ನು ಕರೆಸಿದ್ದರಂತೆ.

ವೆಂಕಮ್ಮ ನಮ್ಮ ಮುತ್ತಜ್ಜಿಗೆ "ರಂಗಮ್ಮ ಇಲ್ಲಿ ಮಗೂಗೆ ನಿನಗೆ ನೀರು-ನಿಡಿ ಸರಿಯಾಗಿ ನಡೆಯಲ್ಲ. ಮಾಗಡಿಗೆ ಹೋಗೋಣ. ನಿನ್ನ ಬಾಣಂತನ ಮುಗಿದ ಮೇಲೆ ಯಾರಾದರೂ ಬಂದು ಬಿಡ್ತಾರೆ" ಎಂದರು. ಮಾಗಡಿಯಲ್ಲಿ



ನಮ್ಮ ಮುತ್ತಜ್ಜಿಯ ಅಕ್ಕ. ಅವರ ಅಜ್ಜಿ ಅವರ ಚಿಕ್ಕಮ್ಮ ಅಕ್ಕನ ಮಕ್ಕಳು ಎಲ್ಲಾ ಇದ್ದರು. ಒಂದು ಒಳ್ಳೆಯ ದಿನ ದಾವಣಗೆರೆಯಿಂದ ರೈಲಿನಲ್ಲಿ ಹೊರಟರು. ದಾವಣಗೆರೆಯಿಂದ ನೆಲಮಂಗಲದವರೆಗೆ ರೈಲು. ಅಲ್ಲಿ ನಮ್ಮ ಮುತ್ತಜ್ಜಿಯ ಬಳಗದವರಾದ ಸುಬ್ರಾಯರನ್ನು ವರು ಪೋಸ್ಟ್ ಮಾಸ್ಟರಾಗಿದ್ದರು. ಅವರ ಮನೆಯಲ್ಲಿ ಊಟ ಮಾಡಿಕೊಂಡು ಎತ್ತಿನ ಗಾಡಿಯಲ್ಲಿ ಮಾಗಡಿಗೆ ಹೊರಟರೆ ಸಾಯಂಕಾಲಕ್ಕೆಲ್ಲಾ ಊರುಸೇರುವುದು ಎಂದು ಏರ್ಪಾಟಾಗಿತ್ತು. ಹುಸೇನಿ (ನಮ್ಮ ಮುತ್ತಾತನ ಮನೆ ಆಳು) ನಮ್ಮ ಮುತ್ತಜ್ಜಿ ರಂಗಮ್ಮ, ವೆಂಕಮ್ಮ, ರಾಮಣ್ಣ, ನಮ್ಮಜ್ಜಿ ಸಿಂಗಾರಮ್ಮ, ಮತ್ತು ರಂಗಮ್ಮನ ತಿಂಗಳ ಮಗು ಮಹಾಲಕ್ಷ್ಮಿ ಇವರೆಲ್ಲ ದಾವಣಗೆರೆಯಿಂದ ರೈಲಿನಲ್ಲಿ ಹೊರಟು ನೆಲಮಂಗಲವನ್ನು ಕ್ಷೇಮವಾಗಿ ಸೇರಿದರು. ನೆಲಮಂಗಲದ ಸ್ಟೇಶನ್ನಿನಲ್ಲಿ ಪೋಸ್ಟ್ ಮಾಸ್ಟರ್ ಸುಬ್ರಾಯರು ಇವರನ್ನು ಮನೆಗೆ ಕರೆದುಕೊಂಡು ಹೋಗಲು ಬಂದಿದ್ದರು. ಸುಬ್ರಾಯರ ಹೆಂಡತಿ ಫಣಿಯಮ್ಮನವರು ಬಾಣಂತಿ-ಮಗು ಮನೆಗೆ ಬರುತ್ತಾರೆಂದು ಚಿತ್ರಾನ್ನ ಪಾಯಸದ ಅಡಿಗೆ ಮಾಡಿಟ್ಟುಕೊಂಡು ಕಾದಿದ್ದರು. ಹುಡುಗರೂ ದೊಡ್ಡವರೂ ಸಾಕಷ್ಟು ಹಸಿದಿದ್ದರು. ಘಮ ಘಮಿಸುವ ಸಾರು, ಪಲ್ಯ, ಗಸಗಸೆ ಪಾಯಸ, ಕಡಬು ಒಂದಕ್ಕಿಂತ ಒಂದು ನಾಲಿಗೆಗೆ ರುಚಿ ಕೊಟ್ಟವು. ಊಟ ಮಾಡಿಕೊಂಡ ಮೇಲೆ ಸ್ವಲ್ಪ ಹೊತ್ತಿಗೆಲ್ಲಾ ಮಾಗಡಿಗೆ ಹೊರಡುವುದು ಎಂದು ಕೊಂಡರು. ಸುಬ್ರಾಯರು ನೆಲಮಂಗಲದಿಂದ ಮಾಗಡಿಗೆ ಹೋಗಲು ಎತ್ತಿನ ಗಾಡಿಯನ್ನು ಏರ್ಪಾಟು ಮಾಡಿದ್ದರು. ಆಗಿನ ಕಾಲದಲ್ಲಿ ಚಿಕ್ಕ ಚಿಕ್ಕ ಹಳ್ಳಿಗಳಿಗೆಲ್ಲಿ ಬಸ್ಸು ರೈಲಿನ ಸೌಕರ್ಯವಿತ್ತು?

ಗಾಡಿಯವನಿಗಾಗಿ ಕಾದು ಕಾದು ಸಾಕಾಯಿತು. ಮೂರುಗಂಟೆಗೆ ಬಂದ ಅವನನ್ನು ಸುಬ್ರಾಯರು ಸಾಕಷ್ಟು ಬೈದರು. ಕೊನೆಗೆ ರನ್ನರ್ ಒಬ್ಬರನ್ನು ಜೊತೆಮಾಡಿ ಎಲ್ಲರನ್ನು ಎತ್ತಿನ ಗಾಡಿಯಲ್ಲಿ ಕಳಿಸಿದರು. ಜೊತೆಗೆ ಫಣಿಯಮ್ಮನವರು ರಂಗಮ್ಮನಿಗೆ ಮಾವಿನಕಾಯಿ ಅಂಚಿನ ನೀಲಿ ರೇಷ್ಮೆ ಸೀರೆ. ಕುಬುಸದ ಖಣ, ಮಗುವಿಗೆ ಬೆಳ್ಳಿ ಲೋಟ ಹುಡುಗರಿಗೆ ದುಡ್ಡು ಉಡುಗೊರೆಯಾಗಿ ಕೊಟ್ಟರು. ನೆಲಮಂಗಲ ದಾಟಿ ಗುಡೇಮಾರನ ಹಳ್ಳಿ ಬಂತು. ಆಗ ಆ ಕಡೆ ಗಳಲ್ಲಿ ಕಳ್ಳರ ಕಾಟ ವಿಪರೀತ. ಜತೆಗೆ ಸಂಜೆ ಏಳು ಗಂಟೆಯ ಮಬ್ಬುಗತ್ತಲು ಬೇರೆ. ಆಕಾಶದಲ್ಲಿ ಗಾಢವಾದ ಮೋಡಗಳು ಮಳೆ ಬರುವ ಸೂಚನೆಯನ್ನು ತೋರಿಸುತ್ತಿದ್ದುವು. ಗಾಡಿಯಲ್ಲಿ ಕುಳಿತಿರುವ ನಮ್ಮ ಮುತ್ತಾತನ ಮನೆಯಾಳು ಹುಸೇನಿಗೆ ಕಳ್ಳರೆಂದರೆ ಮೊದಲೇ ಹೆದರಿಕೆ.

ಗಾಡಿ ಮಂದಗತಿಯಲ್ಲಿ ಸಾಗುತ್ತಿತ್ತು. ಗಾಡಿಯವನು, ಪಕ್ಕದಲ್ಲಿ ಅವನ ತಾಯಿ, ಸ್ವಲ್ಪ ಹಿಂದೆ ರಂಗಮ್ಮ, ಪಕ್ಕದಲ್ಲೇ ಬೆತ್ತದ ತೊಟ್ಟಿಲು. ತೊಟ್ಟಿಲಲ್ಲಿ ಟೋಪಿ ಕಾಲು ಚೀಲ ಹಾಕಿ ಬೆಚ್ಚಗೆ ಹೊದ್ದಿಸಿ ಮಲಗಿಸಿದ ಮಗು. ಅಕ್ಕ ಪಕ್ಕದಲ್ಲಿ ರಾಮಣ್ಣ ಸಿಂಗಾರಮ್ಮ ಗಾಡಿಯ ಕೊನೆಗೆ ರನ್ನರ್ ಮತ್ತು ಹುಸೇನಿ ಕುಳಿತಿದ್ದರು. ಕತ್ತಲ ಕವಿದು ಬರುತ್ತಿತ್ತು. ಸುಮಾರು ದೂರದಲ್ಲಿ ಯಾರೋ ಇಬ್ಬರು ಕರಿಯ ಕಂಬಳಿ ಮೈತುಂಬಾ ಹೊದ್ದು ಬರುತ್ತಿದ್ದರು. ನೋಡಲು ಆಜಾನುಬಾಹುಗಳಂತೆ ಇದ್ದರು. ಗಾಡಿಯನ್ನು ತನ್ನ ಇಂಪಾದ ಕಂಠದಿಂದ ಹಳ್ಳಿಯ ಜಾನಪದ ಗೀತೆಯನ್ನು ಹೇಳುತ್ತಿದ್ದ. ಅದನ್ನು ಕೇಳುತ್ತ ಮೈಮರೆತಿದ್ದ ರನ್ನರ್ ಮತ್ತು ಹುಸೇನಿಗೆ ದೂರದಲ್ಲಿ ಬರುತ್ತಿದ್ದ ಇಬ್ಬರು ತೀರ ಸಮೀಪಿಸುವವರೆಗೂ ಕಾಣಿಸಲೇ ಇಲ್ಲ. ಹತ್ತಿರ ಬಂದ ಇವರು ಗಾಡಿಯನ್ನೇ ಅನುಸರಿಸುತ್ತಾ "ಇದು ಸಾಮಾನಿನ ಗಾಡಿಯೋ ಅಥವಾ ಸವಾರಿ ಗಾಡಿಯೋ" ಎಂದು ಬಂದವರಲ್ಲೊಬ್ಬ ದೊಡ್ಡ ದನಿಯಿಂದ ಕೇಳಿದ. ಆಕಾಶದಲ್ಲಿ ಹೊಡೆದ ಮಿಂಚಿನ ಬೆಳಕಿನಿಂದ ಹುಸೇನಿಗೆ ಹಾಗೆ ಕೇಳಿದವನ ಕೆಂಪು ಕಣ್ಣು, ಭಾರಿ ಶರೀರ, ಗಿರಿಜಾ ಮೀಸೆಗಳು ಕಾಣಿಸಿದುವು. ಅವರು ಕಳ್ಳರೇ ಸೈ ಎಂದು ಕೊಂಡಾಗ ಹೆದರಿಕೆಯಿಂದ ಮಾತೇ ಬಾರದಂತಾಯಿತು. ಇದ್ದುದರಲ್ಲಿ ಧೈರ್ಯತಂದು ಕೊಂಡು ರನ್ನರ್ "ಇದು ಸವಾರಿಗಾಡಿ. ನಮ್ಮವರೇ ಆದ ಪೋಲೀಸ್ ದಫೇದಾರರು ಹಿಂದೆ ಬರ್ತಿದಾರೆ" ಎಂದು ಹೇಳಿ ಗಾಡಿಯ ಮೇಲೆ ಮಾಡಿದ್ದ ಗೋಣಿ ತೆರೆಯನ್ನು ಎಳೆದು ಬಿಟ್ಟ. ಗಾಡಿಯವನಿಗೂ ಸಂದೇಹ ಬಂದು ಬೇಗ ಬೇಗ ಗಾಡಿಹೊಡೆದ. ಸ್ವಲ್ಪ ಹೊತ್ತಿಗೆಲ್ಲಾ



ಟಪ್‌ಟಪ್ ಎಂಬ ಶಬ್ದ ಕೇಳಿಸಿತು. ಗಾಡಿಯಲ್ಲಿ ಕುಳಿತವರೆಲ್ಲಾ ಇದು ಕಳ್ಳರಕಾಟ. ಅವರೇ ಗಾಡಿಯಮೇಲೆ ಕಲ್ಲು ಹೊಡೀತಿದಾರೆ ಅಂದು ಕೊಂಡರು. ಧಾರಾಕಾರವಾಗಿ ಮಳೆಯೂ ಶುರುವಾಯಿತು. ಹೆದರಿಕೆಯಿಂದ ಎಲ್ಲರೂ ತಲ್ಲಣಿಸಿದರು. ಸ್ವಲ್ಪ ದೂರ ಹೋದ ಮೇಲೆ ದಾರಿ ಕವಲೊಡೆದಿತ್ತು. ಒಂದು ಮಾಗಡಿಗೆ ಹೋಗುವ ರಸ್ತೆ. ಮತ್ತೊಂದು ಕುಣಿಗಲ್ಲಿಗೆ ಹೋಗುವ ರಸ್ತೆ. ಸುರಿಯುವ ಮಳೆ ಕತ್ತಲು ಇರುವಾಗ ದಾರಿ ಗಾಡಿಯವನಿಗೆ ಕಾಣಿಸುವುದು ಹೇಗೆ? ರಂಗಮ್ಮ ಮಗುವಿಗೆಂದು ಹಳೇ ಪಂಚೆ ಬಟ್ಟೆಗಳು, ಹರಳೆಣ್ಣೆ ಬಾಟಲು ಇಟ್ಟುಕೊಂಡಿದ್ದರು. ಪಂಚೆ ಬಟ್ಟೆಯನ್ನು ಹರಳೆಣ್ಣೆಯಲ್ಲಿ ಅದ್ದಿ ಬತ್ತಿಯಂತೆ ಮಾಡಿ ಗಾಡಿಯವನ ಕೈಲಿ ಬೆಂಕಿ ಪಟ್ಣ ಇಸ್ಕೊಂಡು ಹತ್ತಿಸಿ ಬತ್ತಿಯನ್ನು ಜೊತೆ ಇದ್ದ ಚಿಕ್ಕ ತಟ್ಟೆಗೆ ಸರಿಯಾಗಿ ಹೊಂದಿಸಿಟ್ಟರು. ಇನ್ನಷ್ಟು ಎಣ್ಣೆಹಾಕಿ ದೀಪವನ್ನು ಮಾಡಿಯೇ ಬಿಟ್ಟರು. ಹುಸೇನಿ ರನ್ನರ್ ಇಬ್ಬರಿಗೂ ದೀಪ ಕೊಟ್ಟು, "ಮಾಗಡಿ ದಾರಿಯನ್ನು ನೋಡ್ಕೊಂಡು ಬನ್ನಿ" ಎಂದು ಹೇಳಿದರೆ, ಅವರಿಬ್ಬರೂ "ನಮಗೆ ಹೆದರಿಕೆ, ಆಗಲ್ಲ" ಎಂದರು.

ಆಗ ಆಜಾನುಬಾಹುವಾದ ಗಾಡಿಯವನು "ಯಾವ್ನೋನು ಏನು ಮಾಡ್ತಾನೆ.? ಇಲ್ಲಿ ತತ್ತಾರವ ದೀಪಾನ, ನೋಡ್ಕಂಡು ಬತ್ತೀನಿ" ಎಂದು ಹೊರಟೇಬಿಟ್ಟ. ದೀಪದ ಬೆಳಕಿನಲ್ಲಿ ಮಾಗಡಿ ರಸ್ತೆ ಕಾಣಿಸಿತು. ಅಂತೂ ಸಾಯಂಕಾಲ ಐದು ಗಂಟೆಗೆ ಸೇರಬೇಕೆಂದಿದ್ದ ಊರನ್ನು ರಾತ್ರಿ ಒಂಭತ್ತು ಗಂಟೆಗೆ ಸೇರಿದರು. ಮನೆಯ ವರಾಂಡದಲ್ಲೇ ರಂಗಮ್ಮನ ಅಕ್ಕ ನಾಮು, ಅಜ್ಜಿ ಇಬ್ಬರೂ ಕಾಯುತ್ತಾ ಇದ್ದರು. ಇವರೆಲ್ಲಾ ಬಂದ ಕೂಡಲೇ ನಾಮು "ಏಕೆ ಇಷ್ಟು ಹೊತ್ತಾಯ್ತು? ನಾನು ವೆಂಕಟಪ್ಪ, ಶೀನಪ್ಪನ್ನ (ಅವರ ಮನೆಯ ಆಳುಗಳು) ಹೊತ್ತಾಯ್ತಲ್ಲ, ನೋಡ್ಕೊಂದು ಬನ್ನಿ ಅಂತ ಕೊಟ್ಟು ಕಳಿಸಿದ್ದೆನಲ್ಲ" ಅಂದರು. ರಂಗಮ್ಮ "ನಮಗೆ ದಾರೀಲಿ ಯಾರೂ ಸಿಕ್ಕಲಿಲ್ಲ. ಸಧ್ಯ ಕಳ್ಳರ ಕೈಲಿ ಪಾರಾಗಿ ಇಷ್ಟು ಮಟ್ಟಿಗೆ ದೇವರ ದಯೆಯಿಂದ ಮನೆ ಸೇರಿದೆವು"ಎಂದು ನಡೆದದ್ದನ್ನೆಲ್ಲಾ ಹೇಳಿದರು. ಎಲ್ಲರೂ

ದಣಿದಿದ್ದರು. ಮಗು ಬೇರೆ ಅಳಕ್ಕೆ ಶುರು ಮಾಡಿತ್ತು. ಎಲ್ಲರೂ ಊಟ ಮುಗಿಸಿ ಕೈ ತೊಳೆಯುವ ವೇಳೆಗೆ ಹತ್ತೂವರೆ ದಾಟಿತ್ತು. ಮೊದಲೇ ರಂಗಮ್ಮ ಮಾತುಗಾತಿ. ಊಟದ ಜೊತೆ ಅವರ ಹರಟೆಯೂ ಸೇರಿ ಸಾಕಷ್ಟು ಹೊತ್ತು ಆಗಿತ್ತು. ಹುಸೇನಿ ರನ್ನರ್ ವರಾಂಡದಲ್ಲೇ ಹಾಸಿಗೆ ಹಾಸಿಕೊಳ್ಳುತ್ತಿದಾಗ ಬಾಗಿಲಿನ ಸದ್ದಾಯಿತು. ಹುಸೇನಿ ಬಾಗಿಲು ತೆಗೆದಾಗ ಅವನಿಗೆ ಕಾಣಿಸಿದ್ದು ಗುಡೇಮಾರನಹಳ್ಳಿಯ ದಾರಿಯಲ್ಲಿ ಸಿಕ್ಕ ಆ ಆಜಾನುಬಾಹುಗಳು. "ಕಳ್ಳರು" ಅಂತ ಕೂಗಿಯೇ ಬಿಟ್ಟ. ನಾಮು ಹಿಂದೆಯೇ ರಂಗಮ್ಮ ಮನೆ ಯಜಮಾನರು ಒಬ್ಬರು ಹಿಂದೊಬ್ಬರು ಸರಸರನೆ ಬಂದರು. ನಾಮು "ಏನ್ರೋ ನೀವು ಅವರನ್ನೆಲ್ಲಾದ್ರೂ ದಾರೀಲಿ ನೋಡಿದರೆ ಕರೆದುಕೊಂಡು ಬನ್ನಿ ಅಂತ ಹೇಳಿಕಳಿಸಿದರೆ ನಿಮಗಿಂತ ಮುಂಚೆ ಅವರೇ ಬಂದು ಬಿಟ್ರಿದಾರಲ್ಲ. ಬಂದು ಗಂಟೆಯಾಯ್ತು" ಎಂದರು. ಕೊನೆಗೆ ವಿಷಯವೆಲ್ಲವೂ ಸ್ಪಷ್ಟವಾಗಿ ಎಲ್ಲರೂ ನಗತೊಡಗಿದರು. ಜತೆಗೆ ವೆಂಕಟಪ್ಪ ಶೀನಪ್ಪ ಸಹ ನಗುತ್ತಿದ್ದರೂ ಹುಸೇನಿಯ ಕಣ್ಣುಗಳಿಗೆ ಆ ಆಳುಗಳಿಬ್ಬರ ಕಣ್ಣುಗಳು ಅಗಲವಾದ ಮುಖ ವಿಸ್ತಾರವಾದ ಗಿರಿಜಾ ಮೀಸೆ ವಿಚಿತ್ರವಾಗಿಯೇ ಕಾಣಿಸುತ್ತಿದ್ದವಂತೆ. ●

ಕ್ಷೌರೋಪಾಖ್ಯಾನ

ಹಿಂದೆ ಹರಿತವಾದ ಕಲ್ಲು ಚೂರುಗಳಿಂದ ಪ್ರಾಣಿಗಳ ಹಲ್ಲುಗಳಿಂದ ಕ್ಷೌರ ಮಾಡಲಾಗುತ್ತಿತ್ತು. ಕ್ಷೌರಿಕನು ತನ್ನ ಬಳಿಗೆ ಬಂದ ವ್ಯಕ್ತಿಯ ಬಾಯೊಳಗೆ ತನ್ನ ಹೆಬ್ಬೆರಳನ್ನು ತಳ್ಳಿ ತಗ್ಗು ಭಾಗಗಳನ್ನು ಎತ್ತರಿಸಿ ಕ್ಷೌರ ಮಾಡುತ್ತಿದ್ದನಂತೆ.

ಗ್ರೀಸ್ ದೇಶದಲ್ಲಿ ಅಲೆಗ್ಝಾಂಡರನ ಕಾಲದಲ್ಲಿ ಕ್ಷೌರವು ಕಡ್ಡಾಯವಾಯಿತು. ಆತ ಯುದ್ಧದ ಸಂದರ್ಭದಲ್ಲಿ ಪ್ರತಿಪಕ್ಷದವರಿಗೆ ತನ್ನ ಸೈನಿಕರ ಗಡ್ಡ ಕೈಗೆ ಸಿಗಬಹುದೆಂದು ಸೈನಿಕರು ಗಡ್ಡ ಬೆಳೆಸಬಾರದೆಂದು ಆಜ್ಞಾಪಿಸಿದ. ಅಲ್ಲಿ ಪ್ರಾಚೀನ ಕಾಲದಲ್ಲಿಯೇ ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ಕ್ಷೌರದ ಅಂಗಡಿಗಳಿದ್ದವು. ಆ ಅಂಗಡಿಗಳು ಚರ್ಚೆಗಳ, ವಾದ ಪ್ರತಿವಾದಗಳ ಕೇಂದ್ರಗಳಾಗಿದ್ದವು.

ಕ್ರಿ.ಪೂ.3000 ದಲ್ಲಿ ರೋಮನ್ನರೂ ಗಡ್ಡ ಬೆಳೆಸುವುದನ್ನು ಬಹಿಷ್ಕರಿಸಿದರು. ಕ್ಷೌರ ಮಾಡಿಸದವರನ್ನು ಅವರು 'ಬಾರ್ಬೇರಿಯನ್' ಎಂದು ಕರೆಯುತ್ತಿದ್ದರು. (ಬಾರ್ಬ ಎಂಬ ಲ್ಯಾಟಿನ್ ಪದದ ಅರ್ಥ ಗಡ್ಡ) ರೋಮ್ ನಗರದಲ್ಲಿ ಸರಕಾರದಿಂದ ನೇಮಕಗೊಂಡ ಕ್ಷೌರಿಕರೂ ಹಿಂದೆ ಇದ್ದರು.

ಇಂಗ್ಲೆಂಡಿನ ಮಹಾರಾಣಿ ಎಲಿಜಬೆತ್ ತನ್ನ ರಾಜ್ಯದಲ್ಲಿ ಕ್ಷೌರವು ಅನಿವಾರ್ಯವೆಂದು ಸಾರಿದಳು. ಎರಡು ವಾರದೊಳಗೆ ಕ್ಷೌರ ಮಾಡಿಸಿಕೊಳ್ಳದವರಿಗೆ ತೆರಿಗೆಯನ್ನೂ ವಿಧಿಸಿದಳು. ಯಹೂದ್ಯರು ಗಡ್ಡ ಬೆಳೆಸಿದಾಗ ನೆರೆದೇಶದವರಾದ ಈಜಿಪ್ಟಿನವರು ಗಡ್ಡವನ್ನು ನಿಷೇಧಿಸಿದರು.

ಕ್ಷೌರದಲ್ಲಿ ಮಹತ್ತರ ಬದಲಾವಣೆಯಾದದ್ದು 1774 ರಲ್ಲಿ ಫ್ರಾನ್ಸಿನಲ್ಲಿ ಬ್ಲೇಡನ್ನು ಕಂಡುಹಿಡಿದ ನಂತರ. ಆದರೆ ರೇಜರ್ ಬಳಕೆಗೆ ಬಂದದ್ದು 1875ರಲ್ಲಿ. ಷೇಫೀಲ್ಡಿನ ಮೈಕೇಲ್ ಹಂಟರ ಎಂಬಾತ ರೇಜರಿನ ಜನಕ. 1895 ರಲ್ಲಿ ಅಮೇರಿಕದ ವಿಜ್ಞಾನಿ ಕಿಂಗ್ಸ್ ಜಿಲ್ಲೆಟ್ ಕಂಡು ಹಿಡಿದ ಬ್ಲೇಡಿಗೆ ಆತನ ಹೆಸರನ್ನೇ ಇಡಲಾಯಿತು. ಎರಡನೇ ಮಹಾಯುದ್ಧದ ಸಮಯದಲ್ಲಿ ಬ್ಲೇಡು ತುಟ್ಟಿಯಾಗಿ ಜನಸಾಮಾನ್ಯರಿಗೆ ಎಟುಕದಂತಾಯಿತು. ಆದರೆ ಯುದ್ಧ ಕೊನೆಗೊಂಡಾಗ ಬ್ಲೇಡು ಮತ್ತೆ ಪ್ರಚಾರಕ್ಕೆ ಬಂದಿತು.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಅಮೆರಿಕಾದಲ್ಲಿ 'ಇಲೆಕ್ಟ್ರಿಕ್ ರೇಜರ್' ಮಾರುಕಟ್ಟೆಗೆ ಬಂದಾಗ ಅದರ ಬೇಡಿಕೆ ವಿಶ್ವವ್ಯಾಪಿಯಾಯಿತು.

-ಸಿ.ಎಸ್.ಎ.

ನೇಣು



ಮೂಲ: ಜಾರ್ಜ್ ಆರ್ವೆಲ್
ಅನುವಾದ: ಎಸ್. ಮಧುಸೂದನ

ಅದು ನಡೆದದ್ದು ಬರ್ಮಾದಲ್ಲಿ, ಮಳೆಯಲ್ಲಿ ತೊಯ್ದ ಬೆಳಗಿನಲ್ಲಿ ಹಳದಿ ತಗಡು ರೇಕಿನಂತಿದ್ದ ರೋಗಗ್ರಸ್ತ .ಬೆಳಕು ಎತ್ತರದ ಗೋಡೆಗಳ ಮೇಲೆ ಬಾಗಿ ಜೈಲು ಖಾನೆಯಲ್ಲಿ ಬೀಳುತ್ತಿತ್ತು. ಮೃಗಗಳ ಪಂಜರದಂತಿದ್ದ, ಮುಂದೆ ಎರಡು ದಪ್ಪ ಸರಳುಳ್ಳ ಶೆಡ್ಡುಗಳ ಸಾಲಿನ ಬಳಿ, ಎಂದರೆ ಖಾಲಿ ಬಿದ್ದಿದ್ದ ಸಣ್ಣ ಕೋಣೆಗಳಾಚೆ ನಾವು ಕಾಯುತ್ತ ನಿಂತಿದ್ದೆವು. ಪ್ರತಿ ಕೋಣೆಯೂ ಹತ್ತು ಚದರಡಿ ವಿಸ್ತೀರ್ಣದಿದ್ದು, ಒಂದು ಹಲಗೆಯ ಹಾಸಿಗೆ ಮತ್ತು ಕುಡಿಯುವ ನೀರಿನ ಮಡಕೆಯ ಹೊರತು ಉಳಿದ ಜಾಗವೆಲ್ಲ ಖಾಲಿಯಿತ್ತು. ಕೆಲವು ಕೋಣೆಗಳಲ್ಲಿ, ಒಳಗಿನ ಸರಳುಗಳ ಬಳಿ

ಕಂಬಳಿ ಹೊದ್ದ ಕಂದು ಬಣ್ಣದ ಗಂಭೀರ ಮನುಷ್ಯರು ಕುಳಿತಿದ್ದರು. ಅವರೆಲ್ಲ ಶಿಕ್ಷೆಗೊಳಗಾಗಿ ಒಂದು ಅಥವಾ ಎರಡು ವಾರಗಳಲ್ಲಿ ಗಲ್ಲಿಗೇರಲಿದ್ದವರು.

ಒಬ್ಬ ಕೈದಿಯನ್ನು ಅವನ ಕೋಣೆಯಿಂದ ಆಚೆ ಕರೆದುಕೊಂಡು ಬಂದರು. ಅವನೊಬ್ಬ ಹಿಂದು, ಬೋಳಿಸಿದ ತಲೆ ಮತ್ತು ದ್ರವಿಸುವ ಕಣ್ಣುಗಳಿದ್ದ ಗಿಡ್ಡ ಕಸಬರಿಗೆಯಂಥ ವ್ಯಕ್ತಿ. ಚಲನಚಿತ್ರದ ವಿದೂಷಕನ ಪಾತ್ರಕ್ಕಿರುವಂತೆ, ಒತ್ತಾಗಿ ಕುಡಿಯೊಡೆದು ದೇಹಕ್ಕೆ ತೀರ ದೊಡ್ಡದೆನಿಸಿ ಅಸಹಜವಾಗಿ ಕಾಣುತ್ತಿದ್ದ ಮೀಸೆ ಅವನಿಗಿತ್ತು. ಅವನನ್ನು ಕಾಯುತ್ತಿದ್ದ ಆರು ಜನ ಉದ್ದವಾದ ಭಾರತೀಯ ಪಹರೆಗಾರರು ಗಲ್ಲಿಗೇರಿಸಲು ಅವನನ್ನು ಸಿದ್ಧಗೊಳಿಸುತ್ತಿದ್ದರು. ಇಬ್ಬರು ಬಯೊನೆಟ್ ಸಿಕ್ಕಿಸಿದ್ದ ಬಂದೂಕುಗಳನ್ನು ಹಿಡಿದು ನಿಂತಿದ್ದರೆ, ಉಳಿದವರು ಅವನ ಕೈಗೆ ಕೋಳ ತೊಡಿಸಿ, ಒಂದು ಸರಪಣಿಯನ್ನು ಕೋಳದ ಮೂಲಕ ಹಾಯಿಸಿ ಅದನ್ನು ತಮ್ಮ ಬೆಲ್ಟಿಗೆ ಸಿಕ್ಕಿಸುತ್ತಿದ್ದರು. ಅವನ ತೋಳುಗಳನ್ನು ಪಾರ್ಶ್ವಕ್ಕೆ ಬಲವಾಗಿ ಬಿಗಿಯುತ್ತಿದ್ದರು. ಅವರು ಕೈದಿಗೆ ಅತಿ ಸಮೀಪದಲ್ಲಿ ನಿಂತು, ಅವನು ಅಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆಂಬಂತೆ ಸದಾ ಕಾಲವೂ ತಮ್ಮ ಕೈಗಳ ಮೂಲಕ ಜಾಗರೂಕತೆಯಿಂದ, ಕೊಂಚ ಒತ್ತಡದಿಂದ ಅವನ ದೇಹವನ್ನು ಸವರುತ್ತಿದ್ದರು. ಆ ದೃಶ್ಯ, ಇನ್ನೂ ಬದುಕಿದ್ದ ಮತ್ತು ನೀರಿಗೆ ಯಾವಾಗ ಬೇಕಾದರೂ ಜಿಗಿಯಬಹುದಾಗಿದ್ದ ಮೀನನ್ನು ಮನುಷ್ಯರು ಹಿಡಿದಿದ್ದಂತೆ ಇತ್ತು. ಆದರೆ ಅವನು ಪ್ರತಿಭಟಿಸದೆ ಕಸುವೇ ಇಲ್ಲದಂತೆ ತೋಳುಗಳನ್ನು ಹಗ್ಗಕ್ಕೊಪ್ಪಿಸಿ, ಅಲ್ಲಿ ನಡೆಯುತ್ತಿರುವುದೇನನ್ನೂ ಗಮನಿಸದವನಂತೆ ನಿಂತಿದ್ದ.

ಎಂಟು ಗಂಟೆ ಹೊಡೆದು, ತೇವವಿದ್ದ ಗಾಳಿಯಲ್ಲಿ ಸಣ್ಣ ದನಿಯ ಕಹಳೆಯ ಕರೆ ದೂರದ ಸಾಲು ಕೋಣೆಗಳ ಕಡೆಯಿಂದ ಬಂತು. ನಮ್ಮಿಂದ ಕೊಂಚ ದೂರದಲ್ಲಿ ನಿಂತು ಅನ್ಯಮನಸ್ಕನಾಗಿ ಕೋಲಿನಿಂದ ಮರಳಿನ ಕಣಗಳನ್ನು ಚುಚ್ಚುತ್ತಿದ್ದ ಜೈಲಿನ ಸೂಪರಿಂಟೆಂಡೆಂಟ್ ಶಬ್ದ ಕೇಳಿ ತಲೆಯೆತ್ತಿದ. ಟೂತ್ ಬ್ರಶಿನಂಥ ಬೆಳ್ಳಗಿನ ಮೀಸೆ ಮತ್ತು ಗಡಸು ಧ್ವನಿಯ ಅವನು ಸೇನೆಯಲ್ಲಿ ವೈದ್ಯನಾಗಿದ್ದ. "ದೇವರಿಗೋಸ್ಕರವಾದರೂ ಅವಸರಿಸು ಫ್ರಾನ್ಸಿಸ್" ಎಂದ ಅವನು, ಕಿರಿಕಿರಿಯಿಂದ "ಈ ಹೊತ್ತಿಗೆ ಆ ಮನುಷ್ಯ ಸತ್ತಿರಬೇಕಿತ್ತು ನೀನಿನ್ನೂ ಸಿದ್ಧನಿಲ್ಲವೇ?" ಎಂದೂ ಸೇರಿಸಿದ.

ಮುಖ್ಯ ಜೈಲರ್ ಫ್ರಾನ್ಸಿಸ್, ಬಿಳಿಸೂಟು ಮತ್ತು ಚಿನ್ನದ ಕಟ್ಟಿನ ಚಾಳೀಸು ಹಾಕಿದ್ದ ದಪ್ಪ ದ್ರಾವಿಡ, ತನ್ನ ಕಪ್ಪು ಕೈಯನ್ನು ಬೀಸಿದ. "ಸರಿ ಸರ್, ಸರಿ ಸರ್" ಎಂದು ಹೇಳಿ, "ಎಲ್ಲಾ ಸಮರ್ಪಕವಾಗಿ ಸಿದ್ಧವಾಗಿದೆ. ನೇಣೆತ್ತುವವನು ಕಾಯುತ್ತಿದ್ದಾನೆ. ನಾವು ಮುಂದುವರಿಯೋಣ" ಎಂದ. ಫ್ರಾನ್ಸಿಸ್ ಇಂಗ್ಲೀಷಿನ ಈಸ್, ವಾಸ್‌ಗಳನ್ನು ಒತ್ತೊತ್ತಿ ಹೇಳುತ್ತಿದ್ದ.

"ಸರಿ ಹಾಗಾದರೆ ಬೇಗ ನಡೆ. ಈ ಕೆಲಸ ಮುಗಿಯುವವರೆಗೆ ಕೈದಿಗಳಿಗೆ ಬೆಳಗಿನ ಉಪಹಾರ ಸಿಕ್ಕುವುದಿಲ್ಲ" ಎಂದ ಸೂಪರಿಂಟೆಂಡೆಂಟ್.

ನಾವು ನೇಣುಗಂಬದತ್ತ ಹೊರಟೆವು. ಇಬ್ಬರು ಪಹರೆಗಾರರು ಬಂದೂಕನ್ನು ಉದ್ದವಾಗಿ ಹಿಡಿದು ಕೈದಿಯ ಇಬ್ಬದಿಯಲ್ಲಿ ನಡೆಯುತ್ತಿದ್ದರು. ಇನ್ನಿಬ್ಬರು ಕೈದಿಗೆ ಅತಿ ಸಮೀಪವಾಗಿ, ಅವನ ತೋಳುಗಳು ಮತ್ತು ಭುಜವನ್ನು ಹಿಡಿದು ನಡೆಯುತ್ತಿದ್ದರು. ಆ ದೃಶ್ಯ, ಅವನನ್ನು ಒಮ್ಮೆಲೇ ತಳ್ಳುತ್ತಿದ್ದಂತೆ ಹಾಗೂ ಆಧಾರ ಒದಗಿಸುತ್ತಿದ್ದಂತೆ ಇತ್ತು. ನಾವು ಉಳಿದವರು, ಅಂದರೆ ಮ್ಯಾಜಿಸ್ಟ್ರೇಟರು ಮತ್ತು ಅವರಂಥವರು, ಹಿಂಬಾಲಿಸಿದೆವು. ನಾವು ಹತ್ತು ಗಜ ನಡೆದಿದ್ದಾಗ ಹಠಾತ್ತನೆ ಯಾವುದೇ ಆಜ್ಞೆ ಅಥವಾ ಎಚ್ಚರಿಗೆ ಇಲ್ಲದೆ ಮೆರವಣಿಗೆ ನಿಂತಿತು.

ಆಗ ಅಂಜಿಸುವಂಥ ಘಟನೆಯೊಂದು ನಡೆಯಿತು. ಒಂದು ನಾಯಿ, ಎಲ್ಲಿಂದ ಬಂದಿತ್ತೋ ಗೊತ್ತಿಲ್ಲ, ಆ ಅಂಗಳದಲ್ಲಿ ಕಾಣಿಸಿಕೊಂಡಿತು. ಅಷ್ಟೆಲ್ಲ ಮನುಷ್ಯರನ್ನು ಒಟ್ಟಿಗೆ ನೋಡಿ ಅಂಕೆಯಿಲ್ಲದೆ ಹರ್ಷದಿಂದ ಜೋರಾಗಿ ಒಂದೇ ಸಮನೆ ಬೊಗಳುತ್ತಾ, ನಮ್ಮ ನಡುವೆ ಹಾರಿ ತನ್ನ ಇಡೀ ದೇಹವನ್ನು ಅಲ್ಲಾಡಿಸುತ್ತಾ ನಮ್ಮನ್ನು ಸುತ್ತಲಾರಂಭಿಸಿತು. ಅರ್ಧ ಏರ್‌ಡೇಲ್ ಮತ್ತು ಅರ್ಧ ಕಂತ್ರಿ ಜಾತಿಗೆ ಸೇರಿದ್ದ, ಮೈಮೇಲೆ ತುಪ್ಪುಳು ದೊಡ್ಡ ನಾಯಿ ಅದು. ಒಂದು ಕ್ಷಣ ನಾಯಿ ನಮ್ಮನ್ನು

ಸುತ್ತಿ, ಯಾರಾದರೂ ತಡೆಯುವ ಮೊದಲು ಅದು ಕೈದಿಯತ್ತ ನುಗ್ಗಿ ಎಗರಿ ಅವನ ಮುಖವನ್ನು ನೆಕ್ಕಲು ಯತ್ನಿಸಿತು. ಎಲ್ಲರೂ ಬೆದರಿ ನಿಂತರು; ನಾಯಿಯನ್ನು ಹಿಡಿಯಲೂ ಆಗದಷ್ಟು ಗಾಬರಿಯಾಗಿದ್ದರು. "ಯಾರೀ ಕ್ರೂರ ಮೃಗವನ್ನಿಲ್ಲಿ ಬಿಟ್ಟಿದ್ದು" ಎಂದು ಕೇಳಿದ ಸೂಪರಿಂಟೆಂಡೆಂಟ್, ಯಾರಾದರೂ ಹಿಡಿಯಿರಿ ಅದನ್ನು" ಎಂದು ಆಜ್ಞಾಪಿಸಿದ.

ಒಬ್ಬ ಪಹರೆಗಾರ ಗುಂಪಿನಿಂದ ಜಾರಿ, ಒಡ್ಡೊಡ್ಡಾಗಿ ನಾಯಿಯನ್ನು ಹಿಡಿಯಲೆತ್ನಿಸಿದ; ಆದರೆ ಅದು ನೆಗೆದು ಜಿಗಿದು ಅವನನ್ನು ತಪ್ಪಿಸಿತು. ಅದು ಎಲ್ಲವನ್ನೂ ಆಟದ ಒಂದು ಭಾಗವೆಂಬಂತೆ ಆಡುತ್ತಿತ್ತು. ಯುರೇಷಿಯಾದ ಒಬ್ಬ ಜೈಲರ್, ಸಣ್ಣ ವಯಸ್ಸಿನವನು, ನಾಯಿಯನ್ನು ಜೆಲ್ಲಿಯಿಂದ ಹೊಡೆದು ಓಡಿಸಲೆತ್ನಿಸಿದ. ಆದರೆ ಅದು ತಪ್ಪಿಸಿಕೊಂಡು ಮತ್ತೆ ನಮ್ಮ ಹಿಂದೆ ಬಂದಿತು. ಅದರ ಬೊಗಳುವಿಕೆ ಜೈಲಿನ ಗೋಡೆಗಳಿಂದ ಮಾರ್ದನಿಸುತ್ತಿತ್ತು. ಇಬ್ಬರು ಪಹರೆಗಾರರ ವಶದಲ್ಲಿದ್ದ ಕೈದಿ, ಇದು ಕೂಡ ಗಲ್ಲಿಗೇರಿಸುವ ಮೊದಲು ನಡೆಸುವ ಇನ್ನೊಂದು ಆಚರಣೆಯೇನೋ ಎಂಬಂತೆ, ಯಾಂತ್ರಿಕವಾಗಿ ನೋಡುತ್ತಿದ್ದ. ನಾಯಿಯನ್ನು ಯಾರೋ ಒಬ್ಬರು ಹಾಗೂ ಹೀಗೂ ಹಿಡಿಯುವ ಮುಂಚೆ ಕೆಲವು ನಿಮಿಷಗಳೇ ಕಳೆದವು. ನಂತರ ನಾವು ಅದರ ಕೊರಳಪಟ್ಟಿಗೆ ನನ್ನ ಕರ ವಸ್ತ್ರವನ್ನು ಕಟ್ಟಿ, ಮತ್ತೆ ಮುಂದುವರಿದೆವು. ನಾಯಿ ಒದ್ದಾಡುತ್ತಾ ಸಣ್ಣದಾಗಿ ಕುಂಯ್ಗುಡುತ್ತಿತ್ತು.

ಗಲ್ಲುಗಂಬ ನಲವತ್ತು ಗಜಗಳಿಗಿಂತ ಹೆಚ್ಚು ದೂರವಿತ್ತು. ನಾನು ನನ್ನ ಮುಂದೆ ನಡೆಯುತ್ತಿದ್ದ ಕೈದಿಯ ಕಂದು ಬಣ್ಣದ ಬೆತ್ತಲೆ ಬೆನ್ನನ್ನು ಗಮನಿಸುತ್ತಿದ್ದೆ. ಅವನು ಕಟ್ಟಿ ಹಾಕಿದ್ದ ಕೈಗಳನ್ನಿಟ್ಟುಕೊಂಡು, ಅಡ್ಡಾದಿಡ್ಡಿಯಾಗಿ ಆದರೆ ದೃಢವಾಗಿ, ಮೊಣಕಾಲನ್ನು ಎಂದೂ ನೇರಗೊಳಿಸದ ಭಾರತೀಯನಂತೆ ಓಲಾಡುತ್ತ ನಡೆಯುತ್ತಿದ್ದ. ಪ್ರತಿ ಹೆಜ್ಜೆಗೂ ಅವನ ಮಾಂಸಖಂಡಗಳು ಅವುಗಳ ಜಾಗಗಳಲ್ಲಿ ಸರಿಯಾಗಿ ಕೂರುತ್ತಿದ್ದವು; ಬುರಡೆಯ ಮೇಲಿದ್ದ ಗುಂಗುರು ಕೂದಲು ಮೇಲೆ ಕೆಳಗೆ ಕುಣಿಯುತ್ತಿತ್ತು. ಅವನ ಕಾಲುಗಳು ಒದ್ದೆ ಮರಳಿನ ಮೇಲೆ ತಮ್ಮ ಮುದ್ರೆಯೊತ್ತಿಕೊಳ್ಳುತ್ತಿದ್ದವು ಮತ್ತು ಒಮ್ಮೆ ಆ ಮನುಷ್ಯರು ಅವನ ಎರಡು ಭುಜಗಳನ್ನು ಒತ್ತಿ ಹಿಡಿದಿದ್ದರೂ ಅವನು ದಾರಿಯಲ್ಲಿಕ್ಕಿದ್ದ ಕೆಸರಿನ ಸಣ್ಣ ಹಳ್ಳವನ್ನು ತಪ್ಪಿಸಲು ಹೆಜ್ಜೆಯನ್ನು ಹಗುರವಾಗಿ ಪಕ್ಕಕ್ಕೆತ್ತಿಟ್ಟ.

ಅದು ಆಶ್ಚರ್ಯಕರ. ಆದರೆ ಆ ಕ್ಷಣದವರೆಗೆ ಒಬ್ಬ ಆರೋಗ್ಯವಂತ, ಪ್ರಜ್ಞಾವಂತ ಮನುಷ್ಯನನ್ನು ನಾಶಪಡಿಸುವುದೆಂದರೇನೆಂಬುದು ನನಗೆ ಅರಿವಾಗಿರಲಿಲ್ಲ. ಆ ಕೈದಿ ಕೆಸರನ್ನು ತಪ್ಪಿಸಲು ಪಕ್ಕಕ್ಕೆ ಹೆಜ್ಜೆಯಿಟ್ಟಾಗ ಮರ್ಮ ಗೋಚರಿಸಿತು; ಭರಪೂರ ಹರಿಯುತ್ತಿದ್ದ ಜೀವಿತವನ್ನು ಕತ್ತರಿಸಿ ಮೊಟಕುಗೊಳಿಸುವಂಥ ತಪ್ಪಿನ ಅರಿವಾಯಿತು. ಆ ಮನುಷ್ಯ ಸಾಯುತ್ತಿರಲಿಲ್ಲ, ನಮ್ಮ ಹಾಗೆಯೇ ಬದುಕಿದ್ದ. ಅವನ ದೇಹದ ಎಲ್ಲಾ ಅಂಗಾಂಗಗಳೂ ಕೆಲಸ ಮಾಡುತ್ತಿದ್ದವು. ಜಠರ ಆಹಾರವನ್ನು ಅರಗಿಸುತ್ತಿತ್ತು, ಚರ್ಮ ತನ್ನನ್ನು ನವೀಕರಿಸಿಗೊಳ್ಳುತ್ತಿತ್ತು, ಉಗುರುಗಳು ಬೆಳೆಯುತ್ತಿದ್ದವು, ಅಂಗಾಂಶಗಳು ರೂಪುಗೊಳ್ಳುತ್ತಿದ್ದವು. ಎಲ್ಲವೂ ವಿಧಾನಪೂರ್ವಕ ಮರಳುತನದಲ್ಲಿ ಕಷ್ಟಪಡುತ್ತಿದ್ದವು. ಅವನು ಗಲ್ಲು ಗಂಬದ ಮೇಲೆ ನಿಂತಾಗಲೂ ದೇಹ ಗಾಳಿಯಲ್ಲಿ ತೂಗಡುತ್ತಾ ಬದುಕು ಮುಗಿಯಲು ಕ್ಷಣದ ಹತ್ತನೇ ಒಂದು ಭಾಗ ಮಾತ್ರ ಉಳಿದಾಗಲೂ ಅವನ ಉಗುರುಗಳು ಬೆಳೆಯುತ್ತಿರುತ್ತವೆ. ಅವನ ಕಣ್ಣು ಆಗಲೂ ಹಳದಿ ಮರಳನ್ನು ಮತ್ತು ಬೂದು ಗೋಡೆಗಳನ್ನು ನೋಡುತ್ತಿತ್ತು ಮತ್ತು ಅವನ ಮಿದುಳು ಜ್ಞಾಪಿಸಿಕೊಳ್ಳುತ್ತಿತ್ತು. ಮುಂದಿನದನ್ನು ನೋಡುತ್ತಿತ್ತು. ಕಾರಣ ಹುಡುಕುತ್ತಿತ್ತು, ಕೆಸರಿನ ಹಳ್ಳದ ಬಗೆಗೂ ಅವನು ಮತ್ತು ನಾವು ಇದೇ ಪ್ರಪಂಚವನ್ನು ನೋಡತ್ತ, ಕೇಳುತ್ತ, ಭಾಷಿಸುತ್ತ, ಅರ್ಥೈಸುತ್ತ ಒಟ್ಟಿಗೆ ನಡೆಯುತ್ತಿರುವ ಮನುಷ್ಯರ ಒಂದು ಗುಂಪು ಮತ್ತು ಇನ್ನೆರಡು ನಿಮಿಷಗಳಲ್ಲಿ ಕಟಕ್ ಎಂದು ಹಲಗೆ ಸರಿದಾಕ್ಷಣ ಒಬ್ಬ ತೆರಳುತ್ತಾನೆ. ಒಂದು ಪ್ರಜ್ಞೆ ಶೂನ್ಯ, ಒಂದು ಜಗತ್ತು ಶೂನ್ಯ.

ಜೈಲಿನ ದೊಡ್ಡ ಬಯಲಿನಿಂದ ಬೇರೆಯಾಗಿ ಉದ್ದವಾಗಿ ಬೆಳೆದ ಮುಳ್ಳುಕಂಟಿಗಳಿಂದ ತುಂಬಿದ್ದ ಸಣ್ಣ ಅಂಗಳದಲ್ಲಿ ಗಲ್ಲುಗಂಬವಿತ್ತು. ಒಂದು ಶೆಡ್ಡಿನ ಮೂರು ಪಾರ್ಶ್ವದ ಹಾಗೆ ಕಾಣುತ್ತಿದ್ದ ಇಟ್ಟಿಗೆಯ ರಚನೆಯ ಮೇಲೆ ಮಣೆಯ ಸೂರಿತ್ತು ಮತ್ತು ಅದರ

ಮೇಲೆ ಎರಡು ಉದ್ದ ತೀರುಗಳಿದ್ದು ಅವುಗಳ ಮೇಲಿದ್ದ ಅಡ್ಡ ತೀರಿನಿಂದ ಹಗ್ಗ ಜೋತಾಡುತ್ತಿತ್ತು. ನೇಣೆತ್ತುವವನು ಬೂದು ಕೂದಲಿನ, ಜೈಲಿನ ಬಿಳೀವಸ್ತ್ರ ಧರಿಸಿದ್ದ ಕೈದಿ. ಅವನು ತನ್ನ ಯಂತ್ರದ ಬಳಿ ಕಾಯುತ್ತಿದ್ದ. ನಾವು ಪ್ರವೇಶಿಸುತ್ತಿದ್ದ ಹಾಗೆಯೇ ಅವನು ಡೊಗ್ಗು ಸಲಾಮು ಹಾಕಿ ನಮ್ಮನ್ನು ಸ್ವಾಗತಿಸಿದ. ಫ್ರಾನ್ಸಿಸ್‌ನ ಬಾಯಿಂದ ಒಂದು ಶಬ್ದ ಹೊರಟಾಕ್ಷಣವೇ ಇಬ್ಬರು ಪಹರೆಗಾರರು ಕೈದಿಯನ್ನು ಅಲ್ಲಿಯವರೆಗೆ ಹಿಡಿದಿದ್ದಕ್ಕಿಂತ ಹೆಚ್ಚು ಬಿಗಿಯಾಗಿ ಹಿಡಿದು, ಅವನನ್ನು ಅರ್ಧ ನಡೆಸುತ್ತ, ಅರ್ಧ ತಳುತ್ತ, ನೇಣುಗಂಬದ ಬಳಿ ಕರೆ ತಂದು, ಅವನು ಏಣಿ ಹತ್ತಲು ಒಡ್ಡೊಡ್ಡಾಗಿ ಸಹಾಯ ಮಾಡಿದರು. ನಂತರ ನೇಣೆತ್ತುವವನು ಮೇಲೆ ಹತ್ತಿ ಉರುಳನ್ನು ಕೈದಿಯ ಕುತ್ತಿಗೆಗೆ ಸಿಕ್ಕಿಸಿದ.

ನಾವು ಐದು ಗಜ ದೂರದಲ್ಲಿ ನಿಂತು ಕಾಯುತ್ತಿದ್ದೆವು. ಪಹರೆಗಾರರು ನೇಣುಗಂಬದ ಸುತ್ತ ವೃತ್ತಾಕಾರದಲ್ಲಿ ನಿಂತಿದ್ದರು. ನಂತರ, ಉರುಳು ಸಿಕ್ಕಿಸಿದಾಗ ಕೈದಿ ದೇವರನ್ನು ನೆನೆಯತೊಡಗಿದ. ಅದು "ರಾಮ, ರಾಮ" ಶಬ್ದದ ಗಟ್ಟಿಯಾದ ಜಪ. ಪ್ರಾರ್ಥನೆಯಂತೆ ಅದು ಅವಸರ ಮತ್ತು ಹೆದರಿಕೆಯಿಂದ ಕೂಡಿರಲಿಲ್ಲ. ಸಹಾಯಕ್ಕಾಗಿ ಯಾಚನೆಯೂ ಅದಾಗಿರಲಿಲ್ಲ. ಆದರೆ ಜಪ ಏಕ ಪ್ರಕಾರವಾದ ಲಯಬದ್ಧವಾದ ಗಂಟೆಯ ಶಬ್ದದಂತೆ ಇತ್ತು.

ನಾಯಿ ಕುಂಯ್ಗುಟ್ಟಿ ಆ ಶಬ್ದಕ್ಕೆ ಉತ್ತರಿಸಿತು. ಇನ್ನೂ ಗಲ್ಲುಗಂಬದ ಮೇಲೆ ನಿಂತಿದ್ದ ನೇಣೆತ್ತುವವನು ಹಿಟ್ಟಿನ ಚೀಲದಂತಿದ್ದ ಒಂದು ಚೀಲವನ್ನು ಹೊರ ತೆಗೆದು ಅದನ್ನು ಕೈದಿಯ ಮುಖಕ್ಕೆ ತೊಡಿಸಿದ. ಮುಸುಕಿನಿಂದ ಶಬ್ದ ಕಡಿಮೆಯಾದರೂ ಅದು ಸತತವಾಗಿ ಹೊರಡು



ತ್ತಲೇ ಇತ್ತು. "ರಾಮ್ ರಾಮ್ ರಾಮ್ ರಾಮ್ ರಾಮ್ ರಾಮ್......."

ನೇಣೆತ್ತುವವನು ಕೆಳಗಿಳಿದು ಸನ್ನೆಗೋಲನ್ನು ಹಿಡಿದು ಸಿದ್ಧವಾಗಿ ನಿಂತ. ನಿಮಿಷಗಳು ಸರಿಯುವಂತೆ ತೋರುತ್ತಿತ್ತು. ಮುಸುಕಿನೊಳಗಿಂದ ರಾಮ್ ರಾಮ್ ರಾಮ್ ಶಬ್ದ ಕೈದಿಯ ಬಾಯಿಂದ ಒಮ್ಮೆಯೂ ತೊದಲದ ಹಾಗೆ ಏಕಪ್ರಕಾರವಾಗಿ ಹೊರಡುತ್ತಿತ್ತು. ಸೂಪರಿಂಟೆಂಡೆಂಟ್ ತಲೆ ಬಗ್ಗಿಸಿ ಕೋಲಿನಿಂದ ಮೆಲ್ಲಗೆ ನೆಲವನ್ನು ತಿವಿಯುತ್ತಿದ್ದ, ಬಹುಶಃ ಅವನು ಜಪವನ್ನು ಎಣಿಸುತ್ತಿದ್ದ ಮತ್ತು ಕೈದಿಗೆ ಒಂದು ನಿಶ್ಚಿತ ಸಂಖ್ಯೆ ಬಹುಶಃ ಐವತ್ತು ಅಥವಾ ನೂರು ಬಾರಿ ಜಪಿಸಲು ಬಿಟ್ಟಿದ್ದ. ಎಲ್ಲರೂ ಬಿಳಿಚಿಕೊಂಡಿದ್ದರು. ಭಾರತೀಯ ಕೆಟ್ಟ ಕಾಫಿಯ ಹಾಗೆ ಬೂದು ಬಣ್ಣಕ್ಕೆ ತಿರುಗಿದ್ದರು. ಒಂದೆರಡು ಬಯೊನೆಟ್‌ಗಳು ನಡುಗುತ್ತಿದ್ದವು. ನಾವು ಶಿಕ್ಷೆ ವಿಧಿಸಲ್ಪಟ್ಟ, ಮುಸುಕು ತೊಡಿಸಿ ನಿಲ್ಲಿಸಿದ್ದ ಕೈದಿಯೆಡೆಗೆ ನೋಡುತ್ತಿದ್ದೆವು. ಅವನ ಜಪವನ್ನು ಕೇಳುತ್ತಿದ್ದೆವು. ಪ್ರತಿಬಾರಿಯೂ ಜಪಿಸಿದಾಗಲೂ ಅದು ಮತ್ತೊಂದು ಕ್ಷಣದ ಜೀವದಾನ. ಎಲ್ಲರ ಮನಸ್ಸಿನಲ್ಲೂ ಒಂದೇ ಯೋಚನೆ ಹರಿದಾಡುತ್ತಿತ್ತು. ಓಹ್ ಅವನನ್ನು ಕೊಲ್ಲಿ, ಸಹಿಸಲಸಾಧ್ಯವಾದ ಆ ಸದ್ದನ್ನು ನಿಲ್ಲಿಸಿ; ಇದ್ದಕ್ಕಿದ್ದಂತೆ ಸೂಪರಿಂಟೆಂಡೆಂಟ್ ನಿರ್ಧರಿಸಿದ. ತಲೆಯನ್ನು ಮೇಲೆತ್ತಿ ಲಾಠಿಯನ್ನು ತ್ವರಿತವಾಗಿ ಬೀಸಿ 'ಚಲೋ' ಎಂದು ಕೂಗಿದ.

ಆಗ 'ಕಟ್' ಎಂದು ಹಲಗೆ ಸರಿದ ಶಬ್ದ, ನಂತರ ಸಾವಿನ ನೀರವತೆ. ಕೈದಿ ಮಾಯವಾಗಿದ್ದ . ಹಗ್ಗ ತನ್ನಷ್ಟಕ್ಕೆ ತಾನೇ ಹೊಸೆದುಕೊಳ್ಳುತ್ತಿತ್ತು. ನಾನು ನಾಯಿಯನ್ನು ಬಿಟ್ಟೆ. ಅದು ತಕ್ಷಣವೇ ಗಲ್ಲುಗಂಬದ ಹಿಂದಕ್ಕೆ ಓಡಿತು, ಅಲ್ಲಿ ಹೋದನಂತರ ನಿಂತು, ಬೊಗಳಿ, ಮುಳ್ಳು ಕಂಟಿಗಳಿದ್ದ ಮೂಲೆಗೆ ಹಿಂತಿರುಗಿ ಹೆದರಿಕೆಯಿಂದ ನಮ್ಮತ್ತ ನೋಡುತ್ತಿತ್ತು. ನಾವು ಕೈದಿಯ ದೇಹವನ್ನು ತಪಾಸಿಸಲು ಗಲ್ಲುಗಂಬದ ಸುತ್ತ ಹೊರಟೆವು. ಅವನು ಕಾಲಿನ ಹೆಬ್ಬೆರಳನ್ನು ನೇರವಾಗಿ ಕೆಳಗೆ ಬಿಟ್ಟು ತೂಗುತ್ತಿದ್ದ, ಅತೀ ನಿಧಾನವಾಗಿ ತಿರುಗುತ್ತಿದ್ದ, ಸತ್ತು ಕಲ್ಲಿನಂತಾಗಿದ್ದ. ಸೂಪರಿಂಟೆಂಡೆಂಟ್ ತನ್ನ ಲಾಠಿಯನ್ನು ಹತ್ತಿರ ತಂದು ಕಂದು ಬಣ್ಣದ ಬೆತ್ತಲೆ ದೇಹವನ್ನು ಮೆಲ್ಲಗೆ ತಿವಿದ. ಅದು ಕೊಂಚ ಅಲ್ಲಾಡಿತು. "He is alright" ಎಂದ ಸೂಪರಿಂಟೆಂಡೆಂಟ್ ಗಲ್ಲುಗಂಬದ ಕೆಳಗಿಂದ ಹಿಂದಕ್ಕೆ ಬಂದು ದೊಡ್ಡದಾಗಿ ನಿಟ್ಟುಸಿರು ಬಿಟ್ಟ. ಇದ್ದಕ್ಕಿದ್ದಂತೆ ಅವನ ಮುಖದಿಂದ ಅನ್ಯಮನಸ್ಕ ಕಳೆ ಮಾಯವಾಯಿತು. ಅವನು ತನ್ನ ಕೈಗಡಿಯಾರದತ್ತ ದಿಟ್ಟಿಸಿದ. "ಎಂಟಾಗಿ ಎಂಟು ನಿಮಿಷಗಳು, ಒಳ್ಳೆಯದು, ಈ ಬೆಳಿಗ್ಗೆ ಇಷ್ಟೆ ದೇವರೆ ವಂದನೆಗಳು" ಎಂದ.

ಪಹರೆಗಾರರು ಬಯೊನೆಟ್‌ಗಳನ್ನು ಬಿಚ್ಚಿ ಮುಂದೆ ನಡೆದರು. ನಾಯಿ ತಾನು ತಪ್ಪಾಗಿ ವರ್ತಿಸಿದ್ದನ್ನು ಅರಿತಂತೆ ಮೆಲ್ಲಗೆ ಅವರ ಹಿಂದೆ ಜಾರಿತು. ನಾವು ಗಲ್ಲುಗಂಬವಿದ್ದ ಅಂಗಳದಿಂದ ಹೊರಟು ಕೈದಿಗಳು ಕುಳಿತು ಕಾಯುತ್ತಿದ್ದ ಸಣ್ಣ ಕೋಣೆಗಳ ಸಾಲನ್ನು ದಾಟಿ ಜೈಲಿನ ಮಧ್ಯದ ಅಂಗಳಕ್ಕೆ ಬಂದೆವು. ಕೈದಿಗಳು ಲಾಠಿಯನ್ನು ಹಿಡಿದ ಪಹರೆಗಾರರ ಉಸ್ತುವಾರಿಯಲ್ಲಿ ಆಗಲೇ ಬೆಳಗಿನ ಉಪಹಾರವನ್ನು ಸ್ವೀಕರಿಸುತ್ತಿದ್ದರು. ಅವರೆಲ್ಲ ಉದ್ದ ಸಾಲಿನಲ್ಲಿ ಕುಳಿತಿದ್ದು ಅವರಲ್ಲಿ ಪ್ರತಿಯೊಬ್ಬನೂ ತಗಡಿನ ತಾಟನ್ನು ಹಿಡಿದಿದ್ದ. ಇಬ್ಬರು ಪಹರೆಗಾರರು ಬಕೆಟ್ಟುಗಳನ್ನು ಹಿಡಿದು ಅನ್ನವನ್ನು ಬಡಿಸುತ್ತಿದ್ದರು. ಅದೊಂದು ಬಗೆಯ ಆತ್ಮೀಯ, ಉಲ್ಲಾಸಕರ ದೃಶ್ಯವಾಗಿ ಕಾಣಿಸಿತ್ತು, ಗಲ್ಲಿಗೇರಿಸಿದ ಮೇಲೆ ಈಗ ಕರ್ತವ್ಯ ಮುಗಿದ ಮೇಲೆ ನಮಗೆ ಬಹು ದೊಡ್ಡ ಬಿಡುಗಡೆ ದೊರಕಿತ್ತು. ನಮ್ಮಲ್ಲಿ ಪ್ರತಿಯೊಬ್ಬನಿಗೂ ಹಾಡು ಹೇಳಬೇಕೆಂಬ, ಓಡಬೇಕೆಂಬ, ನಗಬೇಕೆಂಬ ಚೋದನೆ ಒದಗಿತ್ತು. ಒಮ್ಮೆಲೆ ಎಲ್ಲರೂ ಲವಲವಿಕೆಯಿಂದ ಮಾತನಾಡಲು ತೊಡಗಿದರು.

ನನ್ನ ಜೊತೆಗೆ ಬರುತ್ತಿದ್ದ ಯುರೇಷಿಯಾ ಹುಡುಗ ನಾವು ಬಂದ ದಾರಿಯೆಡೆಗೆ ನೋಡಿ, ತಲೆಯಲ್ಲಾಡಿಸಿ ಅರಿತವನಂತೆ ನಕ್ಕು "ಸರ್ ನಿಮಗೆ ಗೊತ್ತೆ, ನಮ್ಮ ಸ್ನೇಹಿತ (ಅವನು ಸತ್ತವನನ್ನು ಕುರಿತು ಹೇಳಿದ್ದು) ಅವನ ಅಪೀಲು ವಜಾ ಆಯಿತೆಂದು ತಿಳಿದಾಗ ಜೈಲು ಕೋಣೆಯ ನೆಲದ ಮೇಲೆಯೇ ಉಚ್ಚೆ ಹುಯ್ದು ಭೀತಿಯಿಂದ. ದಯವಿಟ್ಟು ಸಿಗರೇಟ್ ತೆಗೆದುಕೊಳ್ಳಿ ಸರ್. ನೀವು ನನ್ನ ಬೆಳ್ಳಿಯ ಸಿಗರೇಟ್

ಕೇಸನ್ನು ಶ್ಲಾಘಿಸುವುದಿಲ್ಲವೇ? ಎರಡು ರೂಪಾಯಿ ಎಂಟಾಣೆ ಕೊಟ್ಟು ಬಾಕ್ಸವಾಲಾನ ಬಳಿ ಕೊಂಡಿದ್ದು, ಯೂರೋಪಿನ ಉಚ್ಚ ಶೈಲಿಯದು" ಎಂದ. ಯಾರಿಗೂ ಯಾವುದರ ಬಗ್ಗೆ ಎಂಬುದು ಸರಿಯಾಗಿ ಗೊತ್ತಿಲ್ಲದೆ ಎಲ್ಲರೂ ನಕ್ಕರು.

ಫ್ರಾನ್ಸಿಸ್ ಸೂಪರಿಂಟೆಂಡೆಂಟ್ ಜೊತೆ ನಡೆಯುತ್ತ ಒಂದೇ ಸಮನೆ ಮಾತನಾಡುತ್ತಿದ್ದ "ಒಳ್ಳೆಯದು ಸರ್, ಎಲ್ಲ ತುಂಬ ತೃಪ್ತಿಕರವಾಗಿ ನಡೆಯಿತು. ಕ್ಲಿಕ್ ಎನ್ನುವಷ್ಟರಲ್ಲಿ ಎಲ್ಲ ಮುಗಿಯಿತು. ಯಾವಾಗಲೂ ಹೀಗೆ ಆಗುವುದಿಲ್ಲ. ಡಾಕ್ಟರು ಗಲ್ಲುಗಂಬದ ಬಳಿ ಹೋಗಿ ಕಾಲೆಳೆದು ಕೈದಿ ಸತ್ತಿರುವುದನ್ನು ದೃಢಪಡಿಸಿಕೊಳ್ಳಬೇಕಾಗಿ ಬಂದಂಥ ಪ್ರಸಂಗಗಳೂ ನನಗೆ ಗೊತ್ತಿವೆ. ತೀರ ಬೇಸರದ್ದು". "ಅಲ್ಲೇ ಸಿಕ್ಕಿಕೊಂಡು ಒದ್ದಾಡುತ್ತಿದ್ದನೇ, ಅದು ಕೆಟ್ಟದ್ದು" ಎಂದ ಸೂಪರಿಂಟೆಂಡೆಂಟ್.

"ಚ್ ಸರ್. ಅವರು ಹಠಮಾರಿಗಳಾದಾಗ ಇನ್ನೂ ಮುಜಗರ! ಒಬ್ಬ ವ್ಯಕ್ತಿ, ನನಗೆ ನೆನಪಿರುವಂತೆ ನಾವು ಅವನನ್ನು ಕರೆತರಲು ಹೋದಾಗ ಅವನ ಕೋಣೆಯ ಕಂಬಿಗಳನ್ನು ಗಟ್ಟಿಯಾಗಿ ಹಿಡಿದಿದ್ದ. ನೀವು ಅದನ್ನು ನಂಬಲಾರಿರಿ. ಅವನನ್ನು ಬಿಡಿಸಲು ಆರು ಜನ ಪಹರೆಗಾರರು ಬೇಕಾಯಿತು. ಒಂದೊಂದು ಕಾಲಿಗೆ ಮೂರು ಮೂರು ಜನ. ನಾವು ಅವನೊಡನೆ ಮಾತಾಡಿದೆವು. 'My dear fellow! ನೀನು ನಮಗೆ ಉಂಟುಮಾಡುತ್ತಿರುವ ನೋವು ಮತ್ತು ಕಷ್ಟದ ಬಗ್ಗೆ ಯೋಚಿಸು' ಆದರೆ ಅವನು ಕೇಳುತ್ತಲೇ ಇರಲಿಲ್ಲ. ಚ್, ಅವನು ತುಂಬ ತೊಂದರೆ ಕೊಟ್ಟ".

ನಾನು ಜೋರಾಗಿ ನಗುತ್ತಿದ್ದೇನೆಂದು ನನಗೆ ಗೊತ್ತಾಯಿತು. ಎಲ್ಲರೂ ನಗುತ್ತಿದ್ದರು. ಸೂಪರಿಂಟೆಂಡೆಂಟ್ ಕೂಡ ಮೆಲ್ಲಗೆ ನಗುತ್ತಿದ್ದ "ನೀವೆಲ್ಲ ಆಚೆ ಬಂದು ಪಾನೀಯ ತೆಗೆದುಕೊಳ್ಳುವುದು ಒಳ್ಳೆಯದು" ಎಂದು ಹಿತವಾಗಿ ಹೇಳಿ "ನನ್ನ ಕಾರಿನಲ್ಲಿ ಒಂದು ವಿಸ್ಕಿಯ ಶೀಶೆಯಿದೆ. ನಮಗದು ಸಾಕು" ಎಂದ.

ನಾವು ಕಾರಾಗೃಹದ ದೊಡ್ಡ ಜೋಡಿ ಬಾಗಿಲುಗಳನ್ನು ಹಾದು ರಸ್ತೆಗೆ ನಡೆದೆವು. ಬರ್ಮಾದ ಮ್ಯಾಜಿಸ್ಟ್ರೇಟ್ ಇದ್ದಕ್ಕಿದ್ದ ಹಾಗೆ ಅವನ ಕಾಲುಗಳನ್ನು ಎಳೆದಿದ್ದು ಎಂದು ಹೇಳಿ ಜೋರಾಗಿ ನಕ್ಕ. ನಾವೆಲ್ಲ ಮತ್ತೆ ನಗಲಾರಂಭಿಸಿದೆವು. ಕ್ಷಣದಲ್ಲಿ ಫ್ರಾನ್ಸಿಸ್ ಹೇಳಿದ ಪ್ರಸಂಗ ತುಂಬ ಮೋಜಿನದಾಗಿ ಕಂಡಿತು. ನಾವೆಲ್ಲ ಅಂದರೆ ಸ್ಥಳೀಯರು ಮತ್ತು ಯೂರೋಪಿನವರು, ಆತ್ಮೀಯವಾಗಿ ಒಟ್ಟಿಗೆ ಕುಳಿತು ಪಾನೀಯವನ್ನು ಸೇವಿಸಿದೆವು. ಸತ್ತ ವ್ಯಕ್ತಿ ನೂರು ಗಜ ದೂರದಲ್ಲಿದ್ದ. ●

ಕೂಡಿಡುವುದು ಮಾನವನ ಸಹಜ ಪ್ರವೃತ್ತಿ. ಅವನು ಸಾಯುವ ತನಕ ಕೂಡಿಡುವುದರಲ್ಲಿ, ಕೂಡಿಟ್ಟ ಹಣದ ರಾಶಿ ಬೆಳೆಸುವುದರಲ್ಲಿ ನಿರತನಾಗಿರುತ್ತಾನೆ.

ಸಿಖ್ ಧರ್ಮ ಸಂಸ್ಥಾಪಕ ಗುರುನಾನಕ್ ಅವರು ಜಿಪುಣ ಕೋಟ್ಯಾಧೀಶನೊಬ್ಬನಿಗೆ ಬುದ್ಧಿ ಕಲಿಸಿದ ಸ್ವಾರಸ್ಯಕರ ಘಟನೆ ಹೀಗಿದೆ:-

ಲಾಹೋರ್‌ನ ಕೋಟ್ಯಾಧಿಪತಿಯೊಬ್ಬನ ಬಳಿ ಹೋದ ಗುರುನಾನಕ್, ಆತನಿಗೆ ಸೂಜಿಯೊಂದನ್ನು ನೀಡಿ. "ದಯಮಾಡಿ ಈ ಸೂಜಿಯನ್ನು ನನಗೆ ಮುಂದಿನ ಜನ್ಮದಲ್ಲಿ ಕೊಡಿ" ಎಂದರು.

ಗುರುನಾನಕರ ಈ ಮಾತು ಆತನನ್ನು ಅಚ್ಚರಿಗೊಳಿಸಿತು. "ಮಹಾಸ್ವಾಮಿ ಈ ಸೂಜಿಯನ್ನು ನಾನು ಮುಂದಿನ ಜನ್ಮಕ್ಕೆ ಹೇಗೆ ಕೊಂಡೊಯ್ಯಲಿ?" ಎಂದವನು ಪ್ರಶ್ನಿಸಿದ.

"ಹಾಗಾದರೆ ನಿನ್ನ ಕೋಟ್ಯಾಂತರ ರೂಪಾಯಿಗಳನ್ನು ಎಲ್ಲಿಗೆ ಕೊಂಡೊಯ್ಯುತ್ತಿ?" ಗುರುನಾನಕರು ಕೇಳಿದರು.

ಗುರುಗಳ ಈ ಮಾತಿನಿಂದ ಆತನಿಗೆ ಜ್ಞಾನೋದಯವಾಯಿತು. ಆತ ತನ್ನೆಲ್ಲ ಸಂಪತ್ತನ್ನೂ ದಾನ ಮಾಡಿಬಿಟ್ಟ.

[ಗುರುನಾನಕ್]

ಮೂಲ: ಕುಮಾರ ರಾಕೇಶ್
ರೂಪಾಂತರ: ಮಾ.ಭ. ಪೆರ್ಲ.

ಗೂಢ ಚಾರಿಣಿಯರ ರೋಮಾಂಚಕ ಇತಿಹಾಸ

ಗೂಢಚಾರ್ಯೆಯ ಇತಿಹಾಸದಲ್ಲಿ ಮಹಿಳೆಯರ ಸಂಖ್ಯೆ ಅತಿ ಕಡಿಮೆ ಯೆನ್ನಬಹುದಾದರೂ ಆ ಕಾರ್ಯಕ್ಕಿಳಿದು ಹೆಂಗಳೆಯರು ತಮ್ಮ ಕಾರ್ಯ ವನ್ನು ಸ್ತುತ್ಯ ವಾಗಿ ನಿಭಾಯಿಸಿದ್ದರೆನ್ನುವುದು ನಿರ್ವಿವಾದ.

ಹದಿನೆಂಟನೆಯ ಶತಮಾನದ ಕಾರ್‌ವೇಲ್ ಎಂಬ ಗೂಢಚಾರಿಣಿಯ ಕಥೆ ತುಂಬ ರೋಚಕ. ಫ್ರಾನ್ಸಿನ ಈ ಅಪೂರ್ವ ಸುಂದರಿ ಯನ್ನು ಇಂಗ್ಲೆಂಡಿಗೆ ಕಳುಹಿಸಲಾಯಿತು. ಆಕೆ ಅಲ್ಲಿ ಎರಡನೆ ಚಾರ್ಲ್ಸ್‌ನೊಂದಿಗೆ ಎರಡು ವರ್ಷಗಳ ತನಕ ಪ್ರೇಮದ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದಳು. ಅನಂತರ ರಾಜಕುಮಾರನ ಆಗ್ರಹದ ಮೇರೆಗೆ ಆವನನ್ನು ಮದುವೆಯಾದಳು.

ನಾಲ್ಕು ವರ್ಷಗಳ ಸುಖಮಯ ವೈವಾಹಿಕ ಜೀವನವನ್ನು ನಡೆಸಿದ ಮೇಲೆ ತನ್ನ ಪತ್ನಿ ಫ್ರಾನ್ಸಿನ ಗೂಢಚಾರಿಣಿಯೆಂಬುದು ರಾಜ ಕುಮಾರನಿಗೆ ಗೊತ್ತಾಯಿತು! ಅಷ್ಟರಲ್ಲಿ ಆಕೆ ಪತಿ ಚಾರ್ಲ್ಸ್‌ನ ಕುರಿತಷ್ಟೇ ಅಲ್ಲ ಇಡೀ ಇಂಗ್ಲೆಂಡಿನ ರಹಸ್ಯಗಳನ್ನೆಲ್ಲ ಫ್ರಾನ್ಸಿಗೆ ಕಳಿಸಿ ಬಿಟ್ಟಿದ್ದಳು. ಪರಿಣಾಮವಾಗಿ ಇಂಗ್ಲೆಂಡ್ ತನ್ನ ಹಲವಾರು ವ್ಯಾಪಾರ ವಹಿವಾಟುಗಳನ್ನು ಸಿಲ್ಲಿಸಿಬಿಡಬೇಕಾಯಿತು.

ರಶಿಯಾದ ಕ್ರಾಂತಿಯಲ್ಲಿ ಅಮೆರಿಕದ ಗೂಢಚಾರಿಣಿ ಜೋಸಫಿನ್ನಳ ಕೈವಾಡ ವಿತ್ತೆಂದು ನಂಬಲಾಗುತ್ತದೆ. ಆಕೆ ರಶಿಯಾದ ಕ್ರಾಂತಿಕಾರಿ ಮೋಲೋತೋವ್‌ನ ಪ್ರೇಯಸಿ ಯಾಗಿದ್ದಳು. ಇಂಗ್ಲೆಂಡಿನಲ್ಲಿ ಹುಟ್ಟಿ ಫ್ರಾನ್ಸಿ ನಲ್ಲಿ ಬೆಳೆದ ಜೋಸಫಿನ್ ಆರಂಭದಿಂದಲೇ ತನ್ನ ವಿಶಿಷ್ಟ ರೀತಿಯ ಜೀವನಶೈಲಿಗಾಗಿ ಪ್ರಸಿದ್ಧಳಾಗಿದ್ದಳು. ವಿಲಾಸಿ ಜೀವನವೇ ಉಸಿ ರಾಗಿದ್ದ ಆಕೆ ದಿನಕ್ಕೊಂದು ಹೊಸ ಉಡುಪನ್ನು ಧರಿಸುತ್ತಿದ್ದಳು. ಆ ಉಡುಪಿಗೆ ತಕ್ಕ ಹೊಸ ಹ್ಯಾಟೂ ಆಗಬೇಕಿತ್ತವ ಳಿಗೆ. ಈ ರೀತಿಯ ಸುಖ ಸಮೃದ್ಧಿಗಳಿಂದ ಕೂಡಿದ ವಿಲಾಸೀ ಜೀವನವೇ ಆಕೆಯನ್ನು ಗೂಢಚರ್ಯೆಯಂಥ ಅಪಾಯದ ಕಾರ್ಯದತ್ತ ಮುನ್ನುಗ್ಗಲು ಪ್ರೇರೇಪಿಸಿತು. ಏಕೆಂದರೆ ಆಕೆಗೆ ಸಾಕಷ್ಟು ಧನ ಮತ್ತು ವಿಲಾಸಮಯ ಜೀವನದ ಆಮಿಷವನ್ನು ತೋರಿಸಿಯೇ ಗೂಢಚಾರಿಣಿಯಾಗಿ ರಶಿಯಕ್ಕೆ ಕಳಿಸಲಾಗಿತ್ತು.

ಲೋಈಟಾನಾದಂಥ ಸಣ್ಣ ದ್ವೀಪದ ರಾಜನಾಗಿದ್ದ ಜಿಬೇಕ್‌ನು ಪಾಂಪಡೋರ್ ಎಂಬ ಭ್ರಮಣಪ್ರಿಯ ವಿದೇಶೀ ಮಹಿಳೆಯ ಸೌಂದರ್ಯ ಜಾಲಕ್ಕೆ ಸಿಲುಕಿ ಆಕೆಯನ್ನು ಇಟ್ಟುಕೊಂಡುಬಿಟ್ಟ. ಎರಡು ತಿಂಗಳ ಬಳಿಕ

ನೆರೆಯ ಗ್ವಾಟೆಮಾಲಾ ರಾಜ್ಯದ ರಾಜ ಲೋಈಟಾನಾ ದ್ವೀಪದ ಮೇಲೆ ಆಕ್ರಮಣ ಮಾಡಿದಾಗಲೇ ಜಬೇಕ್‌ನ ಕಣುತೆರೆದದ್ದು. ಆದರೆ ತುಂಬ ವಿಳಂಬವಾಗಿ ಹೋಗಿತ್ತು. ಪಾಂಪ್‌ಡೋರಳ ಪತಿ ಗ್ವಾಟೆಮಾಲಾದ ಸೈನ್ಯಾಧಿಕಾರಿಯಾಗಿದ್ದ. ಲೋಈಟಾನಾವನ್ನು ಗೆದ್ದ ಬಳಿಕ ಆತನನ್ನು ಅಲ್ಲಿಯೇ ಕಾರ್ಯ ನಿರ್ವಾಹಕ ಸಾಸಕನನ್ನಾಗಿ ನಿಯಮಿಸಲಾಯಿತು.

ಜಾಗತಿಕ ಯುದ್ಧ ಆರಂಭವಾದೊಡನೆಯೇ ಪ್ರತಿಯೊಂದು ದೇಶವೂ ಇತರ ದೇಶಗಳಿಗೆ ತನ್ನ ಗೂಢಚಾರರನ್ನು ಕಳುಹಿಸಲಾರಂಭಿಸಿತು. ಕೆಲವೆಡೆ ಆಗ ಮಹಿಳೆಯರನ್ನೂ ಈ ಕಾರ್ಯಕ್ಕೆ ಬಳಸಲಾಯಿತು. ಇಂಥ ಮಹಿಳೆಯರಲ್ಲಿ ನೂರುನ್ನೀಸಾ ಕೂಡ ಒಬ್ಬಳು.

ನೂರ್ ಭಾರತೀಯ ಮೂಲದವಳು. ಆಕೆಯ ತಂದೆ ಇನಾಯತ್ ಖಾನ್ ಟಿಪ್ಪು ಸುಲ್ತಾನನ ಆಸ್ಥಾನದಲ್ಲಿ "ಧಾರ್ಮಿಕ ಪ್ರಚಾರ ಸಂಘ"ದ ಪ್ರಮುಖನಾಗಿದ್ದ. ಸೂಫಿ ಮತದ ಪ್ರಶಂಸಕನಾಗಿದ್ದ ಟಿಪ್ಪು ಆ ಮತದ ಪ್ರಚಾರಕ್ಕಾಗಿ ಆಗಾಗ ಇನಾಯತ್ ಖಾನನನ್ನು ವಿದೇಶಗಳಿಗೆ ಕಳುಹಿಸುತ್ತಿದ್ದ. ಒಮ್ಮೆ ಹೀಗೆ ಅಮೇರಿಕಕ್ಕೆ ಹೋದ ಇನಾಯತ್ ಖಾನ್ ತನ್ನ ಶಿಷ್ಯೆ ಒರಾಬೇಕರ್ ಎಂಬವಳನ್ನು ವಿವಾಹವಾದ. 1914 ರಲ್ಲಿ ಅವರು ಸೂಫಿ ಮತದ ಪ್ರಚಾರಕ್ಕಾಗಿ ರಶಿಯಕ್ಕೆ ಹೋದಾಗ ಅಲ್ಲಿ ನೂರ್ ಹುಟ್ಟಿದಳು. ಆ ಸಮಯದಲ್ಲಿ ರಶಿಯದಲ್ಲಿ ಕ್ರಾಂತಿಯಾಯಿತು. ಹೀಗಾಗಿ ಇನಾಯತ್ ಖಾನ್ ತನ್ನ ಪರಿವಾರದೊಂದಿಗೆ ಫ್ರಾನ್ಸಿಗೆ ಹೋಗಿ ಅಲ್ಲೇ ನೆಲಸಿಬಿಟ್ಟ.

1927 ರಲ್ಲಿ ಯಾವುದೋ ಕಾರ್ಯಕ್ಕಾಗಿ ಇನಾಯತ್ ಖಾನ್ ಭಾರತಕ್ಕೆ ಬಂದಾಗ ಕಾಯಿಲೆ ಬಿದ್ದು ತೀರಿಕೊಂಡ. ಹದಿಮೂರು ವರ್ಷದ ಬಾಲೆ ನೂರಳ ಮೇಲೆ ಅಸ್ವಸ್ಥ ತಾಯಿ ಮತ್ತು ಇಬ್ಬರು ತಮ್ಮಂದಿರ ಪೋಷಣೆಯ ಭಾರ ಬಿತ್ತು.

ಓರ್ವ ಬಾಲಕಿ ಹರೆಯದ ಹೊಸ್ತಿಲಲ್ಲಿ ಕಾಲಿಟ್ಟಾಗ ಆಕೆಗೆ ಹಿರಿಯರ ರಕ್ಷಣೆ ಎಷ್ಟು ಅಗತ್ಯವೆಂದು ನೂರಳಿಗೆ ಮೊದಲಬಾರಿಗೆ ಅನುಭವವಾಯಿತು. ಸಹಾಯದ ಹೆಸರಿನಲ್ಲಿ ಆಶ್ರಯ ನೀಡಬಯಸುವವರ ಕಾಮುಕ ಕಣ್ಣುಗಳ ಭಾಷೆ ಅವಳಿಗೆ ಅರ್ಥವಾಗತೊಡಗಿತು. ಆದರೆ ಆಕೆ ಹಲವಾರು ಕಷ್ಟಗಳನ್ನು ಅನುಭವಿಸಿ ತನ್ನ ಶೀಲವನ್ನು ರಕ್ಷಿಸಿಕೊಂಡು ಒಂದು ದರ್ಜಿಯ ಅಂಗಡಿಯನ್ನು ತೆರೆದಳು. ತನ್ನ



ಇಪ್ಪತ್ತನೆಯ ವರ್ಷದ ವೇಳೆಗಾಗಲೇ ಆಕೆ ವ್ಯಾಪಾರದಲ್ಲಿ ಪಳಗಿ ಸಾಕಷ್ಟು ಹಣವನ್ನು ಗಳಿಸಿದ್ದಳು. ತಮ್ಮಂದಿರಿಬ್ಬರನ್ನು ವಿದ್ಯಾಭ್ಯಾಸಕ್ಕಾಗಿ ನೂರ್ ಇಂಗ್ಲೆಂಡಿಗೆ ಕಳುಹಿಸಿದ್ದಳು.

ದೀರ್ಘ ಕಾಯಿಲೆಯಿಂದಾಗಿ 1935 ರಲ್ಲಿ ತನ್ನ ತಾಯಿಯೂ ತೀರಿಕೊಂಡಾಗ ನೂರಳಿಗೆ ಬಲು ಆಘಾತವಾಯಿತು. ಆಕೆ ತನ್ನೆಲ್ಲ ವ್ಯಾಪಾರ ವಹಿವಾಟನ್ನು ತಮ್ಮಂದಿರಿಗೊಪ್ಪಿಸಿ ಇಂಗ್ಲೆಂಡಿಗೆ ಹೋಗಿ ಅಲ್ಲಿ ಬಿ.ಎ. ಓದಲಾರಂಭಿಸಿದಳು. ಆದರೆ ಓದಿನಲ್ಲಿ ಮನಸ್ಸು ಇರಲಿಲ್ಲ. ಅವಳಿಗೆ ಜೀವನದಲ್ಲೇ ಜಿಗುಪ್ಸೆಯುಂಟಾಗಿತ್ತು.

1939 ರಲ್ಲಿ ದ್ವಿತೀಯ ಮಹಾಯುದ್ಧ ಆರಂಭವಾದಾಗ ಬ್ರಿಟಿಶ್ ಸರಕಾರವೂ ಅದರಲ್ಲಿ ಧುಮುಕಿತು. ಆಗ 'ಸ್ಪೆಶಲ್ ಆಪರೇಷನ್ ಎಕ್ಸಿಕ್ಯೂಟಿವ್' (SOA) ಎಂಬ ಗೂಢಚರ್ಯೆಯ ಸಂಸ್ಥೆಯೊಂದರ ಸ್ಥಾಪನೆಯಾಯಿತು. ಅದರಲ್ಲಿ ಪ್ರಾಣದ ಹಂಗುದೊರೆದು ಅಪಾಯದ ಕಾರ್ಯ ಮಾಡ ಬೇಕಾಗುತ್ತದೆಂದು ಗೊತ್ತಿದ್ದೂ ಆಕೆ ಆ ಸಂಸ್ಥೆಯನ್ನು ಸೇರಿಕೊಂಡಳು. ಆ ಸಂಸ್ಥೆಗೆ ನೂರಳಂಥ ಸುಶಿಕ್ಷಿತ, ಸುಂದರ ಯುವತಿಯರ ಅವಶ್ಯಕತೆಯಿತ್ತು ನೂರ್ ಅನುಪಮ ಸುಂದರಿಯಾಗಿದ್ದುದರಿಂದ ಸುಲಭವಾಗಿ ಆಯ್ಕೆಯಾದಳು. ಬಲುಬೇಗನೆ ಆಕೆ ಸಂಸ್ಥೆಯ ಅಚ್ಚುಮೆಚ್ಚಿನ ಗೂಢಚಾರಿಣಿಯಾದಳು.

1943ರ ಜೂನ್ 16 ರಂದು ಆಕೆ ತನ್ನ ಇಬ್ಬರು ಸಂಗಡಿಗರೊಂದಿಗೆ ಪ್ಯಾರಾಶ್ಯೂಟ್ ಮೂಲಕ ಫ್ರಾನ್ಸಿನಲ್ಲಿ ಬಂದಿಳಿದಳು. 'ಜಾನ್ ಮೇರಿ ರೇನಾ' ಎಂಬುದು ಆಕೆಗೆ ಹೊಸ ಹೆಸರಾಗಿತ್ತು. ತನಗೆ ದೊರೆತ ಆದೇಶದಂತೆ ನೂರ್ ಅಲ್ಲಿ ವೃದ್ಧೆಯೊಬ್ಬಳನ್ನು ಭೆಟ್ಟಿಯಾಗ ಬೇಕಾಗಿತ್ತು. ಆಕೆಯ ಬಟ್ಟೆಬರೆ ಮತ್ತು ಇತರ ಸಾಮಗ್ರಿಗಳ ಬ್ಯಾಗನ್ನು ಇನ್ನೊಂದು ಪ್ಯಾರಾಶ್ಯೂಟ್ ಮೂಲಕ ಕೆಳಗೆ ಕಳಿಸಿದಾಗ, ಅಜಾಗರೂಕತೆಯಿಂದ ಅದು ಒಂದು ಎತ್ತರವಾದ ಮರದ ಮೇಲೆ ಸಿಕ್ಕಿಕೊಂಡು ಬಿಟ್ಟಿತು.

ನೂರ್ ತನ್ನ ಬ್ಯಾಗನ್ನು ಕೆಳಗಿಳಿಸಿಕೊಳ್ಳಲೆಂದು ಮರವನ್ನು ಹತ್ತುವಷ್ಟರಲ್ಲಿಯೇ ಫ್ರಾನ್ಸಿನ ಸೈನಿಕರು ಅಲ್ಲಿಗೆ ಬಂದು ಬಿಟ್ಟರು. ನೂರಳ ಸಂಗಡಿಗರಿಬ್ಬರೂ ಓಡುತ್ತಿರುವುದನ್ನು ಕಂಡು ಸೈನಿಕರು ಹಾರಿಸಿದ ಗುಂಡಿಗೆ ಅವರಿಬ್ಬರೂ ಬಲಿಯಾದರು. ಅವರಲ್ಲಿ ದೊರೆತ ವಿಳಾಸದಿಂದ ನೂರಳಿಗೆ ಆಶ್ರಯ ನೀಡಬೇಕಾಗಿದ್ದ ಆ ವೃದ್ಧೆಯನ್ನು ಬಂಧಿಸಿದರು. ಆದರೆ ನೂರ್ ಮಾತ್ರ ತಪ್ಪಿಸಿಕೊಂಡಳು.

ನೂರಳಿಗಾಗಿ ಅಲ್ಲೆಲ್ಲ ತೀವ್ರ ಶೋಧ ನಡೆಯುತ್ತಿತ್ತು. ಎರಡು ದಿನಗಳ ತನಕ ಅನ್ನಾಹಾರಗಳಿಲ್ಲದೆ ನೂರ್ ಆ ಮರದ ಮೇಲೆಯೇ ಅವಿತುಕೊಂಡಿದ್ದಳು. ಕೊನೆಗೆ ಸೈನಿಕರು ಬೇಜಾರಾಗಿ ಹೊರಟು ಹೋದ ಮೇಲೆ ಆಕೆ ಮರದಿಂದ ಕೆಳಗಿಳಿದು ಬಟ್ಟೆ ಬದಲಿಸಿ ನಗರಕ್ಕೆ ಬಂದಳು. ಈಗಾಕೆ ಏಕಾಂಗಿ ಮಾತ್ರವಲ್ಲ ಅಸಹಾಯಳೂ ಆಗಿದ್ದಳು. ಕೊನೆಗೆ ಹೇಗೋ ಮಾಡಿ ಜರ್ಮನ್ ಪರಿವಾರವೊಂದರಲ್ಲಿ ಆಕೆ 'ಪೇಯಿಂಗ್ ಗೆಸ್ಟ್' ಆಗಿ ಉಳಿದುಕೊಂಡಳು.

ಗೂಢಚರ್ಯೆಯ ಇತಿಹಾಸದಲ್ಲೇ ಅತ್ಯಂತ ರೋಮಾಂಚಕ ಹಾಗೂ ಅಭೂತಪೂರ್ವ ಉದಾಹರಣೆ ಮ್ಯಾಡಂ ಬೆಮೋಂತಳದು. ಆಕೆ ಬ್ರಿಟನ್ನಿನ ರಾಜ 15 ನೆಯ ಲೂಯಿಯ ಗೂಢಚರ್ಯೆಯನ್ನು ಮಾಡಿದ್ದಳು. ವಿದೇಶಗಳಿಂದ ಅತ್ಯಂತ ರಹಸ್ಯವಾದ ವಿಷಯಗಳನ್ನು ಪತ್ತೆ ಹಚ್ಚಿ ಕಳಿಸಿಕೊಡುವುದು ಆಕೆಗೆ ತೀರಾ ಸರಳ ಕೆಲಸವಾಗಿತ್ತು. ಆಕೆಯ ಗೂಢಚರ್ಯೆಯ 15 ವರ್ಷಗಳಲ್ಲಿ ಆಕೆ ಸ್ತ್ರೀಯಲ್ಲವೆಂಬುದು ಯಾರಿಗೂ ಗೊತ್ತಾಗಲೇ ಇಲ್ಲ! ಎಲ್ಲಕ್ಕಿಂತ ಆಶ್ಚರ್ಯಕರವಾದ, ಮೋಜಿನ ವಿಷಯವೆಂದರೆ ಆತ ಪೋಲೆಂಡಿನಲ್ಲಿದ್ದಾಗ ಅಲ್ಲಿಯ ಸೈನ್ಯಾಧಿಕಾರಿಯೊಂದಿಗೆ ಪ್ರೇಮದ ನಾಟಕವನ್ನು ಆಡಿದ್ದು! ಬೇಸೋಂತಳ ಪ್ರೇಮದಲ್ಲಿ ಹುಚ್ಚನಾಗಿ ಆ ಅಧಿಕಾರಿ ಅವಳಿಗೆ ಕೆಲವು ಮಹತ್ವದ ರಹಸ್ಯಗಳನ್ನು ತಿಳಿಸಿಬಿಟ್ಟಿದ್ದ. ಆದರೆ ಆತ ಸಾಯುವ ದಿನ ಆತನ ಕೊಠಡಿಯಲ್ಲಿದ್ದ ಜರ್ಮನ್ ಜೊತೆಗಾತಿಗೆ ಬೆಮೋಂತ್ ಸ್ತ್ರೀಯಲ್ಲವೆಂದು ಗೊತ್ತಾಗಿ ಹೋಯಿತು.

ಮಾತಾ ಹರಿ

ಹೆಂಗಸರಿಗೆ ಗೂಢಚರ್ಯೆ ಒಗ್ಗದ ಕೆಲಸ ಎಂಬ ಮಾತಿಗೆ ಉದಾಹರಣೆಯಾಗಿ ನಿಲ್ಲುವ ಮಾತಾ ಹರಿ ನಂತರದ ಗೂಢಚಾರಿಣಿಯರಿಗೆಲ್ಲ ಚೆಲುವಿಕೆಯನ್ನೇ ಹೇಗೆ ಬಂಡವಾಳವನ್ನಾಗಿ ಮಾಡಿಕೊಳ್ಳಬಹುದೆಂಬುದನ್ನು ತೋರಿಸಿಕೊಟ್ಟವಳು. ತನ್ನ ಚೆಲುವಿಕೆಯಿಂದಾಗಿ ಜೀವಿತಾವಧಿಯಲ್ಲೇ ದಂತಕತೆಯಾದ ಈ ಡಚ್ ಮಹಿಳೆ ಒಬ್ಬ ಟೋಪಿ ತಯಾರಕನ ಮಗಳು. ಹೆಸರು ಮಾರ್ಗರೆಥಾ ಗೀರ್ಟ್ರುಯ್ಡಾ ಝೆಲೆ. ಮಾತಾ ಹರಿ ಎಂಬುದು ಆಕೆ ತನಗೆ ತಾನೆ ಇಟ್ಟುಕೊಂಡ ಹೆಸರು. ಭಾರತದ ದೇವಾಲಯವೊಂದರಲ್ಲಿ ಹುಟ್ಟಿ ಅಲ್ಲಿಯೇ ನರ್ತಕಿಯಾಗಿ ಬೆಳೆದಳೆಂದೂ ಈಕೆಯ ಕುರಿತು ಪ್ರತೀತಿ.

1914ರ ಸುಮಾರಿಗೆ ಜರ್ಮನ್ ಗೂಢಚರ ಅಧಿಕಾರಿಯೊಬ್ಬ ಮಾತಾಹರಿಯ ಸೌಂದರ್ಯಕ್ಕೆ ಮಾರುಹೋಗಿ ಅವಳನ್ನಿಟ್ಟುಕೊಂಡ. ದಿನವೊಂದಕ್ಕೆ ಎಷ್ಟೋ ಸಾವಿರ ಮಾರ್ಕ್‌ಗಳನ್ನು ಆಕೆಗಾಗಿ ವೆಚ್ಚ ಮಾಡುತ್ತಿದ್ದ ಆತ ಕೊನೆಗೆ ಜರ್ಮನ್ ಸಿಕ್ರೇಟ್ ಸರ್ವೀಸ್ ಷ.ತ.ತ.ದಲ್ಲಿ ಆಕೆಯನ್ನು ಗೂಢಚಾರಿಣಿಯೆಂದು ನೇಮಿಸಿಕೊಂಡ. ಮಾತಾ ಹರಿ ನಾನಾ ಬಗೆಯಲ್ಲಿ ಕುಣಿದು, ನಗ್ನ ನೃತ್ಯಮಾಡಿ ಫ್ರೆಂಚ್ ಸೈನ್ಯಾಧಿಕಾರಿಗಳನ್ನು ತನ್ನ ವಶವರ್ತಿಗಳನ್ನಾಗಿ ಮಾಡಿಕೊಂಡಳು. ಅವರೊಂದಿಗೆ ಮಲಗಿ ಎಷ್ಟೋ ಗುಟ್ಟುಗಳನ್ನು ತಿಳಿದುಕೊಳ್ಳುತ್ತಿದ್ದಳು. ಫ್ರಾನ್ಸಿನ ಯುದ್ಧ ಮಂತ್ರಿ ಜನರಲ್ ಮೆಸ್ಸಿಂಗ್ ಕೂಡ ಆಕೆಯ ಪ್ರೇಮಜಾಲದಲ್ಲಿ ಸಿಕ್ಕಿ ಬಿದ್ದವರಲ್ಲೊಬ್ಬ.

ಆದರೆ ಸೈನಿಕ ಮತ್ತು ರಾಜಕೀಯ ವಿಷಯದಲ್ಲಿ ಅಷ್ಟೊಂದು ಜ್ಞಾನವಿರದ ಆಕೆ ತನ್ನ ವೃತ್ತಿಯಲ್ಲಿ ಯಶಸ್ಸನ್ನು ಸಾಧಿಸದಾದಳು. ಆದರೂ ತನ್ನ ಸೌಂದರ್ಯವನ್ನೇ ಶ್ರೀಮಂತ ಜೀವನಕ್ಕೆ ಸಾಧನವನ್ನಾಗಿ ಮಾಡಿಕೊಂಡಳು. ಪ್ಯಾರಿಸ್ ಬಳಿಯ ನ್ಯೂಯ್ಲಿಯಲ್ಲಿ ರಾಜೋಚಿತ ಸೌಧದಲ್ಲಿ ವಾಸಿಸಿದ್ದ ಆಕೆ ತನ್ನ ಸಂಸ್ಥೆಗೆ ಕೊಟ್ಟ ಒಂದೇ ಒಂದು ಅತಿ ಮಹತ್ವದ ಗುಟ್ಟೆಂದರೆ ಫ್ರೆಂಚರು ಜರ್ಮನಿಯ ಮೇಲೆ ದಾಳಿಮಾಡಲು ಎಲ್ಲ ತಯಾರಿ ಮಾಡಿಕೊಂಡಿದ್ದಾರೆಂಬುದು. ಆದರೆ ಜರ್ಮನರು ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಆಕೆ ಕೊಟ್ಟ ಸೂಚನೆ ಸುಳ್ಳಾಗಿರಲಿಲ್ಲ. ಇದೇ ಸಂದರ್ಭದಲ್ಲಿ ಮಾತಾ ಹರಿ ಗುಂಡಿಗೆ ಬಲಿಯಾದಳು. ●

— ಗೋ



ಒಂದು ದಿನ ನೂರ್ ತನ್ನ ಟ್ರಾನ್ಸ್‌ಮಿಟರಿನ ಏರಿಯಲ್ ಕಟ್ಟಲು ಕಿಟಕಿಯಿಂದ ಹೊರಗೆ ಹಾರಿ ಮರ ಹತ್ತುತ್ತಿದ್ದಾಗ ಅಲ್ಲಿಗೆ ಬಂದ ಫ್ರಾನ್ಸಿನ ಲೆಫ್ಟಿನೆಂಟ್ ಗೇರಿ "ಏ ಹುಡುಗಿ, ಏನು ಮಾಡ್ತಿದ್ದೀಯಾ?" ಎಂದು ಕೇಳಿದ. ಆಕೆ ಧೈರ್ಯಗುಂದದೆ "ಬಟ್ಟೆ ಒಣಗಲು ಹಾಕೋದಕ್ಕೆ ಹಗ್ಗ ಕಟ್ತಿದ್ದೀನಿ. ಸ್ವಲ್ಪ ಸಹಾಯ ಮಾಡ್ತಿರಾ?" ಎಂದು ಕೇಳಿದಳು. ಗೇರಿ ತಾನೇ ಹಗ್ಗ ಕಟ್ಟಿ ಕೊಟ್ಟು "ಹುಡಗಿಯರು ಹೀಗೆಲ್ಲ ಮರ ಹತ್ತಬಾರ್ದು" ಎಂದು ಪ್ರೀತಿಯಿಂದ ಗದರಿಸಿದ.

ನಂತರ ಅವರ ಹತ್ತಾರು ಸಲ ಭೇಟಿಯಾದರು ಗೇರಿ ಆಕೆಯ ಪ್ರೇಮ ಪಾಶದಲ್ಲಿ ಸಿಕ್ಕಿಬಿದ್ದ. ನೂರಳಿಗೆ ತನ್ನ ಯಥಾರ್ಥತೆಯ ಅರಿವಿದ್ದುದರಿಂದ ಆಕೆ ತನ್ನನ್ನು ಸಾಧ್ಯವಾದಷ್ಟು ನಿಯಂತ್ರಣದಲ್ಲಿಟ್ಟುಕೊಳ್ಳುತ್ತಿದ್ದಳು. ಈ ಸಂಬಂಧ ಶಾರೀರಿಕ ಸಂಪರ್ಕದವರೆಗೆ ಮುಂದುವರೆಯದಂತೆ ಅವಳು ಜಾಗರೂಕಳಾಗಿರುತ್ತಿದ್ದಳು. ಆದರೆ ಅವಳಾರೆಂಬುದರ ಅರಿವಿಲ್ಲದ ಗೇರಿ ನೂರಳ ದಾಸನಾಗಿಬಿಟ್ಟಿದ್ದ.

ಒಂದು ದಿನ ನೂರಳೊಂದಿಗೆ ಇದ್ದಾಗ ಕೆಲವು ಅಸ್ಪಷ್ಟ ಶಬ್ದಗಳನ್ನು ಕೇಳಿದ ಗೇರಿ ಅವಳನ್ನು ಹಿಂಬಾಲಿಸಿ ಅವಳ ಕೊಠಡಿಯನ್ನೂ ಪ್ರವೇಶಿಸಿದ. ಅಲ್ಲಿ ಟ್ರಾನ್ಸ್‌ಮಿಟರ್ ಇರುವುದನ್ನು ನೋಡಿದ. ನೂರಳ ನಿಜರೂಪವೀಗ ಅವನಿಗೆ ಗೊತ್ತಾಯಿತು. ಕುಶಾಗ್ರಮತಿಯಾದ ನೂರ್ ತುಂಬ ಜಾಣತನದಿಂದ ಅವನಿಕೆ ಕೈ ಕೊಟ್ಟು ಓಡಿ ಹೋಗಿಬಿಟ್ಟಳು.

ಸುಮಾರು ಆರು ತಿಂಗಳವರೆಗೆ ಅವಿತುಕೊಂಡೇ ಇದ್ದ ನೂರಳಿಗೆ ಬರುವಂತೆ ಮುಖ್ಯ ಕಾರ್ಯಾಲಯದಿಂದ ಹಲವಾರು ಬಾರಿ ತಿಳಿಸಲಾಯಿತಾದರೂ ಆಕೆ ತನ್ನ ಪ್ರಯಾಣವನ್ನು ಮುಂದುವರಿಸಿದಳು.

ಮುಂದೆ ತನ್ನ ಹೆಸರು ಬದಲಿಸಿಕೊಂಡ ನೂರ್ ಫ್ರಾನ್ಸಿನ ಮತ್ತೊಂದು ಕುಟುಂಬದೊಂದಿಗೆ ಇರಲಾರಂಭಿಸಿದಳು. ಒಂದು ದಿನ ಆಕೆ ಆ ಫ್ರೆಂಚ್ ಪರಿವಾರದವರೊಂದಿಗೆ ಕುಳಿತು ಹರಟುತ್ತಿದ್ದಳು. ಚಹ ಕುಡಿಯುತ್ತಿದ್ದಾಗ ನೂರಳು ಕಪ್ಪಿಗೆ ಹಾಲು ಹಾಕಿಕೊಂಡು ನಂತರ ಚಹದ ಡಿಕಾಕ್ಷನ್ ಸುರಿದುಕೊಂಡದ್ದನ್ನು ಬಂದವರಲ್ಲೊಬ್ಬ ಲಕ್ಷ್ಯವಿಟ್ಟು ನೋಡಿದ. ಹೀಗೆ ಮಾಡುವುದು ಬ್ರಿಟಿಶ್ ಪದ್ಧತಿ. ಕಪ್ಪಿನಲ್ಲಿ ಮೊದಲು ಚಹ ಹಾಕಿ ನಂತರ ಹಾಲು ಮತ್ತು ಸಕ್ಕರೆ ಸೇರಿಸುವುದು ಫ್ರೆಂಚ್ ಪದ್ಧತಿ! ಸರಿ, ಈ ಸಣ್ಣ ತಪ್ಪು ಅವಳ ಸೂಟ್‌ಕೇಸನ್ನು ಶೋಧಿಸಲು ಕಾರಣವಾಯಿತು. ಅವಳ ಟ್ರಾನ್ಸ್‌ಮಿಟರ್ ಮತ್ತು ಗೂಢಚರ್ಯೆಗೆ ಸಂಬಂಧಿಸಿದ ಇತರ ಸಾಮಗ್ರಿಗಳು ಶೋಧಕರಿಗೆ ದೊರೆತವು.

ಗೇರಿಗೆ ಮೋಸಮಾಡಿ ತಪ್ಪಿಸಿಕೊಂಡಿದ್ದ ನೂರಳ ಸುಳಿವು ಕೊಟ್ಟವರಿಗೆ 500 ಪೌಂಡ್‌ಗಳ ಬಹುಮಾನ ಘೋಷಿಸಲ್ಪಟ್ಟಿತ್ತು. ಆ ಅತಿಥಿ ಪೊಲೀಸರಿಗೆ ತಿಳಿಸಿದ. ನೂರಳನ್ನು ಬಂಧಿಸಲಾಯಿತು. ಅಂದಿನ ದಿನಗಳಲ್ಲಿ ದಸ್ತಗಿರಿಯಾದ ಎಸ್ ಓ ಎ ಯ ಸದಸ್ಯರನೆಲ್ಲ ಗುಂಡಿಟ್ಟು ಕೊಲ್ಲಲಾಗುತ್ತಿತ್ತು. ಆದರೆ ಮಹಿಳೆಯಾದುದರಿಂದ ನೂರಳನ್ನು ಜೈಲಿನಲ್ಲಿಡಲಾಯಿತು. ಅವಳ ಬಾಯಿಯಿಂದ ರಹಸ್ಯವೇನಾದರೂ ಹೊರಬೀಳಬಹುದೆಂಬ ಆಸೆಯೂ ಇದಕ್ಕೆ ಕಾರಣವಾಗಿತ್ತು. ವಿವಿಧ ರೀತಿಯ ಹಿಂಸೆಗೊಳಗಾದ ಮೇಲೂ ಆಕೆ ಬಾಯಿ ಬಿಡದಿದ್ದಾಗ ಆಕೆಗೆ ಗಲ್ಲು ಶಿಕ್ಷೆಯನ್ನು ವಿಧಿಸಲಾಯಿತು. ಫಾಶಿಗೆ ಮೂರು ದಿನ ಮೊದಲು ನೂರ್ ಪರಾರಿಯಾದಳು. ಆದರೆ ಅಂದು ರಾತ್ರಿಯೇ ದುರ್ದೈವದಿಂದ ವಿಮಾನ ದಾಳಿ ಆಯಿತು. ಕೈದಿಗಳನ್ನೆಲ್ಲ ಎಚ್ಚರಿಸಲಿಕ್ಕೆಂದು ಜೈಲರ್ ಬಂದಾಗ ಅವನಿಗೆ ಸುರಂಗವೊಂದರ ಸುಳಿವು ಹತ್ತಿತು. ನೂರಳಿಗಾಗಿ ಹುಡುಕಾಟ ಆರಂಭವಾಯಿತು. ಇನ್ನೂ ಅಷ್ಟು ದೂರವನ್ನು ಕ್ರಮಿಸಿರದ ನೂರ್ ಸಿಕ್ಕಿ ಹಾಕಿಕೊಂಡಳು.

ನೂರಳನ್ನು ಗಲ್ಲಿಗೇರಿಸಲು ಇನ್ನು ವಿಳಂಬ ಮಾಡುವುದು ಅಪಾಯಕರವೆಂದು ಬಗೆದು ಮರುದಿನ ಮುಂಜಾನೆಯೇ ಅವಳನ್ನು ಗಲ್ಲಿಗೇರಿಸಲಾಯಿತು. ಆಕೆಯ ಮರಣದಿಂದ ಬ್ರಿಟಿಶ್ ಸರಕಾರ ಒಬ್ಬ ಅತ್ಯುತ್ತಮ ಗೂಢಚಾರಿಣಿಯನ್ನು ಕಳೆದುಕೊಂಡಿತು. ನೂರಳ ಸಾಹಸಪೂರ್ಣ ಕಾರ್ಯಗಳಿಗಾಗಿ ಬ್ರಿಟಿಶ್ ಸರಕಾರ ಅವಳಿಗೆ ಮರಣೋತ್ತರ 'ಜಾರ್ಜ್‌ಕ್ರಾಸ್' ಪದಕವಿತ್ತು ಗೌರವಿಸಿತು. ●

ಪದಾರ್ಥ ಚಿಂತಾಮಣಿ

• ಪಾ. ವೆಂ •

— 108 —

ರೊಕ್ಕದ ಬುಡ, ಬಾಣದ ನೆಲೆ

"ರೊಕ್ಕವೆರಡಕ್ಕು ದುಕ್ಕ ಕಾಣಕ್ಕ" ಎಂದು ದಾಸರು ಹಾಡಿದ್ದಾರೆ. ಪುರಂದರ ಮತ್ತು ಕನಕ ದಾಸರಿಬ್ಬರೂ ಈ ಪದವನ್ನು ಬಳಸಿದ್ದಾರೆ. ರೊಕ್ಕವೆಂದರೆ ಇಲ್ಲಿ ಹಣ. ಆದರೆ ಈ ಶಬ್ದ ಎಲ್ಲಿಂದ ಬಂತು? ಕನ್ನಡದ ವಿಜಯ ನಗರ ಪೂರ್ವದ ಕೋಶಗಳಲ್ಲಿ ಇದು ಕಾಣಿಸುವುದಿಲ್ಲ. ಮರಾಠಿಯಲ್ಲಿ ಯಾದವ ಕಾಲದಿಂದ (12-14 ನೇ ಶತಮಾನ) ರುಕಾ ಎಂಬ ರೂಪದಲ್ಲಿ ಅದುಂಟೆಂದು ಕುಲಕರ್ಣಿಯವರ ವ್ಯುತ್ಪತ್ತಿ ಕೋಶ ಹೇಳುತ್ತದೆ. ರೊಖ್ಖ ಎಂಬ ರೂಪದಲ್ಲಿ ಕೂಡ ಅದನ್ನು ಅಲ್ಲಿ ಕಾಣಬಹುದೆಂದು ಅವರೆನ್ನುತ್ತಾರೆ. ರುಕ್ಕಾ ಎಂಬ ಶಬ್ದಕ್ಕೆ ಒಂದಾಣೆಯ ಹನ್ನೆರಡನೇ ಅಂಶ (ದಶಾಂಶ ನಾಣ್ಯಕ್ಕಿಂತ ಹಿಂದಿನ "ಪೈ") ಎಂದರ್ಥ. ರುಕ್ವಾ ಎಂಬ ರೂಪವೂ ಇದೆ. ಇದನ್ನು ಕುಲಕರ್ಣಿಯವರು ಸಂಸ್ಕೃತದ ರುಕ್ಮ(ನ್) ಶಬ್ದಕ್ಕೆ (ಚಿನ್ನ, ಹೊಳೆಯುವ) ತಗಲಿಸಿದ್ದರೂ ಅವರು ಅರಬ್ಬಿಯ ರುಕ್ಕಅ ಶಬ್ದವನ್ನೂ ಉಲ್ಲೇಖಿಸಿದ್ದಾರೆ. ಆ ಭಾಷೆಯಲ್ಲಿ "ರುಕ್ಕಅ" (–ಉರ್ದು "ರುಕ್ಕಾ") ಎಂದರೆ ಚೀಟಿ ('ಚಿಕ್ಕಪತ್ರ'), ತುಣುಕು ಎಂದೂ ಅರ್ಥ ಹೇಳಿದೆ "ರುಕಾ" ಎಂಬ ನಾಣ್ಯ ಅತಿ ಚಿಕ್ಕದ್ದಾದ್ದರಿಂದ ಇದು ಸಂಭವನೀಯ ಮೂಲವಾಗಿ ಕಾಣುತ್ತದೆ. ಡಾ॥ ಶಂಕರ್ ಕೆದ್ಲಾಯರೂ ಅದೇ ಮೂಲವನ್ನು ನಿರ್ದೇಶಿಸಿದ್ದಾರೆ.

ಚಿಲ್ಲರೆ ಹಣ ಎಂಬರ್ಥದಲ್ಲಿ ಮೇಲಿನದು ನ್ಯಾಯವೆನಿಸಿದರೂ ಉತ್ತರ ಕರ್ನಾಟಕದಲ್ಲಿ "ರೋಖ ಹಣ ಕೊಡು" (ನಗದಿ, **cash**) ಎಂಬರ್ಥದಲ್ಲಿ ಆಡುವ ರೊಕ್ಕ ಮಾತ್ರ ಅಷ್ಟು ಸಲೀಸಾಗಿ ಬೇರು ತೋರಿಸುವುದಿಲ್ಲ. ಇದಕ್ಕೆ ರೋಕಡ್, ರೋಖಡ್ ಎಂಬ ಮರಾಠಿ ರೂಪಗಳಲ್ಲದೆ ಬಂಗಾಲಿ, ಹಿಂದಿ, ಪಂಜಾಬಿಗಳಲ್ಲಿಯೂ ರೋಕಡ್ ಎಂಬ ಸಂವಾದಿ ಪದಗಳು ಕಾಣಿಸುತ್ತಿವೆ. ದೇಶ್ಯ ಪ್ರಾಕೃತದಲ್ಲಿ ಕೂಡ ರೋಕ್ಕಉ ಎಂಬ ಪದವನ್ನು ಸಂಸ್ಕೃತದಲ್ಲಿ ರೋಕಕ್ರಯ (=ನಗದಿ ಬೆಲೆ) ಎಂಬ ಶಬ್ದವನ್ನೂ ಕೋಶಗಳು ಕೊಡುತ್ತವೆ. ವೈದಿಕ ಸಂಸ್ಕೃತದಲ್ಲಿ ರೋಕ ಶಬ್ದಕ್ಕೆ ಹೊಳೆಯುವಂಥಾದ್ದು, (ರುಚ್=ಹೊಳೆ) ಎಂಬರ್ಥವಿದೆ. ರುಕ್ಮ ಎಂದರೂ ಹೊಳೆಯುವ ವಂಥಾದ್ದು. ಆದ್ದರಿಂದ ಚಿನ್ನ ರುಕ್ಮಕ ಎಂಬುದು ಪ್ರಾಕೃತದಲ್ಲಿ ರೋಕ್ಕಅ ರೋಕಉ ಆಗಿ ದೇಶೀಯ ಆರ್ಯಭಾಷೆಗಳಲ್ಲಿ ಸ್ಥಾನ ಪಡೆದಿರಬೇಕು. ಕಡೆಗೆ ದೇಶೀಯ "ರೋಕ್ಕ" ವೂ ಅರಬ್ಬಿ "ರುಕ್ಅ"ವೂ ಅರ್ಥವ್ಯಾಮಿಶ್ರಣಕ್ಕೊಳಗಾಗಿ ಕನ್ನಡಕ್ಕಾಗುವಾಗ ರೊಕ್ಕ ಮುದ್ರ ನಾಣ್ಯ ಮತ್ತು ನಗದಿ ಹಣ ಎಂಬೆರಡೂ ಅರ್ಥಗಳನ್ನು ಕೊಡುವಂತಾಯಿತು.

★ ★ ★

ಪ್ರಾಚೀನ ಆಯುಧಗಳಲ್ಲಿ ಬಿಲ್ಲು-ಬಾಣಗಳು ಅತ್ಯಂತ ಜನಪ್ರಿಯವಾದವುಗಳು. ಬಾಣಗಳನ್ನು ಏತರಿಂದ ಮಾಡುತ್ತಿದ್ದರು? ಬಾಣ ಎಂಬ ಹೆಸರೇ ಅದರ ಗುಟ್ಟು ಹೇಳುತ್ತದೆ. ವಾಣ (ಋಗ್ವೇದದಲ್ಲಿ) ಬಾಣ ಶಬ್ದಗಳ ಮೂಲಾರ್ಥ ಬಿದಿರು ಅಥವಾ ಆ ಜಾತಿಯ ಗಟ್ಟಿ ಹುಲ್ಲಿನ ಕಾಂಡ ಎಂದು. ಮೊದಲ ಬಾಣಗಳು ಚೂಪು ಮಾಡಿದ ತೆಳ್ಳನ್ನ ಗಳಗಳೇ. ಬಾಣಕ್ಕಿರುವ ಇನ್ನೊಂದು ಹೆಸರು ಅದರ ದಡದಲ್ಲಿ ಶರ. ಶರ ಎಂದರೂ ಒಂದು ತರದ ಬಿದಿರು ಜಾತಿಯ ಸಸ್ಯವೇ. ಶರಾವತಿ ಎಂಬ ನದಿಯ ಹೆಸರು ಅದರ ದಡದಲ್ಲಿ ಈ ಸಸ್ಯ ಬೆಳೆಯುತ್ತಿದ್ದುದನ್ನು ಸೂಚಿಸುತ್ತಿರಬಹುದು. ಬಹುಶಃ ಬೆತ್ತ. ಕನ್ನಡ ಕವಿಗಳು ಬಾಣಕ್ಕೆ ಬಳಸುವ ಎರಡು ಮುಖ್ಯ ಹೆಸರುಗಳು ಕೋಲ್ ಮತ್ತು ಕಣೆ. ಮೊದಲನೆಯದು ಸಾಮಾನ್ಯವಾಗಿ ಯಾವುದೇ ಮರದ ಗಟ್ಟಿಯಾದ, ತೆಳುವಾದ ನೀಳ ಕಾಂಡವಾಗಿರಬಹುದಾದರೂ ಕಣೆಯೆಂಬುದು ಖಂಡಿತವಾಗಿ ಬಿದಿರ ಜಾತಿಯನ್ನೇ ನಿರ್ದೇಶಿಸುತ್ತದೆ ಇದರಲ್ಲಿ ಸೋಜಿಗವಿಲ್ಲ. ಏಕೆಂದರೆ ಬಿದಿರ ಜಾತಿಯ ಸಸ್ಯ ಹಗುರಾಗಿಯೂ ಬಲವಾಗಿಯೂ ಇರುವ ಕಾಂಡವನ್ನು ಪಡೆದಿದೆ. (ಬಾಣಕ್ಕೆ ಕಾಂಡವೆಂದೂ ಹೆಸರಿದೆ). ಬಾಣಕ್ಕಿರುವ ಶಿಲೀಮುಖ ಎಂಬ ಇನ್ನೊಂದು ಹೆಸರು ಅದರ ತುದಿ (ಮುಖ) ಗಟ್ಟಿಯಾಗಿರುವುದನ್ನು ಸೂಚಿಸುತ್ತದೆ. ಬಾಣದ ತುದಿಗೆ ಪ್ರಥಮತಃ ಶಿಲೆಯಿಂದ ಸಿದ್ಧಗೊಳಿಸಿದ ಚೂಪು ತುದಿಯ "ಮುಖ" ವನ್ನು ಜೋಡಿಸು ತ್ತಿದ್ದರೆಂಬುದಕ್ಕೆ ಇದು ಒಂದು ಸೂಚಕವೆನ್ನಬಹುದು. ("ಶಿಲೀಮುಖ" ಎಂದರೆ ಚೂಪಾದ ಕಠಿನ ಸೊಂಡಿಯುಳ್ಳ ತುಂಬಿಯೂ ಹೌದು) ಬಿಲ್ಲು ಬಾಣ ಬಹುಶಃ ಶಿಲಾಯುಗದ ಆಯುಧ. ಬಾಣಕ್ಕಿರುವ ಮಾರ್ಗಣ ಎಂಬ ಇನ್ನೊಂದು ಹೆಸರು ಬೇಟೆಯಲ್ಲಿ (ಮೃಗಯಾ) ಇದರ ಉಪಯೋಗದ ದ್ಯೋತಕ. ಬಂದೂಕು ಬರುವ ಮುಂಚೆ ದೂರದಲ್ಲಿರುವ ಮೃಗಗಳನ್ನು ಹೊಡೆಯಲು ಎಲ್ಲಕ್ಕಿಂತ ಅನುಕೂಲ ಮತ್ತು ಬೇಟೆಗರನನ್ನು ಸುರಕ್ಷಿತವಾಗಿಟ್ಟೂ ಬೇಟೆಯನ್ನು ಕೊಲ್ಲಬಲ್ಲ ಆಯುಧವಾಗಿತ್ತು ತಾನೆ?

★ ★ ★

"ಏಕಾಏಕಿ ಬಂದುಬಿಟ್ಟಿತು" ಎನ್ನುವಾಗ ಅನಿರೀಕ್ಷಿತವಾಗಿ ಒಂದೇ ಪೆಟ್ಟಿಗೆ ಎಂದರ್ಥ. ಈ "ಏಕಾಏಕಿ" ಸಂಸ್ಕೃತದಿಂದ ಬಂತೆಂದು ಮೊದಲ ನೋಟಕ್ಕೆ ಅನ್ನಿಸುತ್ತದೆ. ಆದರೆ ನಿಜಕ್ಕೂ ಅದು ಪಾರಸೀಕ (ಆಧುನಿಕ) ಭಾಷೆಯ ದೇಣಿಗೆ. ಅಲ್ಲಿ ಯಕಾಯಕ್ ಎಂಬುದು ರೂಪ. ಮೂಲತಃ ಇಲ್ಲಿ ಯಕ್ ಎಂಬುದು ಸಂಸ್ಕೃತದ ಏಕ (=ಒಂದು) ಎಂಬುದಕ್ಕೆ ಸಂಬಂಧಿಸಿದ್ದು ಹೌದು. ಎರಡೂ ಭಾಷೆಗಳು ಒಂದೇ ತಳಿಯವು. ಆದರೆ ಸಂಸ್ಕೃತದಲ್ಲಿ ಈ ಪುನರುಕ್ತ ಶಬ್ದವಿಲ್ಲ. ಕೇಶಾಕೇಶಿ ಮೊದಲಾದಡೆಗಳಲ್ಲಿ ಇಂಥಾ ಪ್ರಯೋಗ ಸಂಸ್ಕೃತದಲ್ಲಿ ಕಾಣಿಸಿದರೂ, "ಏಕಾಏಕಿ" ಸಂಸ್ಕೃತ ವ್ಯಾಕರಣದಿಂದ ನಿಷ್ಪನ್ನವಾಗಲು ಸಾಧ್ಯವಿಲ್ಲ. ಕನ್ನಡದಲ್ಲಿ "ಏಕಾಏಕಿ" ಮೊದಲ ಬಾರಿ ಕಾಣಿಸುವುದು ಕಳೆದ ಶತಮಾನದ ಉತ್ತರಾರ್ಧದಲ್ಲಿ. ಮೈಸೂರಿನಲ್ಲಿ ಸುಲ್ತಾನಿ ರಾಜ್ಯದ ಅವಧಿಯಲ್ಲಿ ಪಾರಸಿಕ ಭಾಷೆಯ ಪ್ರಭುತ್ವ ಏರಿಕೆಗೆ ಬಂದಾಗ ಆ ಭಾಷೆಯಲ್ಲಿ ಈ ಶಬ್ದಕ್ಕೆ ಒಮ್ಮಿಂದೊಮ್ಮೆ ಅನಿರೀಕ್ಷಿತ ಎಂದೇ ಅರ್ಥವಿದೆ.

ಇಷ್ಟು ಮಾತ್ರವಲ್ಲ: ಒಮ್ಮಿಂದೊಮ್ಮೆ ಎಂಬ ಕನ್ನಡ ಪದ ಕೂಡ "ಏಕಾಏಕಿ"ಯ ಪ್ರಭಾವದಿಂದ ಹುಟ್ಟಿಕೊಂಡ ಪದವೆನಿಸುತ್ತದೆ. ಅದಕ್ಕೂ ಪ್ರಾಚೀನ ಪ್ರಯೋಗ ಕಾಣಿಸುವುದಿಲ್ಲ. ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಈ ಅರ್ಥದಲ್ಲಿ ಒರ್ಮೊದಲ್ ಎಂಬ ಪ್ರಯೋಗ "ವಡ್ಡಾರಾಧನೆ"ಯಲ್ಲೇ ಇದೆ.

ಕರಾವಳಿ ಕರ್ನಾಟಕದಲ್ಲಿ ಒಂದೇ ಸಮನೆ ಎಂಬರ್ಥದಲ್ಲಿ ಏಕ್‌ಸಾನ್ ಎಂಬ ಪದ ಚಾಲ್ತಿಯಲ್ಲಿದೆ. ಇದೂ ತೋರಿಕೆಗೆ ಮಾತ್ರ ಸಂಸ್ಕೃತ. ಅದೂ ಪಾರಸೀಕ ಯಕ್‌ಸಾಂ ಎಂಬುದರ ಕನ್ನಡೀಕರಣವೇ. ಅದು ಸಂಸ್ಕೃತಕ್ಕೆ ಪ್ರಾಮಾಣಿಕತೆ ವಿಶ್ವಾಸಾರ್ಹತೆ ಎಂಬರ್ಥವಿದೆ. ಇದಕ್ಕೂ ಏಕಕ್ಕೂ ಏನೂ ಸಂಬಂಧವಿಲ್ಲ ಅದು ಪಾರಸೀಕ ಯಕೀನ್/ ಯಕೀನೀ ಪದಗಳ ಸ್ವೀಕೃತಿ. ●

ಸಂಧಿವಾತ

-ಡಾ|| ವಿಲಾಸ ಬಿ. ನಾಯಿಕವಾಡಿ

1965 ರಲ್ಲಿ ನಾನು ಪ್ರಥಮ ಎಮ್.ಬಿ.ಬಿ.ಎಸ್. ತರಗತಿಯಲ್ಲಿ ಅಭ್ಯಸಿಸುತ್ತಿದ್ದೆ. ಒಂದು ದಿನ ಪ್ರಾತಃ ಕಾಲದಲ್ಲಿ ಏಳುತ್ತಲೇ ನಾನು ಅನುಭವಿಸಿದ್ದು ಕಾಲು ನೋವನ್ನು. ಅಲ್ಲದೆ ಕಾಲಿನ ಕೀಲುಗಳು ಹಿಡಿದುಕೊಂಡಂತಾಗಿದ್ದವು. ಜ್ವರ ಬಂದಿತ್ತು. ತತ್‌ಕ್ಷಣ ವೈದ್ಯರ ಬಳಿ ಹೋದೆ. ಅವರು ಇದೊಂದು ರುಮ್ಯಾಟಿಕ್ ಜ್ವರದ ವ್ಯಾಧಿಯೆಂದು ಹೇಳಿ ಸಲ್ಫಾ ಹಾಗೂ ಎ.ಪಿ.ಸಿ. ಮಾತ್ರೆಗಳನ್ನು ತೆಗೆದುಕೊಳ್ಳಲು ಸೂಚಿಸಿ ವಿಶ್ರಾಂತಿಗಾಗಿ ಸಲಹೆ ನೀಡಿದರು. ಮರುದಿನವೇ ಸಂದುನೋವು ಕಡಿಮೆಯಾಯಿತು. ಆದರೆ ದೇಹದ ಕೆಲವೊಂದು ಭಾಗದಲ್ಲಿ ಅಲ್ಲಲ್ಲಿ ಚಕ್ರಾಕಾರವಾಗಿ ಕೆಂಪಾಗಿ ಊದಿಕೊಂಡಿತ್ತು. ಮೈ ತುರಿಸುತ್ತಿತ್ತು. ವೈದ್ಯರು ಮತ್ತೆ ನನ್ನನ್ನು ತಪಾಸಸಿ ಸಲ್ಫಾ ಔಷಧ ನನ್ನ ದೇಹಕ್ಕೆ ಒಗ್ಗದ ಕಾರಣ ಹೀಗಾಗಿರುವುದೆಂದು ಹೇಳಿ ಅದರ ಬದಲು ಪೆನ್ಸಿಲಿನ್ ಚುಚ್ಚುಮದ್ದನ್ನು ಐದು ದಿನ ನೀಡಿದರು.

ಅಂದಿನಿಂದ ಈ ವ್ಯಾಧಿ ಮರುಕಳಿಸಿಲ್ಲ. ಈ ಬೇನೆ ನನ್ನನ್ನು ಆವರಿಸುವುದಕ್ಕಿಂತ ಹದಿನೈದು ದಿನ ಮೊದಲು ಟಾನ್ಸಿಲ್ಸ್ ನೋವಿನಿಂದ ಬಳಲುತ್ತಿದ್ದೆ. ಗಂಟಲು ಬೇನೆ, ಹಲ್ಲುನೋವು ಹಾಗೂ ಟಾನ್ಸಿಲ್ಸ್ ಬೇನೆ ಇವುಗಳನ್ನು ನಾವು ಅಲಕ್ಷಿಸಿದಾಗ ಇದೇ ಬೇನೆ ಸಂಧಿವಾತಕ್ಕೆಡೆ ಮಾಡಿಕೊಡುತ್ತದೆ. ಸ್ಟೆಪ್ಟೋಕಾಕಸ್ ಎಂಬ ಸೂಕ್ಷ್ಮ ಜೀವಾಣುಗಳಿಂದ ಈ ಬೇನೆಗಳು ಬರುತ್ತವೆ. ಅನಂತರ ನಾನು ಟಾನ್ಸಿಲ್ಸ್ ಆಪರೇಷನ್ ಮಾಡಿಸಿಕೊಂಡೆ.

ಸಂಧಿವಾತವನ್ನು ಆರಂಭದಲ್ಲಿ ಉಪಚರಿಸದಿದ್ದಲ್ಲಿ ಅದರಿಂದ ಹೃದಯದ ಪಟಲಗಳಿಗೆ ವ್ಯಾಧಿ ಆವರಿಸಿ ಹೃದಯ ರೋಗಕ್ಕೆ ತುತ್ತಾಗುವಂತೆ ಮಾಡುತ್ತದೆ. ಇ ರೀತಿಯಾದಾಗ ಹೃದಯವು ಶಾಶ್ವತವಾಗಿ ಬಲಹೀನವಾಗಿ ಸದಾಕಾಲ ಔಷಧೋಪಚಾರದಲ್ಲಿಯೇ ಇರಬೇಕಾದ ಪರಿಸ್ಥಿತಿ ಒದಗುತ್ತದೆ. ಹೀಗಾದಾಗ ಕೆಲವೊಮ್ಮೆ ಹೃದಯ ಪಟಲಗಳ ಮೇಲೆ ಶಸ್ತ್ರಚಿಕಿತ್ಸೆ ಮಾಡಿ ಗುಣಪಡಿಸಬಹುದು. ಒಂದು ವಾರದ ಹಿಂದೆ ಸುಮಾರು ನಲವತ್ತು ವರುಷದ ಮಹಿಳೆಯೊಬ್ಬಳು ತೀರ ಚಿಂತಾಜನಕ ಪರಿಸ್ಥಿತಿಯಲ್ಲಿ ಇದೇ ಕಾರಣದಿಂದ ಆಸ್ಪತ್ರೆಯಲ್ಲಿ ದಾಖಲಾದಳು. ಅವಳಿಗೆ ಕೂಡಲು, ನಿಲ್ಲಲು, ನಡೆಯಲು, ಅಷ್ಟೇ ಅಲ್ಲ, ಮಲಗಲು ಕೂಡ ಬರುತ್ತಿರಲಿಲ್ಲ. ಸಾಮಾನ್ಯವಾಗಿ 80-90 ರವರೆಗೆ ಇರಬೇಕಾದ ನಾಡಿಯ ಮಿಡಿತ 130ರ ವರೆಗೆ ಏರಿತ್ತು. ಹೃದಯ ಪಟಲಗಳು ಶಿಥಿಲಗೊಂಡಿದ್ದವು. ಆದುದರಿಂದ ಹೃದಯವು ಹೆಚ್ಚು ಕೆಲಸ ಮಾಡಿ ದೇಹಕ್ಕೆ ರಕ್ತವನ್ನು ಪೂರೈಸುತ್ತಿತ್ತು.


ಈ ರೀತಿ ಹೆಚ್ಚು ಹೆಚ್ಚು ಕೆಲಸ ಮಾಡಿ ಹೃದಯ ಮತ್ತಷ್ಟು ಬಲಹೀನಗೊಂಡು ಮರಣ ಬರಬಹುದು. ಆಕೆಯ ಹೃದಯಕ್ಕೆ ಬಲ ತಂದುಕೊಡುವ ಡಿಗಾಕ್ಸಿನ್ ಎಂಬ ಮಾತ್ರೆ ಮತ್ತು ಇನ್ನಿತರ ಔಷಧೋಪಚಾರಗಳಿಂದ ಅವಳನ್ನು ಎಂಟು ಹತ್ತು ದಿನಗಳಲ್ಲಿ ಗುಣಪಡಿಸಲಾಯಿತು. ಆದರೆ ಶಾಶ್ವತವಾಗಿ ಔಷಧವನ್ನು ಉಪಯೋಗಿಸುವ ಪರಿಸ್ಥಿತಿ ಅವಳಿಗೆ ಬಂತು. ಅವಳಿಗೆ ನಾಲ್ಕನೇ ಮಗುವಾದ ನಂತರ ಈ ರೋಗವು ಸೇರಿಕೊಂಡಿತಂತೆ. ಆಕೆಯ ಗಂಡನ ಮನೆಯವರು ಆಗ ಲಕ್ಷ್ಯವಹಿಸಲಿಲ್ಲ. ಅಲ್ಲದೆ ತವರು ಮನೆಯವರು ಉಪಚರಿಸಬೇಕೆಂದು ಕರೆಯಲು ಬಂದಾಗ ಗಂಡನ ಮನೆಯವರು ಸಹಕರಿಸಲಿಲ್ಲ. ಅಷ್ಟರಲ್ಲಿ ವ್ಯಾಧಿ ಉಲ್ಬಣಿಸಿ ಹೃದಯ ರೋಗಕ್ಕೆ ತುತ್ತಾಗುವಂತೆ ಮಾಡಿತು.

ಎಲವು ಕೀಲುಗಳ ನೋವಿಗೆ ಸಾಮಾನ್ಯವಾಗಿ ಎಲ್ಲರೂ ಸಂಧಿವಾತವೆಂದು ಕರೆಯುವುದುಂಟು. ಆದರೆ ಅದು ಹಲವಾರು ವಿಧದ ಸಂಧಿವಾತಗಳಿಂದ ಕೂಡಿದೆ. ವೈದ್ಯರ ಬಳಿ ಹೋದಾಗ ಅವರು ಅನೇಕ ವೇದನಾಹರ ಔಷಧಗಳಲ್ಲಿ ಒಂದನ್ನು ಬರೆದುಕೊಡುವ ಸಂಭವ ಉಂಟು. ಆದರೆ ಆಯಾ ರೋಗಿಯ ಸಂಧಿವಾತವು ಯಾವ ಪ್ರಕಾರದ್ದು ಎಂಬುದನ್ನು ಅರಿತು ಉಪಚರಿಸುವುದು ಸೂಕ್ತ.

ಅನೇಕರು ಸಂಧಿನೋವಿನ ಬಗ್ಗೆ ದೂರುವುದುಂಟು. ಆದರೆ ಅದು ನಿಜವಾಗಿಯೂ ಸಂಧಿವಾತವೋ ಅಲ್ಲವೋ ಎಂಬುದನ್ನು ಮೊದಲು ಕಂಡುಹಿಡಿಯಬೇಕು. ಸಂಧಿವಾತ ಇದ್ದವರಿಗೆ ಸಂದುಗಳ ಚಲನವಲನದಿಂದ ಅವರಿಗೆ ನೋವಾಗುವುದು. ಆಕಸ್ಮಾತ್ತಾಗಿ ಯಾವುದೇ ತರಹದ ನೋವು ಇಲ್ಲದೇ ಇದ್ದಲ್ಲಿ ಅವರಿಗೆ ಸಂಧಿವಾತವಿಲ್ಲವೆಂದು ನಿಖರವಾಗಿ ಹೇಳ ಬಹುದು. ಅದೊಂದು ಕಾರ್ಯಾತ್ಮಕ (Functional) ರೋಗವಾಗಿರಬಹುದು. ಇಂತಹ ಪ್ರಸಂಗಗಳಲ್ಲಿ ವೇದನಾಹರ ಮಾತ್ರೆಗಳು ಉಪಯುಕ್ತವಾಗಲಾರವು. ಇವರಿಗೆ ಭಿನ್ನ ರೀತಿಯ ಉಪಚಾರ ನೀಡಬೇಕಾಗುತ್ತದೆ.

ನಿಜವಾದ ಸಂಧಿವಾತಗಳನ್ನು
ಈ ಕೆಳಗಿನಂತೆ ವರ್ಗೀಕರಿಸಬಹುದು

1. ಏಕಕೀಲ ಸಂಧಿವಾತ.
2. ಬಹುಕೀಲ ಸಂಧಿವಾತ.



ಆಸಿಯೋ ಅರ್ಥ್ರೈಟಿಸ್‌ನ ಸಂಧಿವಾತದಿಂದ ಬಳಲುತ್ತಿರುವ ವ್ಯಕ್ತಿಯ ಮೊಳಕಾಲಿನ ಎಕ್ಸ್‌ರೆ – ಸವೆತ ಹೊಂದಿದಂತಹ ಎಲುವುಗಳ ಪೃಷ್ಠಗಳು – ಕುಗ್ಗಿದ ಸಂಧು ಕಾಣುವುದು

ಏಕಕೀಲ ಸಂಧಿವಾತಗಳು:

1. ಪಟ್ಟು ತಗಲಿ ಗಾಯವಾದಾಗ ಆಗುವ ಸಂಧಿವಾತ.
2. ಸೆಪ್ಟಿಕ್ (ನಂಜು) ಸಂಧಿವಾತ.
3. ಕ್ಷಯರೋಗದಿಂದ ಆಗುವ ಸಂಧಿವಾತ.
4. ಗನೋರಿಯದಿಂದಾಗುವ ಸಂಧಿವಾತ.
5. ದೇಹದಲ್ಲಿ ಯುರಿಕ್ ಆಸಿಡ್ ಹೆಚ್ಚಾಗುವುದರಿಂದ ಉಂಟಾಗುವ ಸಂಧಿವಾತ (ಗೌಟ್) ಈ ತರಹದ ಸಂಧಿವಾತ ವಿರಳವಾಗಿ ಕಂಡು ಬರುತ್ತದೆ.

6. ಆಸ್ಟಿಯೋ ಆರ್ಥ್ರೈಟಿಸ್ ಎಂಬುದು ತೀರ ಸಾಮಾನ್ಯವಾಗಿ ಕಂಡು ಬರುವಂಥ ಸಂಧಿವಾತ. ಇದು ವಿಶೇಷವಾಗಿ ಐವತ್ತಕ್ಕಿಂತಲೂ ಹೆಚ್ಚು ವಯಸ್ಸಾದವರಿಗೆ ಅದರಲ್ಲೂ ತೀರ ಬೊಜ್ಜು ಬೆಳೆಸಿಕೊಂಡವರಿಗೆ ಬರುವ ವ್ಯಾಧಿ. ವಯೋಮಾನಕ್ಕನುಗುಣವಾಗಿ ಎಲ್ಲವು ಕೀಲುಗಳಲ್ಲಿ ಸವೆತ ಉಂಟಾಗಿ ತರುವ ವ್ಯಾಧಿ ಇದೂ ಶಾಶ್ವತವಾಗಿ ಉಳಿಯುವುದರಿಂದ ಅದರೊಡನೆ ಬಾಳುವ ಕಲೆಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಇದು ಹೆಚ್ಚಾಗಿ ಮೊಣಕಾಲಿನಲ್ಲಿ ಕಂಡುಬರುವುದು. ಅಲ್ಲದೆ ಕುತ್ತಿಗೆ ಹಾಗೂ ಬೆನ್ನಿನ ಮಣಿಕಟ್ಟುಗಳಲ್ಲೂ ಆಗಬಹುದು. ಕಾರ್ಯನಿರ್ವಹಿಸುವಾಗ ಈ ವ್ಯಾಧಿಯುಳ್ಳವರಿಗೆ ನೋವು ಹೆಚ್ಚಾಗುವುದು. ಮೊಣಕಾಲಿನಲ್ಲಿ ವ್ಯಾಧಿ ಇದ್ದವರಿಗೆ ಒಮ್ಮೊಮ್ಮೆ ಕಟ್ ಎಂಬ ಸಪ್ಪಳ ಕೇಳಿ ಬರುವುದುಂಟು. ಆಯಾ ಕೀಲುಗಳ ಎಕ್ಸ್‌ರೇ ತೆಗೆದು ಆ ವ್ಯಾಧಿಯನ್ನು ಅರಿತುಕೊಳ್ಳಬೇಕಾಗುತ್ತದೆ. ನೋವು ಹೆಚ್ಚಾಗಿದ್ದಲ್ಲಿ ವಿಶ್ರಾಂತಿ, ವೇದನಾಹರ ಮಾತ್ರೆಗಳು, ಬಿಸಿಕಾವು ಮತ್ತು ಶಾರ್ಟ್ ವೇವ್ ಡಯಾಥರ್ಮಿ ಹಾಗೂ ವೇದನಾಹರ ಲೇಪನಗಳಿಂದ ಉಪಚರಿಸ ಬಹುದು. ನೋವು ತೀರ ಹೆಚ್ಚಾದಾಗ ಹೈಡ್ರೋಕಾರ್ಟಿಝೋನ್ ಎಂಬ ಚುಚ್ಚುಮದ್ದನ್ನು ಸಂಧಿಯಲ್ಲಿಯೇ ಕೊಟ್ಟರೆ ನೋವು ಶೀಘ್ರವಾಗಿ ಉಪಶಮನವಾಗುವುದು. ಆದರೆ ಇಂಥ ಚುಚ್ಚುಮದ್ದನ್ನು ತಜ್ಞ ವೈದ್ಯರಿಂದ ಮಾತ್ರ ತೆಗೆದುಕೊಳ್ಳಬೇಕು. ನೋವು ನಿವಾರಣೆಯಾದ ನಂತರ ಮೊಣಕಾಲು ಹಾಗೂ ತೊಡೆಯ ಸ್ನಾಯುಗಳ ವ್ಯಾಯಾಮವನ್ನು ನಿರಂತರವಾಗಿ ಮಾಡುವುದರಿಂದ ಈ ವ್ಯಾಧಿಯನ್ನು ನಿಯಂತ್ರಿಸಬಹುದು.



"ರಂಭೆ, ಊರ್ವಶಿ, ಮೇನಕೆ ಇವರು ಮೂವರಲ್ಲಿ ಯಾರು ಬರಬಹುದು!"

ಬಹುಕೀಲ ಸಂಧಿವಾತಗಳು

1. ಇದರಲ್ಲಿ ಮಹತ್ವದ ರುಮ್ಯಾಟಿಕ್ ಆರ್ಥ್ರೈಟಿಸ್ಸನ್ನು ಈ ಮೊದಲೇ ವಿವರಿಸಲಾಗಿದೆ. ಈ ವ್ಯಾಧಿಯ ವಿಶೇಷವಾಗಿ ಹದಿನೈದು ವರುಷದೊಳಗಿನ ಮಕ್ಕಳಿಗೆ ಅದರಲ್ಲೂ ಗಂಡುಮಕ್ಕಳಿಗೆ ಬರುವುದುಂಟು. ಈ ಬಗೆಯ ಸಂಧಿನೋವು ತಲೆದೋರಿದಾಗ ಒಂದು ಸಂಧಿನಲ್ಲಿ ಆರಂಭವಾಗಿ ಮತ್ತೆ ಅದು ಕಡಿಮೆಯಾಗಿ, ಮತ್ತೊಂದರಲ್ಲಿ ಕಾಣುವುದು.

2. ರುಮೋಟ್ಸಾಡ್ ಆರ್ಥ್ರೈಟಿಸ್ ಇದು-ಈಗಾಗಲೇ ಅವಲೋಕಿಸಿದ ಸಂಧಿವಾತದ ಜ್ವರಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಕಂಡುಬರುವಂತಹ ವ್ಯಾಧಿ. ತಂಪು ಪ್ರದೇಶವಾದ ಯುರೋಪಿನಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈ ರೋಗವು ನಿಧಾನವಾಗಿ ಮೊದಲು ಬೆರಳು



ರುಮಟೋಯ್ಡ್ ಸಂಧಿವಾತದಿಂದ ವಿಕೃತಗೊಂಡ ಕೈಗಳು

ಗಳ ಸಣ್ಣ ಸಂದುಗಳಲ್ಲಿ ಕಂಡು, ನಂತರ ದೊಡ್ಡ ಸಂದುಗಳನ್ನೂ ಆವರಿಸುವುದು. ಹೆಚ್ಚಾಗಿ ಇಪ್ಪತ್ತರಿಂದ ನಲವತ್ತು ವಯಸ್ಸಿನ ಹೆಣ್ಣುಮಕ್ಕಳಲ್ಲಿ ಕಾಣಬಹುದು. ಜ್ವರ ಬರುವುದು, ತೂಕ ಕಡಿಮೆಯಾಗುವುದು, ಮುಂಜಾನೆ ಬಹುಸಮಯದವರೆಗೆ ಸಂದು ಹಿಡಿಯುವುದು, ಚರ್ಮದಲ್ಲಿ ಗಂಟು ತಲೆದೋರುವುದು. ದುಗ್ಧರಸ ಗ್ರಂಥಿಗಳಲ್ಲಿ (ಲಿಫ್ ನೋಡ್) ಬಾವು ಬರುವುದು, ಪ್ಲೀಹಗ್ರಂಥಿ ದೊಡ್ಡದಾಗುವುದು, ಬಿಳಿಯ ರಕ್ತಗೋಲಕಗಳು ಕಡಿಮೆಯಾಗುವುದು, ಕ್ರಮೇಣವಾಗಿ ಸಂದುಗಳು ವಿಕೃತವಾಗುವುದು, ಮುಂತಾದವುಗಳು ಈ ವ್ಯಾಧಿಯ ಲಕ್ಷಣಗಳು.

ರಕ್ತ ಪರೀಕ್ಷಿಸಿದಾಗ ರುಮೊಟೈಡ್ ಫ್ಯಾಕ್ಟರ್ ಎಂಬುದು ರಕ್ತದಲ್ಲಿ ಕಂಡು ಬರುವುದು. ಇ.ಎಸ್.ಆರ್. ಪ್ರಮಾಣ ಹೆಚ್ಚಾಗಿರುವುದು. ಕೀಲುಗಳ ಎಕ್ಸರೇ ತೆಗೆದ ಎಲುವುಗಳಲ್ಲಿಯ ಸಾಂದ್ರತೆ ಕಡಿಮೆಯಾಗಿರುವುದು. ಈ ರೋಗಕ್ಕೆ ವಿಶ್ರಾಂತಿ, ಮಾನಸಿಕ ನೆಮ್ಮದಿ, ಸಂದುಗಳ ಚಲನವಲನದ ವ್ಯಾಯಾಮ, ಬಿಸಿನೀರಿನ ಕಾವು, ಆಸ್ಪಿರಿನ್ ಮಾತ್ರೆಗಳು ಇತ್ಯಾದಿಗಳು ಉಪಯುಕ್ತವಾಗುವುದು.

ಅಲ್ಲದೆ ಫಿನೈಲ್ ಬುಟೋರ್ಝೋನ್, ಎಂಡೋಮೆಥಾಸಿನ್ ಐಬ್ಯೂ ಬುಥೇನ್, ಕಾರ್ಟಿಕೋಸ್ಟ್ರೈಡ್ ಇತ್ಯಾದಿ ಔಷಧಗಳು ಪ್ರಯೋಜನಕ್ಕೆ ಬರಬಲ್ಲವು. ಆದರೆ ಈ ಔಷಧಗಳನ್ನು ಡಾಕ್ಟರರ ಸಲಹೆ ಇಲ್ಲದೆ ಸೇವಿಸಕೂಡದು. ಈ ವ್ಯಾಧಿಯು ದೀರ್ಘಕಾಲಿಕ ರೋಗವಾಗಿದ್ದು ಆಗಾಗ ಹೆಚ್ಚು ಕಡಿಮೆಯಾಗುವುದುಂಟು. ಪೂರ್ತಿ ಗುಣವಾಗಲೂಬಹುದು. ಇದು ಆಯಾ ರೋಗಿಯಲ್ಲಿ ಯಾವ ರೀತಿ ಪರಿಣಾಮವನ್ನು ಬೀರುತ್ತದೆಂಬುದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಸಂದುಗಳು ವಿಕೃತವಾದಾಗ ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಬಹುದು.

ಔಷಧಿಗಳಿಂದ ಬರುವ ಸಂಧಿವಾತಗಳು


ಎ.ಟಿ.ಎಸ್.ಸಲ್ವಾ, ಇಂಥಬುಟೋಲ್ ಮುಂತಾದ ಔಷಧಿಗಳ ಸೇವನೆಯಿಂದ ಕೆಲವೊಂದು ರೋಗಿಗಳಲ್ಲಿ ಸಂಧಿವಾತವು ಕಂಡುಬರುವುದು. ಇಂಥ ಪ್ರಸಂಗದಲ್ಲಿ ಕೂಡಲೇ ಆಯಾ ಔಷಧಿಗಳ ಸೇವೆಯನ್ನು ನಿಲ್ಲಿಸಿ, ಸ್ಟಿರ್ಯಾಡ್ ಮತ್ತು ಆ್ಯಂಟಿ ಹಿಸ್ಟಮಿನಿಕ್ ಔಷಧಿಗಳನ್ನು ಕೊಟ್ಟು, ಗುಣಪಡಿಸಬಹುದು.

ಈ ಮೇಲಿನ ವ್ಯಾಧಿಗಳಲ್ಲದೆ ಸಿಸ್ಟಿಮಿಕ್ ಲೂಪಸ್, ಎರಿದಿಮೆಟೋಸಿಸ್, ಆ್ಯಂಕಿಲೋಜಿಂಗ್ ಸ್ಪಾಂಡಿಲಾಮಿಸ್, ಸೋರಿಯಾಸಿಸ್ ಎಂಬ ವ್ಯಾಧಿಗಳಲ್ಲಿ ಸಂದುವಾತಗಳು ಬರುವುದು. ಕೆಲವೊಮ್ಮೆ ಆಮಶಂಕೆಯಾದ ನಂತರವೂ ತಾತ್ಕಾಲಿಕವಾಗಿ ಸಂಧಿವಾತಗಳು ಕಂಡು ಬರುವುವು. ಆದರೆ ಇವೆಲ್ಲ ವಿರಳವಾಗಿ ಕಂಡು ಬರುವ ಸಂಧಿವಾತಗಳು.

ಆಯುರ್ವೇದದಲ್ಲಿ ಎಂಬತ್ತು ಬಗೆಯ ವಾತದೋಷಗಳಲ್ಲಿ ಸಂಧಿವಾತವೂ ಒಂದು ಎಂದು ಬಣ್ಣಿಸಲಾಗಿದೆ. ಆಮವಾತವೆಂಬ ವ್ಯಾಧಿ ಒಂದಕ್ಕೊಂದು ವಿರುದ್ಧವಾದ ಆಹಾರ ಸೇವನೆಯಿಂದ (ಉದಾ: ಮಾಂಸ ಹಾಗೂ ಹಾಲು) ಬರುತ್ತದೆಂದು ಅಲ್ಲಿ ವಿವರಿಸಲಾಗಿದೆ. ಸ್ನಿಗ್ಧಪದಾರ್ಥಗಳನ್ನು ಹೆಚ್ಚಾಗಿ ಸೇವಿಸುವುದರಿಂದ ಊಟ ಮಾಡಿದ ನಂತರ ವ್ಯಾಯಾಮ ಮಾಡುವುದರಿಂದ, ನಿದ್ದೆಗೆಡುವುದರಿಂದ ಅಲ್ಲದೆ ಇನ್ನೂ ಅನೇಕ ಕಾರಣಗಳಿಂದ ವಿಷಕಾರಿ ವಾಯು ನಿರ್ಮಾಣಗೊಂಡು ಸಂದುಗಳಲ್ಲಿ ಸೇರಿಕೊಂಡು ವಾತದೋಷವು ನಿರ್ಮಾಣವಾಗುವುದೆಂದು ಆಯುರ್ವೇದ ಹೇಳುತ್ತದೆ.

ಕೆಲವೊಂದು ಸಂದರ್ಭದಲ್ಲಿ ಪೂರ್ತಿ ನಿರುಪಯೋಗವಾದ ಸಂಧಿಗಳ ಬದಲು ಕೃತ್ರಿಮ ಸಂದನ್ನು ಶಸ್ತ್ರಕ್ರಿಯೆಯ ಮುಖಾಂತರ ಕೂಡಿಸಲು ಬರುವುದು ಇಷ್ಟೆಲ್ಲ ವೈದ್ಯಕೀಯ ವಿಜ್ಞಾನವು ಮುಂದುವರಿದಿದ್ದರೂ ಅನೇಕ ಸಂಧಿವಾತಗಳನ್ನು ಪೂರ್ತಿಯಾಗಿ ತಿಳಿದುಕೊಳ್ಳಲು ಹಾಗೂ ಪರಿಣಾಮಕರವಾಗಿ ಉಪಚರಿಸಲು ಸಾಧ್ಯವಾಗಿಲ್ಲ. ಸಂಧಿವಾತಕ್ಕೆ ಅನೇಕ ಪರಿಣಾಮಕರ ಔಷಧಿಗಳಿದ್ದರೂ ದೀರ್ಘಕಾಲ ಉಪಯೋಗಿಸಿದಲ್ಲಿ ಅವು ಪ್ರತಿಕೂಲ ಪರಿಣಾಮವನ್ನು ಬೀರಿ ಹೆಚ್ಚಿನ ತೊಂದರೆಗೆ ಕಾರಣವಾಗುತ್ತವೆ. ಪರಿಣಾಮಕರವೂ ನಿರುಪದ್ರವಿಯೂ ಆಗಿರುವ ಔಷಧಿಗಳನ್ನು ಇನ್ನೂ ಕಂಡು ಹಿಡಿಯಬೇಕಾಗಿದೆ.

ಆದರೆ ನಿರಾಶೆಗೆ ಕಾರಣವಿಲ್ಲ. ಅಕಸ್ಮಾತ್, ಸಂಧಿವಾತ ಬಂದರೂ ಯೋಗ್ಯ ಉಪಚಾರದ ಮೂಲಕ ರೋಗ ಉಲ್ಬಣಿಸದಂತೆ ನೋಡಿಕೊಳ್ಳಬಹುದು. ಆದುದರಿಂದಲೇ ಈ ರೋಗಗಳ ಸಾಮಾನ್ಯ ಜ್ಞಾನವನ್ನು ಪ್ರತಿಯೊಬ್ಬರೂ ಅರಿತಿರುವುದು ಅವಶ್ಯಕವಲ್ಲವೆ? ●



ಗ್ರೀಕ್ ತಾತ್ವಿಕರು ಮತ್ತು ಜಗತ್ತು

— ಡಾ॥ ಹು.ಲ. ಚಂದ್ರಶೇಖರ.

ನಮ್ಮ ಸುತ್ತಮುತ್ತಲಿನ ಈ ಜಗತ್ತಿಗೆ ಒಂದು ನೈಜ ಅಸ್ತಿತ್ವವಿದೆಯೇ? ಅಥವಾ ಅದು ಮಿಥ್ಯವೋ? ಅದು ನಿಜವಾದಲ್ಲಿ ಅದಕ್ಕೆ ಒಂದು ಮೂಲವಿದೆಯೇ? ಮೂಲವಿದ್ದಲ್ಲಿ ಅದರ ಸ್ವರೂಪವು ಚೇತನವೋ ಅಥವಾ ಜಡವೋ? ಚೇತನವಾಗಿದ್ದಲ್ಲಿ ಅದು ಈ ಜಗತ್ತನ್ನು ಬಾಹ್ಯ ಅವಲಂಬನೆಯಿಲ್ಲದೇ ಸೃಷ್ಟಿಸುವುದೋ ಅಥವಾ ಸೃಷ್ಟಿಗೆ ಇನ್ನೊಂದು ಸಾಮಗ್ರಿಯನ್ನು ಬಳಸುವುದೋ? ಜಡವಾದಲ್ಲಿ ಈ ಜಡ ಮೂಲವು ಚೇತನದ ಅಪೇಕ್ಷೆಯಿಲ್ಲದೇ ಜಗತ್ತನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದೆಯೇ? ಈ ಜಗತ್ತು ನಿಜವಾದಲ್ಲಿ ಅದು ಒಂದು ಮಹೋದ್ದೇಶವನ್ನು ಪ್ರತಿಬಿಂಬಿಸುವುದೇ? ಅಥವಾ ಅದಕ್ಕೆ ಅಸ್ತಿತ್ವವಿದ್ದೂ ಅದು ಅರ್ಥಹೀನವೇ? ತಾತ್ವಿಕ ಮನೋಭಾವವುಳ್ಳ ಯಾವುದೇ ವ್ಯಕ್ತಿಗೆ ಎದುರಾಗುವ ಪ್ರಶ್ನೆಗಳಿವು. ಇವುಗಳಿಗೆ ಗ್ರೀಕ್ ಚಿಂತಕರು ನೀಡಿರುವ ಉತ್ತರವು ವಿಭಿನ್ನವಷ್ಟೇ ಅಲ್ಲ, ಕೆಲವು ವೇಳೆ ಸ್ವಾರಸ್ಯಕರವೂ ಹೌದು.

ಪಾಶ್ಚಾತ್ಯ ತಾತ್ವಿಕ ಜಗತ್ತಿನ ಹೊಸ್ತಿಲಲ್ಲಿ ನಿಂತು ನಮ್ಮನ್ನು ಕೈಬೀಸಿ ಆಮಂತ್ರಿಸುವವರು ಗ್ರೀಕರು. ಇಲ್ಲಿ ಬರುವ ಮೊದಲ ಮೂವರು ತಾತ್ವಿಕರಿಗೆ ಜಗತ್ತು ಸತ್ಯವೋ ಅಥವಾ ಮಿಥ್ಯವೋ ಎಂಬ ಪ್ರಶ್ನೆ ಮುಖ್ಯವಾಗಲಿಲ್ಲ. ಈ ಜಗತ್ತಿಗೆ ಮೂಲವಾದ ಒಂದು ದ್ರವ್ಯವಿದೆ ಮತ್ತು ಅದು ಜಗತ್ತಾಗಿ ಮಾರ್ಪಡಿಸುತ್ತದೆ ಎಂಬುದನ್ನು ಅಂಗೀಕರಿಸಿ ಆ ಮೂಲದ್ರವ್ಯದ ಸ್ವರೂಪವನ್ನು ವಿವರಿಸಲು ಯತ್ನಿಸಿದರು. "ಈ ಜಗತ್ತು ಯಾವ ಸಾಮಗ್ರಿಯಿಂದ ರಚಿತವಾಗಿದೆ?" ಎಂಬುದಷ್ಟೆ ಅವರನ್ನು ಕಾಡಿದ ಪ್ರಶ್ನೆ. ಮೊದಲನೆಯವನಾದ ಥ್ಯಾಲೆಸ್ (ಕ್ರಿ.ಪೂ. 624-554) ಇದಕ್ಕೆ 'ನೀರು' ಎಂದು ಉತ್ತರಿಸಿದ. ಮಂಜುಗಡ್ಡೆ ಮತ್ತು ಆವಿಯ ಮೂಲ ದ್ರವವಾದ್ದರಿಂದ ಜಗತ್ತಿನ ಅತಿ ಗಟ್ಟಿಯಾದ ಪದಾರ್ಥದಿಂದ ಅತ್ಯಂತ ಹಗುರವಾದ ವಸ್ತುವಿನವರೆಗೂ ಎಲ್ಲವೂ ನೀರಿನಿಂದಲೇ ಉತ್ಪನ್ನವಾಗಿರಬೇಕೆಂದು ಆತನು ಊಹಿಸಿದ. ಆದರೆ ಎರಡನೆಯವನಾದ ಅನಾಕ್ಸಿಮ್ಯಾಂಡರ (ಕ್ರಿ.ಪೂ. 610-546) ಇದನ್ನು ಅಲ್ಲಗಳೆದು ಜಗತ್ತಿನ ಮೂಲಸಾಮಗ್ರಿ ಒಂದು ಜೈವಿಕ ಘನವೆಂದ. ಅನಂತ ಎನ್ನಲ್ಪಡುವ ಈ ಘನವು ಪ್ರಾರಂಭದಲ್ಲಿ ಅಖಂಡವಾಗಿದ್ದು ಚಲನೆಯನ್ನು ಒಳಗೊಂಡಿರುತ್ತದೆ. ಅದರ ಈ ಚಲನ ಶಕ್ತಿಯು ಅದನ್ನು ಎಲ್ಲೆಡೆಗಳಲ್ಲೂ ಚಲಿಸುವಂತೆ ಮಾಡಿ ಕ್ರಮೇಣ ಅದು ಭಿನ್ನ ಖಂಡಗಳಾಗಿ ಛಿದ್ರವಾಗುತ್ತದೆ. ಎಂದರೆ ತನ್ನಲ್ಲಿರುವ ಚಲನ ಶಕ್ತಿಯಿಂದ ಈ ಅಖಂಡವು ವಿಭಜನೆ ಮತ್ತು ಸಂಯೋಜನೆಗೆ ಒಳಗಾಗುತ್ತದೆ. ಅಖಂಡದ ವಿಭಜನೆಯು ಜಗತ್ತಿನ ವಿವಿಧ ವಸ್ತುಗಳ ಉತ್ಪತ್ತಿಗೆ ನಾಂದಿಯಾದರೆ ಈ ಭಿನ್ನ ಖಂಡಗಳ ಮರು ಸಂಯೋಜನೆ ಲಯಕ್ಕೆ ಎಡ ಮಾಡಿಕೊಡುತ್ತದೆ. ಎಂದರೆ ಲಯಕಾಲದಲ್ಲಿ ಖಂಡಗಳು ತಮ್ಮ ಭಿನ್ನತೆಯನ್ನು ಕಳೆದುಕೊಂಡು ಪುನಃ ಅಖಂಡರೂಪವನ್ನು ತಳೆಯುತ್ತವೆ. ಮೂರನೆಯವನಾದ ಅನ್ಯಾಕ್ಸಿಮೀನ್ಸ್ ಪ್ರಕಾರ ಎಲ್ಲಾ ಜಂತುಗಳೂ ತಮ್ಮ ಅಸ್ತಿತ್ವಕ್ಕೆ ಉಸಿರನ್ನೇ ಅವಲಂಬಿಸಿರುವುದರಿಂದ ವಾಯುವೇ ಇಡೀ ಜಗತ್ತಿಗೆ ಆಧಾರ.

ಈ ಮೂವರ ನಂತರ ಬಂದ ಪೈಥಾಗೊರಾಸ್ (ಕ್ರಿ.ಪೂ. 580-500) ಈ

ಜಗತ್ತನ್ನು ವಿಭಿನ್ನ ದೃಷ್ಟಿಯಿಂದ ನೋಡಿದ. ಈ ಜಗತ್ತು ಮೇಲ್ನೋಟಕ್ಕೆ ಕಾಣುವಷ್ಟು ಸರಳ ವಲ್ಲ. ಆಳವಾಗಿ ನೋಡಿದಾಗ ಅದು ವಿವಿಧ ವಸ್ತುಗಳು ವಿವಿಧ ರೀತಿಯಲ್ಲಿ ಹೊಂದಿರುವ ಒಂದು ವಿಶಾಲ ಸಂಬಂಧ ಅಥವಾ ಜಾಲ ವನ್ನು ಪ್ರತಿಬಿಂಬಿಸುತ್ತದೆ. ಈ ಸಂಬಂಧಕ್ಕೆ ನಾವು ಪರಿಮಾಣಾತ್ಮಕ ವಿವರಣೆಯನ್ನು ಮಾತ್ರ ನೀಡಲು ಸಾಧ್ಯ. ಉದಾಹರಣೆಗೆ ತಂತಿ ಯೊಂದು ಅದರ ಉದ್ದದೊಡನೆ ಸಂಬಂಧ ವನ್ನು ಹೊಂದಿದ್ದು ಈ ಸಂಬಂಧವನ್ನು ಸಂಖ್ಯೆಯ ಮೂಲಕ ಮಾತ್ರ ವ್ಯಕ್ತಪಡಿಸಲು ಸಾಧ್ಯ. ಆದ್ದರಿಂದ ಈ ಜಗತ್ತಿಗೆ ಸೂಕ್ತ ವಿವರಣೆ ನೀಡಬಲ್ಲ ಏಕೈಕ ಪದಾರ್ಥಗಳೆಂದರೆ ಸಂಖ್ಯೆಗಳು. ಸಂಖ್ಯೆಯೇ ಜಗತ್ತಿನ ಮೂಲ.

ಈ ಎಲ್ಲ ತಾತ್ವಿಕರಿಗೂ ಬದಲಾವಣೆ ಒಂದು ಮುಖ್ಯ ತಾತ್ವಿಕ ಸಮಸ್ಯೆಯೆನಿಸಲಿಲ್ಲ. ಪಾಶ್ಚಾತ್ಯರಲ್ಲಿ ವಿಕಾರ ಎಂಬುದು ಮೊಟ್ಟ ಮೊದಲು ಒಂದು ತಾತ್ವಿಕ ಸಮಸ್ಯೆಯಾಗಿ ಕಾಡಿ ದುದು ಹೆರಾಕ್ಲೈಟಸ್ (ಕ್ರಿ.ಪೂ. 535-475) ಅನ್ನು. ಆತನ ಪ್ರಕಾರ ಈ ಜಗತ್ತು ನಿರಂತರ ಬದಲಾವಣೆಗೆ ಒಳಗಾಗುತ್ತಿರುತ್ತದೆ. ಇದರಲ್ಲಿ ಅಸ್ಥಿರವಲ್ಲದ ವಸ್ತುವೇ ಇಲ್ಲ. ವಸ್ತು ಸ್ಥಿತಿ ಯನ್ನು ನಾವು ಸರಿಯಾಗಿ ಗ್ರಹಿಸಬಲ್ಲೆವಾದರೆ ಜಗತ್ತಿನ ಅತ್ಯಂತ ಸ್ಥಿರವೆನ್ನಲ್ಪಡುವ ವಸ್ತುವೂ ಬದಲಾವಣೆ ಹೊಂದುತ್ತಿರುವುದು ಕಂಡು ಬರುತ್ತದೆ. ನಿರಂತರವಾಗಿ ಚಲಿಸುತ್ತಿರುವುದ ರಿಂದ ನಾವು ಒಂದೇ ನದಿಯನ್ನು ಎರಡು ಬಾರಿ ಪ್ರವೇಶಿಸಲು ಸಾಧ್ಯವಿಲ್ಲ. ಪ್ರತಿಯೊಂದು ವಸ್ತುವು ಹುಟ್ಟಿದ ಕ್ಷಣವೇ ಭಿನ್ನವಾಗಲು ಪ್ರಾರಂಭಿಸುತ್ತದೆ. ಈ ಜಗತ್ತನ್ನು ನಿಯಂತ್ರಿಸು ತ್ತಿರುವುದು ಉತ್ಪತ್ತಿ ಮತ್ತು ನಾಶ ಎಂಬ ದ್ವಂದ್ವ (ಸ್ಟ್ರೈಫ್) ಹೀಗೆ ಬದಲಾವಣೆಯೇ ಜಗತ್ತಿನ ಸ್ವರೂಪವಾದ್ದರಿಂದ ಹೆರಾಕ್ಲೈಟಸ್ ಅದರ ಮೂಲ ಸಾಮಗ್ರಿಯೂ ವಿಕಾರವಾಗಿರ ಬೇಕೆಂದು ಊಹಿಸಿದನು. ಆತನ ಪ್ರಕಾರ ಬೆಂಕಿ ಅಥವಾ ತೇಜಸ್ಸು ಅಸ್ಥಿರವಾದ್ದರಿಂದ ಮತ್ತು ಅದಕ್ಕೆ ಸ್ಥಿರವಾದ ಯಾವ ಆಕಾರವೂ ಇಲ್ಲ ದಿರುವುದರಿಂದ ಬೆಂಕಿಯೇ ಜಗತ್ತಿನ ಮೂಲ ಸಾಮಗ್ರಿ.

ಆದರೆ ನಂತರ ಬರುವ ಮೂವರು ತಾತ್ವಿಕರು ಹೆರಾಕ್ಲೈಟಸ್‌ನ ವಾದವನ್ನು ತಿರಸ್ಕರಿಸುತ್ತಾರೆ. ಪಾರ್ಮೆನಿಡೆಸ್ (ಕ್ರಿ.ಪೂ. 515-470) ಪ್ರಕಾರ ವಿಕಾರವನ್ನು ಅವಿಕಾರದ ಕಲ್ಪನೆ ಯಿಲ್ಲದೇ ವಿವರಿಸಲು ಅಸಾಧ್ಯವಾದ್ದರಿಂದ ಮುಖ್ಯವಾದುದು ಅವಿಕಾರವೇ ಹೊರತು ವಿಕಾರವಲ್ಲ. ಈ ಜಗತ್ತನ್ನು ಆಳವಾಗಿ ನೋಡಿ ದಾಗ ಅದು ಅವಿಕಾರಿ ಮತ್ತು ಅಚರವಾಗಿರು ವುದು ಕಂಡುಬರುತ್ತದೆ. ಜಗತ್ತನ್ನು ಮಿಥ್ಯವೆನ್ನು ವುದರಲ್ಲಿ ಪಾರ್ಮೆನಿಡೆಸ್‌ಗೂ ಮತ್ತು ಶಂಕರರ ಅದ್ವೈತಕ್ಕೂ ಸಾಮ್ಯವು ಎದ್ದುಕಾಣು ತ್ತದೆ. ಹಾಗೆಯೇ ಜೀನೋ (ಕ್ರಿ.ಪೂ. 490-430) ಕೂಡ ವಿಕಾರ ಕಲ್ಪನೆಯಲ್ಲಿ ವೈರುಧ್ಯವನ್ನು ಕಾಣುತ್ತಾನೆ. ಆತನ ಪ್ರಕಾರ ವಿಕಾರಕ್ಕೆ ಒಂದು ಅರ್ಥ ಬರುವುದು ಅವಿ ಕಾರದ ಹಿನ್ನೆಲೆಯಲ್ಲಷ್ಟೇ ಅಲ್ಲ. ಆ ಅವಿ ಕಾರವು ಚೇತನವಾಗಿದ್ದಾಗ ಮಾತ್ರ. ತಿಳಿ ಯುವ ಚೇತನವಿಲ್ಲದೇ ವಿಕಾರ ಎಂಬ ಕಲ್ಪನೆಯೇ ತನ್ನ ಅರ್ಥವನ್ನು ಕಳೆದುಕೊಳ್ಳು ತ್ತದೆ. ವಾಸ್ತವವಾಗಿ ಈ ಜಗತ್ತಿನ ಯಾವ ವಸ್ತುವೂ ವಿಕಾರಿಯಲ್ಲ. ಜಗತ್ತು ಒಂದು ಘನ ಮೊತ್ತ. ಜೀನೋಫೇನ್ಸ್ ಹೇಳುವಂತೆ ಅದಕ್ಕೂ ಈಶ್ವರನಿಗೂ ಯಾವ ವ್ಯತ್ಯಾಸವೂ ಇಲ್ಲ. ವಿಕಾರವಿರುವುದು ಭಾಗದಲ್ಲಿ ಮಾತ್ರ, ಪೂರ್ಣದಲ್ಲಿ ಅಲ್ಲ.

ಎಂಪೆಡೋಕ್ಲಿಸ್ (ಕ್ರಿ.ಪೂ. 495-435) ವಿಕಾರ ಅವಿಕಾರಗಳ ಈ ಸಮಸ್ಯೆಯನ್ನು ಸಮ ನ್ವಯ ಮಾಡುತ್ತಾನೆ. ಆತನ ಪ್ರಕಾರ ಈ ಜಗತ್ತು ಪೃಥ್ವಿ, ಅಪ್, ತೇಜ ಮತ್ತು ವಾಯು ಎಂಬ ನಾಲ್ಕು ಭೂತಗಳಿಂದ ನಿರ್ಮಿತ ವಾಗಿದೆ. ಪ್ರತಿಯೊಂದು ಭೂತವೂ ಅಸಂಖ್ಯಾತ ಕಣಗಳಿಂದ ಕೂಡಿದೆ. ಮೂಲತಃ ಈ ಕಣಗಳು ವಿಕಾರಿಗಳಲ್ಲ. ಜಗತ್ತಿನಲ್ಲಿ ವಿಕಾರವೆಂಬುದು ಇದ್ದರೆ ಅದು ಈ ಕಣಗಳ ಆಕರ್ಷಣೆ (ಲವ್) ಮತ್ತು ವಿಕರ್ಷಣೆ (ಹೇಟ್)ಗಳ ಫಲ. ಕಣಗಳ ಆಕರ್ಷಣೆ ಅಥವಾ ಸಂಯೋಜನೆಯಿಂದ ಜಗತ್ತಿನ ವಿವಿಧ ವಸ್ತುಗಳು ಉತ್ಪನ್ನವಾಗುತ್ತವೆ. ಅವುಗಳ ವಿಕ ರ್ಷಣೆ ಅಥವಾ ವಿಭಜನೆಯು ಲಯವನ್ನು ಸೂಚಿಸುತ್ತದೆ. ಹೀಗೆ ವಿಕಾರವೆಂಬುದು ಕಣ ಗಳ ಆಕರ್ಷಣೆ ವಿಕರ್ಷಣೆಗಳಲ್ಲಿದೆಯೇ ಹೊರತು ಮೂಲತಃ ಕಣಗಳಲ್ಲಿ ಇಲ್ಲ. ಎಂಪೆ ಡೋಕ್ಲಿಸ್ ಮತ್ತು ಅನಾಕ್ಸಿಮ್ಯಾಂಡರ್‌ಗೆ

ಇರುವ ಒಂದು ವ್ಯತ್ಯಾಸವೆಂದರೆ ಎಂಪೆಡೋಕ್ಲಿಸ್ ಪ್ರಕಾರ ಕಣಗಳ ಸಂಯೋಜನೆಯು ಜಗತ್ ಸೃಷ್ಟಿಗೆ ನಾಂದಿಯಾದರೆ ವಿಭಜನೆಯು ಲಯಕ್ಕೆ ಕಾರಣ. ಆದರೆ ಅನಾಕ್ಸಿಮ್ಯಾಂಡರ ಪ್ರಕಾರ ಅಖಂಡದ ವಿಭಜನೆಯು ಉತ್ಪತ್ತಿಗೆ ನಾಂದಿಯಾದರೆ ಭಿನ್ನಖಂಡಗಳ ಮರುಸಂಯೋಜನೆ ಲಯಕ್ಕೆ ಕಾರಣ.

ಎಂಪೆಡೋಕ್ಲಿಸ್‌ನ ಈ ವಾದವು ಅನಾಕ್ಸಗೊರಾಸನ (ಕ್ರಿ.ಪೂ. 500-428) ಆಸಕ್ತಿಯನ್ನು ಕೆರಳಿಸಿತಾದರೂ ಅದು ಅವನಿಗೆ ತೃಪ್ತಿ ನೀಡಲಿಲ್ಲ. ಈ ಅತೃಪ್ತಿಯು ಆತನನ್ನು ಬಹುತ್ವವಾದದ ವೈಪರೀತ್ಯಕ್ಕೆ ಒಯ್ದಿತು. ಆತನು ಜಗತ್ತಿನ ಮೂಲವನ್ನು ನಾಲ್ಕಕ್ಕೆ ಬದಲಾಗಿ ಅಸಂಖ್ಯಾತ ಭೂತ ಅಥವಾ ದ್ರವ್ಯಗಳಿಗೆ ಗುರುತಿಸಿದನು. ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ಮೂಲದ್ರವ್ಯವಿದ್ದು, ಈ ದ್ರವ್ಯವು ಅಸಂಖ್ಯಾತ ಕಣಗಳಿಂದ ಕೂಡಿದೆ. ನಿರ್ದಿಷ್ಟ ದ್ರವ್ಯದ ಚೌಕಟ್ಟಿನೊಳಗೆ ಮಾತ್ರ ಮಾತ್ರ ಕಣಗಳ ಸಂಯೋಜನೆ ವಿಭಜನೆಗೆ ಅವಕಾಶವಿದೆ. ಆದರೆ ದ್ರವ್ಯಾಂತರ ಸಂಯೋಜನೆ ಅಥವಾ ಪರಿಣಾಮ ಸಾಧ್ಯವಿಲ್ಲ.

ಅನಾಕ್ಸಗೊರಾಸನ ಈ ಬಹುತ್ವವಾದವು ಪರಮಾಣುವಾದದಲ್ಲಿ ಪರ್ಯವಸಾನವಾಯಿತು. ಗ್ರೀಕ್ ಪರಮಾಣುವಾದಕ್ಕೆ ಒಂದು ವ್ಯವಸ್ಥಿತ ರೂಪವನ್ನು ನೀಡಿದ ಲ್ಯೂಸಿಪ್ಪಸ್ ಮತ್ತು ಡೆಮೊಕ್ರೈಟಸ್ (ಕ್ರಿ.ಪೂ. 460-370) "ವಿಕಾರವು ಪರಮಾಣುಗಳ ಸಂಯೋಜನೆ ವಿಭಜನೆಯಲ್ಲಿದೆಯೇ ಹೊರತು ಮೂಲತಃ ನಿತ್ಯವೂ ಅತಿ ಸೂಕ್ಷ್ಮವೂ ಆದ ಪರಮಾಣುಗಳಲ್ಲಿಲ್ಲ" ಎಂಬ ಎಂಪೆಡೋಕ್ಲಿಸ್‌ನ ವಾದವನ್ನು ಅಂಗೀಕರಿಸಿದರು. ಆದರೆ ಪರಮಾಣುಗಳಲ್ಲಿ ಗುಣಾತ್ಮಕ ಭೇದವಿದೆಯೆಂಬ ಅನಾಕ್ಸಗೊರಾಸನ ವಾದವನ್ನು ತಿರಸ್ಕರಿಸಿದರು. ಈ ವಿಷಯದಲ್ಲಿ ಅವರು ಭಾರತೀಯ ತತ್ವಶಾಸ್ತ್ರದ ಜೈನರನ್ನು ಹೋಲಿಕೊಂಡರೆ ಅನಾಕ್ಸಗೊರಾಸ್ ವೈಶೇಷಿಕರನ್ನು ಹೋಲಿಕೊಂಡ. ಈ ಗ್ರೀಕ್ ಪರಮಾಣುವಾದಿಗಳ ಪ್ರಕಾರ ಪರಮಾಣುಗಳು ಗಾತ್ರ ಮತ್ತು ಆಕಾರಗಳಲ್ಲಿ ಬೇರೆ ಬೇರೆಯಾಗಿದ್ದರೂ ಮೂಲತಃ ಅವು ಒಂದೇ ಸ್ವಭಾವದಿಂದ ಕೂಡಿವೆ. ಪ್ರತಿಯೊಂದು ಅಣುವು ಚಲನಶಕ್ತಿಯನ್ನು ಹೊಂದಿದೆ. ಇದರ ನೆರವಿನಿಂದ ಅದು ಸ್ವತಂತ್ರವಾಗಿ ಚಲಿಸಿ ಇತರ ಅಣುಗಳಿಗೆ ಅಂಟಿಕೊಳ್ಳಬಲ್ಲದ್ದಾಗಿರುತ್ತದೆ. ಈ ಅಣುಗಳು ವಿವಿಧ ಸಂಖ್ಯೆಯಲ್ಲಿ ವಿವಿಧ ರೀತಿ ಸಂಯೋಜಿಸುವುದರಿಂದ ಈ ಪ್ರಪಂಚವು ಉಂಟಾಗುತ್ತದೆ.

ಪಾಶ್ಚಾತ್ಯರಲ್ಲಿ ಈ ಜಗತ್ತಿನ ವಿಕಾರದತ್ತ ಮೊಟ್ಟಮೊದಲು ಕನ್ನಡಿ ಹಿಡಿದವನು ಹೆರಾಕ್ಲೈಟಸ್. ಆದರೆ ಕಾರಣದಲ್ಲಿಲ್ಲದ ಅಂಶವು ಕಾರ್ಯದಲ್ಲಿ ವ್ಯಕ್ತವಾಗಲು ಸಾಧ್ಯವಿಲ್ಲವೆಂಬ ನಿಯಮಕ್ಕೆ ಅನುಸಾರವಾಗಿ ಆತನು ಜಗತ್ತಿನ ಕಾರಣವನ್ನೂ ವಿಕಾರಗೊಳಿಸಿದ. ನಂತರ ಪಾರ್ಮೆನಿಡೆಸ್ ಇದನ್ನು ತಿರಸ್ಕರಿಸಿ ವಿಕಾರದ ಔಚಿತ್ಯವನ್ನು ಅವಿಕಾರದಲ್ಲಿ ಕಂಡ. ಅನಂತರ ಪ್ಲೇಟೋ (ಕ್ರಿ.ಪೂ. 427-347) ತನ್ನ ತತ್ವಮೀಮಾಂಸೆಯಲ್ಲಿ ಈ ಎರಡು ಅಂಶಗಳನ್ನೂ ಅಳವಡಿಸಿಕೊಂಡ. ಪ್ಲೇಟೋ ಹೆರಾಕ್ಲೈಟಸ್‌ನ ಅಸ್ಥಿರವಾದವನ್ನು ಅಂಗೀಕರಿಸಿ ಅಸ್ಥಿರತೆಗೂ ಅಸತ್ಯತೆಗೂ ಇರುವ ಅವಿನಾಸಂಬಂಧವನ್ನು ಸ್ಪಷ್ಟಪಡಿಸಿದ. ಆತನ ಪ್ರಕಾರ ಯಾವುದು ತನ್ನ ಸ್ವರೂಪವನ್ನು ಸ್ಥಿರವಾಗಿ ಉಳಿಸಿಕೊಳ್ಳಬಲ್ಲದೋ ಅದೇ ಸತ್ಯ. ಆದರೆ ಇಂದ್ರಿಯ ಜಗತ್ತಿಗೆ ಈ ಲಕ್ಷಣವಿಲ್ಲದಿರುವುದರಿಂದ ಅದು ಸತ್ಯವಲ್ಲ. ಹಾಗೆಯೇ ಪ್ಲೇಟೋನು ವಿಕಾರದ ಹಿಂದೆ ಅವಿಕಾರಿ ತತ್ವವಿದೆಯೆಂಬ ಪಾರ್ಮೆನಿಡೆಸ್ ಸಿದ್ಧಾಂತವನ್ನು ಒಪ್ಪಿಕೊಂಡ. ಆದರೆ ಈ ಅವಿಕಾರಿಯು ಏಕವಾಗಿದ್ದರೂ ಅದು ಅನೇಕರಹಿತವಲ್ಲ. ಅದು ಅನೇಕತೆಯನ್ನು ಸಮರಸವಾಗಿ ಮೇಳೈಸಿಕೊಂಡಿರುವ ಏಕ. ಪ್ಲೇಟೋ ಈ ತತ್ವವನ್ನು ಸಾಮಾನ್ಯವೆಂದು (ಐಡಿಯಾ) ಕರೆಯುತ್ತಾನೆ. ಪರಿಪೂರ್ಣತೆ ಅಥವಾ ಒಳಿತು (ಗುಡ್) ಎಂದೂ ಕರೆಯಲ್ಪಡುವ ಈ ಸಾಮಾನ್ಯವು ತನ್ನಲ್ಲಿ ಇತರ ಅಸಂಖ್ಯಾತ ಸಾಮಾನ್ಯಗಳನ್ನು ಸುಸಂಗತವಾಗಿ ಒಳಗೊಂಡಿದೆ. ಸಾಮಾನ್ಯ ಮತ್ತು ಪ್ರಕೃತಿಗಳ ಸಂಪರ್ಕದಿಂದ ಈ ದೃಶ್ಯ ಪ್ರಪಂಚವುಂಟಾಗುತ್ತದೆ. ಶಿಲ್ಪಿಯು ತನ್ನ ಮನಸ್ಸಿನಲ್ಲಿರುವ ಚಿತ್ರವನ್ನು ಶಿಲೆಯಲ್ಲಿ ಮೂಡಿಸುವಂತೆ ಸೃಷ್ಟಿಕರ್ತನು ತನ್ನ ದಿವ್ಯಪ್ರಜ್ಞೆಗೆ ದತ್ತವಾಗಿರುವ ಸಾಮಾನ್ಯಗಳನ್ನು ಪ್ರಕೃತಿಯಲ್ಲಿ ಮುದ್ರಿಸಿ ಈ ಜಗತ್ತನ್ನು ಸೃಷ್ಟಿಸುತ್ತಾನೆ. ಆದರೆ ಮೂಲ

ಸಾಮಗ್ರಿಯಾದ ಪ್ರಕೃತಿಯ ಅಪೂರ್ಣತೆಯಿಂದಾಗಿ ಸಾಮಾನ್ಯಗಳು ಅದರಲ್ಲಿ ಪೂರ್ಣವಾಗಿ ಅನುಕರಿಸಲು ಅಸಮರ್ಥವಾಗಿರುವುದರಿಂದಲೇ ಈ ಜಗತ್ತು ದೋಷಪೂರ್ಣವಾಗಿದೆ. ಈ ಜಗತ್ತನ್ನು ನೈಜದ ನಕಲು ಅಥವಾ ಪ್ರತಿಬಿಂಬ ಎನ್ನುವುದಕ್ಕೂ ಇದೇ ಕಾರಣ. ಆದರೆ ಜಗತ್ತಿನ ನ್ಯೂನತೆಯು ಅವಿಕಾರಿಯಾದ ಸಾಮಾನ್ಯಗಳ ಮೇಲೆ ಯಾವ ಪರಿಣಾಮವನ್ನು ಬೀರಲಾರದು. ಸಾಮಾನ್ಯಗಳು ತಮ್ಮ ಅಸ್ತಿತ್ವಕ್ಕೆ ಜಗತ್ತನ್ನು ಅವಲಂಬಿಸುವುದಿಲ್ಲ. ಸಾಮಾನ್ಯಗಳ ಹೊರತಾಗಿ ಪ್ಲೇಟೋ ಚಿಂತನೆಯಲ್ಲಿ ಸೃಷ್ಟಿಕರ್ತನಿಗೆ ಮತ್ತು ಪ್ರಕೃತಿಗಳಿಗೆ ಯಾವ ಸ್ಥಾನವಿದೆಯೆಂಬುದು ಸ್ಪಷ್ಟವಾಗಿಲ್ಲ.

ಆದರೆ ಅರಿಸ್ಟಾಟಲ್ (ಕ್ರಿ.ಪೂ. 384-322) ಭೌತ ಜಗತ್ತನ್ನು ಮಿಥ್ಯವಾಗಿಸದೆ ಅದಕ್ಕೆ ಸಾಮಾನ್ಯದಷ್ಟೇ ತಾತ್ವಿಕ ಮಹತ್ವವನ್ನು ಮತ್ತು ನೈಜ ಅಸ್ತಿತ್ವವನ್ನು ನೀಡಿದ. ಪ್ಲೇಟೋ ಹೇಳುವಂತೆ ಈ ಸಾಮಾನ್ಯವು ಪ್ರಪಂಚಾತೀತವಲ್ಲ ಸಾಮಾನ್ಯಗಳು ಈ ಪ್ರಪಂಚದ ವಸ್ತುಗಳಲ್ಲೇ ಅಂತರ್ಗತವಾಗಿವೆ. ಆಲೋಚನೆಯಲ್ಲಿ ಅವುಗಳನ್ನು ನಾವು ಬೇರೆಂದು ತಿಳಿಯಬಹುದೇ ಹೊರತು ಅಸ್ತಿತ್ವದಲ್ಲಿ ಅವುಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಸಾಮಾನ್ಯಕ್ಕೆ ಸಾರ್ಥಕತೆ ಬರುವುದು ಅದು ಪ್ರಕೃತಿಯ ಸಂಪರ್ಕ ಹೊಂದಿ ನಿರ್ದಿಷ್ಟ ರೂಪವನ್ನು ತಳೆದಾಗ ಅಥವಾ ವಿಶೇಷ ವಸ್ತುವಾದಾಗ ಮಾತ್ರ. ಪ್ರತ್ಯೇಕವಿಲ್ಲದೇ ಸಾಮಾನ್ಯವು ಸ್ವತಂತ್ರವಾಗಿರಲು ಸಾಧ್ಯವಿಲ್ಲ.

ಎಲ್ಲ ವಸ್ತುಗಳಲ್ಲೂ ಇದ್ದು ಅವುಗಳನ್ನು ಒಂದು ವರ್ಗಕ್ಕೆ ಸೇರಿಸುವ ಸಮಾನ ಅಂಶವೇ ಸಾಮಾನ್ಯ. ಯಾವುದರಲ್ಲಿ ಈ ಸಾಮಾನ್ಯವು ಸಾರ್ಥಕತೆಯನ್ನು ಹೊಂದುವುದೋ ಅಥವಾ ಯಾವ ಸಾಮಗ್ರಿಯಿಂದ ಸಾಮಾನ್ಯಕ್ಕೆ ಒಂದು ವಿಶೇಷತೆ ಬರುವುದೋ ಅದೇ ಪ್ರಕೃತಿ. ಸಾಮಾನ್ಯ ಪ್ರಕೃತಿಗಳ ಸಂಪರ್ಕದಿಂದ ಉಂಟಾಗುವ ಜಗತ್ತಿನ ವಿವಿಧ ವಸ್ತುಗಳೇ ಪ್ರತ್ಯೇಕಗಳು. ಈ ಸಾಮಾನ್ಯ ಪ್ರಕೃತಿಗಳಿಗೆ ಉತ್ಪತ್ತಿ ನಾಶವಿಲ್ಲ. ಆದರೂ ಇವುಗಳ ಮೂಲ ಸ್ವರೂಪದಲ್ಲಿ ವ್ಯತ್ಯಾಸವಿದೆ. ಮೂಲತಃ ಸಾಮಾನ್ಯಗಳು ಅವಿಕಾರಿ. ಒಂದು ಸಾಮಾನ್ಯವು ಮತ್ತೊಂದು ಸಾಮಾನ್ಯವಾಗಿ ಪರಿಣಮಿಸಲಾರದು. ಆದರೆ ಪ್ರಕೃತಿಯು ನಿತ್ಯ ಪರಿಣಾಮಿ. ಅದು ಸತತವಾಗಿ ವಿವಿಧ ರೂಪಗಳನ್ನು ತಳೆಯುತ್ತಿರುತ್ತದೆ.

ಅಲ್ಲದೇ ಒಂದೇ ವಸ್ತುವು ವಿವಿಧ ವಸ್ತುಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಪ್ರತ್ಯೇಕಗಳೆರಡೂ ಆಗಬಲ್ಲದು. ಉದಾಹರಣೆಗೆ ವೃಕ್ಷಕ್ಕೆ ಸಂಬಂಧಿಸಿದಂತೆ ಬೀಜವು ಪ್ರಕೃತಿಯಾದರೆ ಬೀಜಕ್ಕೆ ಸಂಬಂಧಿಸಿದಂತೆ ವೃಕ್ಷವೂ ಸಾಮಾನ್ಯವಾಗುತ್ತದೆ. ಬೀಜಕ್ಕೆ ಸಾರ್ಥಕತೆ ಬರುವುದು ಅದು ವೃಕ್ಷವಾದಾಗ ಮಾತ್ರ. ಹಾಗೆಯೇ ಪೀಠೋಪಕರಣಗಳಿಗೆ ಸಂಬಂಧಿಸಿದಂತೆ ವೃಕ್ಷವು ಪ್ರಕೃತಿಯಾದರೆ ವೃಕ್ಷಕ್ಕೆ ಸಂಬಂಧಿಸಿದಂತೆ ಪೀಠೋಪಕರಣಗಳು ಸಾಮಾನ್ಯ. ಹೀಗೆ ಒಂದೇ ವಸ್ತುವು ಸಾಮಾನ್ಯವೊಂದರ ಸಾರ್ಥಕತೆಯನ್ನು ಬಿಂಬಿಸುವುದಷ್ಟೇ ಅಲ್ಲ. ಮತ್ತೊಂದು ಸಾಮಾನ್ಯದ ಸಾಕ್ಷಾತ್ಕಾರಕ್ಕೆ ಪ್ರಕೃತಿ ಅಥವಾ ಸಾಮಗ್ರಿಯಾಗುತ್ತದೆ.

ಪ್ರಕೃತಿಯ ಈ ನಿರಂತರ ಮಾರ್ಪಾಟಿನ ಹಿನ್ನೆಲೆಯಲ್ಲಿ ನಾಲ್ಕು ಕಾರಣಗಳು ಕೆಲಸ ಮಾಡುತ್ತವೆ. ಮೊದಲನೆಯದು ರೂಪಾತ್ಮಕ ಕಾರಣ (ಫಾರ್ಮಲ್ ಕಾಸ್). ಇದನ್ನು ಶಿಲ್ಪಿಯು ಶಿಲೆಯಲ್ಲಿ ಪ್ರತಿಮೆಯನ್ನು ಮೂಡಿಸುವ ಮುನ್ನ ತನ್ನ ಮನಸ್ಸಿನಲ್ಲಿ ಹೊಂದಿರುವ ಚಿತ್ರಕ್ಕೆ ಹೋಲಿಸಬಹುದು. ಈ ಚಿತ್ರವು ಸಾರ್ಥಕತೆಯನ್ನು ಹೊಂದಬೇಕಿರುತ್ತದೆ. ಎರಡನೆಯದು ಉಪಾದಾನ ಕಾರಣ (ಮೆಟೀರಿಯಲ್ ಕಾಸ್). ಯಾವ ಸಾಮಗ್ರಿಯಲ್ಲಿ ಚಿತ್ರವು ಅಭಿವ್ಯಕ್ತವಾಗುವುದೋ ಅದೇ ಉಪಾದಾನ ಕಾರಣ. ಮೇಲಿನ ಉದಾಹರಣೆಯನ್ನು ತೆಗೆದುಕೊಂಡರೆ ಶಿಲೆಯು ಉಪಾದಾನ ಕಾರಣ. ಪ್ರತಿಮೆಯನ್ನು ಮೂಡಿಸುವಲ್ಲಿ ಶಿಲ್ಪಿಯು ಬಳಸುವ ಸಲಕರಣೆಗಳೇ ನಿಮಿತ್ತ ಕಾರಣ (ಎಫಿಷಿಯಂಟ್ ಕಾಸ್). ಈ ಕೆಲಸದ ಹಿನ್ನೆಲೆಯಲ್ಲಿರುವ ಉದ್ದೇಶ ಅಥವಾ ಗುರಿಯೇ 'ಆತ್ಯಂತಿಕ ಕಾರಣ' (ಫೈನಲ್ ಕಾಸ್).

ಅರಿಸ್ಟಾಟಲ್ ಪ್ರಕಾರ ಈ ಜಗತ್ತು ಅಣುವಾದಿಗಳು ಹೇಳುವಂತೆ ಯಾಂತ್ರಿಕ ಅಥವಾ ಆಕಸ್ಮಿಕವಲ್ಲ. ಅದಕ್ಕೊಂದು ಉದ್ದೇಶವಿದೆ. ಈ ಉದ್ದೇಶವು ಪೂರ್ಣವಾಗುವವರೆಗೂ ಪ್ರಕೃತಿಯು ನಿರಂತರವಾಗಿ ಮಾರ್ಪಡಿಸುತ್ತಲೇ ಇರುತ್ತದೆ. ವಿವಿಧ ರೂಪಗಳನ್ನು ತಳೆಯು

ತ್ತಲೇ ಇರುತ್ತದೆ. ಇಡೀ ವಿಶ್ವವು ಪ್ರಕೃತಿ ಪರಿಣಾಮದ ಒಂದು ದೀರ್ಘ ಹಾಗೂ ವಿಶಾಲ ಪ್ರಕ್ರಿಯೆ. ಪೂರ್ಣ ಸಾರ್ಥಕತೆಯನ್ನು ಹೊಂದುವವರೆಗೂ ಸಾಮಾನ್ಯವು ಪ್ರಕೃತಿಯಲ್ಲಿ ತನ್ನನ್ನು ನಿರಂತರವಾಗಿ ಅಭಿವ್ಯಕ್ತಗೊಳಿಸಿಕೊಳ್ಳುತ್ತಲೇ ಇರುತ್ತದೆ. ಅಂತಿಮ ಘಟ್ಟ ತಲುಪಿದ ನಂತರ ಪ್ರಕೃತಿಯ ಹವಣಿಕೆ ಸ್ತಬ್ಧವಾಗುತ್ತದೆ. ಈ ಹಂತದಲ್ಲಿ ಸಾಮಾನ್ಯ ಪ್ರಕೃತಿಗಳ ಭಿನ್ನತೆ ನಾಶವಾಗಿ ಶುದ್ಧ ಸಾಮಾನ್ಯ ಮಾತ್ರ ಇರುತ್ತದೆ. ಕೇವಲ ಸತ್ತಾಮಾತ್ರವಾದ ಅದು ಎಲ್ಲ ಸಾಮಾನ್ಯಗಳನ್ನೂ ಸಮರಸವಾಗಿ ಒಳಗೊಂಡಿರುತ್ತದೆ. ಅರಿಸ್ಟಾಟಲ್ ಪ್ರಕಾರ ಇದೇ ಈಶ್ವರ. ತಾನು ಚಲನೆಗೆ ಒಳಗಾಗದೇ ಪ್ರಕೃತಿಯನ್ನು ಚಲಿಸುವುದರಿಂದ ಈಶ್ವರನು ಜಗತ್ತಿನ ಅಚಲಿತ ಚಾಲಕ. ಈಶ್ವರನ ಸಾಕ್ಷಾತ್ಕಾರದಲ್ಲಿ ಪ್ರಕೃತಿಯ ಹವಣಿಕೆ ತಟಸ್ಥವಾಗುತ್ತದೆ. ಅದಕ್ಕೆ ಮೊದಲು ಅದು ಇತರ ಸಣ್ಣ ಸಣ್ಣ ಸಾಮಾನ್ಯಗಳನ್ನು ಹೊಮ್ಮಿಸುತ್ತಲೆ ಇರುತ್ತದೆ. ಚೇತನವಷ್ಟೇ ಅಲ್ಲ, ಜಡವು ಕೂಡ ದೈವ ಸಾಕ್ಷಾತ್ಕಾರ ಹೊಂದಲು ಹವಣಿಸುತ್ತದೆಂಬುದು ಅರಿಸ್ಟಾಟಲ್‌ನ ತತ್ವ ವಿಶೇಷ.

ಅನಂತರ ಬಂದ ಎಪಿಕ್ಯೂರಸ್ (ಕ್ರಿ.ಪೂ. 341-270) ಚಿಂತನೆಯಲ್ಲಿ ನಾವು ಹೊಸದನ್ನೇನೂ ಕಾಣುವುದಿಲ್ಲ. ಡೆಮಾಕ್ರೈಟಸ್‌ನಿಂದ ಪ್ರಭಾವಿತನಾದ ಈತನ ಪ್ರಕಾರ ಪರಮಾಣುಗಳೇ ಜಗತ್ತಿನ ಅತ್ಯಂತಿಕ ವಸ್ತುಗಳು. ಈ ಸೂಕ್ಷ್ಮ ಘಟಕಗಳನ್ನು ನಾಶಗೊಳಿಸಲು ಅಥವಾ ವಿಭಜಿಸಲು ಸಾಧ್ಯವಿಲ್ಲ. ಈ ನಿತ್ಯಾಣುಗಳು ತೂಕ, ಗಾತ್ರ ಮತ್ತು ಆಕಾರಗಳಲ್ಲಿ ಭಿನ್ನವಾಗಿರುತ್ತವೆ. ಇವುಗಳ ಸ್ವಭಾವದಲ್ಲಿ ನಿರ್ದಿಷ್ಟತೆ ಇಲ್ಲದಿರುವುದರಿಂದ ಇವುಗಳಿಂದ ಉತ್ಪನ್ನವಾಗುವ ಜಗತ್ತಿನ ಹಿನ್ನೆಲೆಯಲ್ಲಿ ನಾವು ಯಾವ ಉದ್ದೇಶವನ್ನೂ ಕಾಣಲು ಸಾಧ್ಯವಿಲ್ಲ. ಈ ಜಗತ್ತು ಕೇವಲ ಆಕಸ್ಮಿಕ. ಯಾದೃಚ್ಛಿಕ ಚಲನೆಯಿಂದ ಅಣುಗಳು ಪರಸ್ಪರ ಸಂಯೋಜಿಸಿ ಇಂದ್ರಿಯಗೋಚರ ಕಾಯಗಳು (ಬಾಡೀಸ್) ಉಂಟಾಗುತ್ತದೆ. ಈ ಕಾಯಗಳ ಮರು ಸಂಯೋಜನೆಯಿಂದ ಜಗತ್ತು ಸೃಷ್ಟಿಯಾಗುತ್ತದೆ. ಅಣುಗಳ ವಿಭಜನೆಯು ಲಯಕ್ಕೆ ಎಡೆಮಾಡಿಕೊಡುತ್ತದೆ.

ಎಪಿಕ್ಯೂರಸ್‌ನಂತೆ ಸ್ಟೋಯಿಕರ ಚಿಂತನೆಯೂ ನೀತಿಪ್ರಧಾನವಾಗಿದ್ದರೂ ತತ್ವಮೀಮಾಂಸೆಯಲ್ಲಿ ಅವರು ಹೆಚ್ಚಾಗಿ ಅರಿಸ್ಟಾಟಲ್‌ನಿಂದ ಪ್ರಭಾವಿತರಾದರು. ಅವರ ಮೂಲ ಪ್ರವರ್ತಕನಾದ ಜೀನೋನ ಪ್ರಕಾರ ಜಗತ್ತಿನ ಪ್ರತಿಯೊಂದು ವಸ್ತುವಿನಲ್ಲೂ ಸಾಮಾನ್ಯ ಮತ್ತು ಪ್ರಕೃತಿ ಎಂಬ ಎರಡು ತತ್ವಗಳು ಬೇರ್ಪಡಿಸಲಾಗದಂತೆ ಇರುತ್ತವೆ. ಕ್ರಿಯಾಶೀಲವಾದ ಸಾಮಾನ್ಯವು ಜಗತ್ತಿನ ಚಲನೆ ಅಥವಾ ಮಾರ್ಪಾಟಿಗೆ ಕಾರಣ. ಇದನ್ನು ಶಕ್ತಿ ಎಂದೂ ಕರೆಯುತ್ತಾರೆ. ಪ್ರಕೃತಿಯು ಶಕ್ತಿಯ ಕ್ರಿಯಾಶೀಲ ಪ್ರಭಾವಕ್ಕೆ ಒಳಗಾಗುವ ತತ್ವ. ಜಗತ್ತಿನ ಎಲ್ಲ ವಸ್ತುಗಳಲ್ಲೂ ಅಡಗಿರುವ ಶಕ್ತಿಗಳಲ್ಲಿ ಐಕ್ಯತೆಯಿದೆ. ಈ ಮಹಾನ್ ಶಕ್ತಿಯನ್ನು ಅಗ್ನಿಯೆಂದು ಕರೆಯುವರು. ಶಾಖವೇ ಜೀವೋತ್ಪತ್ತಿ ಮತ್ತು ಚಲನೆಗೆ ಕಾರಣವಾಗಿದ್ದರಿಂದ ಈ ಜಗತ್ತಿನ ಮೂಲತತ್ವದ ಸ್ವರೂಪವು ತೇಜೋಭೂತವಾಗಿರಬೇಕೆಂದು ಸ್ಟೋಯಿಕರು ಊಹಿಸಿದರು. ಈ ಮಹಾನ್ ಶಕ್ತಿಯೇ ಜಗತ್ತನ್ನು ಸೃಷ್ಟಿಸಿ ಅದನ್ನು ಚಲಿಸುವುದು. ಇದಕ್ಕೂ ಜಗತ್ತಿಗೂ ಇರುವ ಸಂಬಂಧವು ದೇಹಾತ್ಮ ಸಂಬಂಧವನ್ನು ಹೋಲುತ್ತದೆ. ಇಡೀ ಜಗತ್ತು ವಿಶ್ವಾತ್ಮನ ಒಂದು ಬೃಹತ್ ಶರೀರವೆನ್ನುವಲ್ಲಿ ಸ್ಟೋಯಿಕರಿಗೂ ಭಾರತದ ವಿಶಿಷ್ಟಾದ್ವೈತಕ್ಕೂ ಹೋಲಿಕೆಯಿದೆ. ಈ ಮೂಲಾಗ್ನಿಯಿಂದ ಮೊದಲು ವಾಯು, ಅಪ್ ಮತ್ತು ಪೃಥ್ವಿ ಎಂಬ ಮೂರು ಭೂತಗಳು ಉತ್ಪನ್ನವಾಗಿ ಅನಂತರ ನಾಲ್ಕು ಭೂತಗಳ ವಿವಿಧ ರೀತಿಯ ಸಂಯೋಜನೆಯಿಂದ ವಿವಿಧ ವಸ್ತುಗಳುಂಟಾಗುತ್ತವೆ.

ಸ್ಟೋಯಿಕರ ಪ್ರಕಾರ ಜಗತ್ತಿನ ಕಾರಣ ಜೈವಿಕವಾದ್ದರಿಂದ ಜಗನ್ನಿರ್ಮಾಣವು ಆಕಸ್ಮಿಕವೆನ್ನಲು ಅವರು ಸಿದ್ಧರಿರಲಿಲ್ಲ. ಏಕೆಂದರೆ ಜೈವಿಕ ತತ್ವದ ಕ್ರಿಯೆಯು ಯಾಂತ್ರಿಕವಾಗಲು ಸಾಧ್ಯವಿಲ್ಲ. ಈ ತತ್ವದಿಂದ ಹೊರಹೊಮ್ಮುವ ಜಗತ್ತು ಕೂಡ ಸಜೀವವಾಗಿದೆ. ಅದು ಪ್ರಪಂಚದ ಪ್ರತಿಯೊಂದು ವಸ್ತುವಿನಲ್ಲಿಯೂ ವ್ಯಕ್ತವಾಗುವ ಮೂಲಕ ಅದನ್ನು ಉಜ್ಜೀವಿಸುತ್ತದೆ. ಶೂನ್ಯಾಕಾಶದಲ್ಲಿ ತೇಲುತ್ತಿರುವ ಈ ಸುಂದರ ಗೋಳವನ್ನು ಅದರ ಆತ್ಮವು ಸ್ಥಿರವಾಗಿ ಹಿಡಿದಿಟ್ಟು ಅದನ್ನು ಜೈವಿಕಗೊಳಿಸಿದೆ.

> **ಅಂತರ**
>
> ಕಲ್ಪನೆಯಲ್ಲಿ
> ಲೀನವಾಗಿ
> ಕವನಗಳನ್ನು ಬರೆದೆ
> ವಾಸ್ತವದಲ್ಲಿ
> ಎಚ್ಚೆತ್ತು
> ಬರೆದಿದ್ದನ್ನೆಲ್ಲ ಹರಿದೆ.
>
> — ಎಚ್. ಆನಂದರಾಮ ಶಾಸ್ತ್ರಿ

ಜಗತ್ತನ್ನು ಕುರಿತ ಈ ಎಲ್ಲ ವಿವರಣೆಗೂ ಸಂದೇಹವಾದಿಗಳೆಂಬ (ಸ್ಕೆಪ್ಟಿಕ್ಸ್) ಮತ್ತೊಂದು ತಾತ್ವಿಕ ಪಂಗಡದ ಉಗಮಕ್ಕೆ ಕಾರಣವಾಯಿತು. ಇದರ ಮೂಲ ಪ್ರವರ್ತಕ ಪೈರೊ. ಈತನ ಪ್ರಕಾರ ಜಗತ್ತನ್ನು ಕುರಿತ ಅಸಂಖ್ಯಾತ ಮತ್ತು ವಿರುದ್ಧ ವಿವರಣೆಗಳೇ ಅದರ ವಾಸ್ತವ ಸ್ವರೂಪವನ್ನು ವಿವರಿಸಲು ಅಸಾಧ್ಯವೆಂಬುದಕ್ಕೆ ಸಾಕ್ಷಿ. ಈ ವಿವರಣೆಗಳಲ್ಲಿ ಯಾವುದು ಸರಿ ಮತ್ತು ಯಾವುದು ತಪ್ಪು ಎಂದು ನಿರ್ಧರಿಸುವುದು ಕಷ್ಟ. ಜಗತ್ತನ್ನು ಕುರಿತ ಇಂತಹ ವಿವರಣೆಗಳಿಗೆ ಇಂದ್ರಿಯಗಳೇ ಕಾರಣ. ನಮ್ಮ ಇಂದ್ರಿಯಗಳು ನೀಡುವ ಜ್ಞಾನವು ಯಥಾರ್ಥವಲ್ಲ. ಆದ್ದರಿಂದ ಪೈರೋನ ಪ್ರಕಾರ ಜಗತ್ತನ್ನು ವಿವರಿಸುವ ಎಲ್ಲ ಯತ್ನಗಳೂ ವ್ಯರ್ಥ. ಹೀಗೆ ಜಗತ್ತನ್ನು ಕುರಿತಂತೆ ಗ್ರೀಕ್ ಸಂದೇಹವಾದಿಗಳ ವಿವರಣೆಯೂ ನಿರಾಶೆಯಿಂದ ಹೊರ ಹೊಮ್ಮಿತು. ಇಂದ್ರಿಯಗಳು ಯಥಾರ್ಥ ಜ್ಞಾನವನ್ನು ನೀಡಲಾರವು. ಆದ್ದರಿಂದ ಯಥಾರ್ಥ ಜ್ಞಾನವೇ ಸಾಧ್ಯವಿಲ್ಲ. ನಾವು ತಿಳಿದಿಲ್ಲ ಆದ್ದರಿಂದ ಯಾರೂ ತಿಳಿಯಲು ಸಮರ್ಥರಲ್ಲ ಎಂಬುದು ಅವರ ಘೋಷಣೆಯಾಗಿತ್ತು. ಅವರ ಈ ನೇತ್ಯಾತ್ಮಕ ಪ್ರವೃತ್ತಿಯು ಅವರನ್ನು ಜಗತ್ತನ್ನು ತಿಳಿಯುವ ಯತ್ನವನ್ನೇ ಕೈಬಿಡುವಂತೆ ಮಾಡಿತು. ಆದರೆ ವ್ಯವಹಾರದಲ್ಲಿ ಅವರು ಇಂದ್ರಿಯಗಳ ಪ್ರಯೋಜನವನ್ನು ಅಲಕ್ಷಿಸಿಲ್ಲ. ಜನರು ತಾತ್ವಿಕ ಚರ್ಚೆಯಲ್ಲಿ ತೊಡಗುವ ಬದಲು ಲೌಕಿಕವಾಗಿ ಪ್ರಾಯೋಗಿಕವಾಗಿರಬೇಕೆಂದು ಅವರು ಹೇಳಿದರು.

ಕ್ರೈಸ್ತ ಪೂರ್ವ ಯುಗದ ಅಂತ್ಯದಲ್ಲಿ ತಾತ್ವಿಕ ಗೊಂದಲಗಳಿಗೆ ಸಿಲುಕಿ ಆಯಾಸಗೊಂಡಿದ್ದ ಜನರ ಮನಸ್ಸು ಮತಧರ್ಮದೆಡೆಗೆ ಹರಿಯಿತು. ಜನರು ಮತಧರ್ಮದಲ್ಲಿ ಸುಖವನ್ನು ಅರಸಲು ಪ್ರಾರಂಭಿಸಿದರು. ಗ್ರೀಕ್ ಸಿದ್ಧಾಂತಗಳು ಆಗ ಪ್ರಚಲಿತವಾಗಿದ್ದ ವಿವಿಧ ಮತ ಅಥವಾ ನಂಬಿಕೆಗಳೊಂದಿಗೆ ಮಿಲನಗೊಳ್ಳಲು ಪ್ರಾರಂಭವಾಯಿತು. ಮತಧರ್ಮದ ಈ ಲೇಪದಿಂದಾಗಿ ದೇವರು ಅರ್ವಾಚೀನ ಗ್ರೀಕ್ ಇತಿಹಾಸದಲ್ಲಿ ಒಂದು ಸಾಕಾರವನ್ನು ಪಡೆದ.

ಈಜಿಪ್ಟಿನ ಅಲೆಕ್ಸಾಂಡ್ರಿಯಾದಲ್ಲಿದ್ದ ಫಿಲೋ (ಕ್ರಿ.ಶ. 30 - ಕ್ರಿ.ಪೂ. 50) ಪ್ರಾಚೀನ ಯಹೂದ್ಯಮತ ಮತ್ತು ಗ್ರೀಕ್ ತತ್ವಶಾಸ್ತ್ರದ ಅಂತಹ ಒಂದು ಸಮನ್ವಯವನ್ನು ಪ್ರತಿನಿಧಿಸುತ್ತಾನೆ. ಜಗತ್ತಿನ ಪ್ರತಿಯೊಂದು ವಸ್ತುವು ಸಾಮಾನ್ಯದ (ಐಡಿಯಾ) ಒಂದು ನಕಲು ಎನ್ನುವಲ್ಲಿ ಫಿಲೋ ಪ್ಲೇಟೋನಿಂದ ಪ್ರಭಾವಿತನಾದ. ಫಿಲೋ ಪ್ರಕಾರ ಈಶ್ವರನು ಎಷ್ಟು ಪರಿಶುದ್ಧನೆಂದರೆ ಈ ಪರಿಮಿತ ಜಗತ್ತಿನೊಂದಿಗೆ ಆತನ ಸಂಪರ್ಕವು ಸಾಧ್ಯವೇ ಇಲ್ಲ. ದೀಪದಿಂದ ಬೆಳಕಿನಂತೆ ಪ್ರಪಂಚಾತೀತನಾದ ಈಶ್ವರನಿಂದ ವಿವಿಧ ಶಕ್ತಿಗಳು ಹೊರಹೊಮ್ಮುತ್ತವೆ. ಈ ಅಸಂಖ್ಯಾತ ಶಕ್ತಿಗಳಲ್ಲಿ ಒಂದಾದ 'ಲೋಗೊಸ್' ಜಗತ್ತಿನ ಸೃಷ್ಟಿಗೆ ಕಾರಣ. ಪ್ರಕೃತಿಯೊಂದಿಗೆ ಸಂಪರ್ಕ ಹೊಂದುವ ಮೂಲಕ ಲೋಗೊಸ್ ಜಗತ್ತನ್ನು ಸೃಷ್ಟಿಸಿದ. ಆದ್ದರಿಂದ ಫಿಲೋನ ಪ್ರಕಾರ ಜಗತ್ತಿನ ನೇರ ಕಾರಣಈಶ್ವರನಲ್ಲ. ಈಶ್ವರನ ಸೃಷ್ಟಿಯಾದ ಲೋಗೊಸ್.

ಮತಧರ್ಮ ಮತ್ತು ತತ್ವಶಾಸ್ತ್ರಗಳ ಸಮನ್ವಯವನ್ನು ಪ್ರತಿನಿಧಿಸುವ ಮತ್ತೊಬ್ಬ ತಾತ್ವಿಕ ಪ್ಲೊಟೈನಸ್ (ಕ್ರಿ.ಶ. 204-269). ಈಜಿಪ್ಟಿನಲ್ಲಿ ಹುಟ್ಟಿ ರೋಮದಲ್ಲಿ ಶಿಕ್ಷಣ ಪಡೆದ ಈತನ ಮೇಲೆ ಭಾರತೀಯ ಅಧ್ಯಾತ್ಮ ಶಾಸ್ತ್ರದ ಪ್ರಭಾವ ಕಡಿಮೆಯಿಲ್ಲವೆಂದು ಕೆಲವು ಆಧುನಿಕ ವಿದ್ವಾಂಸರ ಅಭಿಪ್ರಾಯ. ಪ್ಲೊಟೈನಸ್ ಸೈದ್ಧಾಂತಿಕವಾಗಿ ಹೆಚ್ಚು ಕಡಿಮೆ

ಫಿಲೋನನ್ನೇ ಹೋಲುತ್ತಾನೆ. ಆತನ ಪ್ರಕಾರ ಈಶ್ವರನು ಜಗತ್ತಿನ ನೇರಕಾರಣನಲ್ಲ. ಅಕ್ಷಯ ಮೂಲದಿಂದ ತೊರೆಯಂತೆ ಅಥವಾ ಸೂರ್ಯನಿಂದ ಪ್ರಕಾಶದಂತೆ ಶುದ್ಧ ಈಶ್ವರನಿಂದ ಜೀವಗಳು ಆತನ ಶುದ್ಧತೆಗೆ ಭಂಗತರದಂತೆ ನಿರಂತರವಾಗಿ ಹೊರಹೊಮ್ಮುತ್ತಲೇ ಇರುತ್ತವೆ. ಮೂಲದಿಂದ ದೂರವಾದಷ್ಟು ಬೆಳಕಿನ ಪ್ರಕಾಶವು ಕಡಿಮೆಯಾಗುತ್ತದೆ. ಈಶ್ವರನಿಂದ ಅತ್ಯಂತ ದೂರದಲ್ಲಿ ಗಾಡಾಂಧಕಾರ ಅಥವಾ ಪ್ರಕೃತಿಯಿರುತ್ತದೆ. ಈಶ್ವರ ಪ್ರಕೃತಿಗಳ ನಡುವೆ ಮನಸ್ಸು ಅಥವಾ ಆತ್ಮ ಇರುತ್ತದೆ. ಪ್ರಕೃತಿಯ ಮೇಲೆ ಆತ್ಮವು ಪ್ರಭಾವ ಬೀರುವುದರಿಂದ ಜಗತ್ತಿನ ಸೃಷ್ಟಿಯಾಗುತ್ತದೆ.

ಹೀಗೆ ಗ್ರೀಕ್ ತಾತ್ವಿಕ ಇತಿಹಾಸದಲ್ಲಿ ಜಗತ್ತನ್ನು ಕುರಿತಂತೆ ನಾವು ಅನೇಕ ವಾದಗಳನ್ನು ಕಾಣಬಹುದು. ಗ್ರೀಕರ ವಿವರಣೆಗಳಲ್ಲಿ ಅನೇಕ ವೇಳೆ ಬಾಲಿಶತೆ ಇರುವಂತೆ ತೋರಿದರೂ ಮಧ್ಯ, ಆಧುನಿಕ ಮತ್ತು ಸಮಕಾಲೀನ ತಾತ್ವಿಕ ಹಾಗೂ ವೈಜ್ಞಾನಿಕ ಚಿಂತನೆಯ ಮೇಲೆ ಅವರು ಬೀರಿದ ಗಾಢವಾದ ಪ್ರಭಾವವನ್ನು ನಾವು ಮರೆಯುವಂತಿಲ್ಲ. ಜಗತ್ತನ್ನು ಕುರಿತ ಒಂದು ವೈಜ್ಞಾನಿಕ ಅನ್ವೇಷಣೆಗೆ ಪಾಶ್ಚಾತ್ಯ ಲೋಕದಲ್ಲಿ ಒಂದು ಪ್ರಾರಂಭ ಅಥವಾ ತಳಹದಿಯನ್ನು ಒದಗಿಸಿಕೊಟ್ಟವರು ಗ್ರೀಕರು. ಪಾಶ್ಚಾತ್ಯ ಚಿಂತಕರು ತಾತ್ವಿಕ ಚಿಂತನೆಯಲ್ಲಿ ನಿಷ್ಕೃಷ್ಟತೆಯನ್ನು ಸಾಧಿಸಿದ್ದರೆ ಅದಕ್ಕೆ ಬುನಾದಿ ಪ್ರಾಯರಾದವರು ಗ್ರೀಕರು. ●

ಚೀನಾದ ಝುವಾಂಗ್ ಎಂಬ ಪ್ರದೇಶದಲ್ಲಿ ತರುಣ-ತರುಣಿಯರ ಬಹಿರಂಗ ಸರಸ ಸಲ್ಲಾಪ ಅಪರಾಧವಲ್ಲವಂತೆ ಪ್ರೇಮಭಿಕ್ಷೆ ಬೇಡುವುದೂ ಅಂಥ ಅಪಾರ್ಥಕ್ಕೆಡಮಾಡಿಕೊಡುವುದಿಲ್ಲವಂತೆ. ಒಬ್ಬ ಹುಡುಗ ಹುಡುಗಿಯೊಬ್ಬಳಿಗೆ ಪ್ರೇಮ ಪತ್ರ ಬರೆದೋ, ಪ್ರೇಮಕಾಣಿಕೆಯನ್ನು ಕಳಿಸಿಯೋ ಪ್ರೇಮಗಾನದ ಆಲಾಪ ಪ್ರಾರಂಭಿಸುವನು. ಪತ್ರ-ಕಾಣಿಕೆಯನ್ನು ಸ್ವೀಕರಿಸಿದ ಹುಡುಗಿ ಒಂದು ಜೊತೆ ಚಾಪ್‌ಸ್ಟಿಕ್ (ತಿಂಡಿ ತಿನ್ನುವ ಕಡ್ಡಿ) ಕಳಿಸಿದರೆ ಅದು ಆಕೆ ಮತ್ತೊಬ್ಬನ ಪ್ರೇಮ ಪಾಶದಲ್ಲಿ ಸಿಲುಕಿಬಿಟ್ಟಿರುವ ಸಂಕೇತ. ಆದರೆ ಅದೇ ಅವಳು ಒಂದೇ ಕಡ್ಡಿಯನ್ನು ಕಳಿಸಿದರೆ 'ಒಪ್ಪಿಗೆ' ಯೆಂದರ್ಥ. ಹುಡುಗ ಒಂದು ಉಣ್ಣೆಯ ಸ್ಕಾರ್ಫ್ ಕಳಿಸಿದರೆ ಅದಕ್ಕೆ ಆಕೆ ತಾನೇ ತಯಾರಿಸಿದ ಜತೆ ಚಪ್ಪಲಿ ಕಳಿಸಿಬಿಡುತ್ತಾಳೆ. ಇದರರ್ಥ 'ಮುಂದುವರಿ' ಎಂದು. ಆಕೆ ಕಳಿಸುವ ಬಜಾವ್ ಜಾತಿಯ ಬಾಳೆಹಣ್ಣಿನ ಒಂದು ತುಂಡು ಕೂಡ ಅದೇ ಅರ್ಥವನ್ನು ಸೂಚಿಸುತ್ತದೆ. ಆದರೆ ಒಂದು ಈರುಳ್ಳಿಯೊಂದಿಗೆ ಒಂದು ಚಪ್ಪಲಿ ಆಕೆಯಿಂದ ಬಂದರೆ "ಒಲ್ಲೆ" ಎಂದು ನಲ್ಲೆ ಅಂದಂತೆ. ಪ್ರೇಮ ಭಿಕ್ಷೆ ಬಯಸಿದ ಒಬ್ಬ ತನ್ನ ಚಣ್ಣದ ಎರಡೂ ತೋಳುಗಳನ್ನೇರಿಸಿ ಒಂಟಿ ಹೆಣ್ಣಿನ ಮನೆಯನ್ನು ಹೊಕ್ಕರೆ ಅದು ಪ್ರೇಮೋತ್ಸಾಹದ ಸಂಕೇತ. ನಮ್ಮಲ್ಲಾದರೆ ಅಂಥವನಿಗೆ ತಕ್ಕ ಶಾಸ್ತಿ ಆಗುವುದುಂಟು. ಆದರೆ ಚೀನಾದಲ್ಲಿ ಗೇಲಿಮಾಡಿ ಕೈಬಿಟ್ಟು ಬಿಡುತ್ತಾರಷ್ಟೆ. ಕಾಂಗೋ ಹುಲ್ಲಿನ ಎರಡು ಎಲೆಗಳ ತುದಿ ಕತ್ತರಿಸಿ ಪ್ರೇಮಿಕೆಗೆ ಕಳುಹಿಸಿದ ಪ್ರಿಯ ಕರನಿಗೆ ಅದಕ್ಕೆ ಉತ್ತರವಾಗಿ ಅವೇ ಹುಲ್ಲಿನ ಎಲೆಗಳು ಇದ್ದ ಹಾಗೆಯೇ ವಾಪಸ್ ಬಂದರೆ "ನಾನು ರಡಿ-ಕೂಡಲೆ ಹೊರಡಿ" ಎಂದಂತೆ. ಆದರೆ ಎರಡರ ಪೈಕಿ ಒಂದು ಎಲೆ ಮಾತ್ರ ಆತನಿಗೆ ಮರಳಿ ಬಂದರೆ "ಸಾರಿ-ಸಾಧ್ಯವಿಲ್ಲ" ಎಂದಾಕೆ ಹೇಳಿಕಳಿಸಿದಂತೆ.

(ಸಾಧಾರ)

ವಾಸುದೇವ ರಾ.ಕಲಘಟಗಿ

ಈ ಶವಗಳ ರಹಸ್ಯವೇನು?

-ಎಚ್. ಪ್ರೇಮಾನಂದ ಕಾಮತ್



ಪ್ರಾಚೀನ ಪ್ರಪಂಚದ ಏಳು ಅದ್ಭುತಗಳಲ್ಲಿ ಒಂದಾದ ಈಜಿಪ್ತಿನ ಪಿರಮಿಡ್ಡಿನ ಹೆಸರು ಕೇಳಿದೊಡನೆ ನಮಗೆ ನೆನಪಾಗುವುದು ಅದರೊಳಗೆ ಅತ್ಯಂತ ಜೋಪಾನವಾಗಿ ಸಂರಕ್ಷಿಸಿಟ್ಟ ಶವಗಳದು. ನಮ್ಮ ಆಧುನಿಕ ವಿಜ್ಞಾನದಿಂದಲೂ ಭೇದಿಸಲಾಗದಿರುವ ಈ ಶವಸಂರಕ್ಷಣಾ ಕ್ರಮವು ಹಲವಾರು ಪ್ರಶ್ನೆಗಳ ಸರಮಾಲೆಯನ್ನೇ ನಮ್ಮ ಮುಂದಿಟ್ಟಿದೆ.

ಶವಗಳನ್ನು ಏಕೆ ಸಂರಕ್ಷಿಸಿಡುತ್ತಾರೆ? ಇದರ ಮೂಲ ಉದ್ದೇಶವೇನು? ಇಂಥ ಹಲವಾರು ಪ್ರಶ್ನೆಗಳಿಗೆ ನಿಖರವಾದ ಉತ್ತರವಂತೂ ಖಂಡಿತ ಸಿಗುವುದಿಲ್ಲ. ಆದರೆ ನಮ್ಮ ಊಹಾಶಕ್ತಿಯನ್ನು ಚುರುಕುಗೊಳಿಸಿ ಅದಕ್ಕೊಂದಿಷ್ಟು ಕೆಲಸಕೊಟ್ಟರೆ ಸ್ವಲ್ಪ ಮಟ್ಟಿನ ಸಮಾಧಾನಕರ ಉತ್ತರ ದೊರಕುತ್ತದೆ.

ಈಜಿಪ್ತಿನ ಇತಿಹಾಸವನ್ನೊಮ್ಮೆ ಅವಲೋಕಿಸಿದರೆ ತಮ್ಮ ದೇಶಕ್ಕೆ ಅಮೋಘವಾಗಿ ಸೇವೆಸಲ್ಲಿಸಿದ ರಾಜ ಮಹಾರಾಜರು, ಮಹಾನ ವ್ಯಕ್ತಿಗಳು ಕಂಡುಬರುತ್ತಾರೆ. ಆದರೆ ಅವರಿಗೂ ಸಾವೆಂಬುದಿದೆಯಲ್ಲ; ಸತ್ತಮೇಲೆ ಇಂಥ ವ್ಯಕ್ತಿಗಳನ್ನು ಸುಟ್ಟೋ ಹೂಳಿಯೋ ಸಂಪೂರ್ಣವಾಗಿ 'ನಾಶ' ಮಾಡುವುದಕ್ಕಿಂತ ಆ ಹೆಣವನ್ನೇ ಜೋಪಾನವಾಗಿರಿಸಿಟ್ಟರೆ ಹೀಗೆ ಮಾಡಿದರೆ ನಮ್ಮ ಮುಂದಿನ ಪೀಳಿಗೆಯವರಿಗೂ ಅವರ ದರ್ಶನ ಭಾಗ್ಯವನ್ನು ಒದಗಿಸಿಕೊಟ್ಟಂತಾಗುತ್ತದಲ್ಲ, ಎಂಬ ವಿಚಾರ ಆ ಜನರಲ್ಲಿ ಮೂಡಿತೇನೋ. ಪಿರಮಿಡ್ಡುಗಳು ಜನ್ಮತಾಳಿದುದಕ್ಕೆ ಇದೇ ಕಾರಣವಾಗಿರಬೇಕು.

ತಮ್ಮ ಜೀವಿತಾವಧಿಯಲ್ಲೇ ತಮಗೆ ಬೇಕಾದ ರೀತಿಯ ಮನಮೋಹಕವಾದ ಪಿರಮಿಡ್ಡುಗಳನ್ನು ನಿರೂಪಿಸುವ ಸಂಪ್ರದಾಯ ಈಜಿಪ್ತಿನ ರಾಜರಲ್ಲಿ ಎಂದಿನಿಂದ ಬೆಳೆದುಬಂತೋ ಗೊತ್ತಿಲ್ಲ. ಈ ಪಿರಮಿಡ್ಡುಗಳಲ್ಲಿ ಅವರ ಶವಗಳನ್ನಿಡಲಾಗುತ್ತಿತ್ತು. ಹೀಗಿಡುವ ಮುನ್ನ ಕರುಳು ಮುಂತಾದ ಅಂತರ ಅವಯವಗಳನ್ನು ಹೊರತೆಗೆದು ಶವವನ್ನು ಲವಣಯುಕ್ತವಾದ ನೀರಿನಲ್ಲಿ ಅದ್ದಿ ಸ್ವಚ್ಛಗೊಳಿಸುತ್ತಿದ್ದರು. ನಂತರ ವಿಶೇಷವಾದ ರಾಳದಲ್ಲಿ ಮುಳುಗಿಸಿಟ್ಟು, ಬಿಳಿ ಬಟ್ಟೆಯಿಂದ ಹೆಣವನ್ನು ಸುತ್ತಿಡುತ್ತಿದ್ದರು. ಇದನ್ನೇ ನಾವು 'ಮಮ್ಮಿ' ಎಂದು ಕರೆಯುವುದು. ಈ ಮಮ್ಮಿಯನ್ನು ಶವ ಪೆಟ್ಟಿಗೆಯೊಳಗಿಟ್ಟು ಸಕಲ ಮರ್ಯಾದೆಗಳೊಂದಿಗೆ ಪಿರಮಿಡ್ಡಿನಲ್ಲಿ ಅತ್ಯಂತ ಜೋಪಾನವಾಗಿ ಇರಿಸಲಾಗುತ್ತಿತ್ತು. ಹೀಗೆ ಜೋಪಾನವಾಗಿರಿಸಿದ ಶವಗಳು ಕೊಳೆಯದೆ ಕೆಡದೆ ಒಣಗದೇ ಸಾವಿರಾರು ವರುಷಗಳವರೆಗೆ ಇರಬಲ್ಲವು.

ಈಜಿಪ್ಶಿಯನ್ನರ ಈ ಶವ ಸಂರಕ್ಷಣಾ ವಿಧಾನವನ್ನು ಅನುಸರಿಸಿ ಶವಗಳನ್ನು ಕೆಡದಂತೆ

ಸುರಕ್ಷಿತವಾಗಿರಿಸಿದ ಬೇರೆ ಉದಾಹರಣೆಗಳು ನಮಗೆ ಹೇರಳವಾಗಿ ಸಿಗುತ್ತವೆ. ಗೋವೆಯ 'ಬೆಸಲಿಕಾ ಆಫ್ ಬಾಮ್ ಜೀಸಸ್' ಎಂಬಲ್ಲಿ ಇರಿಸಿದ ಸಂತ್ ಫ್ರಾನ್ಸಿಸ್ ಜೇವಿಯವರ ಸುರಕ್ಷಿತ ಶವ ಅಂಥವುಗಳಲ್ಲೊಂದು. ಜೇವಿಯರ್ ನಿಧನನಾಗಿದ್ದು ಕಿಸ್ತಶಕ 1554 ರಲ್ಲಿ, ಸಾಂಕಿಯಾನ್ ದ್ವೀಪದಲ್ಲಿ. ನಿಧನಾನಂತರ ಇ ಕ್ಯಾಥೋಲಿಕ್ ಸಂತನ ಶವವನ್ನು ಸ್ಥಳೀಯ ಓವರ್‌ಲೆಡ್ ಆಫ್ ಮೌಂಟ್ ಚರ್ಚ್‌ನ ಆವರಣದಲ್ಲಿ ಸಮಾಧಿ ಮಾಡಲಾಯಿತು. ಸುಮಾರು ನಾಲ್ಕು ತಿಂಗಳ ನಂತರ ಜೇವಿಯರ್‌ನ ಉತ್ತರಾಧಿಕಾರಿಗಳು ಆತನಿಗೆ ಶ್ರದ್ಧಾಂಜಲಿಯನ್ನರ್ಪಿಸಲು ಸಮಾಧಿಯನ್ನು ಅಗೆಸಿದರು. ಒಳಗೆ ಜೇವಿಯರ್‌ನ ಶವ ಕೆಡದೆಯೇ ಸುರಕ್ಷಿತವಾಗಿತ್ತು; ಇದೊಂದು ದೈವೀ ಚಮತ್ಕಾರವೆಂದು ಭಾವಿಸಿ ಚರ್ಚ್‌ನ ಅಧಿಕಾರಿಗಳು ಅದನ್ನು ಗೋವೆಗೆ ತಂದು 1613 ರಲ್ಲಿ ಅದನ್ನು 'ಪ್ರೊಫೆಸ್ಡ್ ಹೌಸ್ ಆಫ್ ಕೆಮ್ ಜೀಸಸ್' ನಲ್ಲಿ ಇಟ್ಟರು.

ಇಲ್ಲಿ ಆಶ್ಚರ್ಯಕ್ಕೆಡೆ ಮಾಡುವ ವಿಷಯವೆಂದರೆ ಆ ಸಂತನ ಶವ ಯಾವುದೇ ಬಗೆಯ ರಾಸಾಯನಿಕಗಳ ಸಹಾಯವಿಲ್ಲದೆಯೇ ಮೊದಲ ನಾಲ್ಕು ತಿಂಗಳವರೆಗೆ ಕೆಡದೆಯೇ ಇದ್ದದ್ದು; ಮುಂದೆ ಜೇವಿಯರ್‌ನ ಶವ ಸಂಪೂರ್ಣವಾಗಿ ರಾಸಾಯನಿಕಗಳಿಂದ ರಕ್ಷಿಸಲಾಯಿತು.

ಸೋವಿಯತ್ ರಶಿಯಾದ ಮಹಾನಾಯಕ ಲೆನಿನ್ನನ ಶವ ಮಾಸ್ಕೋದ ಕೆಂಪು ಚೌಕದ ಬಳಿಯಿರುವ ಸುಂದರ ಭವನದಲ್ಲಿ ಇಂದಿಗೂ ಸುರಕ್ಷಿತವಾಗಿದೆ. ಹಾಗೆಯೇ ಚೀನಾದ ಪೆಯಿಂಚಿಂಗ್ ನಗರದಲ್ಲಿ ಮಾವೋ ತ್ಸೆ ತುಂಗನ ಶವವು ಹೀಗೆಯೇ ಸಂರಕ್ಷಿಸಲ್ಪಟ್ಟಿದೆ. ಬಲ್ಗೇರಿಯಾದ ಮೊದಲ ಶಾಸನಸಭಾಧ್ಯಕ್ಷನ ಶವವನ್ನು ಹೀಗೆ ಕಾದಿಡಲಾಗಿದೆ. ಥಟ್ಟನೆ ನೋಡಿದರೆ ಇವರೆಲ್ಲ ಸುಖನಿದ್ರೆಯಲ್ಲಿರುವಂತೆ ತೋರುತ್ತದೆ.

ಈ ಸಂರಕ್ಷಣೆಗಳಿಗೆಲ್ಲ ವಿಜ್ಞಾನದ ನೆರವಂತೂ ಅವಶ್ಯವೆ. ಆದರೆ ಇಲ್ಲಿ ಬಳಸಲ್ಪಟ್ಟ ವೈಜ್ಞಾನಿಕ ವಿಧಿ ಯಾವುದು ಎಂಬುದು ಖಚಿತವಾಗಿಲ್ಲ. ಬಹುಶಃ ಈಜಿಪ್ಷಿಯನ್ನರ ಕ್ರಮಕ್ಕಿಂತ ಉಚ್ಚಮಟ್ಟದ ವಿಧಾನವನ್ನೇ ಇಲ್ಲಿ ಬಳಸಿರಬೇಕು.

ರಕ್ಷಿತ ಶವಗಳ ಚಿರಪರಿಚಿತ ಉದಾಹರಣೆಗಳನ್ನು ಬಿಟ್ಟು ಇದರಲ್ಲಿಯ ಊಹೆಗೆ ನಿಲುಕದ ಕೆಲವು ಘಟನೆಗಳನ್ನು ಅವಲೋಕಿಸೋಣ.

ಫ್ರಾನ್ಸ್ ದೇಶದ ಪ್ರಖ್ಯಾತ ಜೋತಿಕ್ಷಿ ವಿಜ್ಞಾನಿ ಸೇಂಟ್ ಆ್ಯಂಟನಿ (1195-1231) ತನ್ನ ವಿದ್ವತ್ತಿನಿಂದಾಗಿ ಸಾಕಷ್ಟು ಹೆಸರಾಗಿದ್ದ. ಈತನ ನಿಧನದ ನಾಲ್ಕುನೂರು ವರ್ಷಗಳ ಬಳಿಕ ಸಮಾಧಿಯನ್ನಗೆದು ಆ್ಯಂಟನಿಯ ಶವ ಪೆಟ್ಟಿಗೆಯನ್ನು ಹೊರದೆಗೆಯಲಾಯಿತು. ಪೆಟ್ಟಿಗೆ ತೆರೆದು ನೋಡಿದರೆ ಸೈಂಟ್ ಆ್ಯಂಟನಿಯ ಶವ ಕಂದು ಬಣ್ಣದ ಧೂಳಿನಿಂದ ಆವೃತ್ತವಾಗಿತ್ತು. ಸ್ವಲ್ಪವೂ ಕೆಟ್ಟಿರಲಿಲ್ಲ; ಕ್ರಿಸ್ತನ ಅನುಯಾಯಿ ಯಾಗಿದ್ದ ಮಾರಿಯಾ ಅನ್ನಾಳ ಸುರಕ್ಷಿತ ಶವ ಆಕೆಯ ನಿಧನದ 107 ವರ್ಷಗಳ ಬಳಿಕ 1731 ರಲ್ಲಿ ಸಿಕ್ಕಿತ್ತು. ಹನ್ನೊಂದು ಮಂದಿ ತಜ್ಞರು ಈಕೆಯ ಶವವನ್ನು ಕೂಲಂಕಷವಾಗಿ ಪರೀಕ್ಷಿಸಿದರೂ ಶವವು ಇಷ್ಟು ಸಮಯದ ವರೆಗೆ ಕೆಡದಂತೆ ಹೇಗೆ ಉಳಿಯಿತೆಂಬ ಪ್ರಶ್ನೆಗೆ ಉತ್ತರ ಹೊಳೆಯಲೇ ಇಲ್ಲ. ಮಾರಿಯಾಳ ಶವದಿಂದ ಒಂದು ಬಗೆಯ ಸುವಾಸನೆ ಬರುತ್ತಿತ್ತು. ಅಲ್ಲದೆ ಆಕೆಯ ಶರೀರ ನುಣುಪಾಗಿ ಹಿಡಿದರೆ ಜಾರುತ್ತಿತ್ತು. ಇನ್ನಷ್ಟು ಮಾಹಿತಿ ದೊರಕಬಹುದೆಂಬ ಆಸೆಯಿಂದ ಅವರು ಮರಿಯಾಳ ಶರೀರವನ್ನು ಛೇದಿಸಿ ದರೂ ಅಂಥ ವಿಶೇಷ ಸಂಗತಿಯೇನೂ ಗೊತ್ತಾಗಲಿಲ್ಲ.

ಪೋಲೆಂಡಿನ ಸಂತ ಎಂಡ್ರ್ಯೂ ಬೋವೊರಾನನ್ನು ರಶಿಯನ್ನರು 1657 ರಲ್ಲಿ ಅಮಾನುಷವಾಗಿ ಕೊಂದರು. ನಂತರ ಆತನ ಶವವನ್ನು ಸ್ಥಳೀಯ ಜೆಸುಯಿಟ್ ಚರ್ಚ್‌ನ ಬಳಿಯ ಬೂದಿ ರಾಶಿಯೊಂದರಲ್ಲಿ ಹುದುಗಿಸಿಟ್ಟರು. 44 ವರ್ಷಗಳ ಬಳಿಕ ಬೊವೊರಾನ ತಾಜಾ ಶವ ಆ ಬೂದಿಯ ರಾಶಿಯಲ್ಲಿ ಕಂಡು ಬಂದಿತು.

1898 ರಲ್ಲಿ ನಿಧನ ಹೊಂದಿದ ಲೆಬನಾನಿನ ಸಂತನೂ ಮೆರೊನ್ ಮಠದ ಮಠಾಧೀಶನೂ ಆಗಿದ್ದ ಚಾರ್ಬೊಲ್ ಮೆಕೊಜ್‌ನ ಶವ ಭೀಕರ ಗಾಳಿ-ಮಳೆಗ ಳಿಂದಾಗಿ ಸಮಾಧಿಯಿಂದ

ಶವಗಳು ಕೆಡದಂತೆ ಇಡುವ ಆಧುನಿಕ ಕ್ರಮ

ಮೊದಲು ಹೆಣವನ್ನು ಮಂಜುಗಡ್ಡೆಯಲ್ಲಿರಿಸಿ ಅದರ ಎಲ್ಲ ರಕ್ತವನ್ನು ಹೊರದೆಗೆಯುತ್ತಾರೆ. ಹತ್ತು ಡಿಗ್ರಿ ಸೆಂಟಿಗ್ರೇಡ್ ಚಳಿಯಲ್ಲಿ ತಲೆಯೊಳಗೂ ಧಮನಿಗಳಲ್ಲೂ ಗ್ಲಿಸರಾಲನ್ನು ತುಂಬಿ ಆ ಹೆಣವನ್ನು ಅಲ್ಯುಮಿನಿಯಂ ತಗಡಿನಿಂದ ಸುತ್ತಿ ಇಂಗಾಲಾಮ್ಲ ವಾಯುವು ತುಂಬಿರುವ ಪೆಟ್ಟಿಗೆಯೊಳಗಿರಿಸಲಾಗುತ್ತದೆ. ಅಲ್ಲಿಯ ತಾಪ 79 ಡಿಗ್ರಿ ಸೆಂಟಿಗ್ರೇಡಿನಷ್ಟಿರಬೇಕು. ಅನಂತರ ತಾಪವನ್ನು ಇನ್ನೂ ಹೆಚ್ಚಿಸಿ ಅಂದರೆ 196 ಡಿಗ್ರಿ ಸೆಂಟಿಗ್ರೇಡ್‌ವರೆಗೆ ತಂದು ಆ ಶವವನ್ನು ನೈಟ್ರೋಜನ್ ತುಂಬಿದ ದೊಡ್ಡ ಕ್ಯಾಪ್ಸುಲ್‌ಗಳಿಗೆ ವರ್ಗಾಯಿಸಲಾಗುತ್ತದೆ. ಇಷ್ಟು ಮಾಡಿದ ನಂತರ ಆ ಶವ ಎಷ್ಟು ಕಾಲ ಬೇಕಾದರೂ ಕೆಡದೆ ಇರಬಲ್ಲದು.

ಮೇಲೆದ್ದು ಬಂತು. ಇದನ್ನು ಗಮನಿಸಿದ ಮಠದ ಕಾರ್ಯಕರ್ತರು ಶವವನ್ನು ತಂದು ಮಠದ ಪ್ರಾರ್ಥನಾ ಮಂದಿರದಲ್ಲಿಟ್ಟರು. ಆತ ಸತ್ತು ಹಲವಾರು ತಿಂಗಳುಗಳು ಕಳೆದಿದ್ದರೂ ಆ ಶವ ಸ್ವಲ್ಪವೂ ಕೆಟ್ಟಿರಲಿಲ್ಲ. ಮಠದಲ್ಲಿ ತಂದಿಟ್ಟ ಕೆಲವು ದಿನಗಳ ನಂತರ ಆ ಶವದ ಮೈಯಿಂದ ಸುಗಂಧಮಯವಾದ ತೈಲ ಪದಾರ್ಥವೊಂದು ಸ್ರವಿಸಲಾರಂಭಿಸಿತು. ಇದು ನಿಲ್ಲದಾದಾಗ ಮೆಕೊಜ್‌ನ ಶವವನ್ನು ಒಂದು ದೊಡ್ಡ ಟ್ಯೂಬಿನಲ್ಲಿಟ್ಟು ಸುತ್ತಲೂ ಇಟ್ಟಿಗೆಯ ಗೋಡೆಯನ್ನು ಕಟ್ಟಲಾಯಿತು. ಇಟ್ಟಿಗೆಯ ಗೋಡೆಯಿಂದ 1940 ರ ವರೆಗೂ ಸುಗಂಧ ಭರಿತ ತೈಲ ಪದಾರ್ಥ ಒಸರುವುದು ನಿಲ್ಲಲಿಲ್ಲ. ಗೋಡೆಯನ್ನೊಡೆದು ನೋಡಿದಾಗ ಅದರಲ್ಲಿ ಮೂರು ಇಂಚುಗಳಷ್ಟು ದಪ್ಪನಾದ ತೈಲ ಪದಾರ್ಥದ ಪದರವೇ ಇತ್ತು. ಕೊನೆಗೆ ಆ ತೈಲ ವನ್ನೆಲ್ಲ ತೆಗೆದು ಇನ್ನೂ ಕೆಡದೆ ಇದ್ದ ಆ ಹೆಣ ವನ್ನು ಮತ್ತೆ ಸಮಾಧಿ ಮಾಡಲಾಯಿತು.

ಈ ಮೇಲಿನ ಉದಾಹರಣೆಗಳಲ್ಲೆಲ್ಲ ವಿಸ್ಮಯಕ್ಕೆ ಪ್ರಾಧಾನ್ಯ. ಎಲ್ಲಿಯೂ ರಾಸಾಯನಿಕ ಪದಾರ್ಥಗಳನ್ನು ಬಳಸಿದುದರ ಉಲ್ಲೇಖವಿಲ್ಲ. ಅಂದರೆ ಇವೆಲ್ಲ ಕೆಲವು ಆಕಸ್ಮಿಕ ಸಂದರ್ಭಗಳಲ್ಲಿ ಜನರ ದೃಷ್ಟಿಗೆ ಗೋಚರವಾದವುಗಳು. ಹಾಗಾದರೆ ಅಷ್ಟು ವರ್ಷಗಳತನಕ ಶವಗಳು ಕೆಡದೆಯೇ ಹೇಗೆ ಉಳಿದುಕೊಂಡವು?

ಪಿರ್ಮಿಡ್ಡಿನಲ್ಲಿದ್ದ ಸಂರಕ್ಷಿತ ಶವಗಳು ಮತ್ತೆ ಜೀವಂತವಾಗಬಹುದೆಂಬ ನಂಬಿಕೆ ಈಜಿಪ್ತಿಯನ್ನರಿಗೆ ಇತ್ತು ಎಂದು ಹೇಳಿದೆಯಷ್ಟೆ ಈ ಕುರಿತು ಅಮೆರಿಕದ ಭೌತಶಾಸ್ತ್ರ ರಾಬರ್ಟ್ ಸಿ.ಡಬ್ಲ್ಯೂ. ಎಟಿಂಜರ್ ಒಂದು ಹೊತ್ತಿಗೆಯನ್ನೇ ಬರೆದಿದ್ದಾರೆ. 1964 ರಲ್ಲಿ ಪ್ರಕಟವಾದ ಈ ಪುಸ್ತಕದ ಹೆಸರು "ದಿ ಪ್ರಾಸ್ಪೆಕ್ಟ್ ಆಫ್ ಇಮ್ಮೊರ್ಟಾಲಿಟಿ".

ಮಾನವನ ಉಸಿರಾಟ ಹಾಗೂ ಮಸ್ತಿಷ್ಕದ ತರಂಗಗಳು ನಿಂತೊಡನೆ ಆತ ಹೆಣವಾಗುತ್ತಾನೆ. ಈ ನಿರ್ಜೀವ ಶರೀರವನ್ನು ಹಲವು ವರ್ಷಗಳ ತನಕ ಕೆಡದಂತೆ ಉಳಿಸಿಕೊಂಡಿದ್ದೇ ಆದರೆ ಮುಂದೊಂದು ದಿನ ಮಾನವ ಇವಕ್ಕೆ ಜೀವ ಬರಸಿಯಾನು ಎನ್ನುವುದು ರಾಬರ್ಟ್ ಎಟಿಂಜರನ ಅಭಿಪ್ರಾಯ. ಆತನ ಈ ಪರಕಲ್ಪನೆಯನ್ನು ಕ್ರಿಯೋಬಯಾಲಜಿ ಅಥವಾ ಶೈತ್ಯ ಜೀವ ವಿಜ್ಞಾನ ಎಂದು ಕರೆಯುತ್ತಾರೆ. ಆದರೆ ಇದಕ್ಕೆ ಕಾಲವೇ ಉತ್ತರ ಹೇಳಬೇಕು. ಇದಕ್ಕ ಉದಾಹರಣೆಯೆಂಬಂತೆ ಅಲ್ಲಿ ಸುಮಾರು ಇಪ್ಪತ್ತೈದು ಶವಗಳು ಪುನರ್ಜೀವಗೊಳ್ಳುವ ನಿರೀಕ್ಷೆಯಲ್ಲಿ ಬಿದ್ದಿವೆ. ಅವುಗಳಲ್ಲಿ ಪ್ರಮುಖವಾದುವೆಂದರೆ ಫಿಲಡೆಲ್ಫಿಯದ ಚಿತ್ರ ನಿರ್ಮಾಪಕ ಗಿಲಿಯನ್ ಕಮಿಂಗ್ಸನ ತಂದೆ ಹರ್ಮನ್ ಕಮಿಂಗ್ಸ್ ಫ್ಲೋರಿಡಾದ ಡಾ. ಪಾಲ್ ಹರ್ಸ್ಟ್ ಮತ್ತು ಲಾಸಎಂಜಲೀಸನ ಬಾಲಕ ಜೆನೆವೀವನ ಶವಗಳು.

ನಮ್ಮ ವಿಜ್ಞಾನ ಇನ್ನಷ್ಟು ಮುಂದುವರಿದಾಗ ಸತ್ತವರಿಗೂ ಜೀವ ಬರಿಸುವ ಶಕ್ತಿ ಅದಕ್ಕೆ ಬಂದರೂ ಅಚ್ಚರಿಯಿಲ್ಲ. ●

ಕಪ್ಪು ಖಂಡದ ಕ್ರಾಂತಿವೀರನ ಸಂಗಾತಿ

ವಿನಿ ಮಾಂಡೇಲಾ



– ಟಿ.ವಿ. ಮಾಗಳದ

ಪ್ರತಿಯೊಬ್ಬ ಮಹಾಪುರುಷನ ಸಾಧನೆ ಶ್ರೇಯಸ್ಸುಗಳ ಹಿಂದೆ ತ್ಯಾಗಮಯಿಯಾದ ಹೆಣ್ಣೊಬ್ಬಳಿರುತ್ತಾಳೆಂಬ ಮಾತಿಗೆ ಕಪ್ಪು ಖಂಡದ ಕ್ರಾಂತಿಯ ಕೆಂಡ ನೆಲ್ಸನ್ ಮಾಂಡೆಲಾರ ಜೀವನ ಸಂಗಾತಿ ವಿನಿ ಮಾಂಡೆಲಾ ಶ್ರೇಷ್ಠ ಉದಾಹರಣೆ.

ಕರಿಯರಿಗೆ ಅವರ ಮಾತೃಭೂಮಿ ಕಪ್ಪ ಕೋಟಲೆಗಳ ಪಂಜರವಾಗದೆ ಸ್ವತಂತ್ರ ಬದುಕಿನ ಬೀಡಾಗಬೇಕೆಂಬ ಕಾರಣಕ್ಕಾಗಿ ಆಗಸ್ಟ್ 1962 ರಿಂದಲೂ ದಕ್ಷಿಣ ಆಫ್ರಿಕದ ಕಾರಾಗೃಹದಲ್ಲಿ ಬಿಳಿಯರ ಕೈದಿಯಾಗಿರುವ ನೆಲ್ಸನ್ ಮಾಂಡೆಲಾ ತನ್ನ ದೇಶದ ಸ್ವಾತಂತ್ರ್ಯ ಹೋರಾಟದ ಧೀರ ಪುರುಷ.

ಇಂದಿಗೂ ಮುಖ ಸುಕ್ಕಾಗದ, ಆರಡಿಯ ದೃಢಕಾಯದ ನೆಲ್ಸನ್‌ಗೀಗ 68 ವರ್ಷ ವಯಸ್ಸು. ಪತಿಯನ್ನು ಬಂಧಿಸಿ ಒಯ್ಯುವಾಗ ಕೇವಲ 27 ವರ್ಷದವಳು ವಿನಿ. ಜನಿಸಿದ್ದು ಟ್ರಾನ್ಸ್‌ಕಿ ಬಂಟುಸ್ತಾನದ ಥೆಂಬುವಿನಲ್ಲಿಯ ಪ್ರತಿಷ್ಠಿತ ಕುಟುಂಬದಲ್ಲಿ. ನೆಲ್ಸನ್ ಮಾಂಡೆಲಾ ರನ್ನು ಅವಳು ಮದುವೆಯಾದದ್ದು 1958

ರಲ್ಲಿ. ಮದುವೆಯ ಸಂಭ್ರಮದ ವಾತಾವರಣದಲ್ಲೂ ಪೊಲೀಸರ ಕಿರಿಕಿರಿ ತಪ್ಪಲಿಲ್ಲ. ಮದುವೆ ಮನೆಗೆ ಮುತ್ತಿಗೆ ಹಾಕಿದ ಪೊಲೀಸ್ ಪಡೆ ಮದುವೆಗೆ ಬಂದ ಪ್ರತಿಯೊಬ್ಬನನ್ನು ಸಂಪೂರ್ಣವಾಗಿ ಝಡತಿ ಮಾಡಿದರು. ಅಲ್ಲಿ ಬಂದವರೆಲ್ಲರ ಕುರಿತು ಪೂರ್ಣ ವಿವರಗಳನ್ನು ಅವರು ಪಡೆದುಕೊಂಡರು. ಮದುವೆಯ ಮಹತ್ವದ ವಿಧಿ ಶಾಸ್ತ್ರಗಳಿನ್ನೂ ಮುಗಿದಿರಲಿಲ್ಲ. ಮಾಂಡೆಲಾರನ್ನು ಅವರು ಕರೆದೊಯ್ದರು. ಹೀಗಾಗಿ ಆ ಶಾಸ್ತ್ರೋಕ್ತ ವಿಧಿಗಳು ಅಪೂರ್ಣವಾಗಿಯೇ ಉಳಿದಿರುವುದರಿಂದ ವಿನಿ ಮಾಂಡೆಲಾ ಇಂದಿಗೂ ಮದುವೆ ಕೇಕಿನ ತುಂಡನ್ನು ಜೋಪಾನವಾಗಿ ಕಾಯ್ದಿರಿಸಿಕೊಂಡಿದ್ದಾಳೆ. ಇಂದಿಲ್ಲ ನಾಳೆ ಪತಿಯ ಬಿಡುಗಡೆಯಾದೀತು, ಆಗ ಕೇಕ್ ತುಂಡಿನ ಸಿಹಿಯಿಂದ ಕಷ್ಟದ ಕಹಿ ಬದುಕಿಗೆ ಸಿಹಿ ದಕ್ಕೀತು ಎಂಬ ಆಶೆಯಿಂದ ಆಕೆ ಕಾಯುತ್ತಿದ್ದಾಳೆ. ಹೀಗೆ ವರ್ಣಭೇದ ನೀತಿಯನ್ನು ಕಟುವಾಗಿ ವಿರೋಧಿಸಿ ಬದುಕಿನ ಕೊನೆಯ ಗಳಿಗೆಯವರೆಗೂ ಅದರ ವಿರುದ್ಧ ಹೋರಾಡುವುದಾಗಿ ಘೋಷಿಸಿ ತಮ್ಮ ನಿರ್ಧಾರಕ್ಕೆ ಅಚಲವಾಗಿ ನಿಂತ ನೆಲ್ಸನ್ನರ ಹೋರಾಟದ ಬದುಕಿನ ಬತ್ತದ ಸ್ಫೂರ್ತಿಗೆ, ಬಾಡದ ಉತ್ಸಾಹಕ್ಕೆ ಪ್ರೇರಕ ಶಕ್ತಿಯಾಗಿರುವ ಮಹಿಳೆ ವಿನಿ ಮಾಂಡೆಲಾಳ ಜೀವನ, ಈಗ ಕೇಪ್ ಟೌನಿನ ದಕ್ಷಿಣಕ್ಕೆ 10 ಮೈಲು ದೂರದ ಪಾಲ್ಸ್‌ಮೂರ್ ಜೇಲಿನೊಳಗಿರುವ ನೆಲ್ಸನ್ ಮಾಂಡೆಲಾರ ಜೀವನದಷ್ಟೇ ಯಾತನಾಮಯ. ಅದಕ್ಕೊಂದು ಉದಾಹರಣೆ ಇದು. ತನ್ನ ಹಿರಿಯ ಸೋದರಿ ಸತ್ತಾಗ ಶವ ಸಂಸ್ಕಾರದಲ್ಲಿ ಪಾಲ್ಗೊಳ್ಳಲು ಅನುಮತಿಗಾಗಿ ಕಾಯುತ್ತಿದ್ದಳು ವಿನಿ. ಗೃಹ ಬಂಧನದಲ್ಲಿದ್ದ ಆಕೆ ಬ್ರಾಂಡ್‌ಫರ್ಟ್ ಪಟ್ಟಣದ ಮನೆಯಿಂದ ಹೊರ ಬರಲಿಕ್ಕೂ ಸರಕಾರದ ಒಪ್ಪಿಗೆ ಪಡೆಯಬೇಕಿತ್ತು. ಬಹು ವಿಧದ ಪ್ರಯತ್ನದ ನಂತರ ಆಕೆಗೆ ಒಪ್ಪಿಗೆ ದೊರೆಯಿತು. ನಿಗದಿಪಡಿಸಿದ ವೇಳೆಯಲ್ಲಿ ಶವ ಸಂಸ್ಕಾರದಲ್ಲಿ ಪಾಲ್ಗೊಂಡು ವಿಧಿಕರ್ಮಗಳು ಮುಗಿದ ಕೂಡಲೇ ಮನೆ ಸೇರಬೇಕು. ಮತ್ತು ಸಮೀಪದ ಬಂಧುಗಳನ್ನುಳಿದು ಬೇರೆ ಯಾರೊಡನೆಯೂ ಮಾತನಾಡಕೂಡದು ಎಂಬ ಕರಾರುಗಳು ಬೇರೆ. ಇಂಥ ದುರ್ಭರ ಸನ್ನಿವೇಶಗಳು ವಿನಿಯ ಬದುಕಿನಲ್ಲಿ ಹೆಜ್ಜೆ ಹೆಜ್ಜೆಗೆ ಎದುರಾಗಿವೆ.

ಹೀಗಾಗಿ ವೈಯಕ್ತಿಕ ಯಾತನೆಯ ಸಂದರ್ಭಗಳಲ್ಲಿ ಎಂದೂ ಆಕೆಯ ಕಣ್ಣೀರು ಉಕ್ಕುವುದಿಲ್ಲ. ದುಃಖ ಉಮ್ಮಳಿಸುವುದಿಲ್ಲ. ನೆಲ್ಸನ್ ಮಾಂಡೆಲಾರನ್ನು ಮದುವೆಯಾಗುವಾಗ, ತಾನು ಮೆಚ್ಚಿರುವುದು ಬರೀ ಒಬ್ಬ ವ್ಯಕ್ತಿಯನ್ನಲ್ಲ ಒಂದು ಸಂಗ್ರಾಮ ಶಕ್ತಿಯನ್ನು ಎಂದು ಮನವರಿಕೆ ಮಾಡಿಕೊಂಡಿದ್ದ ವಿನಿಗೆ. 1962ರಲ್ಲಿ ಪತಿಯ ಬಂಧನವಾದಾಗ ಮುಂಬರುವ ವರ್ಷಗಳಲ್ಲಿ ತಾನು ಅದಕ್ಕಿಂತಲೂ ಹೆಚ್ಚು ಗಂಭೀರ ಸಂಕಷ್ಟಗಳನ್ನು ಸವಾಲಾಗಿ ಸ್ವೀಕರಿಸಬೇಕಿದೆಯೆಂಬುದು ಆಗಲೇ ಖಚಿತವಾಗಿತ್ತು. ವರ್ಣದ್ವೇಷದ ಆಳಿಕೆಯ ವಿಷಭರಿತ ಹಾವಿನ ಹೆಡೆಯ ಅಡಿಯಲ್ಲಿ ಬದುಕುತ್ತಿರುವ ಕರಿಯರ ಪಾಲಿಗೆ ಹಾಗೂ ಆ ಹೆಡೆಯನ್ನು ಬಡಿದೆಬ್ಬಿಸಿ ಹೋರಾಡುತ್ತಿರುವ ವಿನಿಯ ಪಾಲಿಗೆ ಪೊಲೀಸರ ದೌರ್ಜನ್ಯ ಬಂಧನದ ಬವಣೆಗಳು ಕರುಳು ಹಿಂಡುವ ಕರಾರುಗಳ ಕ್ರೌರ್ಯ ಹಾಗೂ ಕಿರುಕುಳಗಳು ಬದುಕಿನ ಸಂಗಾತಿಗಳೇ ಆಗಿವೆ.

ಮದುವೆಯ ನಂತರದ ನಾಲ್ಕು ವರ್ಷಗಳವರೆಗೆ ನೆಲ್ಸನ್ನರು ವಿನಿಯನ್ನು ವೇಷಾಂತರದಲ್ಲಿ ಭೆಟ್ಟಿಯಾಗುತ್ತಿದ್ದರು. ಆದರೆ ಇಂಥ ಮಿಲನಗಳು ಬಹಳ ಕಾಲ ಮುಂದುವರಿಯುವ ಹಾಗಿರಲಿಲ್ಲ. ಭೆಟ್ಟಿ ತೀರಾ ಸಂಕ್ಷಿಪ್ತವಾಗಿರಬೇಕಿತ್ತು. ಕಾಂತಾಸಮ್ಮಿತಿಯಲ್ಲಿ ಅವರು ಮೈಮರೆಯುವ ಹಾಗಿರಲಿಲ್ಲ. ಹೀಗೆ ವೈವಾಹಿಕ ಜೀವನದ ಇಪ್ಪತ್ತೆಂಟು ವರ್ಷಗಳ ಅವಧಿಯಲ್ಲಿ ಮಾಂಡೆಲಾ ದಂಪತಿ ಜೊತೆಯಾಗಿ ಕಳೆದ ಒಟ್ಟು ತಾಸುಗಳು ಆರು ತಿಂಗಳ ಅವಧಿಯಷ್ಟು. ಮದುವೆಯ ಮೊದಲ ನಾಲ್ಕು ವರ್ಷಗಳಲ್ಲಿ ಅತಿ ದೀರ್ಘವಾದ ಭೆಟ್ಟಿಯೆಂದರೆ ಮೂರು ತಾಸಿನ ಅವಧಿಯದು.

1964ರಲ್ಲಿ ನೆಲ್ಸನ್‌ಗೆ ಜೀವಾವಧಿ ಶಿಕ್ಷೆ ವಿಧಿಸಲ್ಪಟ್ಟಿತು. ಹೀಗಾಗಿ ಪತ್ನಿಯೊಂದಿಗಿನ ಅವರ ಭೆಟ್ಟಿಯನ್ನು ಮತ್ತಷ್ಟು ಕಟ್ಟುನಿಟ್ಟಾದ ಕರಾರುಗಳಿಗೊಳಪಡಿಸಲಾಯಿತು. ಈಗ ವರ್ಷಕ್ಕೆ ನಲವತ್ತು ಸಲ ಭೆಟ್ಟಿಯಾಗಲು ಮಾತ್ರ ಸರಕಾರ ಅವರಿಗೆ ಒಪ್ಪಿಗೆ ಕೊಟ್ಟಿದೆ. ಪ್ರತಿ ಭೆಟ್ಟಿಯ ಅವಧಿ ನಲವತ್ತು ನಿಮಿಷಗಳು ಮಾತ್ರ. ಯಾವುದೇ ಪರಿಸ್ಥಿತಿಯಲ್ಲೂ ಈ ಅವಧಿಯನ್ನು ಮೀರಕೂಡದು. ಅಲ್ಲದೆ ವಿನಿ ತನ್ನ ಪತಿಯನ್ನು ಭೆಟ್ಟಿಯಾಗುವಂತಿಲ್ಲ. ಅವರಿಬ್ಬರ ನಡುವೆ ಒಂದು ಗಾಜಿನ ಹಲಗೆ ಇರುತ್ತದೆ. ಅವರು ಪರಸ್ಪರ ಮಾತನಾಡಲು ಟೆಲಿಫೋನ್ ವ್ಯವಸ್ಥೆ ಇದೆ. ಫೋನ್ ಮೂಲಕ

ಮಾತನಾಡುವಾಗಲೂ ಹೋರಾಟದ ಪ್ರಸ್ತಾಪ ಮಾಡುವಂತಿಲ್ಲ. ಅತಿ ಸಮೀಪದ ಬಂಧುಗಳ ಹೆಸರುಗಳನ್ನುಳಿದ ಬೇರೆ ಹೆಸರುಗಳನ್ನು ಬಳಸುವಂತಿಲ್ಲ.

ವಿನಿಯ ಸುತ್ತಲೂ ಬಿಳಿಯರ ಸರಕಾರ ಸರ್ಪ ಗಾವಲನ್ನು ಹೆಣೆದಿದೆ. 1976ರವರೆಗೂ ಹೋರಾಟದಲ್ಲಿ ಭಾಗವಹಿಸಿರದಿದ್ದ ವಿನಿ ಆ ವರ್ಷ ಸೊವೆಟೊ ವಿದ್ಯಾರ್ಥಿಗಳ ಪ್ರತಿಭಟನೆ ಯನ್ನು ಬಹಿರಂಗವಾಗಿ ಬೆಂಬಲಿಸುವುದರ ಮೂಲಕ ಪ್ರಭಾವಶಾಲಿ ಶಕ್ತಿಯಾಗಿ ಬೆಳೆದಳು. ಸೊವೆಟೊ ಪಾಲಕರ ಸಂಘದ ಪ್ರಮುಖ ಸದಸ್ಯೆಯಾಗಿ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ಸಮರ್ಥಿಸತೊಡಗಿದಳು. ಪ್ರತಿಭಟನೆಯ ಕಾಲ ದಲ್ಲಿ ಸಂಭವಿಸಿದ ಹಿಂಸೆ-ರಕ್ತಪಾತಕ್ಕೆ ಪ್ರಿಟೋ ರಿಯಾ ಸರಕಾರವೇ ಸಂಪೂರ್ಣ ಹೊಣೆಗಾರ ವೆಂದು ಸಾರ್ವಜನಿಕ ಸಭೆಗಳಲ್ಲಿ ಖಂಡತುಂಡ ವಾಗಿ ಹೇಳಿದಳು. ಬಹುಮತವಿರುವ ಕರಿಯ ರಿಗೆ ಶಾಸನ ಸಭೆಯಲ್ಲಿ ನ್ಯಾಯಬದ್ಧ ಪ್ರಾತಿ ನಿಧ್ಯ ಸಿಗುವವರೆಗೂ ಪ್ರತಿಭಟನೆ ಮುಂದುವರಿ ಯುವುದೆಂದೂ ಸಾರಿಬಿಟ್ಟಳು. ತಮ್ಮ ಉದ್ದೇಶ ಸಫಲವಾದ ಹೊರತು ಯಾವುದೇ ರೀತಿಯ ಸಂಧಾನ ಅಸಾಧ್ಯದ ಮಾತು ಎಂದು ಬಿಳಿಯರ ಸರಕಾರಕ್ಕೆ ಎಚ್ಚರಿಕೆ ಕೊಟ್ಟಳು. ಇದರಿಂದ ರೊಚ್ಚಿಗೆದ್ದ ಸರಕಾರ ಅವಳ ಮನೆಯನ್ನು ಮುತ್ತಿ ಅದನ್ನು ಆಮೂಲಾಗ್ರವಾಗಿ ಶೋಧಿಸಿ ತಲ್ಲದೆ ಮನೆಯಲ್ಲಿಯ ವಸ್ತು ಸಾಮಗ್ರಿ ಗಳನ್ನೆಲ್ಲ ನಾಶಪಡಿಸಿತು. ಸಾಮಾಜಿಕ ಮತ್ತು ರಾಜಕೀಯವಾಗಿ ಯಾವುದೇ ಸಂಪರ್ಕ ಬೆಳೆ ಸಲು ಸಾಧ್ಯವಾಗದಂತೆ 1977 ರಿಂದ ಪ್ರತಿ ಬಂಧಿಸಿದ್ದಲ್ಲದೆ ಬ್ರಾಂಡ್‌ಫರ್ಟನಿಂದ ದೂರದ ಸಣ್ಣ ಪಟ್ಟಣಕ್ಕೆ ಅವಳನ್ನು ತಳ್ಳಿ ಬಿಟ್ಟಿತು ಸರಕಾರ.

ಯಾವುದೇ ಸಾರಿಗೆ ಸಂಪರ್ಕ ಸೌಲಭ್ಯವಿಲ್ಲದ ಕುಗ್ರಾಮ ಸ್ಥಿತಿಯಲ್ಲಿ ಬದುಕಿದ ಅನುಭವ ವಿಲ್ಲದ ವಿನಿಯ ಪಾಲಿಗೆ ಆ ಸಣ್ಣ ಪಟ್ಟಣದ ವಾಸ ತೀರ ಆಘಾತಕರವಾಗಿತ್ತು. ಅನಾಥ ಪ್ರಜ್ಞೆ ಕೆಲಕಾಲ ಆಕೆಯನ್ನು ಕಾಡಿತು. ಆದರೆ ಆದರ್ಶಗಳನ್ನು ಹೊತ್ತವರು ಎಂದೂ ಅನಾಥ ರಲ್ಲ. ಎಂಥ ಏಕಾಂಗಿತನದಲ್ಲೂ ಕುಗ್ಗದ ಮನೋಸ್ಥೈರ್ಯ ವಿನಿಯ ವ್ಯಕ್ತಿತ್ವದ ಒಂದು ವಿಶಿಷ್ಟ ಆದರ್ಶ. ಎಂಥ ವಿಷಮ ಪರಿಸ್ಥಿತಿ ಯನ್ನೂ ಸವಾಲಾಗಿ ಸ್ವೀಕರಿಸುವುದು ಆಕೆಯ ವ್ಯಕ್ತಿತ್ವದ ವೈಶಿಷ್ಟ್ಯ. ವಿನಿ ಸುಮ್ಮನೆ ಕೂಡಲಿಲ್ಲ. ಜನಸಾಮಾನ್ಯರಿಗಾಗಿ ಸಾಮುದಾಯಿಕ ಚಟು ವಟಿಕೆಗಳನ್ನು ಪ್ರಾರಂಭಿಸಿದಳು. 'ಪ್ರಾಜೆಕ್ಟ್ ಗಾರ್ಡನ್'ಗಳ ಯೋಜನೆ ಕೈಗೆತ್ತಿಕೊಂಡಳು. ಇದೊಂದು ಸ್ವಾವಲಂಬ ಮತ್ತು ಸ್ವಸಹಾಯ ಯೋಜನೆ. ಈ ಯೋಜನೆಯ ಉದ್ದೇಶ ತಮ್ಮ ದಿನ ನಿತ್ಯದ ತರಕಾರಿ ಮತ್ತು ಹಣ್ಣು ಹಂಪಲು ಗಳ ಮಟ್ಟಿಗೆ ಸ್ಥಳೀಯರಲ್ಲಿ ಸ್ವಾವಲಂಬನೆ ಬೆಳೆಸುವುದು. ಈ ಯೋಜನೆಯ ಜೊತೆಗೆ ಸ್ಥಳೀಯ ಜನತೆಗಾಗಿ ಸಂಚಾರಿ ಆಸ್ಪತ್ರೆಗಳನ್ನು ಪ್ರಾರಂಭಿಸಿದಳು. ವೈದ್ಯೋಪಚಾರದ ಸೌಲಭ್ಯ ವಿಲ್ಲದ ಸ್ಥಳೀಯ ಅಸಂಖ್ಯ ಅಸಹಾಯಕ ರೋಗಿಗಳಿಗೆ ಇದೊಂದು ಕ್ರೂರ ವರದಾನ ವಾಯಿತು. ಈ ಚಟುವಟಿಕೆಗಳನ್ನು ಗಮನಿಸಿದ ಸರಕಾರ ಆತಂಕಗೊಂಡು ಕೂಡಲೇ ತನ್ನ ಕ್ರೂರ ಕರಾರುಗಳ ಕರಾಳ ಕೈಗಳನ್ನು ಇಲ್ಲಿಗೂ ಚಾಚಿತು. ವಿನಿಯನ್ನು ಪ್ರತಿನಿತ್ಯ ಮುಂಜಾನೆ ಆರು ಘಂಟೆಯಿಂದ ಸಾಯಂಕಾಲ ಆರರ ವರೆಗೆ ಗೃಹ ಬಂಧನದಲ್ಲಿರಿಸಿತು. ವಾರದ ಕೊನೆಯ ದಿನ ಮಾತ್ರ ಮನೆಯಿಂದ ಆಕೆ ಹೊರ ಬರಬಹುದಾಗಿತ್ತು. ಅದೂ ಮ್ಯಾಜಿ ಸ್ಟ್ರೇಟರ ಒಪ್ಪಿಗೆ ದೊರೆತರೆ ಮಾತ್ರ. ಆಗಲೂ ಅವಳ ಸುತ್ತಲೂ ಬಿಗಿಯಾದ ಪೋಲೀಸು ಕಾವಲು. ಇದು ಸಾಲದೆಂಬಂತೆ ಸರಕಾರದ ಕರಾರು ಕಟ್ಟಳೆಗಳನ್ನು ಪಾಲಿಸಿಲ್ಲ ಎಂಬ ಆಪಾದನೆಯನ್ನು ಹೊರಿಸಿ ಮೇಲಿಂದ ಮೇಲ ವಿನಿಯನ್ನು ನ್ಯಾಯಾಲಯಕ್ಕೆ ಎಳೆಯಲಾಗು ತ್ತಿದೆ. ಈವರೆಗೆ ಆರು ಸಲ ನಿಷೇಧಾಜ್ಞೆ ಉಲ್ಲಂಘಿಸಿದ ಆರೋಪಕ್ಕೆ ಒಳಪಟ್ಟ ಆಕೆ ಯನ್ನು ಹದಿಮೂರು ಸಲ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ಈ ಪೈಕಿ ಶತ ಪ್ರಯತ್ನದ ತರುವಾಯ ಎರಡು ಸಲ ಮಾತ್ರ ಕರಾರು ಉಲ್ಲಂಘನೆಯ ಅಪರಾಧವನ್ನು ಸಾಬೀತುಪಡಿಸುವಲ್ಲಿ ಸರಕಾರ ಸಫಲವಾಗಿದೆ.

ವಿನಿ ಮಾಂಡೆಲಾಳಿಗೆ ವಿದೇಶ ಪ್ರವಾಸಕ್ಕೆ ಒಪ್ಪಿಗೆಯನ್ನು ಬಿಳಿಯರ ಸರಕಾರ ಸತತವಾಗಿ ನಿರಾಕರಿಸುತ್ತಲೇ ಬಂದಿದೆ. ನೆಲ್ಸನ್ ಮಾಂಡೆಲಾರ ಹೋರಾಟದ ಕೆಚ್ಚನ್ನು ಮೆಚ್ಚಿ ಕೊಂಡ ಭಾರತ ಸರಕಾರ 1980ರಲ್ಲಿ ಅವರಿಗೆ ನೆಹರೂ ಪಾರಿತೋಷಕವನ್ನು ಘೋಷಿಸಿತು. ಆದರೆ ಅದನ್ನು ಸ್ವೀಕರಿಸಲು ಭಾರತಕ್ಕೆ ಹೋಗಲು ವಿನಿಗೆ ಪ್ರಿಟೋರಿಯಾ ಸರಕಾರ ಒಪ್ಪಿಗೆ ನೀಡಲಿಲ್ಲ. ಅವರ ಬದಲು ಅವರ ಮಗಳು ದಿಲ್ಲಿಗೆ ಬಂದು ಪಾರಿತೋಷಕವನ್ನು

ಸ್ವೀಕರಿಸಿದಳು. ಬಹು ಯತ್ನದ ನಂತರ ವಿದೇಶಿ ಗೆಳೆಯರನ್ನು, ರಾಯಭಾರಿಗಳನ್ನು ಬರಮಾಡಿ ಕೊಳ್ಳಲು ಮಾತ್ರ ಸರಕಾರ ವಿನಿಗೆ ಒಮ್ಮೆ ಒಪ್ಪಿಗೆ ನೀಡಿತು. ಆದರೆ ಅದರ ಬೆನ್ನ ಹಿಂದೆಯೇ ಪ್ರಿಟೋರಿಯಾ ಭದ್ರತಾ ಪಡೆಯು ವಿನಿ ಮಾಂಡೆಲಾರ ಮನೆಯ ಮೇಲೆ ದಾಳಿ ಮಾಡಿ ನಿರೀಕ್ಷಿಸಿದ ಮಹತ್ವದ ಸಂಶಯಾಸ್ಪದ ದಾಖಲೆಗಳಾವು ಸಿಗದೆ ನಿರಾಶೆಗೊಂಡಿತು. ಕೊನೆಗೆ ಮನೆಯಲ್ಲಿಯ ಕರಿ, ಹಸಿರು ಹಾಗೂ ಬಂಗಾರ ಬಣ್ಣದ ಪಟ್ಟಿಗಳುಳ್ಳ ಕಂಬಳಿಯನ್ನು ವಶಪಡಿಸಿಕೊಂಡಿತು. ಕಂಬಳಿಯ ಬಣ್ಣಗಳು ನೆಲ್ಸನ್ ಮಾಂಡೆಲಾರ ನೇತೃತ್ವದ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ಸಿನ ಸಂದೇಶವನ್ನು ಸಾರುವ ಸಂಕೇತಗಳು, ಆದ್ದರಿಂದ ಅದನ್ನು ವಶಪಡಿಸಿಕೊಳ್ಳಲಾಯಿತೆಂದೂ ಸರಕಾರ ಹೇಳಿ ಕೊಂಡಿತು. 1982ರಲ್ಲಿ ಅಮೆರಿಕದ ಹ್ಯಾವರ್ ಫರ್ಡ್ ಕಾಲೇಜು ವಿನಿ ಮಾಂಡೆಲಾರಿಗೆ ಕಾನೂನಿನ ಗೌರವ ಡಾಕ್ಟರೇಟ್ ಪದವಿ ಘೋಷಿಸಿತು. ಅದನ್ನು ಪಡೆಯಲು ಅಮೇರಿಕಕ್ಕೆ ಹೋಗುವುದಕ್ಕಾಗಿ ಪ್ರಿಟೋರಿಯಾ ಸರಕಾರ ವಿನಿಗೆ ಅನುಮತಿಯನ್ನು ನಿರಾಕರಿಸಿತು. ಕಳೆದ ವರ್ಷ ಪ್ರಚೋದಿತ ಕೇಡಿಗಳು ವಿನಿಯ ಮನೆಗೆ ಬೆಂಕಿ ಇಟ್ಟು ಸುಟ್ಟು ಹಾಕಿದರು. ಮನೆ ಕಟ್ಟಿಸಿಕೊಳ್ಳುವ ಸಲುವಾಗಿ ಅಮೇರಿಕ ಸರಕಾರ ಮಾನವ ಹಕ್ಕುಗಳ ನಿಧಿಯಿಂದ ಹತ್ತು ಸಾವಿರ ಡಾಲರ್ ಸಹಾಯಧನ ನೀಡಲು ಮುಂದೆ ಬಂದಿತು. ಆದರೆ ಕೋಟಿ ಕೋಟಿ ಕರಿಯರು ಬಿಳಿಯರ ಸರಕಾರದ ದೌರ್ಜನ್ಯದಡಿಯಲ್ಲಿ ನರಳುತ್ತಿರುವುದನ್ನು ಕಂಡು ತುಟಿ ಪಿಟ್ಕೆನ್ನದ ಅಮೇರಿಕ ಸರಕಾರ ಈಗ ಕೊಡಮಾಡಿರುವ ಸಹಾಯಧನವನ್ನು ವಿನಿ ಮಾಂಡೆಲಾ ನಿರಾಕರಿಸಿದಳು. ವಿನಿಗೆ ಸದಾ ಯುವ ಜನಾಂಗದ ಭವ್ಯ ಸ್ವಾಗತ ಕಾದಿರುತ್ತದೆ. ಆಕೆ ಬಂದರೆ ಅಸಂಖ್ಯ ತರುಣ ತರುಣಿಯರು ಹಾಡುತ್ತಾರೆ, ಕುಣಿಯುತ್ತಾರೆ. ಕಾರಿನಿಂದ ವಿನಿ ಇಳಿಯುವುದೊಂದೆ ತಡ ಆಕೆಯನ್ನು ಹೆಗಲ ಮೇಲೆ ಹೊತ್ತು ಸಾಗತೊಡಗುತ್ತಾರೆ.

ತನ್ನ ಸ್ವಂತ ಸಾಮರ್ಥ್ಯ, ಸಹನೆ, ಸಂಘಟನೆ ಹಾಗೂ ಮುಂದಾಳತ್ವದ ಗುಣಗಳಿಂದಲೂ ಇವೆಲ್ಲಕ್ಕೂ ಮಿಗಿಲಾಗಿ ತನ್ನ ರಾಷ್ಟ್ರದ ಜನತೆಯ ಒಳಿತಿಗಾಗಿ ದುಡಿಯುತ್ತಿರುವ ವಿನಿ ಸಂಘರ್ಷದ ನಾಯಕಿಯಾಗಿದ್ದಾಳೆ. ಸೊವೆಟೋದಲ್ಲಿರುವ ಕೆಂಪು ಇಟ್ಟಿಗೆಯ ಸಣ್ಣ ಮನೆಯಿಂದ ದಕ್ಷಿಣ ಆಫ್ರಿಕದ ಕರಿಯರಿಗೆಲ್ಲ ದಾರಿದೀಪ ತೋರುತ್ತಿರುವ ವಿನಿ ಧೈರ್ಯವಂತೆಯಾಗಿರುವಂತೆಯೇ ಅಚಲ ನಿರ್ಧಾರದವಳೂ ಆಗಿದ್ದಾಳೆ. ಅಷ್ಟೇ ಅಲ್ಲ, ಯಾವ ಉದ್ದೇಶಕ್ಕಾಗಿ ತನ್ನ ಪತಿ ಕಂಬಿಗಳ ಹಿಂದೆ ಕುಳಿತು ತಪಸ್ಸನ್ನಾಚರಿಸುತ್ತಿದ್ದಾನೋ, ಆತನ ಆಶೋತ್ತರಗಳು ಈಡೇರುವಂತೆ ಎಲ್ಲ ಯತ್ನಗಳಲ್ಲೂ ತೊಡಗಿದ ಧೀಮಂತೆ ಅವಳಾಗಿದ್ದಾಳೆ. ●

ಬಗೆಹರಿಯದ ಸಮಸ್ಯೆ

ಕೋಳಿ ಜೂಜು ಭರದಿಂದ ಸಾಗುತ್ತಿತ್ತು.

ಒಂದು ಕೋಳಿಯ ಕತ್ತು ಮತ್ತೊಂದು ಕೋಳಿಯ "ಬಾಳಿ" ನಿಂದ ಸೀಳಾಗಿತ್ತು. ಇನ್ನೊಂದರ ಉದರ ಬಿರಿದು ಕರುಳು ಮಾಲೆಯಾಗಿ ಹೊರಬಂದಿತ್ತು. ಆದರೂ ಕೋಳಿ, ಕಾಳಗವನ್ನು ಮುಂದುವರಿಸಿತ್ತು. ಕರುಳು ಹೊರಬಂದರೂ ಎದುರಾಳಿಯನ್ನು ಕೊಲ್ಲಲು ಈ ಕೋಳಿ ಕಾತರಿಸುತ್ತಿತ್ತು.

ದೂರದಲ್ಲಿ ಮಲಗಿದ ದನಕ್ಕೆ ಈ ಗಲಾಟೆ ಕೇಳಿಸಿತ್ತು. ಕಣ್ಣು ಬಿಟ್ಟು ಕಾಳಗದ ದೃಶ್ಯವನ್ನು ಕಂಡಿತು ಮುಗ್ಧ ಪಶು. "ಏಕೆ ಈ ರಣಾಗ್ರ? ಯಾವ ರಾಜ್ಯ ಗೆಲ್ಲಲು ಈ ಕಾಳಗ? ಯಾವ ಧರ್ಮದ ರಕ್ಷಣೆಗಾಗಿ ಈ ಸಮರ". ಎನ್ನುವುದೊಂದೂ ಅದರ ಮಂದ ಬುದ್ಧಿಗೆ ಬಗೆಹರಿಯದ ಸಮಸ್ಯೆಯಾಯಿತು.

ಅದಕ್ಕೇನು ಗೊತ್ತು? ಕೋಳಿಗಳ ಹಿಂದೆ ಮನುಜರ "ಕೈವಾಡ" ಇದೆ ಎಂದು! ಮನುಷ್ಯರ ಆನಂದಕ್ಕೆ ಮದೋತ್ಸಾಹಕ್ಕೆ ಕೋಳಿಗಳ ಕಾಳಗವೇ ಬೇಕೆಂದು ದನಕ್ಕೆ ಪಾಪ ಗೊತ್ತಿರಲೇ ಇಲ್ಲ.

● *ಸ. ರಾಮಮೋಹನ.*

ಪುಸ್ತಕ ವಿಭಾಗ

ಪ್ರೇಮ ಮರೀಚಿಕೆ



ಮೂಲ : ಡೊರೊಥಿ ಬ್ಲ್ಯಾಕ್

ಸಂಗ್ರಹ: ಗೀತಾ ಮುರಳಿ

ಪ್ರೇಮ ಮರೀಚಿಕೆ

ಕಲೋಪಾಸಕ-ತನ್ನ ಕಲೆಗೋಸ್ಕರ ಯಾವ ತ್ಯಾಗಕ್ಕೂ ಸಿದ್ಧ. ತನ್ನ ಕಲೆಯ ನಿರಂತರ ಸಾಧನೆಗಾಗಿ ಪ್ರೇಮದ ಬೆಲೆಯನ್ನು ತೆತ್ತು ವ್ಯಾವಹಾರಿಕ ವಿವಾಹವನ್ನು ಮಾಡಿಕೊಂಡ ನೃತ್ಯ ಕಲಾವಿದನ ವಿಚಿತ್ರ ಅನುಭವವನ್ನು ನಿರೂಪಿಸುವ ಕಥೆಯಿದು. 'where no love is' ಎಂಬ ಡೊರೊಥಿ ಬ್ಲ್ಯಾಕ್‌ಳ ಕಾದಂಬರಿಯ ಸಂಗ್ರಹ.

ಇಟಲಿಯ ಮಿಲಾನ್ ನಗರದ ಮುಖ್ಯಬೀದಿಯಲ್ಲಿ ಸದಾಕಾಲವೂ ಜನದಟ್ಟಣೆ ಯಿರುತ್ತದೆ. ನಿರುದ್ಯೋಗಿ ಯುವಕರಿಗಂತೂ ಹರಟೆ ಕೊಚ್ಚುತ್ತ, ಹಾಡು ಹೇಳುತ್ತ, ಎಲೆಯಾಟ ಆಡುತ್ತ, ಹುಡುಗಿಯರನ್ನು ಕಂಡು ಶಿಳ್ಳೆ ಹಾಕುತ್ತ, ದಿನವಿಡೀ ನಿಶ್ಚಿಂತೆಯಿಂದ ಆ ಬೀದಿಯಲ್ಲೇ ಕಾಲ ಕಳೆಯುವುದೇ ಕೆಲಸ.

ಆ್ಯಲಿಸನ್ ಆಂಗ್ಲ ಯುವತಿ. ರೂಪವತಿ, ಸೊಗಸಾದ ಶ್ವೇತವರ್ಣ, ನೀಲ ನೇತ್ರಗಳು, ಮನೋಹರವಾದ ಹೊಂಬಣ್ಣದ ಕೇಶರಾಶಿ. ಮುಖ್ಯ ಬೀದಿಯ ಕೊನೆಯಲ್ಲಿದ್ದ ಅಂಗಡಿಗೆ ಹೂವು, ಹಣ್ಣು, ಕೊಳ್ಳಲೆಂದು ಹೋದಾಗೆಲ್ಲ ಅವಳ ಅಪರೂಪದ ಸೌಂದರ್ಯವನ್ನು ಮೆಚ್ಚಿಕೊಂಡು ಅಲ್ಲಿದ್ದ ಯುವಕರು ಶಿಳ್ಳೆ ಹಾಕುತ್ತಿದ್ದರು. ಅವರ ಈ ಅಭಿನಂದನಾತ್ಮಕ ರೀತಿ ಅರ್ಥವಾಗುತ್ತಿರಲಿಲ್ಲವಾಗಿ ಅವಳಿಗದು ಸರಿ ಬರುತ್ತಿರಲಿಲ್ಲ.

ಊರಿನ ಹೊರವಲಯದಲ್ಲಿ ವಿಶಾಲವಾದ ಸರೋವರದ ದಂಡೆಯಲ್ಲಿದ್ದ ಟ್ರೆರೆಟ್ಟಿಯ ಬಂಗಲೆಯಲ್ಲಿ ಆ್ಯಲಿಸನ್ ವಾಸಿಸುತ್ತಿದ್ದಳು. ದಂಡೆಯಾಚೆಯಿರುವ ಶಹರಕ್ಕೆ ಹೋಗುವವರು ಈ ಸರೋವರವನ್ನು ಸಣ್ಣ ದೋಣಿಗಳಲ್ಲಿ ದಾಟುತ್ತಿದ್ದರು. ಜನರಿಗೆ ಸರೋವರದ ಮೇಲೆ ವಾಯು ವಿಹಾರಾರ್ಥ ನಾವೆಗಳು; ಬೆಟ್ಟದಡಿಯಲ್ಲಿರುವ ಉದ್ಯಾನ ಗಳಿಗೆ ವನಭೋಜನಕ್ಕೆ ಹೋಗುವ ಪ್ರವಾಸಿಕರನ್ನು ಕರೆದೊಯ್ಯಲೆಂದು ಒಂದು ಚಿಕ್ಕ ಹಡಗೂ ಇತ್ತು.

ಬೆಟ್ಟಗಳ ಮೇಲೆ ಗಿಡಮರಗಳ ನಡುವಿನಿಂದ ಅಲ್ಲಲ್ಲಿ ಸಣ್ಣಪುಟ್ಟ ಬಂಗಲೆಗಳು ಇಣುಕಿ ನೋಡುತ್ತಿದ್ದವು. ವಸಂತ ಮಾಸದಲ್ಲಿ ಬೆಟ್ಟಗಳು ಹಸಿರಿನಿಂದ ಆಚ್ಛಾದಿತವಾಗಿ, ಕರೆಯಂಚಿನಲ್ಲಿರುವ ಬಂಗಲೆಗಳ ತೋಟಗಳು ವಿವಿಧ ಬಣ್ಣದ ಹೂವುಗಳಿಂದ ಕಂಗೊಳಿಸುತ್ತಿದ್ದವು. ಎಲ್ಲೆಡೆಗೂ ಸುಗಂಧಿತ ಪುಷ್ಪಗಳ ಪರಿಮಳ, ರಾತ್ರಿಯಲ್ಲಿ ದೂರದಿಂದ ಪ್ರೇಮಗೀತೆಗಳ ಸುಸ್ವರ ತೇಲಿಬರುತ್ತಿತ್ತು.

ಇಲ್ಲಿಯ ವಾತಾವರಣ ಉಲ್ಲಾಸಮಯವಾದದ್ದು. ಈ ಅವಕಾಶವನ್ನು ಬಿಡದೆ ಇಷ್ಟು ದೂರ ಬಂದದ್ದು ಸಾರ್ಥಕ ನಾಯಿತು. ಎಂದು ಆ್ಯಲಿಸನ್‌ಳಿಗೆ ಅನಿಸಿತು. ಅವಳ ಮಾತಾಪಿತರಿಬ್ಬರೂ ಇತ್ತೀಚೆಗೆ ಕಾರು ಅಪಘಾತದಲ್ಲಿ ಅಸುನೀಗಿದ್ದರು. ಇಂಗ್ಲೆಂಡಿ ನಲ್ಲಿ ಬೇರೆ ಬಂಧುಬಳಗ ಯಾರೂ ಇರಲಿಲ್ಲ. ಆ ಅಪ್ರಿಯ ಸ್ಮೃತಿಗಳಿಂದ ಪಾರಾಗಿ ಎಲ್ಲಿಯಾದರೂ ದೂರ ಹೋಗಬೇಕೆಂದು ಆಕೆ ಹವಣಿಸುತ್ತಿದ್ದಳು. ಒಂದು ದಿನ ವೃತ್ತಪತ್ರಿಕೆ ಯಲ್ಲಿ ಈ ಉದ್ಯೋಗದ ಜಾಹೀರಾತನ್ನು ಕಂಡು ಯೋಚಿಸಿ, ಕೊನೆಗೆ ಧೈರ್ಯ ತಂದುಕೊಂಡು, ಇಟಲಿಗೆ ಬಂದು ತಲುಪಿದಳು. ಇಲ್ಲಿ ಅವಳ ಕಾರ್ಯ ಬಹಳ ಸುಲಭವಾದದ್ದು, ಸಿನೋರ್ ಟ್ರೆರೆಟ್ಟಿಯ ಇಬ್ಬರು ಚಿಕ್ಕ ಹುಡುಗಿಯರಾದ ಹತ್ತು

ವರ್ಷದ ಲುಯಿಸಾ ಏಳುವರ್ಷದ ಬರ್ನ್‌ಡೆಟ್ಟರಿಗೆ ಸಂಗಾತಿಯಾಗಿದ್ದು, ಅವರಿಗೆ ಇಂಗ್ಲೀಷ್ ಪಾಠ ಹೇಳಿಕೊಡುವದಷ್ಟೇ ಅವಳ ನಿತ್ಯಕ್ರಮವಾಗಿತ್ತು.

ಅವಳ ರೂಪವನ್ನು ನೋಡಿ ಟೈರೆಟ್ಟಿ ಸಹ ಕೆಲಸಕ್ಕೆ ನೇಮಿಸಿ ಕೊಳ್ಳುವಾಗ ಸಂಕೋಚ ಪಟ್ಟುಕೊಂಡಿದ್ದರು. ಗಂಡಿನ ಮನಸ್ಸು ಚಂಚಲ ಅಲ್ಲವೇ? ಟೈರೆಟ್ಟಿ ಊಹಿಸಿದ್ದಂತೆಯೇ ಆಯಿತು. ಅವರ ಸೋದರ ಬ್ರುನೋ ಆ್ಯಲಿಸನ್‌ಳನ್ನು ಮೊದಲ ಬಾರಿ ನೋಡಿ ಮೋಹಿತನಾಗಿ ಅವಳ ಸುತ್ತಮುತ್ತ ಸುಳಿದಾಡುತ್ತಲಿದ್ದ.

ಬ್ರುನೋ ರೂಪವಂತ, ಯುವಕ ಆದರೆ ಅವಳ ಅಭಿರುಚಿಗೆ ತಕ್ಕವನಲ್ಲ. ಅಂಗಡಿಯ ಮುಂದಿರುವ ಕನ್ನಡಿಯ ಕಪಾಟಿನಲ್ಲಿ ಬಟ್ಟೆಗಳನ್ನು ಪ್ರದರ್ಶಿಸುತ್ತ ನಿಂತಿರುವ ಮೇಣದ ಪ್ರತಿಮೆಯಂತೆ ಕಾಣುತ್ತಿದ್ದ ಸದಾ ಇಂಗ್ಲೀಷ್ ಶಬ್ದಕೋಶವನ್ನು ಹಿಡಿದುಕೊಂಡು ಅವಳ ಬೆನ್ನ ಹಿಂದೆಯೇ ಸುತ್ತುತ್ತಿದ್ದ. ಆದರೆ ಆ್ಯಲಿಸನ್ನಳಿಗೆ ಮಾತ್ರ ಆತನನ್ನು ಕಂಡರೆ ತಾತ್ಸಾರವೇ.

ಟೈರೆಟ್ಟಿ ದಂಪತಿಗಳ ಮನೆಯ ವಾತಾವರಣ ಮನರಂಜಕವೆನಿಸುತ್ತಿತ್ತು. ಸಿನೋರಾಳದು ಪೀಪಾಯಿಯಂಥ ಮೈಮಾಟ. ಈ ಗಜಗಾತ್ರದ ಹೆಣ್ಣು ತನ್ನ ಪರ್ವತಮಯ ವಕ್ಷಸ್ಥಳದ ಮೇಲೆ ಎರಡೂ ಕೈಕಟ್ಟಿಕೊಂಡು ಅಡ್ಡಾಡುತ್ತಿರುವುದು ಭಯಾನಕ ದೃಶ್ಯವೇ! ಅವಳ ನಾಲಿಗೆಯೂ ಸರ್ಪದಂತೆ ಬಲು ಉದ್ದ. ಟೈರೆಟ್ಟಿ, ಸೌಮ್ಯ ಸ್ವಭಾವದವನು. ಅವರೆಲ್ಲ ಭಾವುಕರು. ಕೆಲವೊಮ್ಮೆ ಕಲಹ ಶುರುವಾಯಿತೆಂದರೆ ಮನೆಯ ಹುಡುಗಿಯರೆನ್ನೆಲ್ಲ ಕರೆದುಕೊಂಡು ಹೋಗಿ ಆ್ಯಲಿಸನ್ ಉದ್ಯಾನದಲ್ಲಿ ಕುಳಿತು, ಮನೆಯಲ್ಲಿ ಶಾಂತಿ ನೆಲೆಸುವವರೆಗೆ ವಿಶ್ರಮಿಸುತ್ತಿದ್ದಳು.

ಲುಯಿಸಾ, ಬರ್ನ್‌ಡೆಟ್ ಇಬ್ಬರಿಗೂ ನೃತ್ಯ ಎಂದರೆ ಪಂಚಪ್ರಾಣ ಉದ್ಯಾನದಲ್ಲಿ ಬಾದಾಮಿ ಮರಗಳ ನಡುವೆ ಕೈಕಾಲು ಕುಣಿಸುತ್ತ ನರ್ತಿಸುತ್ತಿದ್ದರು. ಆಗಾಗ್ಗೆ ಟೈರೆಟ್ಟಿ ದಂಪತಿಗಳು ಉದ್ಯಾನಕ್ಕೆ ಬಂದಾಗ, ಮಕ್ಕಳ ನೃತ್ಯ ನೋಡಿ ಸಂತೋಷಪಡುತ್ತಿದ್ದರು. "ನೃತ್ಯ ಅವರಿಗೆ ರಕ್ತಗತವಾಗಿದೆ ಇಂಥ ಕಲೆ ಹೊರಹೊಮ್ಮಲೇಬೇಕು. ಪಾಸ್ಕಲೀನೋನ ಹಾಗೆ ಇವರೂ ಒಂದಿಲ್ಲೊಂದು ದಿನ ಪ್ರಸಿದ್ಧ ನೃತ್ಯ ಗಾತಿಯರಾಗುತ್ತಾರೆ" ಎಂದೊಮ್ಮೆ ಹೆಮ್ಮೆಯಿಂದ ಸಿನೋರಾ ಹೇಳಿದಳು.

ಆ್ಯಲಿಸನ್ ಸುಮ್ಮನೇ ಇದ್ದದ್ದಕ್ಕೆ "ಏನೇ ನೀನು ಪಾಸ್ಕಲೀನೋನ ಹೆಸರು ಕೇಳಿಯೇ ಇಲ್ಲವೇ?" ಎಂದು ಗದರಿದರು. "ಇಲ್ಲ" ಎಂದಳು ಆ್ಯಲಿಸನ್.

ಸಿನೋರಾಗೆ ವಿಸ್ಮಯವಾಯಿತು. "ಅಯ್ಯೋ: ಎಂಥ ಅಜ್ಞಾನ ನಿನ್ನದು: ಪಾಸ್ಕಲೀನೋ ಜಗತ್ಪ್ರಸಿದ್ಧ ನರ್ತಕ; ಅಪ್ರತಿಮ ನೃತ್ಯಪ್ರವೀಣ: ಅತಿಶ್ರೇಷ್ಠ ಕಲಾವಿದ: ಆತ ನನ್ನ ಸೋದರಮಾವನ ಮಗ;"

"ಅವರು ಎಂಥ ನೃತ್ಯವನ್ನು ಮಾಡುತ್ತಾರೆ?" ಕೇಳಿದಳು ಆ್ಯಲಿಸನ್.

"ಬ್ಯಾಲೆ. ಏನು, ನೀನು ಅಂಥ ನೃತ್ಯವನ್ನು ನೋಡಿಯೇ ಇಲ್ಲವೆ?"

"ಇಲ್ಲ, ಅದು ನಮ್ಮ ದೇಶದಲ್ಲಿ ತೀರ ವಿರಳ"

"ಛೆ, ಛೆ: ನೃತ್ಯಕಲೆಯನ್ನು ಅರಿಯದವರು ಶುದ್ಧ ಅಸಂಸ್ಕೃತರು" ಸಿನೋರಾ ರೇಗಿದಳು.

ಒಂದು ವಾರದ ನಂತರ, ಸಿನೋರಾ ಹಜಾರದಲ್ಲಿ ಕುಳಿತು ವೃತ್ತಪತ್ರಿಕೆಯನ್ನೋದುತ್ತಿದ್ದಳು. ಆ್ಯಲಿಸನ್ ಅಲ್ಲಿ ಬಂದೊಡನೆ "ಇವರೇ ನೋಡು ನರ್ತಕ ಆ ಅದ್ವಿತೀಯ ಪಾಸ್ಕಲೀನೋ" ಎಂದು ಪತ್ರಿಕೆಯನ್ನು ಅವಳ ಕಣ್ಣ ಮುಂದೆ ಹಿಡಿದರು.

ಈ ಚಿತ್ರವನ್ನು ನೋಡಿ, ಪಾಸ್ಕಲೀನೋ ಕೂಡ ಬ್ರುನೋನಂತೆಯೆ ಮತ್ತೊಬ್ಬ ಮೇಣದ ಪ್ರತಿಮೆಯಂಥ ಕೋಡಗಿ ಇರಬಹುದೆಂದು ಭಾವಿಸಿದ್ದ ಆ್ಯಲಿಸನ್‌ಳಿಗೆ ತನ್ನ ಕಲ್ಪನೆ ತಪ್ಪಾಗಿತ್ತೆನಿಸಿತು. ಈ ಪಾಸ್ಕಲೀನೋ ನಿಜಕ್ಕೂ ಸುಂದರ ಯುವಕನಾಗಿದ್ದ. ಪ್ರತಿಭಾವಂತ ಕೂಡ. ಅಂದವಾದ ನಗು ಮುಖದಲ್ಲಿ ತೇಜೋಮಯವಾದ ಕಪ್ಪು ಕಣ್ಣುಗಳು ನರ್ತಕನಿಗೆ ತಕ್ಕ ಎತ್ತರ ತೆಳುವಾದ ನಿಲುವು. ಸ್ವಲ್ಪವೂ ಜಂಬ, ಅಹಂಕಾರದ ಸುಳಿವಿರಲಿಲ್ಲ. ಮುಖದಲ್ಲಿ ಪೌರುಷದ ವ್ಯಕ್ತಿತ್ವ.

ಭಾವಚಿತ್ರದೊಂದಿಗೆ ಒಂದು ಪ್ರಕಟನೆಯೂ ಇದ್ದಿತು: ಬರುವ ಭಾನುವಾರವೇ ಅಲ್ಲಿಯ ನಾಟ್ಯ

ಮಂದಿರದಲ್ಲಿ ಪಾಸ್ಕಲೀನೋ ಹಾಗೂ ಸಂಗಡಿಗರ ಅದ್ಭುತ ನೃತ್ಯ ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು.

"ಅವನೆಂಥ ಮಹಾಕಲಾವಿದನೆಂದು ಈಗಲಾದರೂ ನಿನಗೆ ಅರ್ಥವಾಯಿತೇ?" ಕೇಳಿದಳು. ಸಿನೋರಾ "ಎಷ್ಟು ಮೋಹಕವಾಗಿದೆ ನೋಡು ಅವನ ರೂಪ" ಎಂದು ಸೇರಿಸಿದರು.

"ಹೌದು ನಿಜ" ಆ್ಯಲಿಸನ್ ಹೃತ್ಪೂರ್ವಕವಾಗಿ ನುಡಿದಳು. "ಸದಾ ಅವನ ಸಂಗಡ ಒಬ್ಬ ರಾಜಕುಮಾರಿ ಇರುತ್ತಾಳೆ. ಅವಳ ಹೆಸರು ರೆನಾಟಾ ಭಾರಿ ಶ್ರೀಮಂತೆ. ಒಂದಿಲ್ಲೊಂದು ದಿನ ಅವಳು ಪಾಸ್ಕಲೀನೋನನ್ನು ಮದುವೆಯಾಗುತ್ತಾಳೆ. ಆದರೆ ಇತರ ಹುಡುಗಿಯರೂ ಆತನನ್ನು ಸದಾ ಪ್ರೇಮಿಸುತ್ತಿರುತ್ತಾರೆ. ಮೂರ್ಖ ಹುಡುಗಿಯರು"

"ಇರಬಹುದು"

"ನೀನು ಮಾತ್ರ ಅಂಥ ಹುಚ್ಚು ಹವ್ಯಾಸಕ್ಕೆ ಹೋಗಬೇಡವಮ್ಮಾ. ನೀನು ವಿವೇಕವುಳ್ಳವಳು, ಬೇರೆ ಹುಡುಗಿಯರಂತೆ ಅವನ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು" ಎಂದು ಎಚ್ಚರಿಸಿದಳು.

ನೃತ್ಯಕಾರ್ಯಕ್ರಮದ ದಿನ ನಾಟ್ಯಮಂದಿರ ಭವ್ಯವಾಗಿ ಅಲಂಕರಿಸಲಪಟ್ಟಿತು. ಸಭಾಂಗಣ ವೆಲ್ಲ ಜನರಿಂದ ಕಿಕ್ಕಿರಿದು ತುಂಬಿತ್ತು. ಬಳಗದವರೆಂದು ಟ್ರೈರೆಟ್ಟಿ ಕುಟುಂಬದವರೆಲ್ಲ ಮುಂದಿನ ಸಾಲಿನಲ್ಲಿಯೇ ಉಪಸ್ಥಿತರಿದ್ದರು.

ಕಾರ್ಯಕ್ರಮದ ಪ್ರಾರಂಭಸೂಚಕ ಮೇಳವಾದ್ಯದ ಶ್ರುತಿ ಕೇಳಿಬಂತು. ಸಾವಿರಾರು ಪ್ರೇಕ್ಷಕರ ಪ್ರಚಂಡ ಕರತಾಡನದೊಂದಿಗೆ ಪಾಸ್ಕಲೀನೋ ರಂಗಭೂಮಿಯ ಮೇಲೆ ಪ್ರತ್ಯಕ್ಷನಾಗಿ ಸಂಗಡಿಗರೊಂದಿಗೆ ನರ್ತಿಸಿದ. ಭಾವಚಿತ್ರದಲ್ಲಿಯ ಸ್ಫುರದ್ರೂಪಿ ತರುಣನನ್ನು ಆ್ಯಲಿಸನ್ ಗುರುತಿಸಿದಳು ಎಂಥ ಮನೋಹರ ರೂಪ. ಅದೇ ಸುಂದರ ಹಸನ್ಮುಖ! ಅದೇ ತೀಕ್ಷ್ಣವಾದ ಕಣ್ಣುಗಳು, ಆಕರ್ಷಕ ಮೈಕಟ್ಟಿನಲ್ಲಿ ಚಿರತೆಯ ಲಾವಣ್ಯ. ನೃತ್ಯದಲ್ಲಿ ಶಕ್ತಿಸೊಬಗುಗಳ ಮಿಲನ. ಕಲೆಯಲ್ಲಿ ಪರಮಾನಂದದ ತನ್ಮಯತೆ.

ನಾಟ್ಯ ಭವನದಲ್ಲಿಯ ಜನಸ್ತೋಮ ಮೋಹಗೊಂಡು ಭಾವಪರವಶವಾಗಿ ನೃತ್ಯವನ್ನು ವೀಕ್ಷಿಸುತ್ತಿತ್ತು. 'ಸ್ವಾನ್ ಲೇಕ್' ಎಂಬ ಖ್ಯಾತ ನೃತ್ಯನಾಟಕದ ಅದ್ಭುತ ಪ್ರದರ್ಶನವದು. ಆದರೆ ಈ ನೃತ್ಯದ ಸಂದೇಶ ಆ್ಯಲಿಸನ್ ಮನಮುಟ್ಟಲಿಲ್ಲ. ಅದರ ಹಾವಭಾವಗಳೆಲ್ಲ ಅವಳಿಗೆ ಅರ್ಥವೇ ಆಗಲಿಲ್ಲ. ಮೇಳವಾದ್ಯದ ಸಂಗೀತವೇನೋ ಚೆನ್ನಾಗಿತ್ತು. ಆದರೆ ಆ ನೆಗೆದಾಟ, ಆ ಹಾರಾಟವೆಲ್ಲ ಅವಳಿಗೆ ಹುಚ್ಚು ಕುಣಿತವೆನಿಸಿತು. ಅವಳಿಗೆ ನಗುವಂತಾಯಿತು. ಎಲ್ಲರಿಗೂ ಏಕಾಗ್ರಚಿತ್ತದಿಂದ ಎವೆಯಿಕ್ಕದೆ ಅವನನ್ನೇ ನೋಡುತ್ತಿರುವುದು ಅವಳಿಗೆ ಅನುಕೂಲವೇ. ಅವಳಿಗೆ ತಮಾಷೆ ಗಮನಿಸಲಿಕ್ಕೆ ಯಾರಿಗೂ ಸಮಯವಿರಲಿಲ್ಲ. ಬರ್ನಡೆಟ್ ಮಾತ್ರ ಆಗಾಗ ಅವಳ ಮುಖವನ್ನು ನೋಡುತ್ತಿದ್ದಳು. ಮೌನವಾಗಿ ಮನದಲ್ಲೇ ನಗುತ್ತ ಕೈಕಟ್ಟಿಕೊಂಡು ಕುಳಿತಿದ್ದಳು. ಕಾರ್ಯಕ್ರಮ ಮುಗಿದೊಡನೆ ಅನೇಕ ಯುವತಿಯರು ಪಾಸ್ಕಲೀನೋನನ್ನು ಅಭಿನಂದಿಸಲು, ಆತನ ಹಸ್ತಾಕ್ಷರವನ್ನು ಪಡೆಯಲು ವೇದಿಕೆಯ ಮೇಲೆ ನುಗ್ಗಿದರು. ಪಾಸ್ಕಲೀನೋ ಸಾವಧಾನವಾಗಿ, ಶಾಂತವದನದಿಂದ ಎಲ್ಲರಿಗೂ ವಂದಿಸಿದ.

ಅದೇ ರಾತ್ರಿ ಟ್ರೈರೆಟ್ಟಿಯ ಬಂಗಲೆಯ ಉದ್ಯಾನದಲ್ಲಿ ಪಾಸ್ಕಲೀನೋನ ಗೌರವಾರ್ಥ ಭೋಜನ ಕೂಟವನ್ನು ಏರ್ಪಡಿಸಲಾಗಿತ್ತು. ಅವನ ಸಂಗಡ ಬಂದಿದ್ದ ಆಮಂತ್ರಿತರಲ್ಲಿ ರಾಜಕುಮಾರಿ ರೆನಾಟಾಳೂ ಇದ್ದಳು. ತೆಳ್ಳಗೆ ಎತ್ತರವಾಗಿದ್ದ ಅತ್ಯಂತ ರೂಪವತಿ.

ಅವಳ ಮುಖದ ಗೌರವರ್ಣಕ್ಕೆ ಕಪ್ಪು ಬೊಗಸೆಗಣ್ಣುಗಳು ಮೆರುಗು ನೀಡುತ್ತಿದ್ದವು. ಪಾಸ್ಕಲೀನೋ ಮತ್ತು ರೆನಾಟಾರದು ತುಂಬ ಅಂದವಾದ ಜೋಡಿ ಎಂದು ಆ್ಯಲಿಸನ್‌ಗೆ ಅನಿಸಿತು. ಅಡಿಗೆ ಮನೆಯಲ್ಲಿಯ ವ್ಯವಸ್ಥೆಯನ್ನು ಆ್ಯಲಿಸನ್‌ಗೆ ಒಪ್ಪಿಸಲಾಗಿತ್ತು. ಅವಳನ್ನು ಹುಡುಕಿಕೊಂಡು ಅಲ್ಲಿಗೆ ಬಂದ ಬರ್ನಡೆಟ್ "ಪಾಸ್ಕಲೀನೋರ ನೃತ್ಯ ನೋಡಿ ಯಾಕೆ ನಗ್ತಾ ಇದ್ದಿರಿ?" ಎಂದು ಕೇಳಿದಳು. "ಏನದು? ಪಾಸ್ಕಲೀನೊನ್ನ ನೋಡಿ ನಗುವುದಾ? ಏನು ಹಾಗಾದರೆ?" ಗಂಭೀರವಾದ ದರ್ಪದ ಧ್ವನಿ ಕೇಳಿಬಂತು. ಅಷ್ಟರಲ್ಲೇ ತಿರುಗಿ ನೋಡಿದಾಗ, ಅಲ್ಲಿಯೇ ಅವರ ಹಿಂದುಗಡೆ ತನ್ನ ಅಂದವಾದ ನರ್ತಕನ ಶೈಲಿಯಲ್ಲಿ ನಿಂತಿದ್ದ ಪಾಸ್ಕಲೀನೋ, ಬರ್ನಡೆಟ್ ಆ್ಯಲಿಸನ್‌ಳತ್ತ ಕೈಮಾಡಿ

"ಇವರೇ ಅಂಕಲ್ ಇವರು ನೀನು ನಕಲಿ ಅಂತ ತಿಳಿದಿದ್ದಾರೆ" ಎಂದಳು.

ಪಾಸ್ಕಲೀನೋ ಮುಂದೆ ಹೆಜ್ಜೆಯಿಟ್ಟು ಕೈಕಟ್ಟಿ ಕೊಂಡು ನಿಂತು ಆ್ಯಲಿಸನ್‌ಳನ್ನೇ ದಿಟ್ಟಿಸಿದ. ಅವನ ಕಣ್ಣುಗಳು ಕ್ಷಣಮಾತ್ರ ಅವಳ ಮುಖ ಕೂದಲು ಕಣ್ಣುಗಳನ್ನು ಪರೀಕ್ಷಿಸಿದವು. ಕೂಡಲೆ ಗೋಣು ಹಾಕಿದ. ಅವನ ಕಂಗಳಲ್ಲಿ ವಿನೋದದ ಛಾಯೆ ಮಿಂಚಿತು. "ಹೌದು ಹೌದು, ನಿಮ್ಮೊಂದಿಗೆ ನಾನು ಮಾತನಾಡುವದಿದೆ" ಅಂದ.

"ಇಲ್ಲ ಈಗ ಸಾಧ್ಯವಿಲ್ಲ ನನಗೆ ತುಂಬ ಕೆಲಸವಿದೆ" ಅಂದಳು ಆ್ಯಲಿಸನ್ ಭಯದಿಂದ.

"ಏನಿಲ್ಲ ನೀವೀಗ ಹೇಳಲೇಬೇಕು" ಎನ್ನುತ್ತ ಅವಳನ್ನು ಜನದಟ್ಟನೆಯಿಂದ ದೂರ ಕರೆದೊಯ್ದು ಕೇಳಿದ. "ಈ ಸಂಜೆ ನಾಟ್ಯಮಂದಿರದಲ್ಲಿ ನಿಮ್ಮನ್ನು ನೋಡಿದೆ. ನನ್ನ ಕಪ್ಪು ಬಂಧುಗಳ ಮಧ್ಯೆ ನೀವು ಬೆಳ್ಳಿ ಬಂಗಾರದ ಮೂರ್ತಿಯ ಹಾಗೆ ಕುಳಿತಿದ್ದಿರಿ. ಎಲ್ಲರೂ ಕರತಾಡನ ಮಾಡುವಾಗ ನೀವು ಮಾತ್ರ ಕೈಕಟ್ಟಿಕೊಂಡು ಸುಮ್ಮನಿದ್ದೀರಿ. ಒಮ್ಮೆ ಕೂಡ ಚಪ್ಪಾಳೆ ತಟ್ಟಲಿಲ್ಲ ಯಾಕೆ?"

ಆ್ಯಲಿಸನ್ ಏನು ಹೇಳಬೇಕೆಂದು ತಿಳಿಯದೆ ಉಗುಳು ನುಂಗಿದಳು.

"ನನ್ನ ನೃತ್ಯ ಇಷ್ಟವಾಗಲಿಲ್ಲವೇ ನಿಮಗೆ?"

"ಇಲ್ಲ" ತಲೆ ಅಲ್ಲಾಡಿಸಿದಳು. "ನನಗೆ ಅಷ್ಟೇನು ಹಿಡಿಸಲಿಲ್ಲ" ಎಂದಳು.

"ಯಾಕೆ?"

"ನನಗೆ ಅರ್ಥವಾಗಲಿಲ್ಲ ನಾನು ಇಂಗ್ಲೆಂಡಿನಿಂದ ಬಂದವಳು ಅದನ್ನು ನೋಡಿ ನನಗೆ ತಮಾಷೆ ಅನಿಸಿತು" ಒಂದೇ ಉಸಿರಿನಲ್ಲಿ ಹೇಳಿದಳು.

"ತಮಾಷೆ?" ಅವನಿಗೆ ಆಶ್ಚರ್ಯವಾಯಿತು.

"ಹೌದು ನಿಮ್ಮಂಥ ಸದೃಢ ಯುವಕರು ಇಂಥ ಹುಚ್ಚು ಕುಣಿತಕ್ಕಿಂತ ಇನ್ನೇನಾದರೂ ಒಳ್ಳೆ ಉದ್ಯೋಗ ಮಾಡಬಹುದು" ಎಂದು ತನಗೆ ನಿಜವೆನಿಸಿದ್ದನ್ನು ಹೇಳಿಬಿಟ್ಟಳು.

ಅವನಿಗೂ ವಿನೋದವೆನಿಸಿತು. "ಇನ್ನೇನಾದರೂ ಒಳ್ಳೆ ಉದ್ಯೋಗ ಅಂದರೆ? ನಿಮ್ಮ ದೃಷ್ಟಿಯಲ್ಲಿ ಯಾವುದೇ ಒಳ್ಳೆ ಉದ್ಯೋಗ?"

ಅಷ್ಟರಲ್ಲಿ ಪಾಸ್ಕಲೀನೋನ್ನ ಹುಡುಕುತ್ತಿದ್ದ ಸಿನೋರಾ ಆ್ಯಲಿಸನ್‌ಳನ್ನು ಕೆಂಗಣ್ಣಿನಿಂದ ನೋಡುತ್ತ ಆತನನ್ನು ಭೋಜನಕ್ಕೆ ಕರೆದುಕೊಂಡು ಹೋದಳು. ಪಾಸ್ಕಲೀನೋ ತಿರುಗಿ ನೋಡಿ, "ಈ ಸಂಭಾಷಣೆಯನ್ನು ಅನಂತರ ಮುಗಿಸೋಣ" ಎಂದು ಹೇಳಿ ಹೋದ.

ಮರುದಿನ ಸಂಜೆ ಅಲ್ಲಿಯ ಶ್ರೇಷ್ಠ ಹೋಟೆಲಿನಲ್ಲಿ ಪಾಸ್ಕಲೀನೋ ತನ್ನ ಬಂಧುಮಿತ್ರರಿಗೆಲ್ಲ ಸಂತೋಷಕೂಟವನ್ನು ಏರ್ಪಡಿಸಿದ್ದ. ಅದಕ್ಕೆ ಆಮಂತ್ರಣ ಬಂದಿರಲಿಲ್ಲವೆಂದು ಆ್ಯಲಿಸನ್‌ಳೇನೂ ಖಿನ್ನಳಾಗಿರಲಿಲ್ಲ ಮಕ್ಕಳು ಮಲಗಿದ ಮೇಲೆ ಹೊರಗಡೆ ಉದ್ಯಾನದಲ್ಲಿ ಹೋಗಿ ನಿಂತಳು. ರಾತ್ರಿ ರಮ್ಯವಾಗಿತ್ತು. ಸರೋವರದ ಮೇಲೆ ಬಿದಿಗೆಯ ಚಂದ್ರ ಚಿನ್ನದ ಕಣ್ಣಿವೆಯಂತೆ ತೂಗುತ್ತಿದ್ದ ದೂರದಿಂದ ಯಾವುದೋ ಹಾಡಿನ ಸ್ವರಕೇಳಿಬರುತ್ತಿತ್ತು.

ತನ್ನ ಹಿಂದುಗಡೆ ಏನೋ ಸಪ್ಪಳ ಕೇಳಿದಂತಾಗಿ ತಿರುಗಿ ನೋಡಿದಳು. ಪಾಸ್ಕಲೀನೋ ನಿಂತಿದ್ದ. "ಅರೇ ನೀವು ಇಲ್ಲಿ ಬರಬಾರದಿತ್ತು" ಆವೇಗದಿಂದ ನುಡಿದಳು.

"ನಿಮ್ಮನ್ನೊಂದು ವಿಷಯ ಕೇಳಬೇಕಾಗಿತ್ತು". ಎಂದು ಶಿಲಾಸನದ ಮೇಲೆ ಕುಳಿತ. ಅವಳು ಅಲ್ಲಿಯೇ ನಿಂತಿದ್ದಳು. ನಕ್ಷತ್ರಗಳ ಬೆಳಕಿನಲ್ಲಿ ಅವಳ ಕೇಶರಾಶಿ ಆಕರ್ಷಕವಾಗಿ ಹೊಳೆಯುತ್ತಿತ್ತು.

"ನಿಮಗೆ ನೃತ್ಯ ಇಷ್ಟವಿಲ್ಲವೇ?"

"ಇಲ್ಲ... ಅದಲ್ಲ ಕುಣಿತ...."

"ಹೌದು ಹುಚ್ಚು ಕುಣಿತ. ಆದರೆ ಅದೆಷ್ಟು ಕಠಿಣವೆಂದು ನಿಮಗೆ ಗೊತ್ತಿಲ್ಲ. ನನಗೆ ಚೆನ್ನಾಗಿ ಸಾಧಿಸಿದೆ" ಮತ್ತೆ ಅವಳನ್ನೇ ದಿಟ್ಟಿಸುತ್ತ ಕೇಳಿದ "ನಿಮ್ಮ ದೇಶದಲ್ಲಿ ಯಾರನ್ನಾದರೂ ನೀವು ಪ್ರೇಮಿಸುತ್ತೀರಾ?"

"ಇಲ್ಲ" ಎಂದಳು ಚುಟುಕಾಗಿ.

"ಅಥವಾ ಇಲ್ಲಿಯೇ ಯಾರನ್ನಾದರೂ ಬಹುಶಃ ಬ್ರುನೋನನ್ನು?"

"ಬ್ರುನೋನ ಕಂಡರೆ ನನಗಾಗುವುದಿಲ್ಲ".

"ನೀವು ನನ್ನನ್ನು ಪ್ರೇಮಿಸುವುದಿಲ್ಲವೆಂದು ಸತ್ಯವಾಗಿ ಹೇಳಬಲ್ಲಿರಾ?"

ಎಷ್ಟು ಈತನ ಉದ್ಧಟತನ! ಅವಳಿಗೆ ಕೋಪದಿಂದ ಕೆನ್ನೆಯಲ್ಲಿ ಗುಲಾಬಿ ರಂಗೇರಿತು. "ಅಂಥ ಸಂದರ್ಭ ಅಸಂಭವನೀಯವೆಂದು ಹೇಳಬಲ್ಲೆ" ಸಿಡುಕಿನಿಂದ ಹೇಳಿದಳು. ಆತ ದೀರ್ಘ ನಿಟ್ಟುಸಿರು ಬಿಟ್ಟ. "ಹಾಗಾದರೆ ದಯವಿಟ್ಟು ನನ್ನನ್ನು ಮದುವೆಯಾಗುವಿರಾ? ಅದಷ್ಟು ಬೇಗನೆ ಇದರಿಂದ ನನಗೆ ತುಂಬಾ ಸಹಾಯವಾಗುವುದು" ಆತ ಆವೇಗದಿಂದ ಹೇಳಿದ "ನಿಮಗೆ ಹುಚ್ಚು ಹಿಡಿದಿರಬೇಕು ದಯಮಾಡಿ ಇಲ್ಲಿಂದ ಹೊರಟುಹೋಗಿ. ಯಾರಾದರೂ ನೋಡಿದರೆ ರಾದ್ಧಾಂತವಾದೀತು" ಎಂದಳು ಮೆಲ್ಲನೆ.

"ನಾನು ಮದ್ಯ ಸೇವಿಸಿ ಬಂದಿರುವೆನೆಂದು ನಿಮಗನಿಸಿದೆ. ಆದರೆ ಹಾಗೇನಿಲ್ಲ. ನನ್ನಂಥ ಒಳ್ಳೇ ನರ್ತಕನಾಗಬೇಕಾದರೆ ಮದ್ಯ ಸೇವಿಸುವುದು ಹೊಗೆಸೊಪ್ಪು ಸೇದುವುದು ದಿನವಿಡೀ ಜೂಜಾಡುವುದು ರಾತ್ರಿಯೆಲ್ಲ ಪ್ರೇಮವ್ಯವಹಾರ ಎಲ್ಲವನ್ನೂ ತ್ಯಜಿಸಬೇಕಾಗುತ್ತದೆ. ಅದನ್ನೇ ನಿಮಗೆ ತಿಳಿಹೇಳಬೇಕೆಂದಿದ್ದೆ".

"ದಯವಿಟ್ಟು ಹೊರಟು ಹೋಗಿ. ನಾನು ಮಲಗಿಕೊಳ್ಳಬೇಕು".

"ಸರಿ. ನನಗೆ ಪತ್ರ ಬರೆಯುವುದೆಂದರೆ ಬಲು ಬೇಸರ. ಆದರೆ ನಿಮಗೊಂದು ಪತ್ರ ಬರೆದು ನನ್ನ ಅಭಿಪ್ರಾಯವನ್ನೆಲ್ಲ ತಿಳಿಸುವೆ. ಆಮೇಲೆ ನಿಮಗೇ ಅರ್ಥವಾಗುವುದು" ಅವಳಿಗೆ ಒಮ್ಮೆಲೇ ಚೀರಿಕೊಳ್ಳಬೇಕೆನಿಸಿತು. ಆದರೂ ತಡೆದುಕೊಂಡು ಅವನನ್ನು ಅಲ್ಲಿಯೇ ಬಿಟ್ಟು ಮನೆಯೊಳಗೆ ಓಡಿಹೋದಳು.

ಮರುದಿನ ಸಾಯಂಕಾಲ ಆತನ ಪತ್ರ ಬಂದಿತು:

"ನಾನುನ್ನ ಕಲೆಯನ್ನು ಆರಾಧಿಸುತ್ತೇನೆ. ನನಗೆ ಶಾಂತಜೀವನ ಬೇಕು. ನನ್ನನ್ನು ಪ್ರೇಮಿಸುವ ಯುವತಿಯರನ್ನು ವಿವಾಹವಾದರೆ, ನನ್ನ ಗತಿ ಏನು? ಬರೀ ಭೋಜನಕೂಟಗಳು ಸಮಾರಂಭಗಳು ಸಮಾರಂಭಗಳು. ಸದಾಕಾಲ ಪ್ರೇಮಸಲ್ಲಾಪ. ಅದಕ್ಕೆ ನಾನು ನಿಮ್ಮನ್ನು ಮದುವೆ ಮಾಡಿಕೊಂಡುಬಿಟ್ಟರೆ ನನಗೆ ಅಂಥ ಹೆಣ್ಣುಗಳ ಕಾಟ ತಪ್ಪುತ್ತದೆ. ಈ ನಮ್ಮ ಮದುವೆ ವ್ಯಾವಹಾರಿಕ ಸಂಬಂಧ ಅಷ್ಟೇ. ನಿಮ್ಮ ಜೀವನ ಸಲೀಸಾಗಿ ಸಾಗುವಂತೆ ಒಳ್ಳೆ ಮಾಸಾಶನ ಕಳಿಸಿ ಕೊಡುತ್ತೇನೆ. ನನ್ನ ಕೋರಿಕೆಯನ್ನು ಮನ್ನಿಸಿ ಜವಾಬು ಕಳಿಸಿ ಸ್ವತಃ ಬಂದು ತಿಳಿಸಿದರೆ ಇನ್ನೂ ಉತ್ತಮ".

ಆ್ಯಲೀಸನ್‌ಳ ಪಿತ್ತ ನೆತ್ತಿಗೇರಿತು. ಇಂಥ ಅಸಂಬದ್ಧ ಏರ್ಪಾಟಿಗೆ ಒಬ್ಬ ಯುವತಿ ಒಪ್ಪುತ್ತಾಳೆಂದು ನಂಬಿದ ಗಂಡಸು ಇವನೆಂಥವನು ಹುಚ್ಚನೇ ಸರಿ. ಅತಿ ಪ್ರಶಂಸೆಯಿಂದ ತಲೆತಿರುಗಿದವನು. ತನ್ನ ಪ್ರಸ್ತಾಪದ ಉದ್ಧಟತನದ ಕಲ್ಪನೆ ಅವನಿಗೆ ಇದ್ದಂತೆಯೇ ಇಲ್ಲ! ಪತ್ರದ ಶೈಲಿಯಲ್ಲಿ ನಿರ್ಲಿಪ್ತತೆ!

ತಕ್ಷಣ ಅದಕ್ಕೆ ತನ್ನ ಅಭಿಪ್ರಾಯವನ್ನು ತಿಳಿಸಬೇಕೆಂದು ನಿರ್ಧರಿಸಿದಳು. ಆದರೆ ಸಿಟ್ಟಿನ ಭರದಿಂದ ಎಂದೂ ದುಡುಕಬಾರದು ಸರಿ. ನಾಳೆ ಬೆಳಗಿನ ವರೆಗೆ ಈ ವಿಚಿತ್ರ ಪ್ರಕರಣವನ್ನು ಮರೆತು ಬಿಡೋಣವೆಂದು ತನ್ನ ಕೋಣೆಗೆ ಮಲಗಲು ಹೋದಳು.

ಒಳಗೆ ಹೋದೊಡನೆ ಅವಳ ಎದೆ ಧಸ್ ಎಂದಿತು. ಅವಳ ಮಂಚದ ಪಕ್ಕಿರ ಅವಳನ್ನೇ ನಿರೀಕ್ಷಿಸುತ್ತ ನಿಂತಿದ್ದ ಬ್ರುನೋ. ಆತನ ಉನ್ಮತ ಮುಖ ಕಣ್ಣುಗಳನ್ನು ನೋಡಿ ಭಯಾಕ್ರಾಂತಳಾದಳು. ಬ್ರುನೋ ಹಾರಿ ಬಂದು ಅವಳ ಕೈಗಳನ್ನು ಹಿಡಿದುಕೊಂಡು ಗಟ್ಟಿಯಾಗಿ ಆಲಂಗಿಸಿ ಚುಂಬಿಸಲು ಪ್ರಯತ್ನಿಸಿದ ಆತನನ್ನು ದೂರ ಸರಿಸಲು ಎಷ್ಟು ಪ್ರಯತ್ನಿಸಿದರೂ ಅವಳಿಗೆ ಅಲುಗಾಡಲಿಕ್ಕಾಗಲಿಲ್ಲ. ಮುಂದೆ ನಡೆದ ಗುದ್ದಾಟದಲ್ಲಿ ಟೈರೆಟ್ಟಿ ದಂಪತಿಗಳು ಬಂದು ಬಾಗಿಲಲ್ಲಿ ನಿಂತಿದ್ದರ ಅರಿವಾಗಲಿಲ್ಲ "ಓಹೋ: ಹೀಗೋ" ಸಿನೋರಾ ಎದೆಮೇಲೆ ಕೈ ಕಟ್ಟಿಕೊಂಡು ಮುಂದೆ ಬಂದಳು. "ಅವಳೇ ನನ್ನ ಕರೆದಳು, ಮಾಯಗಾತಿ" ಎಂದು ಹೇಳಿದ ಬ್ರುನೋ. "ದುಷ್ಟ ಹುಡುಗಿ; ಅಯ್ಯೋ! ನನ್ನ ಪುಟ್ಟ ಬಾಲೆಯರನ್ನು ಎಂಥವಳ ಕೈಗೆ ಒಪ್ಪಿಸಿದೆ. ನಡೆ ಹೊರಗೆ. ನಡೆ, ಈಗಲೇ ಇಲ್ಲಿಂದ ಹೊರಟು ಹೋಗು. ಇನ್ನೊಂದು ಕ್ಷಣ ಕೂಡ ನೀನು ಈ ಮನೆಯಲ್ಲಿ ಇರಕೂಡದು. ಪಾಪಿ, ಚಾಂಡಾಲಿ. ಹೂಂ ತೊಲಗು, ನೀಚ ರಾಕ್ಷಸಿ". ಅವಳ ಧ್ವನಿ ತಾರಕಕ್ಕೆ ಏರಹತ್ತಿತು. ಬ್ರುನೋ

ಅವಳ ಮೇಲೆ ಪ್ರತೀಕಾರದ ದೀರ್ಘ ದೃಷ್ಟಿಯನ್ನು ಬೀರಿ ಬಾಗಿಲನ್ನು ಅಪ್ಪಳಿಸಿ ಹೋದ.

ಆ್ಯಲಿಸನ್‌ಳಿಗೆ ಮೈಯೆಲ್ಲ ಥರಥರನೇ ನಡುಗುತ್ತಿರುವುದರ ಅರಿವಾಯಿತು. ತಲೆ ಸಿಡಿಯುತ್ತಿತ್ತು. ತನ್ನ ಸಾಮಾನು ಸರಂಜಾಮೆಲ್ಲ ಕಟ್ಟಿಕೊಂಡು ಸದ್ಯ ಹೊರಟು ಹೋಗಬೇಕೇ? ಎಲ್ಲಿಗೆ ಹೋಗುವುದು? ಮುಂದೇನು ಮಾಡಬೇಕು? ಎರಡೂ ಕೈಗಳಲ್ಲಿ ಮುಖ ಮುಚ್ಚಿಕೊಂಡು ಸುಮ್ಮನೆ ಕುಳಿತಳು.

ಎಷ್ಟೋ ವೇಳೆಯ ನಂತರ ನಿಧಾನವಾಗಿ ಎದ್ದಳು. ಮೇಜಿನ ಮೇಲೆ ತಾನೇ ನಯವಾಗಿ ಮಡಿಸಿಟ್ಟಿದ್ದ ಪಾಸ್ಕಲೀನೋನ ಪತ್ರ ಆಕೆಯ ಕಣ್ಣಿಗೆ ಬಿತ್ತು.

ಪಾಸ್ಕಲೀನೋ ತನ್ನ ಕೋಣೆಯ ಎದುರಿಗಿದ್ದ ವಿಶಾಲವಾದ ವರಾಂಡದಲ್ಲಿ ಕುಳಿತು ಬೆಳಗಿನ ಉಪಾಹಾರವನ್ನು ಸೇವಿಸುತ್ತಲಿದ್ದ, ಬಂದು ನಿಂತ ಆ್ಯಲಿಸನ್‌ಳನ್ನು ನೋಡಿ ಅವನ ಮುಖ ಅರಳಿತು. "ತುಂಬ ಸಂತೋಷ. ನೀವು ಬರುವಿರೆಂದು ಆಶಿಸಿದ್ದೆ" ಎಂದು ನಸುನಕ್ಕ.

ಅವನ ಪತ್ರವನ್ನು ಮೇಜಿನ ಮೇಲೆ ಮುಂದಿಟ್ಟು, ಆ್ಯಲಿಸನ್ ಕೇಳಿದಳು.

"ಇದರ ಅರ್ಥ ನಿಜವೇ?"

"ನಿಜವಾಗದೆ ಮತ್ತೇತು? ಪತ್ರ ಬರೆಯುವುದು. ನನಗೆ ಬಲು ಕಷ್ಟದ ಕೆಲಸ. ಅದರ ಅರ್ಥ ನಿಜವಲ್ಲದಿದ್ದರೆ ಅದನ್ನೇಕೆ ನಾನು ಬರೆಯಬೇಕು? ನಿಮಗಿದು ಒಳ್ಳೆಯ ವಿಚಾರವೆಂದು ಅನಿಸುವುದಿಲ್ಲವೇ?" ಎಂದ ನಗುತ್ತ.

"ನಿನ್ನೆ ರಾತ್ರಿ ಇದು ಹುಚ್ಚು ವಿಚಾರವೆಂದು ತಿಳಿದಿದ್ದೆ. ಅನಂತರ ಏನೋ ಸಂಭವಿಸಿ ನನ್ನ ಮನಸ್ಸು ಬದಲಾಯಿತು. ಈಗ, ನೀವು ಹೇಳಿದಂತೆ ನಿಮ್ಮನ್ನು ಮದುವೆಯಾಗುತ್ತೇನೆ ಅಂದರೆ ವ್ಯಾವಹಾರಿಕ ಸಂಬಂಧ ಅಷ್ಟೇ ಮತ್ತೇನಿಲ್ಲ" ಎಂದಳು ಮೆಲ್ಲನೆ.

"ತುಂಬ ಧನ್ಯವಾದ. ನೀವು ನನಗೆ ಸಹಾಯ ಮಾಡುತ್ತಿರುವುದು ನನ್ನ ಅದೃಷ್ಟ. ನಿಮ್ಮಲ್ಲಿ ಕಾರ್ಯದಕ್ಷತೆ, ಸಕಲ ಯೋಗ್ಯತೆ ಕಂಡುಬರುತ್ತಿದೆ. ಸರಿ ಬನ್ನಿ" ಎಂದು ಎದ್ದು ನಿಂತ.

ಅವನ ಮುಂದಿನ ವಿಚಾರವೇನೆಂದು ಅವಳಿಗೆ ಅರ್ಥವಾಗುವಷ್ಟರಲ್ಲಿ ಅವಳ ಕೈ ಹಿಡಿದು ಕೊಂಡು ಹೊರಟ. ಕೆಳಗಿನ ಅಂತಸ್ತಿನಲ್ಲಿರುವ ವಿಶಾಲವಾದ ಹಜಾರಕ್ಕೆ ಇಳಿದುಬಂದರು. ಅಲ್ಲಿ ಅಪಾರ ಜನಜಂಗುಳಿ ನೆರೆದಿತ್ತು. ವಿವಿಧ ವರ್ಣಗಳ ರೇಶಿಮೆ ವಸ್ತ್ರ ರತ್ನಾಭರಣಗಳಿಂದ ಅಲಂಕೃತರಾದ ಸ್ತ್ರೀಯರು ಆರಾಮಾಸನಗಳಲ್ಲಿ ಕುಳಿತಿದ್ದರು. ಸೂಟುಬೂಟುಧಾರಿಗಳಾದ ಪುರುಷರು ಹರಟುತ್ತ ನಿಂತಿದ್ದರು. ಪತ್ರಿಕೆಗಳ ವರದಿಗಾರರು ಅತ್ತಿಂದಿತ್ತ ಓಡಾಡುತ್ತಿದ್ದರು ಹಜಾರದ ತುಂಬೆಲ್ಲ ಬೆಲೆಯುಳ್ಳ ಹೊಗೆಸೊಪ್ಪಿನ ವಾಸನೆಯೂ ಸುಗಂಧದ ಪರಿಮಳವೂ ಆವರಿಸಿತ್ತು.

ಅಲ್ಲಿಗೆ ಪ್ರವೇಶಿಸಿದೊಡನೆ ಆ್ಯಲಿಸನ್‌ಳಿಗೆ ದಿಗ್ಭ್ರಮೆಯಾಯಿತು. ಅವಳ ಕೈಹಿಡಿದುಕೊಂಡೆ ಮುಂದೆ ನಡೆದ ಪಾಸ್ಕಲೀನೋ ಚಪ್ಪಾಳೆ ತಟ್ಟಿ, ಗಟ್ಟಿಯಾಗಿ ಹೇಳಿದ, "ಮಹಿಳೆಯರೆ, ಮಹನೀಯರೆ, ಒಂದು ನಿಮಿಷ ನೀವು ನನ್ನತ್ತ ಗಮನಕೊಡಬಹುದೇ? ನನ್ನ ಭಾವೀ ಪತ್ನಿ ಆ್ಯಲಿಸನ್‌ಳನ್ನು ನಿಮಗೆಲ್ಲ ಪರಿಚಯಿಸಲು ಬಯಸುತ್ತೇನೆ" ಎಂದ ಹರ್ಷಾತಿರೇಕದಿಂದ. ಅವರ ಸುತ್ತಲೂ ವಿಪರೀತ ಗದ್ದಲ ನಡೆಯಿತು. ಗುಜುಗುಜು ಮಾತಿನ ಅಬ್ಬರ ಅಭಿನಂದನೆಗಳ ಸುರಿಮಳೆ ಆರಂಭವಾಯಿತು. ಹಿಂದುಗಡೆ ಎಲ್ಲೋ ಯಾರೋ ಮೂರ್ಛೆಹೋದರೆಂದೂ ಪಿಸುಮಾತು ಕೇಳಿಬಂದಿತು. ಆದರೂ ಎಲ್ಲರೂ ಸಹೃದಯತೆಯನ್ನು ತೋರಿದರು.

ಹಜಾರದಲ್ಲಿ ವಿವಾಹನಿಶ್ಚಯದ ಸಂಭ್ರಮ ನಡೆಯಿತು. ಪಾಸ್ಕಲೀನೊ ಎಲ್ಲರಿಗೂ ಸಿಹಿ ತಿಂಡಿ, ತಂಪು ಪಾನೀಯಗಳ ಆತಿಥ್ಯನೀಡಿದ. ಈ ಸಮಾರಂಭದಲ್ಲಿ ಆ್ಯಲಿಸನ್ ಸ್ವಪ್ನಲೋಕದಲ್ಲಿದ್ದವಳಂತೆ ಸುಮ್ಮನೆ ಕುಳಿತಿದ್ದಳು. ಈ ಆಕಸ್ಮಿಕದಿಂದ ಸಿನೋರಾ ಮತ್ತು ಆ ರಾಜಕುಮಾರಿಯರು ಏನು ಪ್ರತಿಕ್ರಿಯೆ ವ್ಯಕ್ತಪಡಿಸುವರೋ ಎಂದು ಚಿಂತಿಸಿದಳು.

ಅದೇ ಹೋಟೆಲಿನಲ್ಲಿ ಆ್ಯಲಿಸನ್‌ಳಿಗೂ ವಾಸಕ್ಕೆ ವ್ಯವಸ್ಥೆಯಾಯಿತು. ಅವಳ ಕೋಣೆಯೂ ಪಾಸ್ಕಲೀನೋನದಷ್ಟೇ ಭವ್ಯವಾಗಿತ್ತು. ಎಲ್ಲರೂ ಅವಳನ್ನು ಆದರಿಸುವವರೇ. ಅಲ್ಲಿದ್ದ ಪತ್ರಿಕಾಕರ್ತರು, ವರದಿಗಾರರು ಅವಳನ್ನು ಸುತ್ತುವರೆದು, ಅವಳ ಕುರಿತು ಪ್ರಶ್ನಿಸತೊಡಗಿದರು.



ಸುವಾಸಿತ ಹಾಗೂ ಸ್ವಾದಿಷ್ಟ
ಮುಖಶುದ್ಧಿಗಾಗಿ
CHAMAN
ಚಮನ್
ಚಮನ್ ಇದು ಅತ್ಯಂತ ಸ್ವಾದಿಷ್ಟ ಹಾಗೂ ರುಚಿಕರವಾದ ಚೂರ್ಣವಾಗಿದೆ. ಇದನ್ನು ಸೇವಿಸುವದರಿಂದ ಬಾಯಿಯು ಸುವಾಸಿತವಾಗುತ್ತದೆ.
ಚಮನದಲ್ಲಿ ಏನೆಲ್ಲ ಇದೆ?
ಈ ಚಮನದಲ್ಲಿ ಜೇಷ್ಠಮಧು, ಕೇಶರ, ಏಲಕ್ಕಿ, ಲವಂಗ, ಪತ್ರಿ, ಜಾಜಿಕಾಯಿ, ಬಡೆಸೋಪ್, ಮೆಂಥಾಲ್‌ಗಳಂಥ ಅನೇಕ ಬಗೆಯ ಸುಗಂಧಿತ ಹಾಗೂ ರುಚಿಕರ ವಸ್ತುಗಳು ಒಳಗೊಂಡಿರುವವು. ಅದಕ್ಕಂದೇ ಇದು ಚಿಕ್ಕಮಕ್ಕಳಿಂದ ವೃದ್ಧರವರಿಗೆ ಎಲ್ಲರಿಗೂ ಅಚ್ಚುಮೆಚ್ಚು.
ಸ್ಟಾರ್ ಕಂಪನಿ, ಬೆಳಗಾಂವ್
M. K. Publicity

ಆ್ಯಲಿಸನ್‌ಳಿಗೆ ಇದೆಲ್ಲ ಹೊಸ ಅನುಭವ. "ಅವರಿಗೆಲ್ಲ ನಾನೇನು ಹೇಳಲಿ? ಹೇಳಬೇಕಾದು ದೇನಿದೆ?" ಅಂದಳು. "ಇನ್ನು ಮೇಲೆ ಹೇಳುವಂತೆಯೇ ಆಗುತ್ತದೆ". ಪಾಸ್ಕಲೀನೋ ಮುಗುಳುನಗುತ್ತ ಹೇಳಿದ.

ಅವನಾದರೊ ಸಂಭ್ರಮದಲ್ಲೇ ಇದ್ದು ತಾನು ಪರಮಾನಂದವನ್ನು ಅನುಭವಿಸುವಂತಿದ್ದ. ಮಾರನೆಯ ದಿನವೇ ವಿವಾಹವಾಗಬೇಕೆಂದು ನಿರ್ಧರಿಸಿದ್ದ. ಆಡಂಬರದ ಶಾಸ್ತ್ರೋಕ್ತ ವಿವಾಹ ಬೇಡವೆಂದು ಅವನ ಅಭಿಪ್ರಾಯ. ಆ್ಯಲಿಸನ್‌ಳೂ ಇದಕ್ಕೆ ಒಪ್ಪಿದಳು. ಯಾಕೆಂದರೆ ಇದು ನಿಜವಾದ ವಿವಾಹ ಅಲ್ಲವಲ್ಲ. ಕೇವಲ ಅನುಕೂಲದ ವ್ಯಾವಹಾರಿಕ ಸಂಬಂಧ.

ಅಂದು ಬೆಳಿಗ್ಗೆ ಚರ್ಚಿನಲ್ಲಿ ಅವರ ಮದುವೆಯ ಶಾಸ್ತ್ರ ಮುಗಿಯಿತು. ಅನಂತರ ಹೋಟೆಲಿನಲ್ಲಿ ಅತಿಥಿಗಳ ಔತಣಕೂಟ. ಸಾಯಂಕಾಲ ಅವರು ಅಲ್ಲಿಂದ ಹೊರಡುವುದಿತ್ತು. ಮಧ್ಯಾಹ್ನ ನಾಲ್ಕು ಗಂಟೆಗೆ ಆ್ಯಲಿಸನ್ ಸ್ವಲ್ಪ ಸ್ವಲ್ಪ ವಿಶ್ರಾಂತಿಪಡೆಯಲು ತನ್ನ ಕೋಣೆಗೆ ಹೋದಳು. ಅಲ್ಲಿ ಆವರಿಸಿದ ಶಾಂತತೆ ಕಿಟಕಿಯಿಂದ ತೂರಿ ಬಂದ ತಂಪು ಗಾಳಿ ಹಾಯೆನಿಸಿತು. ಕಿಟಕಿಯ ಹತ್ತಿರ ಹೋಗಿ ಉದ್ಯಾನದಲ್ಲಿ ಇನ್ನೂ ನಗುತ್ತ ಹರಟುತ್ತ ನಿಂತಿರುವ ಅತಿಥಿಗಳನ್ನು ನೋಡಿದಳು. ಅದೆಲ್ಲವೂ ಒಂದು ಸ್ವಪ್ನದಂತೆ ಅನಿಸಿತು.

ಬಾಗಿಲು ಮುಂದೂಡಿ ಯಾರೋ ಒಳಗೆ ಬಂದ ಸದ್ದಾಯಿತು. ತಿರುಗಿ ನೋಡಿದಾಗ ರಾಜಕುಮಾರಿ ರೆನಾಟಾ ಮಂಚದಡಿಯಲ್ಲಿ ಕುಳಿತಿದ್ದಳು. ಮುಖ ಬಿಳಿಚಿಕೊಂಡು ರಕ್ತಹೀನವಾಗಿ ಕಾಣುತ್ತಿದ್ದ ಅವಳ ನೋಟದಲ್ಲಿ ಭಯಾನಕ ಕ್ರೋಧ ಮತ್ಸರ ಆವೇಶಗಳು ತುಂಬಿದ್ದವು.

"ಆಹಾ! ನೀನು ಬಲು ಜಾಣ್ಮೆಯಿಂದ ಗೆದ್ದುಕೊಂಡಿದ್ದೀಯಾ. ಯಾವ ಯೋಗ್ಯತೆಯೂ ಇಲ್ಲದ ಯಾವ ಸಿರಿವಂತಿಕೆಯೂ ಇಲ್ಲದ ಪ್ರಪಂಚವೂ ಗೊತ್ತಿಲ್ಲದ ನೀನು ಅದು ಹೇಗೆ ಈ ಕಾರ್ಯವನ್ನು ಸಾಧಿಸಿದೆ?" ಎಂದಳು ನಖಶಿಖಾಂತ ಉರಿಯುತ್ತ.

"ಸಂಶಯ ಪಡುವಂಥದೇನೂ ಇಲ್ಲ" ಎಂದಳು ಶಾಂತವಾಗಿ ಆ್ಯಲಿಸನ್.

"ಜಗತ್ತಿನ ಎಲ್ಲರನ್ನೂ ಬಿಟ್ಟು ಕೊನೆಗೆ ನೀನು ನಿನ್ನಂಥ ಯಕಃಶ್ಚಿತ ಹೆಣ್ಣು ಅವನನ್ನು ನನ್ನಿಂದ ಕಸಿದುಕೊಂಡೆಯಾ? ನೀಮ ಸರಳವಾಗಿ ಕಂಡರೂ ಕಪಟದಿಂದ ಲೆತ್ತವಾಡಿ ಅವನನ್ನು ಮರುಳು ಗೊಳಿಸಿದ್ದೀಯಾ". "ನಾನು ಯಾವ ಲೆತ್ತದಾಟವನ್ನೂ ಆಡಿಲ್ಲ". ಅಂತರಂಗದಲ್ಲಿ ಕೋಪ ಏರುತ್ತಲಿದ್ದರೂ ಆ್ಯಲಿಸನ್ ನಿಧಾನವಾಗಿ ನುಡಿದಳು.

"ಹಾಗಾದರೆ ಇದು ಪ್ರಥಮ ನೋಟದಲ್ಲಿಯೇ ಆದ ಪ್ರೇಮವೆನ್ನುವಿಯಾ?"

ರಾಜಕುಮಾರಿಯ ಧ್ವನಿಯಲ್ಲಿ ವ್ಯಂಗ್ಯವಿತ್ತು.

"ನಾನು ನಿಮಗೇನೂ ಹೇಳುವುದಿಲ್ಲ"

ರಾಜಕುಮಾರಿ ಅಲ್ಲಿಯೇ ಕುಳಿತು ಸಂಕುಚಿತ ದೃಷ್ಟಿಯಿಂದ ಅವಳನ್ನೇ ದಿಟ್ಟಿಸುತ್ತಿದ್ದಳು ಧ್ವೇಷವನ್ನು ಎಂದೂ ಅರಿಯದಲ್ಲಿ ಆ್ಯಲಿಸನ್‌ಳಿಗೆ ಭಯವಾಯಿತು.

"ಕೇಳಿಲ್ಲಿ ಏ ಹುಡುಗಿ, ಸದ್ಯ ನೀನು ಗೆದ್ದಿರುವೆಯಷ್ಟೆ. ಆದರೆ ಆತ ನನ್ನ ಸ್ವತ್ತು. ನನಗೇ ದಕ್ಕಬೇಕು. ನಿನ್ನ ನನ್ನ ಸಂಬಂದ ಇಲ್ಲಿಗೇ ಮುಗಿಯಲಿಲ್ಲ ತಿಳಿಯಿತೇ?" ಎಂದು ಅಬ್ಬರಿಸಿ ಹೊರಟು ಹೋದಳು.

ಆ್ಯಲಿಸನ್ ಸುಸ್ತಾಗಿ ಅಲ್ಲೇ ಕುಸಿದು ಬಿಟ್ಟಳು. ಕೆಲ ಹೊತ್ತಿನ ನಂತರ ಪಾಸ್ಕಲೀನೋ ಉಲ್ಲಾಸ ಭರಿತನಾಗಿ ಕೋಣೆಗೆ ಬಂದ ಅವನನ್ನು ನೋಡಿದವಳೇ ಆಕೆ ಕಣ್ಣೀರು ಸುರಿಸುತ್ತ ರಾಜಕುಮಾರಿ ಬಂದುಹೋಗಿ ಸಂಗತಿಯನ್ನು ಹೇಳಿ ಬಿಕ್ಕಳಿಸಿದಳು

ಕ್ಷಣಮಾತ್ರ ಆತನ ಮುಖ ವಿಹ್ವಲಗೊಂಡಿತು ಕೂಡಲೆ ಮಂದಸ್ಮಿತನಾಗಿ ತನ್ನ ಕರವಸ್ತ್ರದಿಂದ ಅವಳ ಕಣ್ಣೀರನ್ನು ಒರೆಸಿ "ರೆನಾಟಾ ಇಲ್ಲಿಗೆ ಬಂದಿದ್ದಾಳೆ? ತಾಪದಾಯಕ ಹೆಣ್ಣವಳು. ಹೋಗಲಿ, ಅವಳನ್ನು ಮರೆತು ಬಿಡು" ಎಂದು ಹೇಳಿದನಾದರೂ ಆ್ಯಲಿಸನ್‌ಳಿಗೆ ಅಷ್ಟು ಸುಲಭದ್ದಾರಲಿಲ್ಲ.

ಸಾಯಂಕಾಲ ಅವರು ಅಲ್ಲಿಂದ ಹೊರಟರು ಸರೋವರದಾಚೆಗಿನ ಬೆಟ್ಟಗಳಲ್ಲಿದ್ದ ಒಂದು ಚಿಕ್ಕ ವಸತಿಗೃಹದಲ್ಲಿ ಉಳಿಯಲು ಪಾಸ್ಕಲೀನೋ ಏರ್ಪಾಟು ಮಾಡಿದ್ದ. ಸರೋವರದ ದಂಡೆಯಲ್ಲಿ ಈ ನವದಂಪತಿಗಳಿಗೆ ಶುಬಕೋರಿ ಬೀಳ್ಕೊಡಲೆಂದು ತುಂಬಾ ಜನರು ನೆರೆದಿದ್ದರು. ಕೊನೆಯ

ಗಳಿಗೆಯಲ್ಲಿ ಆ ಗದ್ದಲದಿಂದ ರೆನಾಟಾ ಹೊರಬಂದು ಪಾಸ್ಕಲೀನೋನನ್ನು ಚುಂಬಿಸಿದಳು. ಕೊನೆಗೊಮ್ಮೆ ದೋಣಿ ಮುಂದೆ ಸಾಗಿತು. ಪಾಸ್ಕಲೀನೋ ತನ್ನ ಮುಖ ಒರೆಸಿಕೊಳ್ಳುತ್ತ "ಓಹ್ ಎಷ್ಟೊಂದು ಗಲಾಟೆ, ಎಷ್ಟೊಂದು ಗುಜುಗುಜು. ಇನ್ನು ನಿನ್ನೊಡನೆ ಮಧುಚಂದ್ರ ಶಾಂತವಾಗಿ ಸುಖಕರವಾಗಿ ಸಾಗುವುದು" ಎಂದು ಅವಳತ್ತ ನೋಡಿ ನಸುನಕ್ಕ.

ಸುಮಾರೆರಡು ಗಂಟೆಗಳ ನಂತರ ಅವರು ವಸತಿಗೃಹವನ್ನು ತಲುಪಿದರು. ಅದರ ಒಡತಿ ಅವರನ್ನು ಸಂತೋಷದಿಂದ ಸ್ವಾಗತಿಸಿದಳು. ಪಾಸ್ಕಲೀನೋಗೆ ಚಿಕ್ಕಂದಿನಿಂದಲೂ ಅವಳ ಪರಿಚಯ "ಆಂಟಿ ಮೇಬಲ್" ಎಂದಾತ ಅವಳನ್ನು ಕರೆಯುತ್ತಿದ್ದ. ಮಾತೃಸಮಾನಳಾದ ಮಧ್ಯವಯಸ್ಕ ಮಹಿಳೆ ಆಕೆ. ಅವಳ ಮುಖದ ಸೌಮ್ಯ ಪ್ರಸನ್ನತೆ ಹಿತಕರವೆನಿಸುತ್ತಿತ್ತು. ಅವಳಿಗೆ ವಂದಿಸಿ ಉಲ್ಲಾಸದಿಂದ ಕೇಳಿದ.

"ಆಂಟಿ ನನ್ನ ಬೆಳ್ಳಿ ಬಂಗಾರದ ವಧು ಹೇಗಿದ್ದಾಳೆ?"

"ಒಳ್ಳೆಯ ಆಯ್ಕೆ ಮಾಡಿದ್ದೀಯಾ. ಇಂಥವಳನ್ನು ಪಡೆದ ನೀನು ಪುಣ್ಯವಂತನಪ್ಪ. ಅವಳಿಗೆ ಯಥಾಯೋಗ್ಯನಾಗಿರು. ನೀವಿಬ್ಬರೂ ಸುಖವಾಗಿ ಬಾಳಿರಿ" ಎಂದು ಆಂಟಿ ಮೇಬಲ್ ಸಂತಸದಿಂದ ಹರಸಿದಳು.

ಮಹಡಿಯ ಮೇಲೆ ನವದಂಪತಿಗೆಂದು ಮೀಸಲಾಗಿಟ್ಟಿದ್ದ ಕೋಣೆಗಳು ಅಚ್ಚುಕಟ್ಟಾಗಿದ್ದವು. ಮುಂದಿನದು ದೊಡ್ಡ ಕೊಠಡಿ ಒಳಗಡೆಯಸಣ್ಣಕೋಣೆಯೂ ಸಜ್ಜುಗೊಂಡಿತ್ತು. ಹೊರಗಡೆಯ ವರಾಂಡದಲ್ಲಿ ನಿಂತು ಆ್ಯಲಿಸನ್ ಸುತ್ತೆಲ್ಲ ನೋಡಿದಳು. ದೂರದ ಬೆಟ್ಟದಲ್ಲಿ ಅಡಗಿದ ಮನೆಗಳ ದೀಪಗಳು ಸೆರೆಹಿಡಿದ ತಾರೆಗಳಂತೆ ಮಿನುಗುತ್ತಿದ್ದವು. ಸನಿಹದಲ್ಲಿ ಹಸುಗಳ, ಗಂಟೆಗಳ ನಿನಾದ ಕೇಳಿಸುತ್ತಿತ್ತು. ಇಲ್ಲಿಯ ವಾತಾವರಣ ತುಂಬ ಆಹ್ಲಾದಕರವಾಗಿತ್ತು. "ಆಹಾ ಇದು ನಿಜವಾದ ಮಧು ಚಂದ್ರವಾಗಿದ್ದರೆ!"

ಪಾಸ್ಕಲೀನೋ ಬಟ್ಟೆ ಬದಲಾಯಿಸಿ ಅವಳ ಪಕ್ಕದಲ್ಲಿ ಬಂದು ನಿಂತ "ಇನ್ನು ಊಟ ಮಾಡೋಣವೆ? ಆಂಟಿ ಹಬ್ಬದಡಿಗೆಯನ್ನೇ ತಯಾರಿಸಿರಬೇಕು. ಒಳ್ಳೆಯ ಊಟ ಸುಂದರ ಯುವತಿ, ಮೇಲೆ ಬೆಳದಿಂಗಳ ರಾತ್ರಿ. ಗಂಡನಿಗೆ ಇನ್ನೇನು ಬೇಕು?" ಎಂದ ನಗುತ್ತ.

ಬೋಜನವೇಳೆ ಆತ ತುಂಬಾ ಗೆಲುವಿನಿಂದಿದ್ದ. ಆಂಟಿ ಮೇಬಲಳ ಸುದ್ದಿ ಸಮಾಚಾರ ಹೇಳಿ ಹರಟುತ್ತಲಿದ್ದ. ಒಮ್ಮೆಲೇ ಅವನ ಮುಖದಲ್ಲಿ ಚಿಂತೆಯ ಗೆರೆ ಮೂಡಿತು. "ನಮ್ಮ ಮದುವೆಯ ಬಗ್ಗೆ ಅಂದರೆ ಅದರ ಅನುಕೂಲದ ಬಗ್ಗೆ ನೀನೇನೂ ಆಂಟಿಗೆ ಹೇಳಬೇಡ. ಅದೆಲ್ಲವನ್ನು ನಾನು ಅವಳಿಗೆ ಸರಿಯಾಗಿ ಹೇಳುತ್ತೇನೆ ಬಿಡು ಹೆಂಗಸರಿಗೆ ತಿಳಿಸಿ ಹೇಳುವುದು ನನಗಷ್ಟು ಕಠಿಣವೇನಲ್ಲ"

"ಹಾಗಾದರೆ ನನಗೊಂದು ವಿಷಯ ತಿಳಿಸಿಹೇಳಿ" ಆ್ಯಲಿಸನ್ ಧೈರ್ಯದಿಂದ ಕೇಳಿದಳು.

"ಈಗ, ನೀನು ಕಠಿಣ ಪ್ರಶ್ನೆಗಳನ್ನೇ ಕೇಳುತ್ತೀಯಾ" ಆಕೆಯ ಮುಖವನ್ನು ಸಂಶಯದಿಂದ ನೋಡುತ್ತಲೆಂದ.

"ಇಲ್ಲಿಲ್ಲ, ಒಂದೇ ಒಂದು ಸರಳ ಪ್ರಶ್ನೆ. ನಿಮ್ಮನ್ನು ಇಷ್ಟು ಪ್ರೇಮಿಸುವ ರೆನಾಟಾಳನ್ನು, ನೀವೇಗೆ ವಿವಾಹವಾಗಲಿಲ್ಲ? ಆಕೆ ಸುಂದರಿ, ಮೇಲಾಗಿ ಶ್ರೀಮಂತೆ. ನಿಮ್ಮದು ಮೂರ್ಖತನ ಎಂದು ನನಗನಿಸುತ್ತದೆ".

ಪಾಸ್ಕಲೀನೋ ಅವಳನ್ನೇ ದಿಟ್ಟಿಸುತ್ತ ನಿಧಾನವಾಗಿ ನುಡಿದ, "ರೆನಾಟಾಳನ್ನು ಮದುವೆಯಾಗಿದ್ದರೆ ಆಕೆ ಕಲೆಯನ್ನು ಕೊಂದುಹಾಕಿ ನನ್ನನ್ನು ಅಂಧಃಕಾರದಲ್ಲಿ ತಳ್ಳಿಬಿಡುತ್ತಿದ್ದಳು. ನಾನು ಸದಾ ಅವಳೊಡನೆ ಪ್ರೇಮಸಲ್ಲಾಪದಲ್ಲೇ ಕಾಲ ಕಳೆಯಬೇಕಾಗಿತ್ತು. ಅವಳು ರಾಜಕಾರಣದಲ್ಲಿಯೂ ಕೈ ಹಾಕುತ್ತಾಳೆ. ನನಗೋ ರಾಜಕಾರಣದಲ್ಲಿ ಆಸಕ್ತಿ ಇಲ್ಲ. ನಾನು ಕಲಾವಿದ. ಅವಳನ್ನು ಮದುವೆಯಾಗದೆ ಮೂರ್ಖತನ ಮಾಡಿಲ್ಲಬಿಡು. ನೀನು ಮಾತ್ರ ನಿನ್ನ ವಚನಕ್ಕೆ ಕಟ್ಟುಬಿದ್ದರಾಯಿತು. ನಾನೂ ನನ್ನ ವಚನಕ್ಕೆ ತಪ್ಪುವವನ"

"ಕೊಟ್ಟ ವಚನವನ್ನು ಸದಾ ಪಾಲಿಸುವ ಪ್ರಯತ್ನದಲ್ಲಿರುವಂಥವಳು, ನಾನು"

"ಹಾಗಾದರೆ ಇನ್ನು ಆಕೆಯ ಕುರಿತು ಪ್ರಶ್ನೆ ಕೇಳಬೇಡ. ರೆನಾಟಾಳ ಬಗ್ಗೆಯೂ ಚಿಂತಿಸಬೇಡ. ಅವಳಿಗೆ ಸಾಕಷ್ಟು ಜನ ಪ್ರೇಮಿಗಳಿದ್ದಾರೆ. ಅವರಲ್ಲಿ ಯಾರೊಬ್ಬರನ್ನಾದರೂ ಮದುವೆಯಾಗಿ ಸುಖವಾಗಿರುತ್ತಾಳೆ. ಸರಿ, ನಾನೀಗ ಮಲಗಿಕೊಳ್ಳುತ್ತೇನೆ. ಇಂದು ತುಂಬ ಆಯಾಸವಾಗಿದೆ"

ಎಂದು ಅವಳಿಗೆ ಶುಭರಾತ್ರಿ ಹೇಳಿ ಒಳಗಿನ ಚಿಕ್ಕ ಕೋಣೆಯಲ್ಲಿ ಹೋಗಿ ನಡುವಿನ ಬಾಗಿಲನ್ನು ಹಾಕಿಕೊಂಡ.

ಆ್ಯಲಿಸನ್ ಕೆಲಹೊತ್ತು ಅಲ್ಲಿಯೆ ಕುಳಿತು ಬೆಳದಿಂಗಳ ರಾತ್ರಿಯ ಸೊಬಗನ್ನು ಸವಿದಳು. ಎಲ್ಲೆಡೆಗೆ ತನುಮನ ತಣಿಸುವಂಥ ಶಾಂತಿ ಸೌಂದರ್ಯ ಆವರಿಸಿತ್ತು ಅನಂತರ ಅವಳು ದೊಡ್ಡ ಕೋಣೆಯಲ್ಲಿಯ ವಿಶಾಲವಾದ ಮಂಚದಲ್ಲಿ ಮೇಲೆ ಒರಗಿ ಇಂಥ ವಿಚಿತ್ರವಾದ ವಿವಾಹದ ರಾತ್ರಿಯನ್ನು ಯಾವ ಯುವತಿಯೂ ಅನುಭವಿಸಿರಲಿಕ್ಕಿಲ್ಲವೆಂದು ಅಂದುಕೊಂಡಳು.

3

ರಾಜಕುಮಾರಿ ರೆನಾಟಾ ಮರುದಿನ ಪ್ಯಾರಿಸ್ ತಲುಪಿದಳು. ಕಿರಿದಾದ ಬೀದಿಯ ಕೊನೆಯಲ್ಲಿರುವ ಸಣ್ಣ ಬಿಡಾರದ ಒಳಹೊಕ್ಕು ಶಿಥಿಲವಾದ ಮೆಟ್ಟಲುಗಳ ಮೇಲೆ ಮೆಲ್ಲನೆ ಹತ್ತಿ ಹೋಗಿ, ಕಡೆಯ ಕೋಣೆಯ ಬಾಗಿಲನ್ನು ತಟ್ಟಿದಳು.

ಬಾಗಿಲು ತುಸುವೆ ತೆರೆದು ಯುವಕನೊಬ್ಬ ತವಕದಿಂದ ಇಣುಕಿನೋಡಿದ. "ಹಲೊ ಗೋರ್ಡನ್" ಅಂದಳು ರೆನಾಟಾ. ಆತ ತೆಳ್ಳಗೆ ಎತ್ತರವಾಗಿದ್ದ. ಈ ಮೊದಲು ಒಳ್ಳೇ ರೂಪವಂತ ನಾಗಿರಬೇಕು. ಆಕೆಯನ್ನು ಕಂಡು ಆತನ ಮುಖ ಭಯಾಕ್ರಾಂತವಾಯಿತು. "ರೆನಾಟಾ;" ಅಂತಿಷ್ಟೆ ಉದ್ಗರಿಸಿದ. ಬಳಿಕ ಸಾವರಿಸಿಕೊಂಡು ಬಾಗಿಲು ತೆರೆದು ಅವಳನ್ನು ಒಳಗೆ ಬರಹೇಳಿದ.

ಕೋಣೆಯೊಳಗೆ ಹೊಕ್ಕು ಅವಳು ಸುತ್ತೆಲ್ಲ ಕಣ್ಣು ಹಾಯಿಸಿದಳು. ಎಲ್ಲವೂ ಅಸ್ತವ್ಯಸ್ತವಾಗಿತ್ತು. ಉತ್ತರದಿಕ್ಕಿನ ಕಡೆಯಿಂದ ಕಿಟಕಿಯ ಹತ್ತಿರ ಚಿತ್ರಾಧಾರದ ಮೇಲೆ ಅರ್ಧಮರ್ಧ ತೆಗೆದ ಚಿತ್ರವಿತ್ತು. ಅದನ್ನು ಅರೆತೆರೆದ ಕಣ್ಣುಗಳಿಂದ ನೋಡುತ್ತಾ ರೆನಾಟಾ ಹೇಳಿದಳು: "ಚನ್ನಾಗಿದೆ. ಗೋರ್ಡನ್, ನೀನು ಪ್ರಗತಿ ಸಾಧಿಸಿರುವಿ. ಒಂದಿಲ್ಲೊಂದು ದಿನ ಎಲ್ಲವೂ ಸರಿಹೋದರೆ ನಿನಗೆ ಯಶಸ್ಸು ಖಂಡಿತ. ಸಾಕಷ್ಟು ಹಣ ಗಳಿಸುವಿ".

ಆತ ಕಿಟಕಿಯ ಮುಂದೆ ಹೋಗಿ ನಿಂತ. ಬೆಂಕಿಪೊಟ್ಟಣದ ಮೇಲೆ ಕಡ್ಡಿ ಗೀರಿ ಸಿಗರೇಟು ಹೊತ್ತಿಸಿದ. ಅವಳ ಮುಖವನ್ನೇ ನೋಡುತ್ತಲೆಂದ "ನನಗೆ ಈ ವಿಷಯವನ್ನು ಹೇಳಲಿಕ್ಕೆ ನೀನು ಬಂದಿಲ್ಲವಷ್ಟೆ".

"ಇಲ್ಲ ಆ ಪತ್ರಗಳ ವಿಷಯ ಹೇಳಲು ಬಂದೆ".

ಅವನ ಮುಖ ಕೆಂಪೇರಿತು. ಕ್ಷಣ ಹೊತ್ತು ಅವನಿಗೆ ಮಾತೇ ಹೊರಡಲಿಲ್ಲ. ಅವನ ಅಂತರಂಗ ದಲ್ಲಿ ತೀವ್ರ ಆಸೆಯೊಂದು ಚದುರಿತ್ತು. "ಏನು, ಅವುಗಳ ವಿಷಯ?" ಎಂದು ಕೇಳಿದ.

"ಆ ಪತ್ರಗಳನ್ನು ನಿನಗೆ ವಾಪಸ್ಸು ಕೊಡಬೇಕೆಂದಿದ್ದೇನೆ. ಅಂದರೆ ನೀನು ಅವನ್ನೆಲ್ಲ ಸುಟ್ಟು ಹಾಕಿ ನಿರ್ನಾಮ ಮಾಡಬಹುದು" ಮೆಲ್ಲನೆ ಹೇಳಿದಳು.

ಅವನ ಭಯ ದೂರಾಗಿ ನಿಟ್ಟುಸಿರು ಬಿಡುವಂತಾಯಿತು. ಕಣ್ಣಲ್ಲಿ ಉಕ್ಕಿ ಬರುತ್ತಿರುವ ಪ್ರವಾಹವನ್ನು ತಡೆಗಟ್ಟಲು ಪ್ರಯತ್ನಿಸಿದ. ಮನಸ್ಸನ್ನು ಸದಾ ಕೊರೆಯುತ್ತಿರುವ ಭೀತಿಯಿಂದ ವಿಮುಕ್ತಿ. ಅವಳನ್ನು ನೋಡತ್ತಾ ಇದ್ದಂತೆ ಹಿಂದೊಂದು ಕಾಲದಲ್ಲಿ ಅವಳನ್ನು ಪ್ರೇಮಿಸಿದ್ದರ ನೆನಪಾಯಿತು. ತಾನು ನವತಾರುಣ್ಯದಲ್ಲಿದ್ದಾಗಿನ ದಿನಗಳವು. ತಲೆಯಲ್ಲಿ ಆದರ್ಶ ಭಾವನೆಗಳನ್ನು ತುಂಬಿಕೊಂಡು, ಯೌವನದ ಹುಚ್ಚು ಕಲ್ಪನೆಗಳಿಂದ ಹೊಸ ಜಗತ್ತನ್ನು ನಿರ್ಮಿಸಲು ಹೊರಬಿದ್ದ ಕಾಲವದು. ಆಗ ಅದು ತನಗೆ ಉದಾತ್ತ ಕಾರ್ಯವೆನಿಸಿತ್ತು. ಹೇಗೋ ರಾಜಕಾರಣಿಗಳ ಗುಂಪಿನಲ್ಲಿ ಸೇರಿಕೊಂಡು ಅನೇಕ ಕಷ್ಟ ಕ್ಲೇಶಗಳಲ್ಲಿ ಸಿಕ್ಕಿಕೊಂಡಿದ್ದ. ಅದಕ್ಕೂ ಇವಳೇ ಕಾರಣಳಾಗಿದ್ದಳು. ಆತ ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡ. ಅದೆಲ್ಲವನ್ನು ತಾನು ಸ್ಮರಿಸಬಾರದು. ಇಷ್ಟು ದಿನವೆಲ್ಲ ಅದನ್ನೇ ಮರೆಯಲು ಪ್ರಯತ್ನಿಸ್ತುದ್ದ.

"ಆ ಪತ್ರಗಳನ್ನು ನಿನಗೆ ವಾಪಸ್ಸು ಕೊಟ್ಟು, ಜೊತೆಗೆ ಐವತ್ತು ಸಾವಿರ ಪೌಂಡುಗಳನ್ನೂ ಕೊಡಬೇಕೆಂದಿದ್ದೇನೆ. ಅಂದರೆ ನೀನಿಲ್ಲಿ ತಲೆಮರೆಸಿಕೊಂಡಿರುವದರ ಬದಲಾಗಿ, ಇಂಗ್ಲೆಂಡ್ಗೆ ತಿರುಗಿ ಹೋಗಿ ಅಲ್ಲಿ ಜೀವಮಾನವೆಲ್ಲ ಚಿತ್ರ ಬರೆಯುತ್ತ ಸುಖವಾಗಿರಬಹುದು" ಎಂದಳು ಮೆಲ್ಲನೆ. ಅವನಿಗೆ ಆಶ್ಚರ್ಯವಾಯಿತು. ಮುಖ ಬಿಗುವಾಯಿತು. "ಇದರಲ್ಲಿ ಇನ್ನೇನೋ ಅರ್ಥ ಅಡಗಿದೆ, ಅಲ್ಲವೇ?" ಎಂದು ಕೇಳಿದ.

"ಇರಬಹುದು, ನೀನು ನನ್ನದೊಂದು ಕೆಲಸ ಮಾಡಬೇಕು" ಎಂದಳು.

ಆತ ಮುಖ ತಿರುಗಿಸಿದ. ತಲೆ ಸುತ್ತಿದಂತಾಗಿ, ಕಿಟಕಿಯ ತಂಪುಗಾಜಿನ ಮೇಲೆ ತಲೆಯಾನಿಸಿದ. "ಇನ್ನು ನಾನು ನಿನ್ನ ಯಾವ ಕೆಲಸವನ್ನೂ ಮಾಡುವುದಿಲ್ಲ. ದಯವಿಟ್ಟು ನನ್ನ ಬಿಟ್ಟುಬಿಡು. ದೇವರ ಸಾಕ್ಷಿಯಾಗಿ ನಿನ್ನನ್ನು ಬೇಡಿಕೊಳ್ಳುತ್ತೇನೆ". "ಇದು ರಾಜಕಾರಣ ಸಂಬಂಧಪಟ್ಟ ಕೆಲಸವಲ್ಲ ಗೊರ್ಡನ್ ಇದು ಬಹಳ ಸುಲಭದ್ದು. ಇಟಲಿಯಲ್ಲೊಬ್ಬ ಯುವತಿ ಇದ್ದಾಳೆ".

"ಹೂಂ ಮುಂದೆ?" ಎಂದು ಅವಳನ್ನೇ ನೋಡುತ್ತ ನಿಂತ.

"ಆಕೆಯನ್ನು ನನ್ನ ದಾರಿಯಿಂದ ನಿವಾರಿಸಬೇಕು".

"ನಾನು ಹೇಳಿಲ್ಲವೆ ರೆನಾಟಾ, ಇನ್ನು ನಾನು ನಿನ್ನ ಯಾವ ಕೆಲಸವನ್ನೂ ಮಾಡಲು ಶಕ್ಯವಿಲ್ಲ. ಆ ಪತ್ರಗಳನ್ನು ತೋರಿಸಿ, ನಾನೇ ಕೊಲೆಗಾರನೆಂದು ಹೇಳಿಬಿಡು, ಆಯಿತೆ? ನಿನ್ನ ಆದೇಶದ ಮೇರೆಗೆ ನಾನು ಕೊಲೆ ಮಾಡಿದೆನೆಂದು ಸ್ಪಷ್ಟಪಡಿಸುತ್ತೇನೆ, ಅಷ್ಟೆ" ಎಂದ ಸಿಟ್ಟಿನಿಂದ.

ರೆನಾಟಾ ನಿಷ್ಠುರಳಾಗಿ ಹೇಳಿದಳು "ಈಗ ನಾನು ಹೇಳಿದ ಕೆಲಸವನ್ನು ಮಾಡದಿದ್ದರೆ, ನಿನ್ನ ಅಪರಾಧವನ್ನೆಲ್ಲಾ ಬಹಿರಂಗಪಡಿಸುತ್ತೇನೆ. ನನ್ನ ಸಾಕ್ಷ್ಯದ ಮುಂದೆ ನಿನ್ನ ಹೇಳಿಕೆ ಯಾರಿಗೂ ನಂಬಿಕೆ ಆಗುವುದಿಲ್ಲ. ಗೊರ್ಡನ್, ಅಲ್ಲದೆ ಕೊಲೆಗಾರನನ್ನು ಇನ್ನೂ ಶೋಧಿಸುತ್ತಲೇ ಇದ್ದಾರೆ, ನೋಡು. ಮತ್ತೆ ನಿನಗೆ ಆಪತ್ತು".

ಇದು ಅವನಿಗೂ ಗೊತ್ತು: ಎಷ್ಟೋ ಸಲ ರಾತ್ರಿ ಮಲಗಿದ್ದಾಗ ಮೆಟ್ಟಿಲುಗಳ ಮೇಲೆ ಪೊಲೀಸರ ಹೆಜ್ಜೆ ಬಾಗಿಲು ಬಡಿದ ಶಬ್ದವನ್ನು ನಿರೀಕ್ಷಿಸುತ್ತಲೇ ಇದ್ದ. ಆದರೀಗ ಐದು ವರ್ಷ ಕಳೆದರೂ, ಅಂಥದೇನೂ ಸಂಭವಿಸಿದ್ದಿಲ್ಲ. ಇತ್ತೀಚೆಗೆ ಆತ ಅದೆಲ್ಲ ಪ್ರಕರಣ ಮರೆತುಹೋಗಿದೆಯೆಂದು ನಂಬಿ ನಿಶ್ಚಿಂತೆಯಿಂದಿರಲು ಪ್ರಯತ್ನಿಸಿದ್ದ. ಈಗ ಅವನಿಗೆ ತಾನು ಭ್ರಾಮಕಲೋಕದಲ್ಲಿದ್ದುದರ ಅರಿವಾಯಿತು.

ಆಕೆ ಅವನನ್ನೇ ದಿಟ್ಟಿಸುತ್ತ ಮುಂದುವರೆದಳು "ನೋಡು, ನೀನು ಅಲ್ಲಿಗೆ ಹೋಗಿ ಅವಳ ಭಾವಚಿತ್ರವನ್ನು ಬರೆಯಬಹುದು. ಅವಳು ಒಳ್ಳೆ ರೂಪವತಿ, ಆಂಗ್ಲ ಯುವತಿ, ಕೆನೆಬಣ್ಣದ ಮುಖದಲ್ಲಿ ತಿಳಿಗುಲಾಬಿ ಕೆನ್ನೆಗಳು. ಹೊಂಬಣ್ಣದ ಕೇಶರಾಶಿಯಲ್ಲಿ ಸೂರ್ಯಕಾಂತಿಯ ಹೊಳಪು. ಅವಳನ್ನು ಗುರುತಿಸುವುದು, ಗುರುತಿಸಿ ಮುಗಿಸಿಬಿಡುವುದು ನಿನಗೆ ಕಠಿಣವೇನಲ್ಲ".

ಆತನ ಕೈಯಲ್ಲಿಯ ಸಿಗರೇಟು ಆರಿಹೋಗಿತ್ತು. ಅದೇನೋ ಎಂಬಂತೆ ಅದನ್ನೇ ನೋಡುತ್ತಿದ್ದ. ಅವನ ಕಂಪಿಸುತ್ತಿದ್ದವು. ರೆನಾಟಾಳ ಧ್ವನಿ ಮತ್ತೆ ಕೇಳಿಸಿತು. "ಅಲ್ಲೊಂದು ಸರೋವರವಿದೆ. ಸಂಧ್ಯಾಸಮಯ ನೀವಿಬ್ಬರೂ ನಾವೆಯಲ್ಲಿ ವಿಹಾರಾರ್ಥ ಹೋಗಬಹುದು. ನೌಕಾಘಾತವಾಗ ಬಹುದು. ಕಾರು ಅಪಘಾತವೂ ಸಂಭವಿಸಬಹುದು. ಐವತ್ತು ಸಾವಿರ ಪೌಂಡುಗಳು ಮತ್ತು ಪತ್ರಗಳೆಲ್ಲ ವಾಪಸ್ಸು. ನಿನಗೆ ಜೀವನದಲ್ಲಿ ಇನ್ನು ಮುಂದೆ ಚಿಂತೆಯೇ ಇಲ್ಲ. ಸರಿಯಾಗಿ ಯೋಚಿಸಿ ನೋಡು".

"ಆ ಯುವತಿಯನ್ನು ನಿನ್ನ ದಾರಿಯಿಂದ ನಿವಾರಿಸಬೇಕೇಕೆ? ಅವಳಿಂದ ನಿನಗೇನು ಅಂಥ ಅಪಾಯ?" "ಅದೆಲ್ಲಾ ಕಾರಭಾರ ನಿನಗೆ ಬೇಡ. ಗೊರ್ಡನ್" ಎಂದು ತುಂಟಾಟಿಕೆಯ ನಗೆ ಬೀರಿ ಹೊರಟು ಹೋದಳು ರೆನಾಟಾ.

★ ● ●

ಮೂರೇ ದಿನಗಳ ಮಧುಚಂದ್ರದ ನಂತರ ಪಾಸ್ಕಲೀನೋ ತನ್ನ ನೃತ್ಯಪ್ರವಾಸಗಳಿಗೆಂದು ಹೊರಟು ಹೋದ. ಆದರೆ ಆ ಮೂರು ದಿನಗಳಲ್ಲಿ ಆ್ಯಲಿಸನ್‌ಳಿಗೆ ಕಲ್ಪನಾತೀತ ಸಂತೋಷ ಸಿಕ್ಕಿತ್ತು. ಅವಳ ಮೊದಲಿನ ಸಂಕೋಚವೆಲ್ಲ ಮಾಯವಾಗಿತ್ತು, ಪಾಸ್ಕಲೀನೋನೊಂದಿಗೆ ನಕ್ಕು ನಲಿದಾಡಿದಳು. ಅವನಾದರೋ ವಿನೋದ, ವಿಲಾಸಪ್ರಿಯ ಸಂಗಾತಿಯಾಗಿದ್ದ. ಇಬ್ಬರೂ ಕೂಡಿಕೊಂಡು ಸಾಯಂಕಾಲ ಸರೋವರದ ದಂಡೆಯಲ್ಲಿ ವಾಯು ವಿಹಾರ, ಬೆಟ್ಟಗಳ ಮೇಲೆ ವನ ಭೋಜನ ಎಂದೆಲ್ಲ ನೆಮ್ಮದಿಯಿಂದಿದ್ದರು. ಆತ ಹೋಗುವಾಗ ಅವಳನ್ನು ಆಲಿಂಗಿಸಿ ತಲೆ ನೇವರಿಸುತ್ತ ವಿಷಣ್ಣದನನಾಗಿ ವಿದಾಯ ಹೇಳಿದ. ಆ್ಯಲಿಸನ್‌ಳ ಕಣ್ಣುಗಳು ಹನಿಗೂಡಿದವು. ಆಂಟಿ

ಮೇಬಲಳಿಗೂ ಯಾವುದೇ ಸಂದೇಹ ಬಾರದಂತಿತ್ತು ಅವನ ಈ 'ಅಭಿನಯ'.

ಅನೇಕ ಊರುಗಳಲ್ಲಿ ಪಾಸ್ಕಲೀನೋ ಯಶಸ್ವಿ ನೃತ್ಯ ಕಾರ್ಯಕ್ರಮಗಳನ್ನು ನಡೆಸುತ್ತಲಿದ್ದನೆಂದು ವೃತ್ತಪತ್ರಿಕೆಗಳಲ್ಲಿ ಓದಿ ಆ್ಯಲಿಸನ್ ಆತನ ಸಮಾಚಾರವನ್ನು ತಿಳಿಯುತ್ತಿದ್ದಳು. ಎಷ್ಟೋ ತಿಂಗಳುಗಳು ಕಳೆದವು. ಕೊನೆಗೊಮ್ಮೆ ಮರುದಿನ ಬರುತ್ತೇನೆಂದು ಅವನಿಂದ ತಂತಿ ಬಂತು. ಅದು ಬೇಸಿಗೆಯ ಕಾಲ. ವಸತಿಗೃಹದಲ್ಲಿ ಎಲ್ಲ ಕೋಣೆಗಳು ಪ್ರವಾಸಿಗರಿಂದ ತುಂಬಿಬಿಟ್ಟಿದ್ದರಿಂದ, ಪಕ್ಕದಲ್ಲಿದ್ದ ಸಣ್ಣ ಔಟ್‌ಹೌಸನ್ನು ಆ್ಯಲಿಸನ್ ತಮಗಾಗಿ ಸಜ್ಜುಗೊಳಿಸಿದಳು.

ಪಾಸ್ಕಲೀನೋ ಬಂದು ತನ್ನ ಅಪರಿಮಿತ ಸಂತೋಷವನ್ನು ಪ್ರದರ್ಶಿಸಿದ. ತಮ್ಮ ಸ್ವಂತ ಮನೆಯಂತಾಗಿದ್ದ ಕೊಠಡಿಯನ್ನು ನೋಡಿ ಅತ್ಯಂತ ಹರ್ಷಭರಿತನಾದ. ಅಷ್ಟೆಲ್ಲ ಸಿದ್ಧತೆ ಮಾಡಿದ್ದಕ್ಕೆ ಪತ್ನಿಯನ್ನು ಕೊಂಡಾಡಿದ. ಆಂಟಿ ಮೇಬಲಳಿಗೆ ಧನ್ಯವಾದವನ್ನು ಹೇಳಿದ. ಮೇಬಲಳ ಮುಂದೆ ಪತಿಯ ಸಮರ್ಥ ನಟನೆ ಸಾಗಿತು. ಆದರೆ ಅವರು ಹೋದ ನಂತರ, ಬಾಗಿಲು ಹಾಕಿಕೊಂಡು ಆರಾಮಾಸನದ ಮೇಲೆ ಬಿದ್ದುಕೊಂಡು "ಓಹ್, ನನಗೆಷ್ಟು ಆಯಾಸವಾಗಿದೆ; ಇಲ್ಲಿ ನನಗೆ ಸ್ವಲ್ಪ ವಿರಾಮ ಸಿಗುವುದು" ಎಂದ. ಆ್ಯಲಿಸನ್‌ಗೆ ತನ್ನ ಹತ್ತಿರ ಕೂಡಲು ಹೇಳಿ, ಅವಳಿಗೆ ತನ್ನ ಪ್ರವಾಸಗಳ ನೃತ್ಯಕಾರ್ಯಕ್ರಮಗಳ ಕುರಿತು ವಿವರಿಸಿದ. ಅನಂತರ ಮುಗುಳ್ನಗುತ್ತ, "ನಾನು ರೆನಾಟಾಳನ್ನು ಕಂಡಿರುವೆನೋ ಹೇಗೆ ಎಂದು ನಿನಗೆ ಚಿಂತೆ ಅಲ್ಲವೇ? ಹೌದು, ಕಂಡಿದ್ದೇನೆ. ನಾನು ಹೋದಲ್ಲೆಲ್ಲಾ ಆಕೆ ಹಿಂಬಾಲಿಸುತ್ತಾಳೆ. ಆದರೆ ಈಗ ನಾನು ವಿವಾಹಿತ, ಎಂದು ಅವಳನ್ನು ಅಟ್ಟಿಬಿಡುತ್ತೇನೆ" ಎಂದ.

"ಹಾಗಾದರೆ ನಿನ್ನ ನಾಟಕ ಯಶಸ್ವಿಯಾಗಿದೆ?"

"ಓಹೋ, ತುಂಬ ಯಶಸ್ವಿಯಾಗಿದೆ. ಮತ್ತೆ ನೀನು ಇಲ್ಲಿ ಸುಖವಾಗಿದ್ದೀಯಾ?" ಎಂದು ಕೇಳಿ ಆಕಳಿಸಿ ಆಕೆ ಉತ್ತರಿಸುವಷ್ಟರಲ್ಲಿಯೇ ಆತ ನಿದ್ರೆಹೋದ. ಯಾವುದೋ ಅವ್ಯಕ್ತ ಕಾರಣದಿಂದ ಅವಳ ಕಣ್ಣಂಚಿನಲ್ಲಿ ನೀರೂರಿತು.

ಈ ಸಲವೂ ಇಲ್ಲಿ ಮೂರು ದಿನದ ವಾಸ್ತವ್ಯವೇ. ಅನಂತರ ಪಾಸ್ಕಲೀನೋ ಪರದೇಶಕ್ಕೆ ತೆರಳುವವನಿದ್ದ. ಅಮೇರಿಕದಲ್ಲಿ ಎರಡು ತಿಂಗಳು ಪ್ರವಾಸ; ಅನೇಕ ಪಟ್ಟಣಗಳಲ್ಲಿ ಆತನ ನೃತ್ಯ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಕೊನೆಯ ದಿನ ಸಾಯಂಕಾಲ ಅವರಿಬ್ಬರೂ ವಾಯುವಿಹಾರದಿಂದ ಮರಳಿದಾಗ, ಆಂಟಿ ಮೇಬಲ್ ಕೈಯಲ್ಲಿ ಪತ್ರವೊಂದನ್ನು ಹಿಡಿದುಕೊಂಡಿದ್ದಳು. "ನಿಮಗೆ ಗೊರ್ಡನ್ ಚಿಲ್ಡರ್ಸ್ ಎಂಬ ಚಿತ್ರಕಾರನ ಪರಿಚಯವಿದೆಯೇ?" ಎಂದಾಕೆ ಕೇಳಿದಳು.

ಅವರಿಬ್ಬರಿಗೂ ಪರಿಚಯವಿರಲಿಲ್ಲ.

"ಇದೇನು ವಿಚಿತ್ರ ಅಂತ. ಅವನು ಅಕಸ್ಮಾತ್ ನನಗೆ ಬರೆದಿದ್ದಾನೆ. ಪ್ಯಾರಿಸ್‌ನಿಂದ ಇಲ್ಲಿಗೆ ಬಂದು ವರ್ಣಚಿತ್ರಗಳನ್ನು ಬರೆಯುತ್ತಾನಂತೆ. ನಮ್ಮಲ್ಲಿ ವಸತಿಗೊಂದು ಕೋಣೆ ಬೇಕಂತೆ. ಇಲ್ಲಿಯ ವಿಳಾಸ ಅವನಿಗೆ ಹೇಗೆ ಸಿಕ್ಕಿತೋ" ಎಂದು ಆಂಟಿ ಮೇಬಲ ಆಶ್ಚರ್ಯಪಟ್ಟಳು.

ಮರುದಿನ ಬೆಳಗ್ಗೆ ಆ್ಯಲಿಸನ್ ಏಳುವಷ್ಟರಲ್ಲಿಯೇ ಪಾಸ್ಕಲೀನೋ ತನ್ನ ಬ್ಯಾಗಿನೊಂದಿಗೆ ಹೊರಟು ಹೋಗಿದ್ದ. ಅನಂತರ ಆಕೆ ತನ್ನ ಸರಂಜಾಮನ್ನೆಲ್ಲ ಮತ್ತೆ ವಸತಿ ಗೃಹದಲ್ಲಿನ ತನ್ನ ಮೊದಲಿನ ಕೊಠಡಿಗೆ ವರ್ಗಾಯಿಸಿದಳು. ಹೊರಗಿನ ಚಿಕ್ಕ ಔಟ್‌ಹೌಸ್‌ನಲ್ಲಿಯೇ ಆ ಚಿತ್ರಕಾರ ವಾಸವಾಗಿರಲಿ, ಒಳಗೆಲ್ಲಾ ಅವನ ಬಣ್ಣದ ಗಲೀಜು ಬೇಡ ಎಂಬುದು ಆಂಟಿ ಮೇಬಲಳ ವಿಚಾರ.

ವಿದೇಶಕ್ಕೆಂದು ಹೋದವನು ಒಂದೇ ವಾರದ ನಂತರ ಪಾಸ್ಕಲೀನೋ ವಾಪಸ್ಸಾದದ್ದು ನೋಡಿ ಆ್ಯಲೀಸನ್‌ಳಿಗೆ ಆಶ್ಚರ್ಯವಾಯಿತು. "ನಮ್ಮ ತಂಡದಲ್ಲಿ ಒಬ್ಬ ಮಂಕುದಿಣ್ಣೆಗೆ ಸರಿಯಾದ ಪಾಸ್‌ಪೋರ್ಟ್ ಸಿಕ್ಕಿಲ್ಲ. ಅದಕ್ಕೆ ಎಲ್ಲರೂ ಎರಡು ದಿನ ತಡೆಯಬೇಕು, ನಾನು ಮನೆಗೆ ಬಂದುಬಿಟ್ಟೆ" ಎಂದ.

ಆ ಎರಡೂ ದಿನ ಪಾಸ್ಕಲೀನೋ ಚಿಂತಾಕುಲನಾಗಿ, ವಿಷಣ್ಣವದನನಾಗಿದ್ದ. ಅವನ ಪರಿವಾರ

ದಲ್ಲಿ ನಿರಂತರ ಕಲಹಗಳು, ಕ್ಷುದ್ರ ಮತ್ಸರಗಳು ನಡೆದೇ ಇರುತ್ತಿದ್ದವೆಂದು ಅವಳಿಗೆ ಗೊತ್ತು. ಆದರೆ ಸಾಮಾನ್ಯವಾಗಿ ಅಂಥದರಿಂದ ಅವನಿಗೆ ಎಳ್ಳಷ್ಟೂ ಬಾಧೆಯಾಗುತ್ತಿರಲಿಲ್ಲ. ಅವನಿಗೇನು ತೊಂದರೆ ಎಂದು ಆಕೆ ಮೆಲ್ಲನೆ ಕೇಳಿದಾಗ "ಎಲ್ಲವೂ ತೊಂದರೆಯೇ" ಎಂದು ರೇಗಿದ.

"ನನಗೆ ಹೇಳಬಹುದಲ್ಲವೆ?" "ಇಲ್ಲ ನನ್ನ ಮೂರ್ಖತನವನ್ನು ನಾನೇ ಸಹಿಸಬೇಕು. ನನಗೆ ಯಾರೂ ನೆರವಾಗಲು ಸಾಧ್ಯವಿಲ್ಲ"

"ಆದರೆ...."

"ಓಹ್, ಈ ಹೆಂಗಸರು; ಛಿ, ಇವರಿಂದ ಪಾರಾಗುವುದೇ ಕಠಿಣ. ನಾನು ಶಾಂತಿಗಾಗಿ ಮದುವೆ ಯಾದೆ. ಆದರೂ ನನಗೆ ಯಾತನೆ ತಪ್ಪಲಿಲ್ಲ".

ಅವಳ ಮನಸ್ಸು ನೊಂದಿತು. ಇದೆಲ್ಲ ರೆನಾಟಾಳ ಕುತಂತ್ರವಿರಬೇಕೆಂದು ಕೊಂಡಳು. "ನನ್ನದೇ ತಪ್ಪಾಗಿದೆ. ನೀನು ಸ್ವತಂತ್ರನಾಗಿ ಬೇರೊಂದು ಮದುವೆಯಾಗಬೇಕೆಂದಿದ್ದರೆ ಅದಕ್ಕೆ ನಾನೇನೂ ಅಡ್ಡಿಪಡಿಸುವುದಿಲ್ಲ".

ಅವಳ ಮುಖವನ್ನೇ ದಿಟ್ಟಿಸಿ ನೋಡಿದ ಪಾಸ್ಕಲೀನೋ ಅನಂತರ, "ಆ್ಯಲಿಸನ್, ನನ್ನ ಕೋಪವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಡ. ನೀನು ಜಗಳವಾಡಬಾರದು; ಹಾಗೇನಾದರೂ ಆದರೆ ನಮ್ಮ ಗುಟ್ಟೆಲ್ಲ ರಟ್ಟಾಗಿ ಹೋಗಿ ಪರಿಸ್ಥಿತಿ ಕಠಿಣವಾಗಿಬಿಡುತ್ತದೆ" ಎಂದ ಮೃದುವಾಗಿ.

ಅಂದು ರಾತ್ರಿ ಹೊರಡುವಾಗ, ಪಾಸ್ಕಲೀನೋ ತುಂಬಾ ವೇಳೆ ಅವಳ ತಲೆ ಮುಖ ನೇವರಿಸುತ್ತಲಿದ್ದ. ಕೊನೆಗೊಮ್ಮೆ ಅವಳನ್ನು ಗಾಢವಾಗಿ ಆಲಿಂಗಿಸಿ ಹೊರಟು ಹೋದ. ಆ್ಯಲಿಸನ್‌ಳ ಕಣ್ಣೀರು ಉಕ್ಕಿಬಂದವು. ಇದೇ ಅಂತಿಮ ವಿದಾಯವೇನೋ ಎಂದು ಅವಳಿಗೆನ್ನಿಸಿತು.

ಆಂಟಿ ಮೇಬಲ್ ಸಹ ಕಣ್ಣೊರೆಸಿಕೊಳ್ಳುತ್ತ "ಪಾಪ, ಪಾಸ್ಕಲೀನೋ ಕಲೆಗಾಗಿ ಪ್ರೇಮದ ಬೆಲೆ ತೆರಬೇಕು" ಎಂದು ನಿಟ್ಟುಸಿರೆಳೆದಳು.

ಗೊರ್ಡನ್ ಚಿಲ್ಡರ್ಸ್ ವಸತಿಗೃಹದ ಮೆಟ್ಟಲುಗಳ ಮೇಲೆ ನಿಂತು ಸುತ್ತ ಮುತ್ತ



ನೋಡುತ್ತಲಿದ್ದ. ಆ್ಯಲಿಸನ್ ಹೊರಗೆ ಬಂದಾಗ, ಆತ ಯಾರಿರಬಹುದೆಂದು ಯೋಚಿಸಿದಳು. ಬಳಿಕ ಆ ಚಿತ್ರಕಾರನ ನೆನಪಾಗಿ ದೃಢಪಡಿಸಿಕೊಂಡು ಚಿಕ್ಕ ಔಟ್‌ಹೌಸಿಗೆ ಅವನನ್ನು ಕರೆದು ಕೊಂಡು ಹೋದಳು.

ಆತ ತೆಳ್ಳಗೆ ಎತ್ತರವಾಗಿದ್ದ. ತುಸು ಬಾಗಿ ನಡೆಯುತ್ತಿದ್ದ. ಒಂದು ಕಾಲು ಊನವಾಗಿದ್ದಂತೆ ನಡೆಯುವಾಗ ಸ್ವಲ್ಪ ಕುಂಟುತ್ತಿದ್ದ. ಆತ ಧರಿಸಿದ ಕೋಟು ಇನ್ನಾರಿಗೋ ಹೊಲಿಸಿದ ಹಾಗೆ ಬಹಳ ಸಡಿಲವಾಗಿತ್ತು. ಬಾಯಿಯಲ್ಲಿ ಸಿಗರೇಟಿತ್ತು. ಅವನ ಮುಖಭಾವದಲ್ಲಿ ಸೌಮ್ಯ ಸಭ್ಯ ಕಳೆ ಇತ್ತು. ಆದರೆ ಇಷ್ಟೇಕೆ ಸಂಕೋಚವೊ ಏತಕ್ಕೆ ಸಂಶಯವೊ ಎಂದು ಆ್ಯಲಿಸನ್‌ಳಿಗೆ ಅರ್ಥವಾಗಲಿಲ್ಲ. ತನ್ನನ್ನು ನೋಡಿದ ಕೂಡಲೆ ಆತ ಬೆದರಿಕೊಂಡಂತೆ ಕಾಣುತ್ತಿದ್ದುದು ಅವಳಿಗೆ ವಿಚಿತ್ರ ವೆನ್ನಿಸಿತ್ತು.

ಒಂದೆರಡು ದಿನಗಳಾದ ಬಳಿಕ, ಅವನ ಇಂಗಿಹೋದ ಮುಖವು ಸುಧಾರಿಸಿತು. ಆದರೆ ಸೌಖ್ಯವಿದ್ದರೂ ಅವನಲ್ಲಿ ಸಂತೋಷದ ಸುಳಿವೇ ಇರಲಿಲ್ಲ. ದಿನವಿಡೀ ತನ್ನ ಕೋಣೆಯಲ್ಲಿಯೇ ಇರುತ್ತಿದ್ದ. ಸದಾ ಚಿತ್ರಗಳನ್ನೇ ಬರೆಯುತ್ತಾನೇನೋ ಅಂದುಕೊಂಡಳು ಆ್ಯಲಿಸನ್. ಆದರೆ ಒಂದು ದಿನ ಕಿಟಕಿಯಿಂದ ನೋಡಿದಾಗ ಅವನ ಚಿತ್ರಧಾರದ ಮೇಲಿನ ಕ್ಯಾನ್ವಾಸು ಬರಿದಾಗಿಯೇ ಇದ್ದುದು ಕಂಡಿತು.

ಕ್ರಮೇಣ ಗೊರ್ಡನ್ ಚಿಲ್ಡರ್ಸ್‌ನ ಸಂಕೋಚವು ಮಾಯವಾಗತೊಡಗಿತು. ಮಧ್ಯಾಹ್ನದ ವೇಳೆ ಊಟ ಮೇಬಲ ವಿಶ್ರಮಿಸುತ್ತಿದ್ದಾಗಲೂ ಆ್ಯಲಿಸನ್ ವರಾಂಡದಲ್ಲಿ ಕಸೂತಿ ಹಾಕುತ್ತ ಕುಳಿತಿರುವಾಗಲೂ ಅವನೂ ಅಲ್ಲಿಗೆ ಬಂದು ಮಾತನಾಡುತ್ತ ಕುಳಿತುಕೊಳ್ಳುತ್ತಿದ್ದ.

ಇಂಗ್ಲೆಂಡಿನಲ್ಲಿ, ಆತ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದನಂತೆ. "ಆದರೆ ನಾನು ದುಷ್ಟಜನರೊಳಗೆ ಸಿಕ್ಕುಬಿದ್ದೆ" ಎಂದು ಹೇಳುತ್ತಿದ್ದಾಗ ಅವನ ಮುಖ ಥಟ್ಟನೆ ಕೆರಳಿದಂತಾಗಿ ವ್ಯಥೆಯಿಂದ ವಿಕೃತವಾಯಿತು. ಯಾವುದೋ ಅನಿಷ್ಟ ಪ್ರಸಂಗದ ನೆನಪಾದವನಂತೆ ಸುಮ್ಮನಾಗಿಬಿಟ್ಟ.

"ಹೂಂ, ಆಮೇಲೆ?" ಮೆಲ್ಲನೆ ಕೇಳಿದಳು ಆ್ಯಲಿಸನ್.

"ಆಮೇಲೆ ಓದುವ ವಿಚಾರವೇ ಇರಲಿಲ್ಲ. ನಾನು ಪ್ಯಾರಿಸ್ಸಿಗೆ ಹೋಗಿ, ಚಿತ್ರಕಲೆಯಲ್ಲಿ ಮಗ್ನನಾಗಿಬಿಟ್ಟೆ. ನನ್ನ ಭೀಕರವಾದ ಭೂತಕಾಲವನ್ನು ಮರೆಯಲು ಪ್ರಯತ್ನಿಸುತ್ತಲಿದ್ದೆ" ಅವನ ಮುಖದಲ್ಲಿ ಮತ್ತೆ ಮುಗುಡದ ಲಕ್ಷಣ ಕಂಡಿತು.

ಆ್ಯಲೀಸನ್ ವಿಷಯಾಂತರ ಮಾಡಿದಳು "ಇಲ್ಲಿ ನಿಮ್ಮ ಚಿತ್ರಕಲೆಯು ಸರಾಗವಾಗಿ ಸಾಗಿದಂತೆ ಕಾಣುವದಿಲ್ಲವಲ್ಲ?" ಇದೇ ಅವನ ಮನೋದ್ವೇಗಕ್ಕೆ ಕಾರಣವಿರಬೇಕು. ಈ ಕಲಾವಿದರಿಗೆ ಕೆಲವೊಮ್ಮೆ ಸ್ಫೂರ್ತಿಬಾರದೆ ಇದ್ದ ಬರಡು ಕ್ಷಣಗಳಲ್ಲಿ ಅತೀವ ವೇದನೆಯಾಗುವುದೆಂದು ಅವಳಿಗೆ ಗೊತ್ತು. "ನಾನು ಕಾಯುತ್ತಿದ್ದೇನೆ" ಎಂದ. ಅದಕ್ಕೆ ಮುಖ ಮತ್ತೆ ಕಳವಳಗೊಂಡಿತು.

"ಏತಕ್ಕಾಗಿ?"

"ನಿಮ್ಮನ್ನು ಕೇಳಲು ಸಾಕಷ್ಟು ಧೈರ್ಯಕ್ಕಾಗಿ" ಅವನ ಧ್ವನಿ ಗಡುಸಾಗಿತ್ತು.

"ನಿಮ್ಮ ಭಾವಚಿತ್ರವನ್ನು ಬರೆಯಬೇಕೆನ್ನುತ್ತೇನೆ. ಅದಕ್ಕೆ ನೀವು ಒಪ್ಪಿ ನನಗೆ ರೂಪದರ್ಶಿಯಾಗುವಿರಾ?"

"ಆದರೆ ಅದಕ್ಕೆ ತುಂಬ ವೇಳೆ ಹಿಡಿಯುವುದಿಲ್ಲವೆ? ಇಲ್ಲಿ ನನಗೆ ಕೆಲಸಗಳಲ್ಲಿ ಬಿಡುವೇ ಸಿಗಲಿಕ್ಕಿಲ್ಲ".

"ನಾನೇನೂ ನಿಮಗೆ ದಿನವೂ ಕೊಂದರೆ ಕೊಡುವುದಿಲ್ಲ, ವಾರದಲ್ಲಿ ಎರಡು, ಮೂರು ಸಲವಾದರೆ ಸಾಕು, ನನಗೇನೂ ಅವಸರವಿಲ್ಲ, ಇಲ್ಲಿಂದ ಹೊರಟು ಹೋಗಲು ಏನೂ ಅವಸರವಿಲ್ಲ" ಎಂದು ಅವಳ ಮುಖ ನೋಡದೆಯೇ ಹೇಳಿದ.

ಶರದೃತು ಅದೇ ಪ್ರಾರಂಭವಾಗಿತ್ತು. ಕೆಳಗಡೆ ಪಟ್ಟಣದಲ್ಲಿ ಯಾವುದೋ ಮುಷ್ಕರದ ಗಲಭೆ ನಡೆದಿತ್ತು, ಅಂಗಡಿಗಳ ಮೇಲೆ ದಾಳಿ, ಕಲ್ಲೆಸೆತ, ಲೂಟಿ ಎಲ್ಲ ರಭಸದಿಂದ ಮುಂದುವರೆದಿತ್ತು.

ಪೊಲೀಸರು ದಂಗೆಕೋರರ ಮೇಲೆ ಲಾಠಿಪ್ರಹಾರ ಮಾಡಿ ಬಂದೂಕು ಹಾರಿಸುತ್ತಿದ್ದಾರೆಂಬ ವಾರ್ತೆ ಕೇಳಿಬಂತು.

ಇತ್ತ ಬೆಟ್ಟಗಳ ಮೇಲೆ ಅದಾವುದರ ಗುರುತೂ ಇರಲಿಲ್ಲ. ಗೋರ್ಡನ್ ತನ್ನ ಕೋಣೆಯಲ್ಲಿ ಆ್ಯಲಿಸನ್‌ಳ ಭಾವಚಿತ್ರವನ್ನು ಬರೆಯುತ್ತಲಿದ್ದ. ವಾರದಲ್ಲಿ ಎರಡು ಮೂರು ದಿನ ಆಕೆ ಅದಕ್ಕೆ ರೂಪದರ್ಶಿನಿಯಾಗಿ ಕುಳಿತು ಕೊಳ್ಳುತ್ತಿದ್ದಳು. ಆತ ಚಿತ್ರ ಬರೆಯುವಾಗ ಬೇರೆ ವ್ಯಕ್ತಿಯಾಗಿಯೇ ಕಾಣಿಸುತ್ತಿದ್ದ. ಅವನ ಮುಖದಲ್ಲಿಯ ಬಿಗವು, ಭಯಗಳೆಲ್ಲ ಮಾಯವಾಗಿಬಿಡುತ್ತಿದ್ದವು. ಅಲ್ಲಿ ಕುಳಿತುಕೊಳ್ಳುವುದರಿಂದ ಎಷ್ಟು ಶಾಂತಿ ಎಂಥ ಸುಖ! ಅವರಿಬ್ಬರಲ್ಲಿ ಈಗ ಸಾಕಷ್ಟು ಆತ್ಮೀಯತೆ ಬೆಳೆದಿತ್ತು. "ಚಿತ್ರಕಾರನೊಂದಿಗೆ ಜಾಗರೂಕವಾಗಿರು ಆ್ಯಲಿಸನ್; ಆ ಯುವಕ ನಿನ್ನಲ್ಲಿ ಹೆಚ್ಚಿನ ಆಸ್ಥೆ ವಹಿಸುತ್ತಿದ್ದಾನೆನಿಸುತ್ತದೆ" ಎಂದೊಮ್ಮೆ ಆಂಟಿ ಮೇಬಲ ಎಚ್ಚರಿಸಿದಳು.

ಗೋರ್ಡನ್ ತನ್ನನ್ನು ಪ್ರೀತಿಸುತ್ತಿದ್ದಾನೆಯೆ? ಆ್ಯಲಿಸನ್ ಯೋಚಿಸಿದಳು. ರಾತ್ರಿಯೆಲ್ಲಾ ನಿದ್ದೆಗೆಟ್ಟು ಕೋಣೆಯಲ್ಲಿ ಶತಪಥ ಹಾಕುತ್ತ ತನ್ನ ಕುರಿತೇ ಚಿಂತಿಸುತ್ತಿದ್ದಾನೆಯೆ? ಆತ ತನ್ನನ್ನು ಪ್ರೇಮಿಸಿದರೆ ಏನಾಯಿತು? ಪಾಸ್ಕಲೀನೋಗೆ ಅದರ ಪರಿವೆ ಇಲ್ಲವಲ್ಲ.

ಆ ಭಾವಚಿತ್ರವನ್ನು ಬರೆಯುವುದು ಎಂದೋ ಮುಗಿದಿದ್ದರೂ ಅದರಲ್ಲಿ ಕೊನೆಯ ತಿದ್ದುಪಡಿ ಮಾಡುವುದನ್ನು ವಿಳಂಬ ಮಾಡಿ, ತಾವು ಕೂಡಿರುವ ಮಧ್ಯಾಹ್ನಗಳ ಮುಕ್ತಾಯವನ್ನು ಮುಂದೂಡುತ್ತಿದ್ದಾನೆ ಎಂದು ಅವಳಿಗೆ ಖಚಿತವಾಗಿತ್ತು. ಕೊನೆಗೆ ಅದು ಪೂರ್ತಿ ಮುಗಿದ ದಿನ, ಅವನ ಮುಖ ಇಳಿದು ಹೋಗಿ, ಕಣ್ಣಲ್ಲಿ ಮತ್ತೆ ಭೀತಿ, ನಿರಾಸೆಯ ಕುರುಹು ಮರಳಿತು.

ಭಾವಚಿತ್ರ ಬರೆದು ಮುಗಿಸುವವರೆಗೂ ಯಾರಿಗೂ ಅದನ್ನು ನೋಡಲು ಅಪ್ಪಣೆ ಇರಲಿಲ್ಲ. ಅದನ್ನು ಕಂಡು," ಓಹ್, ಎಷ್ಟು ಸುಂದರವಾಗಿದೆ" ಎಂದು ಆಂಟಿ ಮೇಬಲ ಆತ್ಯಾಶ್ಚರ್ಯದಿಂದ ಉದ್ಗರಿಸಿದರು. ಈ ಚಿತ್ರಾಕಾರನ ಕುಂಚದಿಂದ ಇಂಥ ಕಲಾಕೃತಿಯನ್ನು ಅವರು ನಿರೀಕ್ಷಿಸಿರಲಿಲ್ಲ.

ಆ್ಯಲಿಸನ್‌ಳ ಭಾವಚಿತ್ರ ನಿಜಕ್ಕೂ ಅದ್ಭುತವಾಗಿತ್ತು. ಕಿಟಕಿಯ ಕಮಾನಿನ ಕೆಳಗೆ ಶುಭ್ರನೀಲಿ



ಆಗಸದ ಹಿನ್ನೆಲೆಯಲ್ಲಿ ನವವಧು ಕಂಗೊಳಿಸುತ್ತಿದ್ದಳು. ಕೆನೆ ಬಣ್ಣದ ಮುಖದಲ್ಲಿ ತಿಳಿಗುಲಾಬಿ ಕೆನ್ನೆಗಳು, ಹೊಂಬಣ್ಣದ ಕೇಶರಾಶಿಯಲ್ಲಿ ಸೂರ್ಯಕಾಂತಿಯ ಹೊಳಪು ಹೊರಸೂಸುತ್ತಿತ್ತು. ಭಾವಚಿತ್ರದಲ್ಲಿ ಅಪ್ಪಟ ಜೀವಕಳೆ ತುಂಬಿತ್ತು. "ಇದರ ಬೆಲೆ ಎಷ್ಟು? ನಾನೇ ಕೊಳ್ಳುತ್ತೇನೆ?" ಎಂದಳು ಆಂಟಿ ಮೇಬಲ. ಆತ ಮುಖ ಹೊರಳಿಸಿ ಹೇಳಿದ "ಅದು ಮಾರಾಟಕ್ಕಲ್ಲ, ನಾನೇ ಇಟ್ಟುಕೊಳ್ಳುವೆ".

ಅನಂತರ ಆಂಟಿ ಮೇಬಲ ಆ್ಯಲಿಸನ್‌ಗೆ ಅಂದರು. "ಇದಕ್ಕೆಲ್ಲ ಪಾಸ್ಕಲೀನೋ ಏನೆನ್ನುತ್ತಾನೋ! ಯಾವನೋ ಒಬ್ಬ ಬಂದು ತನ್ನ ಪತ್ನಿಯ ಭಾವಚಿತ್ರ ಬರೆದು, ಅದನ್ನು ತೆಗೆದುಕೊಂಡೂ, ಹೋಗುವದು ಅವನಿಗೆ ಸರಿಬರಲಿಕ್ಕಿಲ್ಲ. ನೀನು ಅವನಿಗೆ ತಿಳಿಸಿ ಹೇಳಬೇಕು".

ಆಗ ಆ್ಯಲಿಸನ್‌ಳ ಹೃದಯದಲ್ಲಿ ದುಃಖದ ಕಟ್ಟೆ ಒಡೆದು ಕಣ್ಣೀರ ಕೋಡಿ ಹರಿಯಿತು. ಕಂಪಿಸುತ್ತಿರುವ ಕಂಠದಿಂದ "ಇಲ್ಲ ಆಂಟಿ, ನಾನು ನಿಮಗೇ ತಿಳಿಸಿ ಹೇಳುತ್ತೇನೆ" ಎಂದು ಅವಳ ಭುಜದ ಮೇಲೆ ತಲೆಯಿರಿಸಿ ಬಿಕ್ಕಿ ಬಿಕ್ಕಿ ಅಳುತ್ತ, ತನ್ನ ವಿಚಿತ್ರ ವಿವಾಹದ ವೃತ್ತಾಂತವನ್ನು ಹೇಳಿದಳು. ಅವಳ ದಾರುಣ ಕಥೆಯನ್ನು ಕೇಳಿ ಅಂಟಿ ಮೇಬಲಳೂ ಖಿನ್ನಳಾಗಿದ್ದಳು. "ನಿನ್ನಂಥ ವಿವೇಕಿಯಾದವಳು ಈ ಹುಚ್ಚು ಯೋಜನೆಗೆ ಹೇಗೆ ಒಪ್ಪಿದೆ? ಹೀಗೇಕೆ ಮಾಡಿದೆ ನೀನು?"

"ಟ್ರೆರೆಟ್ಟಿ ನಿವಾಸವನ್ನು ಬೆಳಗಾಗುವುದರೊಳಗೆ ಬಿಡಬೇಕಾದ ಸಮಸ್ಯೆ ಬಂದೊದಗಿದಾಗ, ನನಗೆ ಎಲ್ಲಿ ಹೋಗಲಿಕ್ಕೂ ದಿಕ್ಕಿರಲಿಲ್ಲ. ಆಗ ಪಾಸ್ಕಲೀನೋನ ಏರ್ಪಾಡು ನನಗೊಂದು ಉದ್ಯೋಗವೆಂದು ಒಪ್ಪಿದೆ. ಅದು ಅಷ್ಟು ಅಸಮಂಜಸವೆಂದು ತೋರಲಿಲ್ಲ. ದಿನಗಳೆದಂತೆ ನಾನು ಆತನನ್ನು ಪ್ರೀತಿಸಹತ್ತಿದೆ. ಮುಂದೆ ಎಲ್ಲವೂ ಸರಿಯಾಗಿ ಕೊನೆಗೊಳ್ಳಬಹು ದೆಂದು ಅನ್ನಿಸಿತು. ಆದರೀಗ ನಮ್ಮಿಬ್ಬರ ದಾರಿ ಬೇರೆಯಾಗುವಂತೆ ಕಾಣುತ್ತದೆ".

"ಈ ಸಲ ಆತ ಬರಲಿ, ನಾನೇ ವಿಚಾರಿಸುತ್ತೇನೆ" ಆಂಟಿ ಆಶ್ವಾಸನವಿತ್ತರು.

"ಇನ್ನು ತಿರುಗಿ ಬರಲಾರರೇ" ಎಂದು ಆ್ಯಲಿಸನ್ ಬಿಕ್ಕಳಿಸಿದಳು.

ಅಂದು ಗೊರ್ಡನ್‌ನ ವಾಸ್ತವ್ಯದ ಕೊನೆಯ ದಿನ. ಆತ ಮತ್ತೆ ಕಳವಳಗೊಂಡಿದ್ದ. ಮುಖ ತೀರಾ ಕಳೆಗುಂದಿತ್ತು.

ಅದೇ ಮಧ್ಯಾಹ್ನ ಆ್ಯಲಿಸನ್‌ಳಿಗೆ ಕೆಳಗಡೆ ಪಟ್ಟಣಕ್ಕೆ ಹೋಗುವ ಕೆಲಸವಿತ್ತು. ಮುಷ್ಕರದ ಗಲಭೆ ಶಾಂತವಾಗಿ, ಡಕಾಯಿತರ ಮುಖಂಡ ಪರಾರಿಯಾಗಿ ಬೆಟ್ಟಗಳಲ್ಲಿ ಎಲ್ಲೋ ಅಡಗಿಕೊಂಡಿದ್ದಾನೆಂಬ ಸುದ್ದಿಯನ್ನು ಕೇಳಿದ್ದರೂ, ಆಂಟಿ ಮೇಬಲ್ ಭಯಪಟ್ಟು ಅವಳ ಸಂಗಡ ಗೊರ್ಡನ್‌ನೂ ಹೋದರೆ ಒಳಿತೆಂದು ಸೂಚಿಸಿದಳು.

ಒಂದು ಅಂಗಡಿಯಲ್ಲಿ ಆ್ಯಲಿಸನ್‌ಳ ಸ್ನೇಹಿತೆ ಭೆಟ್ಟಿಯಾದಳು. "ಚೆನ್ನಾಗಿದ್ದೀಯಾ ಆ್ಯಲಿಸನ್?" ಎಂದು ಗೊರ್ಡನ್‌ನತ್ತ ಕುತೂಹಲದಿಂದ ನೋಡುತ್ತ ಕೇಳಿದಳಾಕೆ. "ನಿನ್ನ ಬಗ್ಗೆ ನನಗೆಷ್ಟು ಚಿಂತೆ, ಗೊತ್ತೆ? ಇಲ್ಲಿ ಸಿನೋರಾ ನಿನ್ನ ಕುರಿತು ಏನೇನೋ ಸುದ್ದಿಗಳನ್ನು ಹಬ್ಬಿಸಿಬಿಟ್ಟಿದ್ದಾರೆ. ನೀನು ಮತ್ತು ಪಾಸ್ಕಲೀನೋ ಈಗಾಗಲೇ ವಿವಾಹ ವಿಚ್ಛೇದ ಮಾಡಿಕೊಂಡು, ಅವನು ರಾಜಕುಮಾರಿಯನ್ನು ಮರು ಮದುವೆಯಾಗಿದ್ದಾನೆ ಮುಂತಾಗಿ, ಹೇಳಿಕೊಂಡು ತಿರುಗಾಡುತ್ತಿದ್ದಾಳೆ. ಇದೆಲ್ಲ ನಿಜವಲ್ಲ ತಾನೆ?"

"ನಿಜ ಆಗಲೂ ಬಹುದು" ಎಂದ ಆ್ಯಲಿಸನ್‌ಳ ಧ್ವನಿಯಲ್ಲಿ ವಿಷಾದವಿತ್ತು.

ಬೀದಿಗೆ ಬಂದ ಬಳಿಕ ಗೊರ್ಡನ್ ಉತ್ಸಾಹದಿಂದ ಆ್ಯಲಿಸನ್‌ಳನ್ನು ನೋಡಿದ "ನಿಮ್ಮ ಪತಿಯ ಬಗ್ಗೆ ನಿಮ್ಮ ಸ್ನೇಹಿತೆ ಅಂದದ್ದೆಲ್ಲ ನಿಜವೇ? ಕ್ಷಮಿಸಿ, ಆದರೆ ನನಗೆ ನಿಮ್ಮ ಸಂಭಾಷಣೆ ಕೇಳದಿರುವುದು ಸಾಧ್ಯವಾಗಲಿಲ್ಲ. ಹೌದು, ನಿಮ್ಮ ಜೀವನದಲ್ಲಿ ಏನೋ ತೊಡಕಿದೆಯೆಂದು ನಾನು ಬಲ್ಲೆ. ಆದರೆ ಇಷ್ಟೆಲ್ಲ ತಿಳಿದಿರಲಿಲ್ಲ".

"ಅದರ ಬಗ್ಗೆ ನನಗೆ ಮಾತಾಡಲು ಇಷ್ಟವಿಲ್ಲ".

"ಆದರೆ ನನಗೆ ಮಾತಾಡಬೇಕಾಗಿದೆ. ಆ್ಯಲಿಸನ್, ನಾನು ನಿನ್ನ ಪ್ರೀತಿಸುತ್ತೇನೆ. ನನ್ನ ಜೀವದ

ಪರಿವೆಯಿಲ್ಲದೆ ನಿನ್ನ ಪ್ರೇಮಿಸುತ್ತೇನೆ. ಈಗ ನನ್ನ ಜತೆ ಬಂದುಬಿಡು. ನಾವಿಬ್ಬರೂ ಇಲ್ಲಿಂದ ದೂರ ಬಹುದೂರ ಹೋಗಿ ಹೊಸಬಾಳನ್ನು ಆರಂಭಿಸೋಣ".

"ಇಲ್ಲ ಗೊರ್ಡನ್ ಅದು ಸರಿ ಆದುದಲ್ಲ"

"ಸದ್ಯ ನೀನು ನನ್ನ ಪ್ರೀತಿಸದಿದ್ದರೂ ಪರವಾಗಿಲ್ಲ. ನಾನು ನಿನ್ನನ್ನು ಆದರದಿಂದ ಹಿತದಿಂದ ನೋಡಿಕೊಳ್ಳುವೆ. ಇದೊಂದು ನನಗೆ ಜೀವನದ ಅವಕಾಶ".

ಬೆಟ್ಟದಡಿಯಲ್ಲಿ ತುಸು ತಡೆದು ಅಲ್ಲಿಯೇ ಅಡ್ಡಬಿದ್ದ ಮರದ ಮೋಟಿನ ಮೇಲೆ ಕುಳಿತರು. "ಆ್ಯಲಿಸನ್, ನೀನು ನನ್ನ ಬೇಡಿಕೆಯನ್ನು ಮನ್ನಿಸುವಿಯಾ?" ಮತ್ತೆ ಕೇಳಿದ ಗೊರ್ಡನ್. "ಬೇಡ ಗೊರ್ಡನ್, ಅದು ನನ್ನಿಂದ ಸಾಧ್ಯವಿಲ್ಲ"

"ಓಹ್... ನಾನು ನಿನಗೆ ಹೇಗೆ ಹೇಳಲಿ? ಇಲ್ಲಿಗೆ ನಾನೊಂದು ಉದ್ದೇಶದಿಂದ ಬಂದೆ. ಆದರೆ ಅದನ್ನು ಈಡೇರಿಸಲಾರೆ. ನಿನ್ನ ಭೇಟಿಯಾದದ್ದು ನನ್ನ ಕತ್ತಲು ಕವಿದ ಬಾಳ ಬಂಧನದಲ್ಲಿ ಒಂದು ಬೆಳಕಿಂಡಿ ತೆರೆದಂತಾಯಿತು. ಒಮ್ಮೆಲೆ ನನ್ನಲ್ಲೊಂದು ಆಶಾಕಿರಣ ಮೂಡಿತು. ಆದರೆ ಈಗ ನೀನು ನಿರಾಕರಿಸಿಬಿಟ್ಟರೆ ನನ್ನ ಕಥ ಮುಗಿದಂತೆಯೇ. ಇದೇ ನನ್ನ ಕೊನೆ. ನನಗೆ ಬೇರೆ ಮಾರ್ಗವೇ ಇಲ್ಲ".

ಆ್ಯಲಿಸನ್ ಆತನನ್ನು ಕರುಣೆಯಿಂದ ನೋಡಿದಳು. "ಇದೆಲ್ಲವನ್ನು ನೀನು ನಾಟಕೀಯವಾಗಿ ಹೇಳುತ್ತಿಲ್ಲವಷ್ಟೆ? ನಿನ್ನ ಕಥೆ ಮುಗಿಯಿತೆಂದು ತಿಳಿದುಕೊಳ್ಳುವುದು ಹುಚ್ಚುತನ. ನಿನಗೆ ಚಿತ್ರಕಲೆಯಲ್ಲಿ ಹೇಗೂ ಉಜ್ವಲ ಭವಿಷ್ಯವೇ ಕಾದಿದೆಯಲ್ಲ"

"ನಿನಗೆ ಗೊತ್ತಿಲ್ಲ ಆ್ಯಲಿಸನ್ ನಿನಗದು ಅರ್ಥವೂ ಆಗುವುದಿಲ್ಲ. ಇಲ್ಲಿಗೆ ನಾನು ಬಂದ ಕಾರ್ಯದ ಉದ್ದೇಶ ನನ್ನ ಪ್ರಾಣಕ್ಕೆ ಸಮ. ನಿನ್ನ ಪ್ರೇಮಪಾಶದಲ್ಲಿ ಸಿಕ್ಕುಬಿದ್ದು ಅದನ್ನು ಈಡೇರಿಸಲು ಅಸಮರ್ಥನಾದೆ. ಈಗ ನನಗೆ ಸಾವು ಖಂಡಿತ. ಸದ್ಯ ನಾವಿಬ್ಬರೂ ಯಾರಿಗೂ ಗೊತ್ತಾಗದಂತೆ ದೂರ ಹೋಗಿಬಿಟ್ಟರೆ, ನನ್ನ ಉದ್ದೇಶ ಸಾಧಿಸುವುದು. ದಯವಿಟ್ಟು ವಿಚಾರ ಮಾಡು. ನನ್ನ ಕೋರಿಕೆಯನ್ನು ನಿರಾಕರಿಸಬೇಡ."

ಅವನ ಅಸಂಬದ್ಧ ಪ್ರಲಾಪ ಅವಳಿಗೆ ಅರ್ಥವೇ ಆಗಲಿಲ್ಲ. ಮಗುವನ್ನು ಸಮಾಧಾನಪಡಿಸುವಂತೆ ಹೇಳಿದಳು. "ನೋಡು ನೀನು ಹೀಗೆಲ್ಲ ಮನಸ್ಸಿಗೆ ಹಚ್ಚಿಕೊಳ್ಳಬಾರದು. ಮುಂದೊಂದು ದಿನ ನೀನು ಪ್ರಸಿದ್ಧನಾಗುತ್ತಿ. ಆಗ ಇದನ್ನೆಲ್ಲ ನೆನಪಿಕೊಂಡು ನಿನಗೇ ನಗೆ ಬರುತ್ತದೆ. ಆಗ ನಿನ್ನ ಪಾಲಿಗೆ ನಾನು ಬರೀ ಇಟಲಿಯಲ್ಲಿ ಭೇಟಿಯಾದ ಹುಡುಗಿಯಾಗಿ ಬಿಡುವೆ ಅಷ್ಟೇ ಅಲ್ಲವೆ?"

ಆತ ನಗಲು ಯತ್ನಿಸಿದ. ಆದರೆ ಕಣ್ಣುಗಳು ಹನಿಗೂಡಿದವು. ಅವನ ಮುಖದಲ್ಲಿಯ ಅಪಾರ ದುಃಖವನ್ನು ನೋಡಿ ಅವಳಿಗೆ ಆಶ್ಚರ್ಯವೂ, ಕನಿಕರವೂ ಅನಿಸಿತು.

ಅವರು ಮನೆಗೆ ಮರಳಿದಾಗ ಸೂರ್ಯಾಸ್ತವಾಗಿ ತೋಟದಲ್ಲೆಲ್ಲಾ ಮಬ್ಬುಗತ್ತಲೆ ಆವರಿಸುತ್ತಲಿತ್ತು. ಗೊರ್ಡನ್ ತನ್ನ ಕೊಠಡಿಯೊಳಗೆ ಹೋದ ಮೇಲೆ, ಆ್ಯಲಿಸನ್ ಒಬ್ಬಳೇ ಹೂದೋಟದಲ್ಲಿ ಹಾಯ್ದು ವಸತಿಗೃಹದೆಡೆ ನಡೆದು ಬರುತ್ತಿದ್ದಳು.

ಒಮ್ಮೆಲೆ ಕತ್ತಲೆಯ ನೆರಳಿನಿಂದ ಯಾವನೋ ಅಪರಿಚಿತ ಅವಳೆದುರು ಬಂದ. ಅವಳ ದಾರಿಯನ್ನು ಅಡ್ಡಗಟ್ಟಿದ. ಅವನ ಕೆದರಿದ ಕೂದಲು, ಹರಕು ಚಿಂದಿಯಾದ ಬಟ್ಟೆ, ಕೈಯಲ್ಲಿದ್ದ ಬಂದೂಕು ನೋಡಿ ಅವಳಿಗೆ ಭಯವಾಯಿತು.

"ದುಡ್ಡು, ಅನ್ನ ಕೊಡು" ಅಂದ ಆತ ಕರ್ಕಶ ಧ್ವನಿಯಿಂದ. ಬೆಟ್ಟಗಳಲ್ಲಿ ಸೇರಿಕೊಂಡ ಮುಷ್ಕರದ ಮುಖಂಡ ಈಗ ಇಲ್ಲಿಗೆ ಬಂದಿದ್ದಾನೆಂದು ಅವಳಿಗನಿಸಿತು. ಅವನು ತನಗೆ ತೀರ ಸಮೀಪ ಬರುತ್ತಿರುವುದನ್ನು ಗಮನಿಸಿ ಅವಳು ಗಾಬರಿಪಟ್ಟು "ಅಯ್ಯೋ ಕಾಪಾಡಿ, ಗೊರ್ಡನ್... ಕಾಪಾಡಿ" ಎಂದು ಚೀರಿಕೊಂಡಳು.

ಆ ದುಷ್ಟ ದರಿದ್ರ ಅವಳ ಮೇಲೆಯೇ ಏರಿ ಬರುತ್ತಿದ್ದ. ಆಕೆ ಹಿಂದೆ ಹಿಂದಕ್ಕೆ ಸರಿಯುತ್ತಿದ್ದಳು. ಅಷ್ಟರಲ್ಲಿ ಸಿಡಿಮದ್ದಿನ ಭಾರಿ ಶಬ್ದವಾಯಿತು. ಗೊರ್ಡನ್‌ನ ಪಿಸ್ತೂಲಿನಿಂದ ಮಿಂಚಿನಂತೆ ಹಾರಿ ಬಂದ ಗುಂಡು ಆ ದಂಗೆಖೋರನನ್ನು ಕೆಡವಿತು. ಇನ್ನೂ ಥರಥರನೆ ನಡುಗುತ್ತಿದ್ದ ಆ್ಯಲಿಸನ್

ಗೊರ್ಡನ್‌ನತ್ತ ಕೃತಜ್ಞತೆಯಿಂದ ನೋಡಿದಳು.

ಅನಂತರ ಅವರು ಊಟ ಮಾಡುತ್ತಿರುವಾಗ ಆ್ಯಲಿಸನ್ ಕೇಳಿದಳು "ಗೊರ್ಡನ್ ನಿನ್ನ ಹತ್ತಿರ ಪಿಸ್ತೂಲು ಎಲ್ಲಿಂದ ಬಂತು?" "ನಾನದನ್ನು ಯಾವಾಗಲೂ ಹತ್ತಿರವೇ ಇಟ್ಟುಕೊಂಡಿರುತ್ತೇನೆ."

"ಯಾಕೆ?"

"ಇಂಥ ಪ್ರಸಂಗಗಳಲ್ಲಿ ಉಪಯೋಗಕ್ಕೆ ಬರಬಹುದೆಂದು".

"ನೀನು ನನ್ನ ಪ್ರಾಣ ಉಳಿಸಿದಿ, ಗೊರ್ಡನ್, ತುಂಬಾ ಧನ್ಯವಾದ."

"ಹೌದು, ನಾನು ನಿನ್ನ ಪ್ರಾಣ ಉಳಿಸಿದೆ" ಎಂದು ಅವಳನ್ನು ಗಂಭೀರವಾಗಿ ನೋಡಿ ನಗ ಹತ್ತಿದ. ಆದರೆ ಆ ನಗೆ ಭೀಕರವಾಗಿತ್ತು. ಅವಳಲ್ಲಿ ನಡುಕ ಹುಟ್ಟಿತು.

"ಬೇಡ ಗೊರ್ಡನ್, ಹೀಗೆ ನಗಬೇಡ. ನನಗೆ ಭಯವೆನಿಸುತ್ತದೆ". "ನಾನು ನಿನ್ನ ಪ್ರಾಣ ಉಳಿಸಿದೆ. ಇದು ತಮಾಷೆ, ತುಂಬಾ ತಮಾಷೆ ಅನಿಸುತ್ತದೆ. ಅಷ್ಟೇ, ಇದರಲ್ಲಿಯ ವ್ಯಂಗ್ಯ ನಿನಗೆ ಎಂದಿಗೂ ತಿಳಿಯದು" ಎಂದ ಮತ್ತೆ ನಗುತ್ತ.

"ಪರಮಾತ್ಮ ನಿನಗೆ ದೀರ್ಘಾಯುವನ್ನೂ ಸಂಪತ್ತನ್ನೂ ದಯಪಾಲಿಸಲಿ" ಎಂದು ಆ್ಯಲಿಸನ್ ಎದ್ದು ಹೊರಟಳು. ಗೊರ್ಡನ್ ಅವಳನ್ನೇ ಹಿಂಬಾಲಿಸಿ ತಡೆದು ನಿಲ್ಲಿಸಿದ. ಅವಳ ಕೈಹಿಡಿದು ಮತ್ತೊಮ್ಮೆ ಕೇಳಿದ. "ಹಾಗಾದರೆ ಆ್ಯಲಿಸನ್, ನೀನು ನನಗೆ ಜೀವದಾನ ಮಾಡುವುದಿಲ್ಲವೆ?"

"ಕ್ಷಮಿಸು ಗೊರ್ಡನ್, ದಯವಿಟ್ಟು ನನ್ನನ್ನು ಕ್ಷಮಿಸು" ಕಣ್ಣು ತಗ್ಗಿಸಿ ಮೆಲ್ಲನೆ ಹೇಳಿದಳು.

"ಹಾಗಾದರೆ ನಾನು ಒಂದೇ ಒಂದು ಬಾರಿ ನಿನ್ನನ್ನು ಚುಂಬಿಸಬಹುದೆ? ನಿನ್ನ ಸವಿ ನೆನಪಿಗಾಗಿ ಅದೊಂದೆ ನನ್ನಲ್ಲಿ ಉಳಿಯುವುದು" ದೈನ್ಯದಿಂದ ಬೇಡಿದ.

ಅವಳಿಗೆ ಕನಿಕರವೆನಿಸಿತು. ಹೇಗೂ ಮರುದಿನ ಆತ ಹೊರಟು ಹೋಗುವನಲ್ಲ ಎಂದು ಯೋಚಿಸಿ ಆತನೆಡೆ ಮುಖವೆತ್ತಿದಳು. ಆತ ಅವಳನ್ನು ಬರಸೆಳೆದು ಅಧರಗಳನ್ನು ಸುದೀರ್ಘವಾಗಿ ಚುಂಬಿಸಿ ತಿರುಗಿ ನೋಡದೆಯೇ ತನ್ನ ಕೋಣೆಯೊಳಗೆ ಹೋಗಿಬಿಟ್ಟ.

ಪಾಸ್ಕಲೀನೋ ಕತ್ತಲಾದ ಮೇಲೆ ಮನೆಗೆ ಬಂದ. ಹೀಗೆ ಬಂದ ಉದ್ದೇಶವೆಂದರೆ, ಆ್ಯಲಿಸನ್‌ಳನ್ನು ಏಕಾಂತದಲ್ಲಿ ಭೆಟ್ಟಿಯಾಗಿ, ತನ್ನ ಮನದ ಇಂಗಿತವನ್ನು ಅವಳಿಗೆ ಅರುಹ ಬೇಕೆಂಬುದು. ಅದು ಎಣಿಸಿದಷ್ಟು ಸುಲಭದ್ದಾಗಿರಲಿಲ್ಲ. ಅದಕ್ಕೆ ಶಾಂತಿ, ಸಮಾಧಾನ, ಪ್ರಸನ್ನ ವಾತಾವರಣಗಳ ಅವಶ್ಯಕತೆ ಇತ್ತು. ತಾನು ಮಾಡಿದ ಮಹಾಪರಾಧವನ್ನು ಪ್ರಾಂಜಲ ಮನಸ್ಸಿನಿಂದ ಅವಳಿಗೆ ಹೇಗಾದರೂ ಹೇಳಬೇಕಾಗಿತ್ತು. ಅಮೆರಿಕದಿಂದ ಹಿಂತಿರುಗುವಾಗ ವಿಮಾನದಲ್ಲಿ ಕುಳಿತಾಗಲೂ ಆಕೆಗೆ ಹೇಳಲು ಪದಗಳನ್ನು ಜೋಡಿಸುತ್ತಲೆ ಇದ್ದ.

ಅವಳಿಗೇನಾದರೂ ಉಡುಗೊರೆಯನ್ನು ತೆಗೆದುಕೊಂಡು ಹೋಗಬೇಕೆಂದು ಊರೆಲ್ಲಾ ಸುತ್ತಾಡಿದರೂ ಯಾವುದೂ ಸರಿಯೆನಿಸಲಿಲ್ಲ. ಕೊನೆಗೆ ಒಂದು ಪುಷ್ಪಗುಚ್ಛವನ್ನು ಹಿಡಿದುಕೊಂಡು ಸರೋವರದ ದಂಡೆಗೆ ಹೊರಟ. ಅಲ್ಲಿ ಆಗಷ್ಟೇ ಒಂದು ನಾವೆ ಮುಂದೆ ಸಾಗಿತ್ತು. ಇನ್ನೊಂದು ನಾವೆಗಾಗಿ ಕಾದು ನಿಂತ. ಅವನಂತೆಯೇ ಕಾದಿದ್ದ ಕೆಲವು ಪ್ರಯಾಣಿಕರು ಹರಟೆಯಲ್ಲಿ ತೊಡಗಿದ್ದರು. ಆತ ಅವರ ಮಾತಿನತ್ತ ಲಕ್ಷ್ಯ ಕೊಡದೇ ಸುಮ್ಮನೇ ಕಟಾಂಜನಕ್ಕೆ ಆತುಕೊಂಡು ಕೆಳಗೆ ಕಪ್ಪಾಗುತ್ತಿರುವ ನೀರನ್ನು ನೋಡುತ್ತ ವಿಚಾರ ಮಗ್ನನಾಗಿದ್ದ.

ಮುಂಚಿನ ಹಡಗು ತಪ್ಪಿದ್ದರಿಂದ ಪಾಸ್ಕಲೀನೋ ಬೆಟ್ಟದ ಮೇಲೆ ತಲುಪಿದಾಗ ತುಂಬ ರಾತ್ರಿಯಾಗಿತ್ತು. ಅವನ ಎದೆ ಬಡಿದುಕೊಳ್ಳುತ್ತಿತ್ತು. ಹಣೆಯ ಮೇಲೆ ಬೆವರು ಹನಿಗಳ ಸಾಲು ಮೂಡಿತ್ತು. ಹಿಂದಕ್ಕೆ ತನ್ನ ಮೊದಲ ನೃತ್ಯ ಕಾರ್ಯಕ್ರಮದಲ್ಲಿ ತನ್ನ ಆರಂಭದ ಸಂಕೇತಕ್ಕಾಗಿ ಕಾಯುತ್ತಿದ್ದಾಗ ಆಗಿದ್ದ ಅಧೈರ್ಯವೇ ಈಗಲೂ ಕಾಡಿತು. ಆದರೆ ರಂಗಭೂಮಿಯ ಮೇಲೆ ಹೆಜ್ಜೆ ಇಟ್ಟಾಕ್ಷಣ, ನೃತ್ಯಾನಂದದಲ್ಲಿ ತಲ್ಲೀನನಾಗಿಬಿಟ್ಟಿದ್ದ.

ತಮ್ಮ ಮನೆಯ ಬಾಗಿಲನ್ನು ಮುಂದೂಡಿ, ಒಳಗೆ ನೋಡಿದ. ಅಲ್ಲಿ ಆ್ಯಲಿಸನ್ ಒಬ್ಬಳೇ ಇರುವಳೆಂದು ಭಾವಿಸಿದ್ದ. ಆದರೆ ಕೋಣೆ ಬರಿದಾಗಿತ್ತು. ತನ್ನ ಬಟ್ಟೆಗಳಲ್ಲಿ ತೂಗುಹಾಕುವ ಗೂಟದಿಂದ

ಬಣ್ಣ ಮೆತ್ತಿದ್ದ ಬಿಳಿಕೋಟು ಜೋತಾಡುತ್ತಿತ್ತು. ಮೇಜಿನ ಮೇಲೆ ಬಣ್ಣದ ಸಾಮಗ್ರಿಗಳು ಕುಂಚಗಳು ಟರ್ಪೆಂಟಾಯಿನ್ ಶೀಷೆಗಳು, ಬಣ್ಣ ಕಲಸುವ ಎರಡು ಬಟ್ಟಲು ತಟ್ಟೆಗಳು ಯಾವನೋ ಚಿತ್ರಕಾರ ಬಂದಿದ್ದನೆಂಬುದು ನೆನಪಾಯಿತು. ಅಂದರೆ ಅವನಿಲ್ಲಿ ಬಹಳ ದಿನ ಇದ್ದನೆಂದಾಯಿತು.

ಹಾಗೆಯೇ ಕಿಟಕಿಯ ಬದಿಗಿದ್ದ ಚಿತ್ರಧಾರದ ಮೇಲಿನ ಭಾವಚಿತ್ರದತ್ತ ಪಾಸ್ಕಲೀನೋನ ದೃಷ್ಟಿ ಹರಿಯಿತು. ಅದನ್ನು ನೋಡಿ ಬೆಚ್ಚಿಬಿದ್ದ. ಜೀವಕಳೆ ತುಂಬಿತ್ತು. ಆ ವರ್ಣಚಿತ್ರದಲ್ಲಿ! ಒಂದು ಮೂಲೆಯಲ್ಲಿ ಬಣ್ಣದಿಂದ ಗೀಚಿರುವ ಕಲಾಕಾರನ ಅಂಕಿತವನ್ನು ಓದಲು ಬಾಗಿದ. ಅವನಿಗೆ ಅದೇನೆಂದೇ ತಿಳಿಯಲಿಲ್ಲ. ಸೆಟೆದು ನಿಂತು ಹಿಂದೆ ಕೈಕಟ್ಟಿಕೊಂಡು, ಚಿತ್ರವನ್ನು ದಿಟ್ಟಿಸತೊಡಗಿದ. ಆ ಕ್ಷಣದಲ್ಲಿ ಪಾಸ್ಕಲೀನೋಗೆ ಏನೋ ವಿಚಿತ್ರ ಅನುಭವವಾಗತೊಡಗಿ ಅವನ ಅಂತರಂಗದಲ್ಲಿ ತೀವ್ರ ವೇದನೆಯಾದಂತಾಯಿತು. ಸಹಜವಾಗಿ ಸಿಕ್ಕ ಸೌಭಾಗ್ಯವೆಲ್ಲಾ ಕೈಯಿಂದ ಜಾರಿ ಹೋದಂತೆ ನಿಸಿತು. ಆತ ಕೂಡಲೇ ಆ ಕೋಣೆಯಿಂದ ಹೊರ ಬಂದಾಗ, ತನ್ನ ಬೆನ್ನ ಹಿಂದೆಯೆ ಧಡಾರನೆ ಬಾಗಿಲು ಮುಚ್ಚಿಬಿಟ್ಟಂತೆ ಭಾಸವಾಯಿತು.

ಕತ್ತಲು ಕವಿದ ತೋಟದಲ್ಲಿ ಒಂದು ನಿಮಿಷ ಸುಮ್ಮನೆ ನಿಂತುಕೊಂಡ. ಆಗ ಕಿಟಕಿಯಿಂದ ಒಳಗೆ ದೀಪದ ಬೆಳಕಿನಲ್ಲಿ ಅವರಿಬ್ಬರನ್ನು ನೋಡಿದ! ಆತ ಅವಳನ್ನು ಬರಸೆಳೆದು, ಅಧರಗಳನ್ನು ಸುದೀರ್ಘವಾಗಿ ಚುಂಬಿಸಿದ್ದನ್ನೂ ಕಂಡ.

ಕೂಡಲೇ ತಿರುಗಿ ಬಿಟ್ಟು ತಾನು ಹತ್ತಿಬಂದ ಬೆಟ್ಟಗಳ ದಾರಿಯಲ್ಲೇ ಕೆಳಗಿಳಿದ. ಬೆಟ್ಟದಡಿಗೆ ಬಂದಾಗ, ಅಲ್ಲಿಯೇ ಅಡ್ಡಬಿದ್ದ ಮರದ ಮೋಟಿನ ಮೇಲೆ ಕುಳಿತುಕೊಂಡ. ಬಂದದಾರಿಗೆ ಸುಂಕವಿಲ್ಲ. ಈ ಪ್ರಯಾಣ ಮಾಡಿದ್ದು ವ್ಯರ್ಥ. ತನ್ನ ಅವಶ್ಯಕತೆ ಅವಳಿಗೀಗ ಇರಲಿಲ್ಲ. ಅವಳಿಗೆ

ಇನ್ನಾರೋ ಸಿಕ್ಕಿದ್ದರು. ತಾನೆಂಥ ಮೂರ್ಖ... ಜೀವನವೆಂದರೆ ಹೀಗೇ. ತಾನು ಬಗೆದಂತೆ ಯಾವುದೂ ಆಗುವುದಿಲ್ಲ.

ಎದ್ದು ನಿಂತು ಭುಜ ಹಾರಿಸಿದ. ಕೈಯಲ್ಲಿದ್ದ ಪುಷ್ಪಗುಚ್ಛದ ಮಾದಕ ಪರಿಮಳ ಅವನನ್ನೇ ಅಣಕಿಸಿದಂತಾಯಿತು. ಅದನ್ನು ಅಲ್ಲೇ ಬಿಸಾಡಿ ಮತ್ತೆ ಮುಂದೆ ಹೆಜ್ಜೆ ಹಾಕಿದ. ನಡೆಯುವಾಗ ತನಗೆ ಪ್ರಿಯವಾದ ಹಾಡಿನ ನುಡಿಯನ್ನು ಗುನಗುನಿಸುವ ಧೈರ್ಯ ಮಾಡಿದ.

★ ★ ★

ದಿನಗಳು ಉರುಳಿದವು. ವಸಂತಮಾಸದ ಭವ್ಯ ಆರಂಭವಾದರೂ, ಪಾಸ್ಕಲೀನೋ ಇನ್ನೂ ಬಂದಿರಲಿಲ್ಲ. ಆಂಟಿ ಮೇಬಲಳಿಗೆ ಸೌಮ್ಯ ಹೃದಯಾಘಾತವಾಗಿ, ಅವಳ ದೇಹಸ್ಥಿತಿ ಚಿಂತಾಜನಕವಾಗಿತ್ತು. ಅವಳ ಗೃಹಕೃತ್ಯಗಳನ್ನೆಲ್ಲ ಆ್ಯಲಿಸನ್ ಒಂದೊಂದಾಗಿ ತಾನೇ ನಿರ್ವಹಿಸಹತ್ತಿದ್ದಳು.

ಒಂದು ಮಧ್ಯಾಹ್ನ ಆಂಟಿ ಮೇಬಲ ಕೊನೆಯುಸಿರೆಳೆದಳು. ಆ ಘೋರಸತ್ಯವನ್ನು ಆ್ಯಲಿಸನ್‌ಳಿಗೆ ನಂಬಲಿಕ್ಕಾಗಲಿಲ್ಲ. ಅವಳಿಗೆ ಪ್ರಪಂಚದ ಅಂತ್ಯವಾದಂತೆಯೇ, ಸಂತಾಪದಿಂದ ಸ್ತಂಭೀಭೂತಳಾಗಿದ್ದಳು. ಈಗ ಮತ್ತೆ ಏಕಾಂಕಿಯಾಗಿ, ಅವಳಿಗೆ ಆಶ್ರಯವೂ ಇಲ್ಲದ ಹಾಗಾಯಿತು. ತಾನು ಇನ್ನೆಲ್ಲಿಗೆ ಹೋಗಬೇಕು, ಏನು ಮಾಡಬೇಕೆಂಬ ಸಮಸ್ಯೆ ಅವಳಿಗೆ.

ಆದರೆ ಆಂಟಿ ಮೇಬಲ ತನ್ನ ಆಸ್ತಿಯನ್ನೆಲ್ಲಾ ಆ್ಯಲಿಸನ್‌ಳಿಗೆ ಬಹುಮಾನವಾಗಿ ಕೊಟ್ಟುಬಿಟ್ಟಿದ್ದರು. ಈಗ ಅವಳೇ ಆ ವಸತಿಗೃಹದ ಒಡತಿಯಾಗಿದ್ದಳು. ಕೃತಜ್ಞತೆಯಿಂದ ಅವಳ ಹೃದಯ ತುಂಬಿ ಬಂದಿತು. ತಾನಿನ್ನು ಪಾಸ್ಕಲೀನೋನನ್ನು ಮರೆತುಬಿಡಬೇಕೆಂದು ನಿರ್ಧರಿಸಿದಳು. ತನ್ನ ಬಗ್ಗೆ ಎಳ್ಳಷ್ಟೂ ಚಿಂತೆ ಮಾಡದವರನ್ನು ನೆನೆಯುತ್ತ ತಾನೇಕೆ ವ್ಯರ್ಥ ಕಾಲಕಳೆಯಬೇಕು? ಇನ್ನೇನು ಆತ ತಿಳಿಸಿದಾಗ, ತಮ್ಮ ಮದುವೆಯನ್ನು ಅಧಿಕೃತವಾಗಿ ಮುಕ್ತಾಯಗೊಳಿಸುವ ಅನಿಷ್ಟ ಕಾರ್ಯವೊಂದೇ ಉಳಿದಿತ್ತು. ಅಲ್ಲಿಯವರೆಗೆ ಎಲ್ಲವನ್ನೂ ಮರೆತು ಶಾಂತಿಯಿಂದಿದ್ದರಾಯಿತು ಎಂದುಕೊಂಡಳು.

ಒಂದು ದಿನ ವೃತ್ತಪತ್ರಿಕೆಯನ್ನು ಓದುತ್ತಿದ್ದಾಗ, ಆಕಸ್ಮಿಕವಾಗಿ ಈ ವರದಿ ಅವಳ ಕಣ್ಣಿಗೆ ಬಿತ್ತು. "ಗೊರ್ಡನ್ ಚಿಲ್ಡರ್ಸ್, ಒಬ್ಬ ಪ್ರತಿಭಾವಂತ ಚಿತ್ರಕಾರ, ತನ್ನ ಕಾರ್ಯಾಲಯದಲ್ಲಿ ಸತ್ತು ಬಿದ್ದಿದ್ದು ಕಂಡು ಬಂದಿದೆ. ಹಿಂದೆ ಕೊಲೆ ಪ್ರಕರಣವೊಂದರಲ್ಲಿ ಆಪಾದಿತನಾಗಿದ್ದ ಮೃತನ ದೇಹದ ಹತ್ತಿರ ಪಿಸ್ತೂಲು ಇತ್ತು..."

ಆ್ಯಲಿಸನ್ ಕಣ್ಣುಮುಚ್ಚಿ ಎರಡೂ ಕೈಗಳಿಂದ ತಲೆಯನ್ನು ಗಟ್ಟಿಯಾಗಿ ಹಿಡಿದುಕೊಂಡಳು. ಗೊರ್ಡನ್‌ನ ಮಾತುಗಳೆಲ್ಲವೂ ಅವಳ ಮನಃಪಟಲದ ಮೇಲೆ ಹಾಯ್ದುಹೋದವು. ಆತ ತನಗೆ ಒದಗಿದ ವಿಪತ್ತಿನ ವಿಷಯವನ್ನು ಅವಳಿಗೆ ಸೂಚಿಸಲು ಪ್ರಯತ್ನಿಸಿದ್ದ. ಆದರೆ ಅವಳಿಗೆ ಅವನ ಮಾತಿನ ಅರ್ಥವನ್ನು ಗ್ರಹಿಸಲಿಕ್ಕಾಗಿರಲಿಲ್ಲ. ಇದೆಲ್ಲ ಕಲಾವಿದನ ಸ್ವಭಾವ ವೈಚಿತ್ರ್ಯವೆಂದು ಭಾವಿಸಿದ್ದಳು... ತಾನು ಆತನನ್ನು ರಕ್ಷಿಸಬಹುದಿತ್ತೇನೋ.. ಆದರೆ ಈಗೆಲ್ಲ ಕೈಮೀರಿ ಹೋಯಿತಲ್ಲ ಎಂದು ಮರುಗಿದಳು.

ನಿಟ್ಟುಸಿರು ಬಿಡುತ್ತ ಪತ್ರಿಕೆಯ ಮತ್ತೊಂದು ಪುಟ ತಿರುವಿ ನೋಡಿದಳು, ಅವಳಿಗೆ ಮತ್ತೊಂದು ಆಘಾತ ಕಾದಿತ್ತು. ಪ್ರಸಿದ್ಧ ನೃತ್ಯ ಪ್ರವೀಣ ಪಾಸ್ಕಲೀನೋಗೆ ತೀವ್ರ ಅಸ್ವಾಸ್ಥ್ಯ ಎಂದು ದಪ್ಪಕ್ಷರಗಳಲ್ಲಿ ಪ್ರಕಟವಾದದ್ದು ಕಂಡು ತನ್ನ ಕಣ್ಣುಗಳನ್ನೇ ನಂಬದಾದಳು. ಮುಂದೆ ಓದಿದಳು. "ಮಿಲಾಸಿನ ಆಸ್ಪತ್ರೆಯಲ್ಲಿ ಈಗ ಎರಡು ವಾರಗಳಿಂದ, ವಿಪರೀತ ಬೆನ್ನು ನೋವಿನಿಂದ ಬಳಲುತ್ತಿರುವ ಪಾಸ್ಕಲೀನೋ ಈಗ ಗುಣಮುಖವಾಗುತ್ತಲಿದ್ದಾರೆ. ಹಾಗಾದರೆ ಆತ ಅಮೇರಿಕದಿಂದ ಯಾವಾಗ ತಿರುಗಿ ಬಂದದ್ದು? ಆ್ಯಲಿಸನ್ ಹಳೆಯ ಪತ್ರಿಕೆಗಳ ಕಂತೆಯನ್ನೆಲ್ಲ ತೆಗೆದುಕೊಂಡು ನೋಡಹತ್ತಿದಳು.

ಅಮೇರಿಕದ ಯಶಸ್ವೀ ನೃತ್ಯಪ್ರವಾಸದಿಂದ ಮರಳಿಬಂದ ನಂತರ, ಪಾಸ್ಕಲೀನೋ ಸ್ವದೇಶದಲ್ಲಿ ಮತ್ತೆ ನೃತ್ಯ ಕಾರ್ಯಕ್ರಮಗಳನ್ನು ನೀಡುತ್ತಲಿದ್ದ. ಅಂಥದೊಂದು ಕಾರ್ಯಕ್ರಮ ನೀಡುತ್ತಿದ್ದಾಗ ವೇದಿಕೆಯ ಮೇಲೆಯೇ ಒಮ್ಮೆಲೆ ಕುಸಿದು ಬಿದ್ದಿದ್ದ ಅವನನ್ನು ಮಿಲಾಸಿನ ಆಸ್ಪತ್ರೆಯಲ್ಲಿ

ನವಜೀವನ

ನವಜೀವನ ಸುವರ್ಣ ಸುಸಂಧಿ



ಲಗ್ನದ ಮೊದಲು ಹಾಗೂ ನಂತರದ ನಿಶಕ್ತಿ ಅಂದರೆ ಶೀಘ್ರ ಸ್ಖಲನ, ನರಗಳ ದೌರ್ಬಲ್ಯ, ನಿರುತ್ಸಾಹ,ಅಜೀರ್ಣತೆಗೆ ಶೀಘ್ರ ಚಿಕಿತ್ಸೆ ಹಾಗೂ ಚಿಕ್ಕ ವಯಸ್ಸಿನಲ್ಲಿ ಹಸ್ತ ಮೈಥುನ. ಕೆಟ್ಟ ಚಟ ಸ್ವಪ್ನ ದೋಷ ಹಾಗೂ ಮೂತ್ರ ದೋಷದಿಂದ ಲೈಂಗಿಕ ನಿಃಶಕ್ತಿ ಉಂಟಾಗಿದ್ದರೆ ಇಂದೇ ತಜ್ಞರಾದ ಡಾಕ್ಟರನ್ನು ಕೆಳಗಿನ ಸ್ಥಳದಲ್ಲಿ ಭೆಟ್ಟಿಯಾಗಿ ಶೀಘ್ರ ಹಾಗೂ ನಂಬುಗೆಯ ಚಿಕಿತ್ಸೆ ಪಡೆಯಿರಿ.

ಭೇಟಿಯ ವೇಳೆ:- ಮುಂಜಾನೆ ೮ ರಿಂದ ರಾತ್ರಿ ೭ರ ವರೆಗೆ.

ಬೆಳಗಾಂವ:- ಪ್ರತಿ ಶನಿವಾರ ಪೈ ಹೊಟೆಲ್ ಬಸ್ ನಿಲ್ದಾಣ ಎದುರು

ಬಿಜಾಪೂರ:- ಪ್ರತಿ ರವಿವಾರ ಹೊಟೆಲ್ ಲಲಿತಮಹಲ ಬಸ್‌ನಿಲ್ದಾಣ ಎದುರು.

ಗುಲ್ಬರ್ಗಾ:- ಪ್ರತಿ ಸೋಮವಾರ, ಮೋಹನ ಲಾಡ್ಜ ಮಿಲ್‌ರೋಡ.

ಉಳಿದ ದಿನಗಳಲ್ಲಿ ಹುಬ್ಬಳ್ಳಿಯಲ್ಲಿ ಭೇಟಿಯಾಗಿರಿ ಅಥವಾ

ನಿಮ್ಮ ವಿವರಗಳೊಂದಿಗೆ ಪತ್ರ ಬರೆಯಿರಿ.

ಹುಬ್ಬಳ್ಳಿಯಲ್ಲಿ ; ಉಳಿದ ದಿನ ಮುಂ ೧೦ ರಿಂದ ೧, ಸಂಜೆ ೬ ರಿಂದ ೮ ರ ವರೆಗೆ

ಡಾ|| ಶೇಖ ಎಕೆ. R.M.P. G.R.

ನವಜೀವನ ಡಿಸ್ಪೆನ್ಸರಿ

ಲೈಂಗಿಕ ವ್ಯಾಧಿಯ ದವಾಖಾನ

ಮರಾಠಾ ಗಲ್ಲಿ, ಮಹಡಿ ಮೇಲೆ. ಹುಬ್ಬಳ್ಳಿ - 20

ಸೇರಿಸಲಾಗಿತ್ತು. ಆ ವಿಚಿತ್ರ ಬೆನ್ನು ನೋವಿನಿಂದ ಆತನಿಗೆ ಸರಿಯಾಗಿ ನಡೆದಾಡಲೂ ಆಗುತ್ತಿರಲಿಲ್ಲ. ಹಾಸಿಗೆಯಲ್ಲಿ ಬಿದ್ದುಕೊಂಡು ವೇದನೆಯಿಂದ ನರಳುತ್ತಿದ್ದರೂ ಆತ ಧೈರ್ಯದಿಂದಲೇ ಇದ್ದ. "ಇನ್ನೊಂದು ತಿಂಗಳಲ್ಲಿ ಮತ್ತೆ ನರ್ತಿಸುವೆ" ಎಂದು ಹೇಳುತ್ತಿದ್ದ. ಹಾಸಿಗೆಯಲ್ಲಿದ್ದ ಅವನ ಭಾವಚಿತ್ರವೂ ಪತ್ರಿಕೆ ಯಲ್ಲಿ ಪ್ರಕಟವಾಗಿತ್ತು. ಆತ ತುಂಬಾ ಇಳಿದು ಹೋದಂತೆ ಕಾಣಿಸಿತು.

ಆ್ಯಲಿಸನ್‌ಳಿಗೆ ತಾನೊಮ್ಮೆ ಪಾಸ್ಕಲೀನೋನನ್ನು ನೋಡಿ ಬರಬೇಕೆಂದು ಹಂಬಲ ಹೆಚ್ಚಾಯಿತು. ಆತನ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರಬೇಕೆಂದು ನಿರ್ಧರಿಸಿದಳು. ಆಕೆ ಆಸ್ಪತ್ರೆಗೆ ಹೋದಾಗ, ಆತ ಹಿಂದಿನ ದಿನವೇ ಅಲ್ಲಿಂದ ಹೊರಟು ಹೋಗಿದ್ದ. ಆತನಿಗೆ ನಡೆದಾಡಲು ಬರುವಷ್ಟು ಆರೋಗ್ಯ ಸುಧಾರಿಸಿತ್ತೆಂದು ಕೇಳಿ ಸಮಾಧಾನಪಟ್ಟಳು. ಪಾಸ್ಕಲೀನೋ ತನ್ನ ಯಾವ ವಿಳಾಸವನ್ನು ಕೊಟ್ಟು ಹೋಗಿರಲಿಲ್ಲವೆಂದು ಕೇಳಿ ಹತಾಶಳಾದಳು. ಅವಳಿಗೆ ಮಾಡುವುದೇನೂ ಉಳಿದಿರಲಿಲ್ಲ. ಇನ್ನು ಮುಂದಿನ ಹೆಜ್ಜೆ ಅವನದೇ.

ಬೇಸಿಗೆಯಲ್ಲಿ ಒಂದು ದಿನ ಪಾಸ್ಕಲೀನೋನಿಂದ ಅವಳಿಗೆ ಪತ್ರ ಬಂತು. "ನನ್ನ ಅನಾರೋಗ್ಯದ ವಿಷಯ ಬಹುಶಃ ನಿನಗೆ ತಿಳಿದಿರಬೇಕು. ನಾನು ಮಲಗಿಕೊಂಡೆ ಇರುವಾಗ, ನನಗೆ ಸಾಕಷ್ಟು ವಿಚಾರ ಮಾಡಲು ಸಮಯ ಸಿಕ್ಕಿದೆ. ನಾನು ನಿನಗೆಂಥ ಅನ್ಯಾಯ ಮಾಡಿದೆ ಎಂಬುದರ ಕಲ್ಪನೆ ನನಗೀಗ ಆಗಿದೆ. ನನ್ನ ಸ್ವಾರ್ಥಕ್ಕಾಗಿ ನಾನು ಅಕ್ಷಮ್ಯ ಅಪರಾಧ ಮಾಡಿದೆನೆಂದು ತಿಳಿದಿದೆ. ಆದಷ್ಟು ಬೇಗನೆ ನಿನ್ನನ್ನು ಸ್ವತಂತ್ರಳನ್ನಾಗಿ ನಾನು ಅಕ್ಷಮ್ಯ ಅಪರಾದ ಮಾಡಿದನೆಂದು ತಿಳಿದಿದೆ. ಆದಷ್ಟು ಬೇಗನೆ ನಿನ್ನನ್ನು ಸ್ವತಂತ್ರಳನ್ನಾಗಿ ಮಾಡುತ್ತೇನೆ. ಅಂದರೆ ನೀನು ನಿನಗೆ ಇಷ್ಟ ಬಂದವರನ್ನು ವಿವಾಹವಾಗಬಹುದು. ಇನ್ನು ಮುಂದೆ ಮೊದಲಿನಂತೆ ನರ್ತಿಸುವುದು ನನ್ನಿಂದ ಅಸಾಧ್ಯ".

ಪಾಸ್ಕಲೀನೋ ನೃತ್ಯವನ್ನು ಬಿಟ್ಟುಬಿಡುವದೆಂದರೆ! ಅದನ್ನುಳಿದು ಅವನಿಗೆ ಜೀವನದಲ್ಲಿ ಬೇರೇನಿತ್ತು! ಆ್ಯಲಿಸನ್‌ಳ ಕಣ್ಣುಗಳಿಂದ ಪತ್ರದ ಮೇಲೆ ಎರಡು ಹನಿಗಳು ಉದುರಿದವು. ಕೂಡಲೆ ಮನಸ್ಸನ್ನು ಕಲ್ಲು ಮಾಡಿಕೊಂಡು "ಈ ವಿಷಯದಲ್ಲಿ ನಾನು ಭಾವನಾಪರವಶವಾಗುವುದು ಹುಚ್ಚುತನ. ಆತನಿಗೆ ಸಂತೈಸಲು ಜೀವನದಲ್ಲಿ ಸಾಕಷ್ಟಿದೆ. ತಾನು ರೆನಾಟಾಳನ್ನು ಮದುವೆಯಾಗು ವುದಕ್ಕಾಗಿ ನನಗೆ ಸ್ವಾತಂತ್ರ್ಯ ನೀಡುತ್ತಿದ್ದಾನಷ್ಟೆ?" ಎಂದುಕೊಂಡಳು.

ಆ್ಯಲಿಸನ್ ಬೆಳೆದು ಬಂದ ಸಂಪ್ರದಾಯಸ್ಥ ಮನೆತನದಲ್ಲಿ ವಿವಾಹ ಸಂಬಂಧ ಆಜನ್ಮ ಅನುಬಂಧವೆಂಬ ದೃಢ ನಂಬಿಕೆಯಿದ್ದಿತು. ದಾಂಪತ್ಯ ಜೀವನದಲ್ಲಿ ಸುಖವಾಗಲಿ ದುಃಖವಾಗಲಿ, ಗೌರವದಿಂದ ಸಹನೆಯಿಂದ ಬಾಳುವುದೇ ಆದರ್ಶಜೀವನ. ಪಾಸ್ಕಲೀನೋವನ್ನು ಚಿತ್ತದಿಂದ ಕಿತ್ತೊಗೆಯುವುದು ಆಕೆಗೆ ಅಷ್ಟೇನೂ ಸುಲಭವಾಗಿರಲಿಲ್ಲ.

★ ★ ★

ಶರತ್ಕಾಲದ ಒಂದು ಸಂಜೆ, ಆ್ಯಲೀಸನ್ ಹೂದೋಟದಲ್ಲಿ ಕುಳಿತುಕೊಂಡಿದ್ದಳು. ಸೂರ್ಯಾಸ್ತವಾಗಿತ್ತು. ಇನ್ನು ಬೇಗ ಕತ್ತಲಾಗುವುದೆಂದು ಆಕೆ ಒಳಗೆ ಹೋಗಲು ಎದ್ದು, ತಿರುಗಿದಾಗ, ತನ್ನ ಕಣ್ಣುಗಳನ್ನು ನಂಬಲಾರದೆ ನೋಡಿದಳು. ಪಾಸ್ಕಲೀನೋ! "ನಾನು ಇಲ್ಲಿಗೇ ಬಂದು ನಿನಗೆ ತೊಂದರೆ ಕೊಡಬೇಕಾಯಿತು. ಆದರೆ ಗೊತ್ತಲ್ಲ, ನಿನಗೆ ನಾನು ಪತ್ರ ಬರೆಯು ವುದರಲ್ಲಿ ಬಲು ಸೋಮಾರಿ. ನಿನ್ನೊಡನೆ ಮಾತನಾಡುವದಿತ್ತು. ಅದಕ್ಕೇ ಬಂದೆ", ಎಂದ.

ಅವರು ಅಲ್ಲಿಯೇ ಕುಳಿತು ಮಾತನಾಡಿದರು. ತನ್ನ ಕಾಯಿಲೆ ಕುರಿತು ಹೇಳಿದ. ಆಂಟಿ ಮೇಬಲಳ ಮರಣದ ಕುರಿತು ಕೇಳಿದ. ಹಾಗೂ ಆ ವಸತಿಗೃಹ ಆ್ಯಲಿಸನ್‌ಳ ಆಸ್ತಿಯಾಗಿದ್ದು ತಿಳಿದು ತುಂಬಾ ಸಂತೋಷಪಟ್ಟ. "ಅಂತೂ ನಿನಗೆ ಇದರಿಂದೆಲ್ಲ ಕ್ಷೇಮವೇ ಆಯಿತೆಂದ ಹಾಗಾಯಿತು" ಎಂದು ನಸುನಕ್ಕ. ನಂತರ ಅವಳ ಮುಖವನ್ನೇ ದಿಟ್ಟಿಸುತ್ತ ನಿಧಾನವಾಗಿ ನುಡಿದ, "ನಾನು ಜೀವನದಲ್ಲಿ ಸ್ವಾರ್ಥ ಸಾಧನೆಗಾಗಿ ನನ್ನ ಕಲೆಯನ್ನೇ ಪ್ರೇಮಿಸುತ್ತಿದ್ದೆ. ನೃತ್ಯವೇ ನನ್ನ ಬಾಳ ಸರ್ವಸ್ವ ಎಂದುಕೊಂಡಿದ್ದೆ. ಆದರೆ ಕೊನೆಗೆ...ನಿನ್ನ ಪ್ರೇಮ ಬಂಧನದಲ್ಲಿ ಸಿಕ್ಕುಬಿದ್ದೆ. ನಮ್ಮ

ಮದುವೆಯಾದ ಬಳಿಕ ನಾವಿಲ್ಲಿ ಕೂಡಿದ್ದ ಸಂತಸದ ದಿನಗಳಲ್ಲಿ ನಿನ್ನಲ್ಲಿ ಅನುರಕ್ತನಾದೆ. ನಿನ್ನನ್ನು ಮನಸಾ ಪ್ರೇಮಿಸಹತ್ತಿದೆ".

ಆ್ಯಲಿಸನ್ ಆಶ್ಚರ್ಯಚಕಿತಳಾದಳು. ಹರ್ಷದಿಂದ ಅವಳ ತನುಮನ ಪುಲಕಿತವಾಯಿತು. ಆತ ಮುಂದುವರೆದ "ವಿದೇಶ ಪ್ರವಾಸದ ನಂತರ ನನ್ನ ಭ್ರಾಂತಿಯೆಲ್ಲ ಬಿಟ್ಟು ಹೋಗುವುದೆಂದು ಭಾವಿಸಿದ್ದೆ. ಆದರೆ, ನನ್ನ ಭಾವೋದ್ವೇಗವು ಇನ್ನು ಹೆಚ್ಚುತ್ತಲೇ ಹೋಯಿತು. ಅದಕ್ಕೆ ನಾನೊಂದು ರಾತ್ರಿ ಇಲ್ಲಿಗೆ ಬಂದು ನಿನಗೆ ನನ್ನ ಪ್ರೇಮಾರ್ಪಣೆ ಮಾಡಬೇಕೆಂದು ನಿರ್ಧರಿಸಿದ್ದೆ. ಆದರೆ ನನ್ನಿಂದ ತುಂಬಾ ತಡವಾಗಿಬಿಟ್ಟಿತು. ನಿನ್ನ ಜೀವನದಲ್ಲಿ ಇನ್ನಾರೋ ಪಾದಾರ್ಪಣೆ ಮಾಡಿಬಿಟ್ಟಿದ್ದರು. ನಾನು ತಿರುಗಿ ಹೋದೆ"

ಅವಳು ತಲೆ ಅಲ್ಲಾಡಿಸಿ "ಇಲ್ಲ, ನನ್ನ ಜೀವನದಲ್ಲಿ ಇನ್ನ್ಯಾರೂ ಪ್ರವೇಶಿಸಿಲ್ಲ, ಯಾರೂ ಇಲ್ಲ" ಎಂದಳು. "ಆದರೆ ಆತ ನಿನ್ನ ಭಾವಚಿತ್ರವನ್ನು ಅದ್ಭುತವಾಗಿ ಬರೆದಿದ್ದ; ನಾನು ಆ ರಾತ್ರಿ ನೋಡಿದೆ. ಆ ಗಾಢಾಲಿಂಗನ, ಆ ಸುದೀರ್ಘ ಚುಂಬನ"

"ನೀನೂ ಎಷ್ಟೊಂದು ಹೆಂಗಳೆಯರನ್ನು ಸುಮ್ಮನೆ ಚುಂಬಿಸಿಲ್ಲವೇ? ಆ ಯುವಕ ಅಪಾರ ವ್ಯಥೆಯಲ್ಲಿದ್ದ. ನಾನು ಚುಂಬಿಸಿ ಸಂತೈಸಿದೆನಷ್ಟೇ. ಆತನೀಗ ಸತ್ತುಹೋಗಿದ್ದಾನಲ್ಲ".

"ಸರಿ, ಹಿಂದೆ ನೀನೊಮ್ಮೆ ನನಗೆ ಸ್ವಾತಂತ್ರ್ಯ ನೀಡಿದೆಯಲ್ಲ, ಅದು ನೀನು ಬೇರೆ ಮದುವೆಯಾಗ ಬೇಕೆಂಬ ಬಯಕೆಯಿಂದಲ್ಲವೇ?"

"ಇಲ್ಲ, ನೀನು ರೆನಾಟಾಳನ್ನು ಪ್ರೇಮಿಸುತ್ತಿದ್ದಿ, ಅವಳ ಮದುವೆಯಾಗಲು ನೀನು ಸ್ವಾತಂತ್ರ್ಯ ಬಯಸುವಿ, ಎಂದುಕೊಂಡಿದ್ದೆ".

"ರೆನಾಟಾ" ಓಹ್ ಆ ಹಾಳು ಹೆಸರನ್ನು ಮತ್ತೆ ಎತ್ತಬೇಡ. ಅವಳಲ್ಲಿ ಪ್ರೇಮವಿರಲಿಲ್ಲ. ಬರೀ ದುರಾಶೆ. ದುರಹಂಕಾರ, ದುಷ್ಕೃತ್ಯಗಳು... ನಾನು ಖ್ಯಾತ ನರ್ತಕನಾಗಿದ್ದಾಗ, ನನ್ನ ಪ್ರತಿಷ್ಠೆಯ ಉಜ್ವಲ ಪ್ರಕಾಶದಲ್ಲಿ ತಾನೂ ಮೆರೆಯಬೇಕೆಂದು ನನ್ನ ನೆರಳೇ ಆಗಿಬಿಟ್ಟಿದ್ದಳು. ಆದರೆ ನಾನು ವ್ಯಾಧಿಗ್ರಸ್ತನಾದಾಗ ಇನ್ನೆನೂ ನನಗೆ ರಂಗಭೂಮಿಯ ಥಳಕು, ಕರತಾಡನ, ಪ್ರಶಂಸೆ ಇಲ್ಲವೆಂದು ತಿಳಿದ ಕೂಡಲೇ ಮೆಲ್ಲನೆ ಜಾರಿ ಮಾಯವಾದಳು. ಈಗ ನನ್ನ ಜೀವನದಲ್ಲಿ ರಂಗಭೂಮಿಯ ದೀಪಗಳು ಕೊನೆಯ ಬಾರಿ ಆರಿಹೋಗಿವೆ. ನನ್ನ ನೃತ್ಯನಾಟಕದ ಕೊನೆಯ ಅಂಕದ ತೆರೆ ಇಳಿದುಬಿಟ್ಟಿದೆ. ಅಂದು ನೀನು ಮೊದಲ ಸಲ ಉಪದೇಶಿಸಿದಂತೆ ಈಗ ನಾನು ಇನ್ನೇನಾದರೂ ಒಳ್ಳೆಯ ಉದ್ಯೋಗವನ್ನು ಹುಡುಕಬೇಕಾಗಿದೆ" ಎಂದು ಖಿನ್ನನಾಗಿ ನಸುನಕ್ಕ.

ಆ್ಯಲಿಸನ್ ಮುಗುಳು ನಗುತ್ತ "ಇಲ್ಲಿಯೇ ಈ ಉದ್ಯೋಗದಲ್ಲಿ ನನಗೊಂದು ಸಹಾಯ ಹಸ್ತದ ಅಗತ್ಯವಿದೆ. ಹೇಗೂ ನೀನು ನನ್ನ ಕೈಹಿಡಿದ ಪತಿ, ನಾನು ನಿನ್ನ ಪ್ರಿಯ ಪತ್ನಿ".

"ಓಹ್ ಆ್ಯಲಿಸನ್" ಎಂದು ಪಾಸ್ಕಲೀನೋ ಹತ್ತಿರ ಬಂದು ಅವಳ ಕೈ ಹಿಡಿದು "ಇದು ನಿಜವೇ?" ಕೇಳಿದ.

ಅವಳ ಮುಖ ಕೆಂಪೇರಿತ್ತು. ಆಕೆ ಉತ್ತರಿಸುವ ಮುಂಚೆಯೇ ಅವಳನ್ನು ತನ್ನ ಬಾಹು ಬಂಧನ ದಲ್ಲಿ ಸೆರೆ ಹಿಡಿದು ಅವಳ ಅಧರಗಳ ಮೇಲೆ ತನ್ನ ತುಟಿಗಳ ಪ್ರೇಮ ಮುದ್ರೆಯನ್ನು ಒತ್ತಿದ ಪಾಸ್ಕಲೀನೊ. ★

ಸಿಂಗಪುರದಲ್ಲಿ ಸಿಮ್‌ಕೆಂಗ್‌ಹ್ಯಾಂಗ್ ಎಂಬ ಅಂಚೆ ಪೇದೆಯೊಬ್ಬ "ರಿಜಿಸ್ಟರ್ಡ್" ಪತ್ರವೊಂದನ್ನು ಬಟವಾಡೆ ಮಾಡಲು ಟಾನ್ ಎಂಬಾತನ ಮನೆಗೆ ಹೋದ. ಕರೆಗಂಟೆ ಒತ್ತಿದಾಗ ಟಾನ್‌ನ ಹೆಂಡತಿ ಬಾಗಿಲು ತೆಗೆದಳು. ಅವಳ ಹಿಂದಿನಿಂದ ಓಡಿಬಂದ ಅವರ ಸಾಕುನಾಯಿ ಅಂಚೆ ಪೇದೆಯನ್ನು ಬಲವಾಗಿ ಕಚ್ಚಿತು. ಇದರ ವಿರುದ್ಧ ಅವನು ನ್ಯಾಯಾಲಯದ ಕಟ್ಟೆ ಏರಿದ. ಕಚ್ಚಿದ್ದು ನಾಯಿ ಆದರೂ ಅಜಾಗರೂಕತೆಗಾಗಿ ಅದರ ಮಾಲೀಕರಿಗೆ 500ರೂ ದಂಡ ವಿಧಿಸಿದ ನ್ಯಾಯಾಧೀಶರು ಅಂಚೆ ಪೇದೆಯ ಆಸ್ಪತ್ರೆ ಖರ್ಚಿಗೆ 600ರೂ ನೀಡುವಂತೆ ಆಜ್ಞೆ ಮಾಡಿದರು.

'ಕಸ್ತೂರಿ'ಯ ಅರ್ಧವಾರ್ಷಿಕ ಪರಿವಿಡಿ

ಸೆಪ್ಟೆಂಬರ್ 1987 ರಿಂದ ಫೆ.1988ರ ವರೆಗೆ

ಕ್ರಮ: ಲೇಖನದ ಹೆಸರು, ತಿಂಗಳು, ಪುಟಸಂಖ್ಯೆ
ಸೆ.ಅಂದರೆ= ಸೆಪ್ಟೆಂಬರ್, ಅ=ಅಕ್ಟೋಬರ್, ನ=ನವೆಂಬರ್
ಡಿ=ಡಿಸೆಂಬರ್, ಜ=ಜನವರಿ, ಫೆ=ಫೆಬ್ರವರಿ

ಅನುಭವ

ಆರೋಗ್ಯ-ವೈದ್ಯಕೀಯ

ಇತಿಹಾಸ

ಕಥೆ

ಕವನ-ಉವಾಚ

ಚರ್ಚೆ-ಚಿಂತನ

ಜೀವನ ಚರಿತ್ರೆ-ವ್ಯಕ್ತಿ ಚಿತ್ರ

ದೇಶ-ನಗರ

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ನೀತಿಕಥೆ

ಪದಾರ್ಥ ಚಿಂತಾಮಣಿ

ಪುಸ್ತಕ ವಿಭಾಗ

ಪ್ರಾಣಿ ಜೀವನ

ರಹಸ್ಯ-ಸಾಹಸ-ಸೋಜಿಗ

ವಿಜ್ಞಾನ

ಸಾಮಾನ್ಯ

ಹರಟೆ-ನಗೆಬರಹ

ಆತ್ಮದ ಯಾವ ಒಂದು ಅಗತ್ಯವನ್ನು ಪೂರೈಸಲೂ ದುಡ್ಡು ಬೇಕಿಲ್ಲ.

• ಹೆನ್ರಿ ಡೇವಿಡ್ ಥೊರೊ

Printed and published by **M.H.BELGAUMKAR** on behalf of Lokashikshana Trust at " SAMYUKTA KARNATAKA PRESS ", No.2, Residency Road, Bangalore-560 025. Managing Editor **K.SHAMA RAO.** Rep: Bombay: V. Satyamurthi. Phone: 5510502, Madras, S.K.Murti Phone: 414870. New Delhi: V.K.Chopra Phone:7114785.

Registered with the Registrar of Newspapers for India under No.35/3957.


ದಾವಣಗೆರೆ
ಫ್ಯಾಶನ್ ಫ್ಯಾಬ್ರಿಕ್
ನವಿರಾದ ನೇಯಿಗೆ ರಚನೆಯಲ್ಲಿ
ಪ್ರಿಯಾ ಮತ್ತು ಪ್ರೇಮಿಕಾ—
ವೈಯಕ್ತಿಕ ಅಭಿರುಚಿಗೆ ಮೆಚ್ಚುವ,
ಮನಮೋಹಕ ವರ್ಣ
ವೈವಿಧ್ಯತೆಯಲ್ಲಿ
ಮನಮೋಹಕ ಡಿಸೈನಗಳ
ಟೆರೀನ್* ಸೀರೆಗಳು.
● ಸೂಟಿಂಗ್ ● ಶರ್ಟಿಂಗ್
● ಡ್ರೆಸ್ ಮೆಟೀರಿಯಲ್
● ಕ್ಯಾಂಬ್ರಿಕ್ಸ್
● ಟು×ಟು ರೂಬಿಯಾ
● ಟರ್ಕಿಶ್ ಟವೆಲ್
ಇವುಗಳೂ ದೊರೆಯುತ್ತವೆ.
ದಿ ದಾವಣಗೆರೆ ಕಾಟನ್ ಮಿಲ್ಸ್ ಲಿ.,
ಹನುಮಂತಪ್ಪ ಬಿಲ್ಡಿಂಗ್ಸ್, ಚಿತ್ರದುರ್ಗ ರೋಡ್, ದಾವಣಗೆರೆ 577 002.
ಶೋರೂಮ್‌ಗಳು : ಕಾವೇರಿ ಭವನ, ಬೆಂಗಳೂರು 560 009.
ದಾಜೀಬನ ಪೇಟೆ, ಹುಬ್ಬಳ್ಳಿ 580 020.
ಚಿತ್ರದುರ್ಗ ರೋಡ್, ದಾವಣಗೆರೆ 577 002.
T/8788/D/KAN
* ಟೆರೀನ್ ಇದು ಕ್ಯಾಲಿಕೊದವರ ಟ್ರೇಡ್ ಮಾರ್ಕ್.

KASTURI PRICE: Rs. 3.00 Reg. no. KRNG 43
Licence No. L2120/wpp No. 33